ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಇದು ಜೀವನದ ಹತ್ತಾರು ಪಾಠಗಳನ್ನು ಕಲಿಸುವ ಪಾದಯಾತ್ರೆ



'ಮಹಾ'ಗಿಂತ ಕರ್ನಾಟಕ ಉತ್ತಮ: ನ್ಯಾಅಭಯ್ ಓಕಾ 7
ಮೂವರು ಒತ್ತೆಯಾಳುಗಳ ಬಿಡುಗಡೆ 11
ರಾಜ್ಯ ಸರ್ಕಾರಕ್ಕೆ ₹10 ಲಕ್ಷ ದಂಡ 10
ಶಿಶುವಿನ ಹೊಟ್ಟೆಯಲ್ಲಿ ಇತ್ತು ಭ್ರೂಣ 8

ಜಲ ಜೀವನ ಮಿಷನ್ ಯೋಜನೆ: ಸಿದ್ದರಾಮಯ್ಯ–ಸೋಮಣ್ಣ ಜಟಾಪಟಿ

₹16,863 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ನವದೆಹಲಿ/ ಬೆಂಗಳೂರು: ಮನೆ ಮನೆಗೆ ಕುಡಿಯುವ ನೀರಿನ ಪೂರೈಕೆಗಾಗಿ ನಲ್ಲಿ ಸಂಪರ್ಕ ಕಲ್ಪಿಸುವ ಜಲ ಜೀವನ ಮಿಷನ್ ಯೋಜನೆ ಅಡಿ ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಲಭ್ಯವಾಗಬೇಕಾಗಿದ್ದ ಒಟ್ಟು ಅನುದಾನದಲ್ಲಿ ₹16,863 ಕೋಟಿ ನಷ್ಟವಾಗಿದೆ.



2019–20ನೇ ಆರ್ಥಿಕ ವರ್ಷದಿಂದ 2024–25ನೇ ಆರ್ಥಿಕ ವರ್ಷದ ಫೆಬ್ರುವರಿ 10ರವರೆಗೆ ಕೇಂದ್ರ ಜಲಶಕ್ತಿ ಸಚಿವಾಲಯವು ರಾಜ್ಯಕ್ಕೆ ಒಟ್ಟು ₹28,623.89 ಕೋಟಿ ಅನುದಾನ ಹಂಚಿಕೆ ಮಾಡಿದೆ. ಅದರಲ್ಲಿ ಈವರೆಗೆ ಬಿಡುಗಡೆ ಆಗಿದ್ದು ₹11,760.03 ಕೋಟಿ ಮಾತ್ರ. ಹಣ ಬಿಡುಗಡೆ ಆಗದೇ ಇರುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮಧ್ಯೆ ಜಟಾಪಟಿ ನಡೆದಿದೆ.

'ಘೋಷಿಸಿರುವ ಅನುದಾನವನ್ನು ಬಿಡುಗಡೆ ಮಾಡದೆ ಕೇಂದ್ರದ ಬಿಜೆಪಿ ಸರ್ಕಾರವು ರಾಜ್ಯಕ್ಕೆ ದ್ರೋಹ ಎಸಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಎಕ್ಸ್'ನಲ್ಲಿ ಆರೋಪಿಸಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, 'ಯೋಜನೆಗೆ ಸಂಬಂಧಿಸಿದ ದಾಖಲೆಗಳನ್ನು ರಾಜ್ಯ ಸರ್ಕಾರ ಸಕಾಲದಲ್ಲಿ ಸಲ್ಲಿಸಿಲ್ಲ. ಹೀಗಾಗಿ, ಕೇಂದ್ರ ಅನುದಾನದ ಪಾಲನ್ನು ಪಡೆಯಲು ರಾಜ್ಯ ಸರ್ಕಾರ ವಿಫಲವಾಗಿದೆ' ಎಂದಿದ್ದಾರೆ.

10ನೇ ಪುಟ ನೋಡಿ

'ರಾಜ್ಯಕ್ಕೆ ದ್ರೋಹ'



ಅನುದಾನ ನೀಡದೆ ಯೋಜನೆಯನ್ನು ಕೊಲ್ಲುವ ಕೃತ್ಯವನ್ನು ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಮಾಡುತ್ತಿದೆ. ಕೇಂದ್ರವು ಕರ್ನಾಟಕಕ್ಕೆ ನ್ಯಾಯಬದ್ಧವಾಗಿ ಸಿಗಬೇಕಾದ ಅನುದಾನದ ಪಾಲನ್ನು ನಿರಾಕರಿಸುತ್ತಾ ಬಂದಿದೆ. ಈ ಅನ್ಯಾಯವನ್ನು ಪ್ರಶ್ನಿಸಬೇಕಿದ್ದ ಸಚಿವ ಸೋಮಣ್ಣ ಅವರು ನಿರ್ಲಜ್ಜರಾಗಿ ತಪ್ಪು ಮಾಹಿತಿಯನ್ನು ಹರಡಿ ಕನ್ನಡಿಗರಿಗೆ ದ್ರೋಹ ಎಸಗುತ್ತಿದ್ದಾರೆ. ಬದಲಿಗೆ, 2024-25 ಸಾಲಿನ ಬಜೆಟ್‌ನಲ್ಲಿ ಹಂಚಿಕೆಯಾಗಿದ್ದ ಪೂರ್ಣ ಅನುದಾನವನ್ನು ಯಾಕೆ ನೀಡಿಲ್ಲ ಎಂದು ಅವರು ಪ್ರಧಾನಿಯನ್ನು ಪ್ರಶ್ನಿಸಬೇಕು.

ಸಿದ್ದರಾಮಯ್ಯ, ಮುಖ್ಯಮಂತ್ರಿ

'ರಾಜ್ಯವೇ ಹೊಣೆ'




ಮುಖ್ಯಮಂತ್ರಿಗಳೇ, ಯೋಜನೆಯಡಿ ₹16,863.86 ಕೋಟಿ ನಷ್ಟವಾಗಲು ನಿಮ್ಮ ರಾಜ್ಯ ಸರ್ಕಾರವೇ ಹೊಣೆ. ಅದನ್ನು ಒಪ್ಪಿಕೊಳ್ಳುವ ಬದಲು, ಕೇಂದ್ರ ಹಣ ನೀಡುತ್ತಿಲ್ಲ ಎಂದು ಸುಳ್ಳು ಅಂಕಿ-ಅಂಶ ನೀಡುವ ನಿಮ್ಮ ನೈತಿಕವಲ್ಲದ ರಾಜಕೀಯ ನಿಮಗೆ ಭೂಷಣವಲ್ಲ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಯೋಜನೆ ಅನುಷ್ಠಾನದಲ್ಲಿ ಕರ್ನಾಟಕವನ್ನು 22ನೇ ಸ್ಥಾನಕ್ಕೆ ನೂಕಿದ್ದಕ್ಕೆ ಕಾರಣ ನೀಡುವಿರಾ? ಜನಪರ ಯೋಜನೆಗಳ ಬಗ್ಗೆ ಸುಳ್ಳು ಹೇಳುವ ಪ್ರವೃತ್ತಿ ಕೇಂದ್ರ ಸರ್ಕಾರಕ್ಕಿಲ್ಲ. ಗುರಿ ಸಾಧಿಸಲಾಗದಷ್ಟು ಅಸಮರ್ಥ, ಅಶಕ್ತತೆ, ದಿವಾಳಿತನವನ್ನು ರಾಜ್ಯಕ್ಕೆ ನಿಮ್ಮ ಸರ್ಕಾರ ತಂದಿದೆಯೇ?

ವಿ.ಸೋಮಣ್ಣ, ಜಲಶಕ್ತಿ ಖಾತೆ ರಾಜ್ಯ ಸಚಿವ


ಕೇಂದ್ರ ಸರ್ಕಾರದ ದಾಖಲೆಗಳಲ್ಲಿ ಇರುವುದು....

ಬಂದದ್ದು ಶೇ 42ರಷ್ಟು ಅನುದಾನ ಮಾತ್ರ



* ಕೇಂದ್ರ ಸಚಿವ ವಿ.ಸೋಮಣ್ಣ ಲೋಕಸಭೆಗೆ ನೀಡಿದ್ದ ಮಾಹಿತಿ

ರಾಜ್ಯ ಸರ್ಕಾರದ ವೆಚ್ಚವೇ ಹೆಚ್ಚು



* ಜಲಜೀವನ ಅಭಿಯಾನ ಡ್ಯಾಶ್‌ಬೋರ್ಡ್ ಮಾಹಿತಿ, ಜಲಶಕ್ತಿ ಸಚಿವಾಲಯದ ಪ್ರಕಟಣೆ

ಸಿದ್ದರಾಮಯ್ಯ ಪರ ಶಾಸಕರ ಸ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದೆ ಚುನಾವಣಾ ರಾಜಕೀಯದಲ್ಲಿ ಮುಂದುವರಿಯಬೇಕೋ, ಬೇಡವೋ ಎಂದು ಜನಾಭಿಪ್ರಾಯ ಪಡೆದು ತೀರ್ಮಾನಿಸುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಮನಸ್ಸಿನ ಭಾವನೆ ಹೊರಹಾಕುತ್ತಿದ್ದಂತೆ, ಕೆಲ ಸಚಿವರು, ಕಾಂಗ್ರೆಸ್ ಶಾಸಕರು ಅವರ ಪರ ಕೂಗೆಬ್ಬಿಸಿದ್ದಾರೆ.

'ಮುಖ್ಯಮಂತ್ರಿ ಗಾದಿಯಲ್ಲಿ ಮುಂದಿನ ಏಳು ವರ್ಷಗಳಲ್ಲ, ಹತ್ತು ವರ್ಷ ಸಿದ್ದರಾಮಯ್ಯ ಇರುತ್ತಾರೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿಕೆಗೆ ಧ್ವನಿಗೂಡಿಸಿದ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ,'ಸಿದ್ದರಾಮಯ್ಯನವರು ನಮಗೆ ಬೇಕೇ ಬೇಕು. ಮುಂದಿನ ನಾಯಕತ್ವ ಬೆಳೆಸುವವರೆಗೆ ಅವರೇ ಮುಂದುವರಿಯಬೇಕು' ಎಂದಿದ್ದಾರೆ.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಜಾರಕಿಹೊಳಿ, 'ಸಿದ್ದರಾಮಯ್ಯನವರು ಚುನಾವಣೆಗೆ ನಿಲ್ಲದಿದ್ದರೂ ಸರಿಯೇ. ರಾಜಕೀಯ ನಿವೃತ್ತಿಯಾದರೂ ಅವರು ಬೇಕು. ಮುಂದಿನ ಚುನಾವಣೆ ಗೆಲ್ಲಬೇಕೆಂದರೆ ಅವರು ರಾಜಕಾರಣ-ದಲ್ಲಿರಬೇಕು' ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯಿಸಿದ ಜಾರಕಿಹೊಳಿ, 'ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತೀರ್ಮಾನಿಸುತ್ತಾರೆ' ಎಂದರು.

8ನೇ ಪುಟ ನೋಡಿ

'2028ರಲ್ಲಿ ಮತ್ತೆ ಅಧಿಕಾರ ಹಿಡಿಯುವುದೇ ಗುರಿ'



'ಕೆಪಿಸಿಸಿ ಅಧ್ಯಕ್ಷ ಹುದ್ದೆಯನ್ನು ನಾನು ಕೇಳಿಯೂ ಇಲ್ಲ, ಬದಲಾಗಬೇಕೆಂದು ಹೇಳಿಯೂ ಇಲ್ಲ. ಆ ಬಗ್ಗೆ ವರಿಷ್ಠರು ನಿರ್ಧರಿಸುತ್ತಾರೆ. ಈ ಐದು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ 2028ಕ್ಕೆ ಮತ್ತೆ ಪಕ್ಷ ಅಧಿಕಾರ ಹಿಡಿಯಬೇಕೆಂಬ ಉದ್ದೇಶ ನಮ್ಮದು' ಎಂದು ಸತೀಶ ಜಾರಕಿಹೊಳಿ ಹೇಳಿದರು.

ಕೋಲಾರದಲ್ಲಿ ಶನಿವಾರ ಮಾತನಾಡಿದ ಅವರು, 'ನಾವು ಕಾಂಗ್ರೆಸ್ ಪಕ್ಷದ ಆರ್ಮಿ ರೀತಿ ಕೆಲಸ ಮಾಡುವವರೇ ಹೊರತು ಸಿದ್ದರಾಮಯ್ಯ ಅಥವಾ ಡಿ.ಕೆ. ಶಿವಕುಮಾರ್ ಆರ್ಮಿ ರೀತಿ ಕೆಲಸ ಮಾಡುವವರಲ್ಲ' ಎಂದರು.

'ಸಿದ್ದರಾಮಯ್ಯ ಪೂರ್ಣ 5 ವರ್ಷ ಮುಖ್ಯಮಂತ್ರಿಯಾಗಿ ಮುಂದುವರಿಯುತ್ತಾರೆಯೇ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಆ ವಿಚಾರದ ಬಗ್ಗೆ ಅವರನ್ನೇ ಕೇಳಬೇಕು. ಅವರನ್ನು ನಾನು ಮುಖ್ಯಮಂತ್ರಿ ಮಾಡಿದ್ದೇನೆಯೇ? ನನ್ನ ವ್ಯಾಪ್ತಿ ಬಿಟ್ಟು ಏನನ್ನೂ ಮಾತನಾಡುವುದಿಲ್ಲ. ಸಿದ್ದರಾಮಯ್ಯ ಮಾತನಾಡಿದ ಮೇಲೆ ನಾನೇನು ಮಾತನಾಡುವುದಿದೆ' ಎಂದರು.



ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಇಬ್ಬರೂ ಕಾಂಗ್ರೆಸ್‌ಗೆ ಅನಿವಾರ್ಯ. ಯಾರೋ ಹೇಳಿಕೆ ಕೊಟ್ಟ ತಕ್ಷಣ ವ್ಯವಸ್ಥೆ ಬದಲಾಗುವುದಿಲ್ಲ. ಉಳಿದ ನಾಯಕರಿಗೂ ವರ್ಚಸ್ಸಿದೆ

ಜಿ.ಸಿ. ಚಂದ್ರಶೇಖರ್
ಕೆಪಿಸಿಸಿ ಕಾರ್ಯಾಧ್ಯಕ್ಷ

'ಪೂರ್ಣಾವಧಿಗೂ ಮುಂದುವರಿಯಲಿ'



ಕೆ.ಎನ್.ರಾಜಣ್ಣ

'ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಪೂರ್ಣಾವಧಿಗೆ ಮುಂದುವರಿಯಬೇಕು ಎಂಬ ಒತ್ತಾಯಕ್ಕೆ ನನ್ನ ಸಹಮತವಿದೆ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ತುಮಕೂರಿನಲ್ಲಿ ಮಾತನಾಡಿದ ರಾಜಣ್ಣ, '2023ರ ಮೇ 18ರಂದು ಎಐಸಿಸಿ ಮುಖಂಡರು ಹೊರಡಿಸಿದ್ದ ಪತ್ರಿಕಾ ಹೇಳಿಕೆಯಲ್ಲಿ 'ಮುಂದಿನ ಲೋಕಸಭೆ ಚುನಾವಣೆ ಮುಗಿಯುವವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಡಿ.ಕೆ. ಶಿವಕುಮಾರ್ ಮುಂದುವರಿಯುತ್ತಾರೆ' ಎಂದಿದೆ. ಆ ಬಗ್ಗೆ ಪಕ್ಷದ ಹೈಕಮಾಂಡ್‌ನಿಂದ ಸ್ಪಷ್ಟನೆ ಕೇಳುತ್ತಿದ್ದೇವೆ. ಆ ಪತ್ರದಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಪ್ರಸ್ತಾಪಿಸಿಲ್ಲ. ಹೀಗಾಗಿ ಆ ವಿಚಾರ ಚರ್ಚೆಯಲ್ಲಿ ಇಲ್ಲ' ಎಂದರು.

'ರೌಡಿಗಳ ಬಳಸಿದರೆ ಕ್ರಿಮಿನಲ್ ಪ್ರಕರಣ'

ಪ್ರಜಾವಾಣಿ ವಾರ್ತೆ

ಮೈಕ್ರೊ ಫೈನಾನ್ಸ್

ಬೆಂಗಳೂರು: ಸಾಲ ವಸೂಲಾತಿಗೆ ರೌಡಿಗಳನ್ನು ಬಳಸಿಕೊಳ್ಳುವ ಮೈಕ್ರೊ ಫೈನಾನ್ಸ್ ಕಂಪನಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು, ಬಲವಂತದ ವಸೂಲಾತಿ ಪ್ರಕರಣಗಳಿಗೆ ತಡೆ ಹಾಕಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಮೈಕ್ರೊ ಫೈನಾನ್ಸ್ ಕಂಪನಿಗಳು, ಲೇವಾದೇವಿದಾರರ ಚಟುವಟಿಕೆ ಕುರಿತು ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠರ (ಎಸ್.ಪಿ) ಜತೆ ವಿಡಿಯೊ ಸಂವಾದದ ಮೂಲಕ ಶನಿವಾರ ಸಭೆ ನಡೆಸಿದ ಅವರು, ರಾಜ್ಯ ಸರ್ಕಾರ ಜಾರಿಗೆ ತಂದಿರುವ ಸುಗ್ರೀವಾಜ್ಞೆಗೆ ಅನುಗುಣವಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ತಾಕೀತು ಮಾಡಿದರು.

ಪರವಾನಗಿ ಪಡೆಯದ ಮೈಕ್ರೊ ಫೈನಾನ್ಸ್ ಕಂಪನಿಗಳ ಮೇಲೆ ನಿಗಾ ಇರಿಸಬೇಕು. ಪರವಾನಗಿ ಪಡೆದಿರುವ ಕಂಪನಿಗಳು ಆರ್‌ಬಿಐ ಮಾರ್ಗ-ಸೂಚಿಯನ್ನು ಕಡ್ಡಾಯವಾಗಿ ಪಾಲಿಸುತ್ತಿರುವ ಕುರಿತು ಖಾತ್ರಿಪಡಿಸಬೇಕು ಎಂದು ನಿರ್ದೇಶನ ನೀಡಿದರು.

ಎಲ್ಲ ಜಿಲ್ಲೆಗಳಲ್ಲಿ ಈಗಾಗಲೇ ಸಹಾಯವಾಣಿ ಆರಂಭಿಸಲು ಸೂಚಿಸಲಾಗಿದ್ದು, ಬಲವಂತದ ಸಾಲ ವಸೂಲಾತಿ ಕಂಡುಬಂದರೆ ಸ್ವಯಂಪ್ರೇರಿತವಾಗಿ ಮೊಕದ್ದಮೆ ದಾಖಲಿಸಬೇಕು. ಸಾಲ ಪಡೆದವರಲ್ಲಿ ಧೈರ್ಯ ತುಂಬಿ, ಆತ್ಮಹತ್ಯೆ ಪರಿಹಾರವಲ್ಲ ಎನ್ನುವುದನ್ನು ಮನವರಿಕೆ ಮಾಡಿಸಬೇಕು ಎಂದರು.

ಸಾಲಗಾರರ ಕಿರುಕುಳ ಮುಂದು-ವರಿದಿರುವುದು ಗಮನಕ್ಕೆ ಬಂದರೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಎಸ್.ಪಿಯನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಕಾಯ್ದೆಯ ಅಂಶಗಳನ್ನು ಜಾರಿಗೊಳಿಸುವ ಮೂಲಕ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು ಕಟ್ಟುನಿಟ್ಟಿನ ಸೂಚನೆ ನೀಡಿದರು.

'ಮೆಟ್ರೊ ಪ್ರಯಾಣ ದರ ಏರಿಕೆಗೆ ರಾಜ್ಯವೇ ಹೊಣೆ'

ಪ್ರಜಾವಾಣಿ ವಾರ್ತೆ



ಅಶ್ವಿನಿ ವೈಷ್ಣವ್

ಬೆಂಗಳೂರು: ಮೆಟ್ರೊ ರೈಲು ಯೋಜನೆಗೆ ಕೇಂದ್ರದ ಸಹಭಾಗಿತ್ವ ಇದ್ದರೂ, ದರ ಏರಿಕೆ ಪ್ರಸ್ತಾವ ಸಲ್ಲಿಸಿದ್ದೇ ಕರ್ನಾಟಕ. ಈ ಗೊಂದಲಕ್ಕೆ ರಾಜ್ಯ ಸರ್ಕಾರವೇ ಹೊಣೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಮೆಟ್ರೊ ಪ್ರಯಾಣ ದರ ಏರಿಕೆಗೆ ಕೇಂದ್ರ ಸರ್ಕಾರ ಕಾರಣ ಎನ್ನುವ ಆರೋಪ ಸರಿಯಲ್ಲ. ಬಿಎಂಆರ್‌ಸಿಎಲ್‌ನಲ್ಲಿ ಕೇಂದ್ರದ ಪಾಲು ಹೊಂದಿದ್ದರೂ ನಿರ್ವಹಣೆ, ಕಾರ್ಯಾಚರಣೆ ರಾಜ್ಯದ್ದೇ ಆಗಿರುತ್ತದೆ. ಮೆಟ್ರೊ ಪ್ರಯಾಣ ದರ ಏರಿಕೆ ಸಮಿತಿ ಇರುವುದೂ ಬೆಂಗಳೂರಿನಲ್ಲಿ, ದೆಹಲಿಯಲ್ಲಿ ಅಲ್ಲ ಎಂದರು.



'ಮೆಟ್ರೊ ಕರ್ನಾಟಕದಲ್ಲಷ್ಟೇ ಅಲ್ಲ, ದೆಹಲಿ, ಮುಂಬೈ, ಹೈದರಾಬಾದ್‌ನಲ್ಲೂ ಇದೆ. ಅಲ್ಲಿ ಇಷ್ಟೊಂದು ದರ ಏಕೆ ಇಲ್ಲ? ದರ ಏರಿಕೆ ಪ್ರಸ್ತಾವ ಸಲ್ಲಿಸುವಂತೆ ಕೇಂದ್ರ ಸರ್ಕಾರ ಸೂಚನೆ ನೀಡಿಲ್ಲ. ಅದು ಕೇಂದ್ರದ ನೀತಿಯೂ ಅಲ್ಲ. ವಾಸ್ತವ ಗೊತ್ತಿದ್ದರೂ ಇಂತಹ ಆರೋಪ ಮಾಡುವವರಿಗೆ ಮುಖ್ಯಮಂತ್ರಿಯೇ ಉತ್ತರಿಸಬೇಕು' ಎಂದು ಹೇಳಿದರು.

ಬೆಂಗಳೂರು ನಗರದಲ್ಲಿ ಮೆಟ್ರೊ ರೈಲು ವ್ಯವಸ್ಥೆ ಇನ್ನಷ್ಟು ಸುಧಾರಣೆ-ಯಾಗಬೇಕು. ವಿಸ್ತರಣಾ ಕಾರ್ಯ ವೇಗ ಪಡೆಯಬೇಕು ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಕನಿಷ್ಠ 400 ಕಿ.ಮೀ ಮೆಟ್ರೊ ಜಾಲ ವಿಸ್ತಾರವಾಗಬೇಕು ಎಂದರು.


ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ಎರಡು ತಿಂಗಳು ಹಿಂದೆಯೇ ರಾಜ್ಯ ಸರ್ಕಾರ ಮೆಟ್ರೊ ಪ್ರಯಾಣ ದರವನ್ನು ಶೇ 105ರಷ್ಟು ಹೆಚ್ಚಳ ಮಾಡುವಂತೆ ಪ್ರಸ್ತಾವ ಸಲ್ಲಿಸಿತ್ತು ಎಂದು ದೂರಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಒಳನೋಟ



ಡ್ರಗ್ಸ್: ಮೂಲವೇ ನಾಪತ್ತೆ

6

ಭಾನುವಾರದ ಉಷ್ಣಾಂಶ 33° ಗರಿಷ್ಠ 16° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಶುಭ್ರ ಆಗಸ ಇರಲಿದೆ

ಮುನ್ಸೂಚನೆ: ಸೋಮವಾರ 33° 16° | ಮಂಗಳವಾರ 33° 16° | ಬುಧವಾರ 33° 16°

‘ಚಿತ್ರೋತ್ಸವದಲ್ಲಿ ಕನ್ನಡ ಸಿನಿಮಾ ನಿರ್ಲಕ್ಷ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾರ್ಚ್ 1ರಂದು ಆರಂಭವಾಗಲಿರುವ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಏಷ್ಯನ್ ಮತ್ತು ಭಾರತೀಯ ಚಲನಚಿತ್ರ ಸ್ಪರ್ಧಾ ವಿಭಾಗಗಳಲ್ಲಿ ಕನ್ನಡ ಚಲನಚಿತ್ರಗಳನ್ನು ಕಡೆಗಣಿಸಲಾಗಿದೆ’ ಎಂದು ಕರ್ನಾಟಕ ನವಜಾಗೃತಿ ವೇದಿಕೆ ಆರೋಪಿಸಿದೆ.

‘ಈ ವಿಭಾಗಗಳಲ್ಲಿ ತಲಾ 14 ಸಿನಿಮಾಗಳ ಆಯ್ಕೆಗೆ ಅವಕಾಶವಿದೆ. ಹಿಂದೆ ಅನೇಕ ಬಾರಿ ಈ ವಿಭಾಗಗಳಲ್ಲಿ ಕನ್ನಡದ ತಲಾ 3 ಸಿನಿಮಾಗಳನ್ನು ಆಯ್ಕೆ ಮಾಡಿದ್ದ ಉದಾಹರಣೆಗಳಿವೆ. ಆದರೆ, ಪ್ರಸಕ್ತ ಸಾಲಿನಲ್ಲಿ ಎರಡೂ ವಿಭಾಗಗಳಲ್ಲಿ ಒಂದೊಂದು ಕನ್ನಡ ಸಿನಿಮಾವನ್ನು ಮಾತ್ರ ಆಯ್ಕೆ ಮಾಡಲಾಗಿದೆ. ಇದು ಕನ್ನಡ ಚಲನಚಿತ್ರೋದ್ಯಮಕ್ಕೆ ಮಾಡಿದ ದೊಡ್ಡ ಅನ್ಯಾಯ’ ಎಂದು ವೇದಿಕೆಯ ಅಧ್ಯಕ್ಷ ಸಿ. ಮೋಹನ್ ಕುಮಾರ್ ದೂರಿದ್ದಾರೆ.

‘ಕನ್ನಡ ಚಲನಚಿತ್ರೋದ್ಯಮ ಈಗ ಸಂಕಷ್ಟವನ್ನು ಎದುರಿಸುತ್ತಿದ್ದು, ಇಂತಹ ಪರಿಸ್ಥಿತಿಯಲ್ಲಿ ಕನ್ನಡ ಚಲನಚಿತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕಾದ ಅಗತ್ಯವಿದೆ. ಆದರೆ, ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಾದ ಸಾಧು ಕೋಕಿಲ ಅವರು ಕನ್ನಡ ಸಿನಿಮಾಗಳಿಗೆ ಪ್ರೋತ್ಸಾಹ ನೀಡುವಲ್ಲಿ ನಿರ್ಲಕ್ಷ್ಯ ತೋರಿಸಿರುವುದು ಖಂಡನೀಯ. ಕನ್ನಡ ಸಿನಿಮಾಗಳಿಗೆ ಆಗಿರುವ ಈ ಅನ್ಯಾಯವನ್ನು ಸರಿಪಡಿಸಬೇಕು. ತಪ್ಪಿದರೆ ಅಧ್ಯಕ್ಷ ಸ್ಥಾನಕ್ಕೆ ಸಾಧು ಕೋಕಿಲ ರಾಜೀನಾಮೆ ನೀಡಬೇಕು’ ಎಂದೂ ಆಗ್ರಹಿಸಿದ್ದಾರೆ.

ಆಯತಪ್ಪಿ ಬಿದ್ದ ರುದ್ರಪ್ಪ ಲಮಾಣಿ

ನ್ಯಾಮತಿ (ದಾವಣಗೆರೆ): ತಾಲ್ಲೂಕಿನ ಭಾಯಾಗಡದಲ್ಲಿ ಸಂತ ಸೇವಾಲಾಲ್ ಜಯಂತ್ಯುತ್ಸವದ ಅಂಗವಾಗಿ ಆಯೋಜಿಸಿದ್ದ ಕಬಡ್ಡಿ ಪಂದ್ಯಕ್ಕೆ ರೈಡಿಂಗ್ ಮೂಲಕ ಚಾಲನೆ ನೀಡಲು ಮುಂದಾಗಿದ್ದ ವಿಧಾನ ಸಭೆಯ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅವರು ಆಯತಪ್ಪಿ ಬಿದ್ದ ಪ್ರಸಂಗ ಶುಕ್ರವಾರ ರಾತ್ರಿ ನಡೆದಿದೆ.



ಆಟಗಾರರು ಹಾಗೂ ಆಯೋಜಕರು ಕೂಡಲೇ ಅವರನ್ನು ಮೇಲೆತ್ತಿದ್ದಾರೆ. ಬಳಿಕ ಸಾವರಿಸಿಕೊಂಡು ನಗು ಮೊಗದೊಂದಿಗೆ ಅವರು ಅಂಗಳದಿಂದ ಹೊರ ಹೋದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

‘ಲಮಾಣಿಯವರು ಆರೋಗ್ಯವಾಗಿದ್ದಾರೆ. ಶನಿವಾರ ಭೋಗ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಮಧ್ಯಾಹ್ನದ ಬಳಿಕ ಭಾಯಾಗಡದಿಂದ ತೆರಳಿದರು’ ಎಂದು ಮಠದ ಮೂಲಗಳು ಮಾಹಿತಿ ನೀಡಿವೆ.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲ ಗೌಡ ಸಲಹೆ

‘ಪರಿಸರ ರಕ್ಷಣೆ: ನಿಯಮ ಪಾಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರ ಉಳಿಸಲು ಇರುವ ನಿಯಮಗಳನ್ನು ಉಲ್ಲಂಘಿಸುವ ಅಧಿಕಾರಿಗಳು, ಜನಪ್ರತಿನಿಧಿಗಳು, ಉದ್ಯಮಿಗಳನ್ನು ಅರಬ್ಬಿ ಸಮುದ್ರಕ್ಕೆ ಎಸೆಯಬೇಕು ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲ ಗೌಡ ಆಕ್ರೋಶ ವ್ಯಕ್ತಪಡಿಸಿದರು.

‘ಪರಿಸರ ಕಾಯ್ದೆಗಳಿಗೆ ಸಂಬಂಧಿಸಿದ ಸಾಂವಿಧಾನಿಕ ಅಂಶಗಳು’ ಕುರಿತು ಇಂಡಿಯನ್ ಕಾನ್ಫರೆನ್ಸ್ ಆಫ್ ಇಂಟೆಲೆಕ್ಚುವಲ್ ಶನಿವಾರ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಅವರು ಮಾತನಾಡಿದರು.

ವಾಯುಮಾಲಿನ್ಯ ನಿಯಂತ್ರಣ ಕಾಯ್ದೆ, ಜಲಮಾಲಿನ್ಯ ನಿಯಂತ್ರಣ ಕಾಯ್ದೆ, ಪರಿಸರ ಸಂರಕ್ಷಣಾ ಕಾಯ್ದೆಗಳು ನಮ್ಮಲ್ಲಿ ಈಗಾಗಲೇ ಇವೆ. ಜಾಗತಿಕ ತಾಪಮಾನ ತಡೆಯಲು ಏನು ಕ್ರಮ ಕೈಗೊಳ್ಳಬೇಕು ಎಂಬುದನ್ನು ಪ್ಯಾರಿಸ್ ಒಪ್ಪಂದದಲ್ಲಿ ಹೇಳಲಾಗಿದೆ. ಆದರೆ, ನಿಯಮಗಳು ಪಾಲನೆಯಾಗದೇ ಪರಿಸರ ನಾಶವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಇಂಡಿಯನ್ ಕಾನ್ಫರೆನ್ಸ್ ಆಫ್ ಇಂಟೆಲೆಕ್ಚುವಲ್ ಶನಿವಾರ ಹಮ್ಮಿಕೊಂಡಿದ್ದ ‘ಪರಿಸರ ಕಾಯ್ದೆಗಳಿಗೆ ಸಂಬಂಧಿಸಿದ ಸಾಂವಿಧಾನಿಕ ಅಂಶಗಳು’ ಸಮಾವೇಶದಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ಅವರನ್ನು ಸನ್ಮಾನಿಸಲಾಯಿತು

ಮಾಲಿನ್ಯ ನಿಯಂತ್ರಣ ಮಂಡಳಿಗೆ ಅರ್ಹರನ್ನು ಆಯ್ಕೆ ಮಾಡುವ ಬದಲು ರಾಜಕಾರಣಿಗಳನ್ನು, ಅವರ ಅನುಯಾಯಿಗಳನ್ನು ಅಧ್ಯಕ್ಷರು, ಸದಸ್ಯರನ್ನಾಗಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಮನುಷ್ಯರು ಮಾತ್ರವಲ್ಲ ಸಕಲ ಜೀವರಾಶಿಗಳು ಸುರಕ್ಷಿತವಾಗಿ ಬದುಕುವ ವಾತಾವರಣ ಸೃಷ್ಟಿ ಮಾಡಬೇಕು ಎಂದು ಸಲಹೆ ನೀಡಿದರು.

ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ಮಾತನಾಡಿ, ‘ಪರಿಸರದೊಂದಿಗೆ ಶಾಂತಿಯುತ ಸಹಬಾಳ್ವೆ ಬಹಳ ಮುಖ್ಯ. ಪರಿಸರ ಮತ್ತು ಅಭಿವೃದ್ಧಿ ಸಮತೋಲನದಿಂದ ಕೂಡಿರಬೇಕು. ಸ್ಥಳೀಯ ಸಂಸ್ಥೆಗಳು ಪರಿಸರ ಉಳಿಸುವ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ತಿಳಿಸಿದರು.

ಹೈಕೋರ್ಟ್ ನ್ಯಾಯಮೂರ್ತಿ ಚಿಲ್ಲಕೂರ್ ಸುಮಲತಾ ಮಾತನಾಡಿ, ‘ಕುಡಿಯುವ ನೀರಿಗೆ ವ್ಯಾಪಕವಾಗಿ ಚರಂಡಿ ನೀರು ಸೇರುತ್ತಿದೆ. ಭಾರತದಲ್ಲಿ ಶೇ75ರಷ್ಟು ಜಲಮಾಲಿನ್ಯವಾಗಿದೆ. ಶೇ6 ರಷ್ಟು ಮಾತ್ರ ವೈಜ್ಞಾನಿಕ ವಿಲೇವಾರಿ ಆಗುತ್ತಿದೆ. ಶೇ 18ರಷ್ಟು ಗೊಬ್ಬರ ಆಗುತ್ತಿದೆ. ಉಳಿದವುಗಳನ್ನು ಹಾಗೇ ಡಂಪ್ ಮಾಡಲಾಗುತ್ತಿದೆ. ಗಂಗೆ, ಬ್ರಹ್ಮಪುತ್ರ ನದಿಗಳು ಪ್ಲಾಸ್ಟಿಕ್‌ನಿಂದ ಮುಳುಗಿ ಹೋಗಿವೆ’ ಎಂದು ಬೇಸರ ವ್ಯಕ್ತಪಡಿಸಿದರು.

ಹೈಕೋರ್ಟ್ ನ್ಯಾಯಮೂರ್ತಿ ಕೆ. ನಟರಾಜನ್, ಒಡಿಶಾ ಕಾನೂನು ಆಯೋಗದ ಅಧ್ಯಕ್ಷ ಬಿಸ್ವಂತ ರಥ್, ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್, ಸುಪ್ರೀಂಕೋರ್ಟ್ ಬಾರ್ ಅಸೋಸಿಯೇಶನ್ ಕಾರ್ಯ ನಿರ್ವಾಹಕ ಸದಸ್ಯ ಆನಂದ್ ಸಂಜಯ್ ಎಂ. ನುಲಿ ಭಾಗವಹಿಸಿದ್ದರು.

ಏರ್ ಆಂಬುಲೆನ್ಸ್‌ನಲ್ಲಿ ಬೆಂಗಳೂರಿಗೆ ಕುರುಬೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಜಾಬ್‌ನ ಪಟಿಯಾಲ ಬಳಿ ಸಂಭವಿಸಿದ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿರುವ ರೈತ ಮುಖಂಡ ಕುರುಬೂರು ಶಾಂತಕುಮಾರ್ ಅವರನ್ನು ಏರ್ ಆಂಬುಲೆನ್ಸ್ ಮೂಲಕ ಬೆಂಗಳೂರಿಗೆ ಕರೆತರಲು ರಾಜ್ಯ ಸರ್ಕಾರ ವ್ಯವಸ್ಥೆ ಮಾಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ಅಧಿಕಾರಿಗಳು ಏರ್ ಆಂಬುಲೆನ್ಸ್ ಸಜ್ಜುಗೊಳಿಸಿದ್ದು, ಶಾಂತಕುಮಾರ್ ಅವರನ್ನು ಚಂಡೀಗಢದಿಂದ ಬೆಂಗಳೂರಿಗೆ ಕರೆತಂದು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗುವುದು.

ರಸ್ತೆ ಅಪಘಾತದಲ್ಲಿ ಶಾಂತಕುಮಾರ್ ಅವರ ಬೆನ್ನು ಮೂಳೆಗೆ ಗಂಭೀರ ಗಾಯವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.



ಪ್ರಸ್ತುತ ಅವರಿಗೆ ಪಟಿಯಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ನರ್ಸಿಂಗ್ ಪದವಿ ಎಲ್ಲೆಡೆ ಮಾನ್ಯ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನ್ಯ ರಾಜ್ಯದಲ್ಲಿ ಬಿಎಸ್ಸಿ ನರ್ಸಿಂಗ್ ಪದವಿ ಪಡೆದವರನ್ನು, ನಮ್ಮ ರಾಜ್ಯದಲ್ಲಿ ಪದವಿ ಪಡೆದಿಲ್ಲ ಎಂಬ ಕಾರಣಕ್ಕೆ; ರಾಜ್ಯ ನರ್ಸಿಂಗ್ ಕೌನ್ಸಿಲ್ ನೋಂದಣಿ ಪ್ರಕ್ರಿಯೆಯನ್ನು ನಿರಾಕರಿಸುವಂತಿಲ್ಲ’ ಎಂದು ಕರ್ನಾಟಕ ಹೈಕೋರ್ಟ್, ‘ಕೇರಳ ನರ್ಸಸ್ ಅಂಡ್ ಮಿಡ್‌ವೈವ್ಸ್ ಕೌನ್ಸಿಲ್’ಗೆ (ಕೆಎನ್‌ಎಂಸಿ) ಆದೇಶಿಸಿದೆ.



‘ನಮ್ಮ ನೋಂದಣಿಯನ್ನು ನಿರಾಕರಿಸಲಾಗಿದೆ’ ಎಂದು ಆಕ್ಷೇಪಿಸಿ ಮಂಗಳೂರಿನ ನ್ಯೂ ಆರ್.ಕೆ.ಕಾಲೇಜ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ಬಿಎಸ್ಸಿ ನರ್ಸಿಂಗ್ ಪಡೆದಿರುವ ಕಾಸರಗೋಡಿನ ದಾನಿಯಾ ಜಾಯ್ ಮತ್ತು ನೀತು ಬೇಬಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಪೀಠ, ‘ಇಬ್ಬರೂ ವಿದ್ಯಾರ್ಥಿನಿಯರನ್ನು ನೋಂದಣಿ ಮಾಡಿಕೊಳ್ಳಬೇಕು’ ಎಂದು ಕೆಎನ್‌ಎಂಸಿಗೆ ತಾಕೀತುಮಾಡಿದೆ.

‘ವಿಶ್ವವಿದ್ಯಾಲಯ ನೀಡುವ ಪದವಿ ರಾಷ್ಟ್ರವ್ಯಾಪಿ ಮಾನ್ಯತೆ ಹೊಂದಿರುತ್ತದೆ. ದೇಶದ ಯಾವುದೇ ರಾಜ್ಯದ ನರ್ಸಿಂಗ್ ಕೌನ್ಸಿಲ್‌ನಿಂದ ಮಾನ್ಯತೆ ಪಡೆದ ಕಾಲೇಜಿನಲ್ಲಿ ಶಿಕ್ಷಣ ಪೂರ್ಣಗೊಳಿಸಿದ್ದರೆ ಅದನ್ನು ಕಾರಣದಿಂದ ಮತ್ತೊಂದು ರಾಜ್ಯದಲ್ಲಿ ನೀಡಲಾದ ಪದವಿಯನ್ನು ಪರಿಗಣಿಸಿ ಕಾರ್ಯ ನಿರ್ವಹಿಸಬೇಕಾಗುತ್ತದೆ’ ಎಂದು ನ್ಯಾಯಪೀಠ ಹೇಳಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎ.ಎಂ.ನಿತಿನ್ ವಾದಿಸಿದರು.

ತಲೆಮರೆಸಿಕೊಳ್ಳಲು ನೆರವು ನೀಡಿದ್ದ ಕುಟುಂಬದ ಮೂವರ ಬಂಧನ

ನಾಲ್ವರಿಗೆ ಇರಿದಿದ್ದ ರೌಡಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಇಂದಿರಾ ನಗರ ಪೊಲೀಸ್ ಠಾಣಾ ವ್ಯಾಪ್ತಿಯ 100 ಅಡಿ ರಸ್ತೆಯಲ್ಲಿ ನಾಲ್ವರಿಗೆ ಚಾಕು ಇರಿದು, ಪರಾರಿಯಾಗಿದ್ದ ರೌಡಿ ಕದಂಬ ಹಾಗೂ ಆತನಿಗೆ ತಲೆಮರೆಸಿಕೊಳ್ಳಲು ಸಹಾಯ ಮಾಡಿದ್ದ ಕುಟುಂಬದ ಮೂವರನ್ನು ಇಂದಿರಾನಗರ ಠಾಣೆಯ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಆರೋಪಿಯನ್ನು ಬಂಧಿಸಲು ವಿಶೇಷ ತಂಡ ರಚಿಸಲಾಗಿತ್ತು. ಹೊಸಕೋಟೆಯಲ್ಲಿ ಆರೋಪಿಯನ್ನು ಬಂಧಿಸಲಾಯಿತು. ತಲೆಮರೆಸಿಕೊಳ್ಳಲು ನೆರವು ನೀಡಿದ್ದ ಆತನ ತಂದೆ ಸುರೇಶ್, ಸಹೋದರ ವಿಷ್ಣು ಹಾಗೂ ಅಕ್ಕ ಸುಶ್ಮಿತಾ ಅವರನ್ನೂ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ಬಂಧಿತರು ಭಿನ್ನಮಂಗಲದ ನಿವಾಸಿಗಳು.

ಇಂದಿರಾನಗರದ ಮೂರನೇ ಅಡ್ಡ ರಸ್ತೆಯ ನಿವಾಸಿ ಪಿ.ಜಸ್ವಂತ್ (19), ಅಪ್ಪಾರೆಡ್ಡಿ ಪಾಳ್ಯದ ನಿವಾಸಿ ತಮ್ಮಯ್ಯ (44), ಹಳೇ ಭಿನ್ನಮಂಗಲದ ಎಸ್.ಮಹೇಶ್ ಸೀತಾಪತಿ (23), ಮೋಟಪ್ಪ ಪಾಳ್ಯದ ನಿವಾಸಿ ದೀಪಕ್‌ಕುಮಾರ್ ವರ್ಮ (24) ಅವರಿಗೆ ಕದಂಬ ಚಾಕುವಿನಿಂದ ಇರಿದು ತಲೆಮರೆಸಿಕೊಂಡಿದ್ದ.


ಕದಂಬ

ಫೆಬ್ರುವರಿ 8ರಂದು ರಾತ್ರಿ 20 ನಿಮಿಷದ ಅವಧಿಯಲ್ಲಿ ನಾಲ್ವರಿಗೆ ಚಾಕುವಿನಿಂದ ಇರಿದು ಪರಾರಿ ಆಗಿದ್ದ.

ಆರೋಪಿ ವಿರುದ್ಧವೂ ಈ ಹಿಂದೆ ವಿವಿಧ ಠಾಣೆಗಳಲ್ಲಿ ಮನೆ ಕಳ್ಳತನ, ಹಲ್ಲೆ, ದರೋಡೆ ಸೇರಿದಂತೆ ಒಟ್ಟು ಆರು ಪ್ರಕರಣಗಳು ದಾಖಲಾಗಿದ್ದವು. ಕಳೆದ ವರ್ಷ ಆರೋಪಿಯನ್ನು ರೌಡಿ ಪಟ್ಟಿಗೆ ಸೇರಿಸಲಾಗಿತ್ತು.

'ಜಸ್ವಂತ್ ಅವರು ಅಂದು ರಾತ್ರಿ 9.30ರ ಸುಮಾರಿಗೆ ಶುದ್ಧ ನೀರಿನ ಘಟಕದಿಂದ ನೀರು ತರಲು ದ್ವಿಚಕ್ರ ವಾಹನದಲ್ಲಿ ಇಂದಿರಾನಗರದ ಆರನೇ ಮುಖ್ಯ ರಸ್ತೆಯಲ್ಲಿ ತೆರಳುತ್ತಿದ್ದರು. ಅವರನ್ನು ಅಡ್ಡಗಟ್ಟಿದ್ದ ಆರೋಪಿ, ಚಾಕುವಿನಿಂದ ಇರಿದಿದ್ದ. ಮಹೇಶ್ ಸೀತಾಪತಿ ಅವರು ಮಗಳಿಗೆ ಡೈಪರ್ ತರಲು ಕೆ.ಟಿ.ರಸ್ತೆಯ ಐದನೇ ಮುಖ್ಯರಸ್ತೆಯ ಒಂದನೇ ಅಡ್ಡ ರಸ್ತೆಯಲ್ಲಿರುವ ಅಂಗಡಿ ಬಳಿ ನಿಂತಿದ್ದರು. ಅಲ್ಲಿಗೆ ಬಂದಿದ್ದ ಆರೋಪಿ, ಅವರ ಮೇಲೂ ಹಲ್ಲೆ ನಡೆಸಿ ಚಾಕುವಿನಿಂದ ಇರಿದಿದ್ದ' ಎಂದು ಪೊಲೀಸರು ಹೇಳಿದರು.

ಪಾನಿಪೂರಿ ವ್ಯಾಪಾರ ನಡೆಸುತ್ತಿದ್ದ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನ ದೀಪಕ್ ಹಾಗೂ ಎಂ.ಐ.ಶೋರೂಂ ಬಳಿ ಪಾನಿಪೂರಿ ಅಂಗಡಿ ಇಟ್ಟುಕೊಂಡಿದ್ದ ತಮ್ಮಯ್ಯ ಅವರಿಗೂ ಇರಿದು ಪರಾರಿ ಆಗಿದ್ದ. ಆರೋಪಿ ಕೃತ್ಯ ಎಸಗಲು ಕಾರಣ ಎಂಬುದುರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಜಮೀನು ವಿಚಾರಕ್ಕೆ ಗಲಾಟೆ ಜೆಸಿಬಿ ಮಾಲೀಕನ ಕೊಲೆ

ಅಪರಾಧ ಸುದ್ದಿ

ಬೆಂಗಳೂರು: ಜಮೀನು ವಿಚಾರಕ್ಕೆ ಸಂಬಂಧಿಕರ ಮಧ್ಯೆ ನಡೆದ ಗಲಾಟೆಯಲ್ಲಿ ಜೆಸಿಬಿ ಮಾಲೀಕನನ್ನು ಕೊಲೆ ಮಾಡಲಾಗಿದ್ದು, ಆರೋಪಿಗಳಿಗಾಗಿ ಎಲೆಕ್ಟ್ರಾನಿಕ್ ಸಿಟಿ ಠಾಣೆಯ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ವಿಟ್ಟಸಂದ್ರದ ನಿವಾಸಿ ವೇಣುಗೋಪಾಲರೆಡ್ಡಿ(38) ಕೊಲೆಯಾದವರು.

ಆರೋಪಿಗಳು, ದೊಣ್ಣೆ ಕಲ್ಲು ಹಾಗೂ ಮಚ್ಚಿನಿಂದ ಹೊಡೆದ ರಭಸಕ್ಕೆ ವೇಣುಗೋಪಾಲರೆಡ್ಡಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ರಾಮಕೃಷ್ಣ ಹಾಗೂ ಅವರ ಪುತ್ರ ಸೇರಿಕೊಂಡು ಕೃತ್ಯ ಎಸಗಿರುವ ಮಾಹಿತಿ ಸಿಕ್ಕಿದೆ. ಆರೋಪಿಗಳಿಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಜಮೀನು ವಿಚಾರಕ್ಕೆ ಶುಕ್ರವಾರ ಸಂಜೆ ಮೂವರ ಮಧ್ಯೆ ಗಲಾಟೆ ನಡೆದಿದೆ. ಮಾತಿಗೆ ಮಾತು ಬೆಳೆದು ಜಗಳ ವಿಕೋಪಕ್ಕೆ ತಿರುಗಿತ್ತು. ಆಗ ತಂದೆ ಹಾಗೂ ಮಗ ಸೇರಿಕೊಂಡು ವೇಣುಗೋಪಾಲರೆಡ್ಡಿ ಅವರ ಮೇಲೆ ಹಲ್ಲೆ ನಡೆಸಿದ್ದರು. ಹಲ್ಲೆಯಿಂದ ವೇಣುಗೋಪಾಲರೆಡ್ಡಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ತಮಿಳುನಾಡು ಸರ್ಕಾರಕ್ಕೆ ಜಯಲಲಿತಾ ಆಭರಣ ವಾಪಸು

ಬೆಂಗಳೂರು: ತಮಿಳುನಾಡು ಮಾಜಿ ಮುಖ್ಯಮಂತ್ರಿ ದಿವಂಗತ ಜೆ. ಜಯಲಲಿತಾ ಮತ್ತು ಇತರರ ವಿರುದ್ಧದ ಅಕ್ರಮ ಆಸ್ತಿ ಸಂಪಾದನೆ ಪ್ರಕರಣದ ವಿಚಾರಣೆ ವೇಳೆ ವಶಕ್ಕೆ ಪಡೆಯಲಾಗಿದ್ದ ಕೋಟ್ಯಂತರ ರೂಪಾಯಿ ಮೌಲ್ಯದ ವಜ್ರ ಮತ್ತು ಚಿನ್ನಾಭರಣಗಳನ್ನು ತಮಿಳುನಾಡು ಸರ್ಕಾರಕ್ಕೆ ಮರಳಿಸುವ ಪ್ರಕ್ರಿಯೆಯನ್ನು ಬೆಂಗಳೂರಿನ ಸಿಬಿಐ ವಿಶೇಷ ನ್ಯಾಯಾಲಯ ಶನಿವಾರ ಪೂರ್ಣಗೊಳಿಸಿತು.

ಮರಳಿಸಿದ ವಸ್ತುಗಳಲ್ಲಿ ಜಯಲಲಿತಾ ಅವರ ಚಿನ್ನದ ಆಭರಣಗಳಾದ ಡಾಬು, ಕಿರೀಟ, ಕತ್ತಿ, ವಿವಿಧ ವಿನ್ಯಾಸದ ಆಕರ್ಷಕ ಸರಗಳು, ವಜ್ರ ವೈಢೂರ್ಯ ಸೇರಿವೆ.

'ನಗದು, ವಜ್ರಾಭರಣಗಳನ್ನು ತಮಿಳುನಾಡಿನ ಗೃಹ ಮತ್ತು ಅಬಕಾರಿ ಇಲಾಖೆಯ ಜಂಟಿ ಕಾರ್ಯದರ್ಶಿ ಜೆ.ಅನ್ನೆ ಮೇರಿ ಸ್ವರ್ಣಾ, ವಿಚಕ್ಷಣಾ ಮತ್ತು ಭ್ರಷ್ಟಾಚಾರ ನಿಗ್ರಹ ನಿರ್ದೇಶನಾಲಯದ ವಿಶೇಷ ತನಿಖಾ ತಂಡದ ಪೊಲೀಸ್ ವರಿಷ್ಠಾಧಿಕಾರಿ ವಿಮಲಾ, ಉಪ ಪೊಲೀಸ್ ವರಿಷ್ಠಾಧಿಕಾರಿ ಪುಗಳ್ ವೆಂದನ್ ನೇತೃತ್ವದ ತಂಡಕ್ಕೆ ಮರಳಿಸಲಾಗಿದೆ' ಎಂದು ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಚ್.ಎ. ಮೋಹನ್ ತಮ್ಮ ಆದೇಶದಲ್ಲಿ ದಾಖಲಿಸಿದ್ದಾರೆ.

ವಜ್ರ, ಎಮರಾಲ್ಡ್ ಮತ್ತು ರೂಬಿ ಹರಳುಗಳನ್ನು ಒಳಗೊಂಡ ಚಿನ್ನಾಭರಣ ಗಳನ್ನು ಈ ಅಧಿಕಾರಿಗಳ ತಂಡ ಸ್ವೀಕರಿಸಿದೆ.


ಮಲ್ಲೇಶ್ವರದ ಭೂಮಿಕಾ ಹಾಲ್‌ನಲ್ಲಿ ಶನಿವಾರ ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್‌ನ ವಜ್ರ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 60 ಸಂಗೀತ ಕಲಾವಿದರನ್ನು ಸನ್ಮಾನಿಸಲಾಯಿತು —ಪ್ರಜಾವಾಣಿ ಚಿತ್ರ

8 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸಚಿವ ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಪ್ರಸಕ್ತ ಸಾಲಿನಲ್ಲಿ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ 7.85 ಲಕ್ಷ ವಿದ್ಯಾರ್ಥಿಗಳಿಗೆ ₹290 ಕೋಟಿ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ' ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

'6.25 ಲಕ್ಷ ವಿದ್ಯಾರ್ಥಿಗಳಿಗೆ ಡಿಬಿಟಿ ಮೂಲಕ ಈಗಾಗಲೇ ₹180 ಕೋಟಿ ವರ್ಗಾವಣೆ ಮಾಡಲಾಗಿದೆ. 1.60 ಲಕ್ಷ ವಿದ್ಯಾರ್ಥಿಗಳಿಗೆ ₹100 ಕೋಟಿ ಅನುದಾನ ಅಗತ್ಯ ಇರುವ ಬಗ್ಗೆ ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದು ತಿಳಿಸಿದ್ದಾರೆ.

'ವಿದ್ಯಾಸಿರಿ' ಯೋಜನೆಯಲ್ಲಿ ಜನವರಿ ಅಂತ್ಯದವರೆಗೆ ಹಾಸ್ಟೆಲ್‌ಗಳಲ್ಲಿ 23 ಸಾವಿರ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. ಹಾಸ್ಟೆಲ್ ಪ್ರವೇಶ ಸಿಗದ 5,753 ವಿದ್ಯಾರ್ಥಿಗಳಿಗೆ ಮಾಸಿಕ ₹1,500ರಂತೆ 10 ತಿಂಗಳ ಮೊತ್ತ ₹5 ಸಾವಿರ ವರ್ಗಾವಣೆ ಮಾಡಲಾಗಿದೆ. 200 ವಿದ್ಯಾರ್ಥಿಗಳ ಆಧಾರ್ ಲಿಂಕ್ ಸಮಸ್ಯೆ ಇದೆ. ಅದನ್ನು ಸರಿಪಡಿಸಿದ ನಂತರ ಅವರಿಗೂ ಹಣ ವರ್ಗಾವಣೆ ಆಗಲಿದೆ' ಎಂದು ವಿವರಿಸಿದ್ದಾರೆ.

ಇನ್‌ಸ್ಟಾಗ್ರಾಂನಲ್ಲಿ ಸುಳಿವು: 9 ವರ್ಷದ ಬಳಿಕ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಹಲ್ಲೆ ಪ್ರಕರಣದ ಆರೋಪಿಯನ್ನು ಸಾಮಾಜಿಕ ಮಾಧ್ಯಮದಲ್ಲಿ ಸಿಕ್ಕಿದ ಸುಳಿವು ಆಧರಿಸಿ, ಮಡಿವಾಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮೊಹಮ್ಮದ್ ಫಾರೂಕ್ ಅಲಿಯಾಸ್ ಮೋಟಿ ಬಂಧಿತ ಆರೋಪಿ.

ಮಗನ ಇನ್‌ಸ್ಟಾಗ್ರಾಂ ಸ್ಟೋರಿಯಲ್ಲಿ ಆರೋಪಿ ಕಾಣಿಸಿಕೊಂಡಿದ್ದ. ಅದನ್ನು ಆಧರಿಸಿ ಆರೋಪಿಯನ್ನು ಪತ್ತೆಹಚ್ಚಿ ಒಂಬತ್ತು ವರ್ಷಗಳ ಬಳಿಕ ಬಂಧಿಸುವಲ್ಲಿ ಯಶಸ್ವಿ ಆಗಿದ್ದಾರೆ.

'12 ವರ್ಷಗಳ ಹಿಂದೆ ನಡೆದಿದ್ದ ಹಲ್ಲೆ ಪ್ರಕರಣವೊಂದರಲ್ಲಿ ಮೊಹಮ್ಮದ್ ಫಾರೂಕ್ ಆರೋಪಿ. 2015ರಲ್ಲಿ ಮೊಹಮ್ಮದ್ ಫಾರೂಕ್ ವಿರುದ್ಧ ನ್ಯಾಯಾಲಯವು ವಾರಂಟ್ ಜಾರಿಗೊಳಿಸಿತ್ತು. ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ಫಾರೂಕ್ ತಲೆಮರೆಸಿಕೊಂಡಿದ್ದ. ಆರೋಪಿ ಬಂಧನಕ್ಕೆ ಪೊಲೀಸರು ಹುಡುಕಾಟ ನಡೆಸುತ್ತಿದ್ದರು. ಆರೋಪಿ ಮೊಬೈಲ್ ಸಂಖ್ಯೆ, ವಾಸಸ್ಥಳ ಬದಲಾವಣೆ ಮಾಡಿಕೊಂಡು ಓಡಾಟ ನಡೆಸುತ್ತಿದ್ದ. ಹೀಗಾಗಿ, ಸುಳಿವು ಸಿಗದೇ ಬಂಧನ ಸಾಧ್ಯವಾಗಿರಲಿಲ್ಲ' ಎಂದು ಮೂಲಗಳು ಹೇಳಿವೆ.


ಮೊಹಮ್ಮದ್ ಫಾರೂಕ್

ಅಂತ್ಯಕ್ರಿಯೆಗೂ ಬಂದಿರಲಿಲ್ಲ: 'ಆರೋಪಿ ಇತ್ತೀಚೆಗಷ್ಟೇ ಎರಡನೇ ಮದುವೆಯಾಗಿ ದೊಡ್ಡಕಲ್ಲಸಂದ್ರದ ಬಾಡಿಗೆ ಮನೆಯಲ್ಲಿ ವಾಸವಿದ್ದ. ಆರೋಪಿಯ ತಂದೆ ಅನಾರೋಗ್ಯದಿಂದ ಮೃತಪಟ್ಟಿದ್ದರು. ಅವರ ಅಂತ್ಯಕ್ರಿಯೆಗೂ ಫಾರೂಕ್ ಬಂದಿರಲಿಲ್ಲ' ಎಂದು ಮೂಲಗಳು ಹೇಳಿವೆ.

'ಇತ್ತೀಚೆಗೆ ಇನ್‌ಸ್ಟಾಗ್ರಾಂ ಸ್ಟೋರಿಯೊಂದರಲ್ಲಿ ಮೊಹಮ್ಮದ್ ಫಾರೂಕ್ ಫೋಟೊ ಪ್ರಕಟವಾಗಿತ್ತು. ಆರೋಪಿಯ ಪುತ್ರ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಆ ಫೋಟೊ ಹಾಕಿದ್ದ. ಅದರಲ್ಲಿದ್ದ ಫೋಟೊ ಆಧರಿಸಿ, ಆರೋಪಿಯ ಗುರುತನ್ನು ಪೊಲೀಸರು ಪತ್ತೆ ಹಚ್ಚಿದ್ದರು. ಇನ್‌ಸ್ಟಾಗ್ರಾಂ ಖಾತೆ ತೆರೆಯಲು ಬಳಸಿದ್ದ ಮೊಬೈಲ್ ಸಂಖ್ಯೆಯನ್ನು ಪೊಲೀಸರು ಪತ್ತೆ ಹಚ್ಚಿದ್ದರು. ಅದೇ ನಂಬರ್‌ನಿಂದಲೇ ಆಹಾರ ಪದಾರ್ಥಗಳನ್ನು ಆರ್ಡರ್ ಸಹ ಮಾಡಲಾಗಿತ್ತು. ಆ ಸುಳಿವು ಆಧರಿಸಿ ಆರೋಪಿ ನೆಲಸಿದ್ದ ವಿಳಾಸ ಪತ್ತೆ ಮಾಡಿದ್ದ ಪೊಲೀಸರು, ಆರೋಪಿಯ ಬಂಧನಕ್ಕೆ ತಂಡ ರಚಿಸಿದ್ದರು' ಎಂದು ಮೂಲಗಳು ಹೇಳಿವೆ.

ರಾಹುಲ್ ತೋನ್ಸೆ ವಿರುದ್ಧ ಲುಕ್‌ಔಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಉದ್ಯಮಿಗೆ ₹25.5 ಕೋಟಿ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಹುಲ್ ತೋನ್ಸೆ ವಿರುದ್ಧ ಬಸವೇಶ್ವರ ನಗರ ಠಾಣೆಯ ಪೊಲೀಸರು ಲುಕ್‌ಔಟ್ ನೋಟಿಸ್ ಜಾರಿಗೊಳಿಸಿದ್ದಾರೆ.

ಕ್ಯಾಸಿನೊ, ಬಿಟ್ ಕಾಯಿನ್ ವ್ಯವಹಾರದಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಹಾಗೂ ಬಡ್ಡಿ ನೀಡುವುದಾಗಿ ನಂಬಿಸಿ ಉದ್ಯಮಿಯಿಂದ ಹಣ ಪಡೆದು ವಂಚಿಸಿದ ಆರೋಪದ ಅಡಿ ಐವರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ವಂಚನೆಗೆ ಒಳಗಾಗಿರುವ ಉದ್ಯಮಿ ವಿವೇಕ್ ಪಿ. ಹೆಗ್ಡೆ ಅವರ ದೂರು ಆಧರಿಸಿ, ರಾಮಕೃಷ್ಣರಾವ್, ಪತ್ನಿ ರಾಜೇಶ್ವರಿ ರಾವ್, ಪುತ್ರ ರಾಹುಲ್ ತೋನ್ಸೆ, ಪುತ್ರಿ ರಕ್ಷಾ ತೋನ್ಸೆ ಹಾಗೂ ಅಳಿಯ ಚೇತನ್ ನಾರಾಯಣ್ ವಿರುದ್ಧ ವಂಚನೆ ಹಾಗೂ ಅನಿಯಂತ್ರಿತ ಠೇವಣಿ ನಿಷೇಧ ಕಾಯ್ದೆಯಡಿ (ಬಡ್ಸ್) ಪ್ರಕರಣ ದಾಖಲಾಗಿತ್ತು. ರಾಮಕೃಷ್ಣರಾವ್ ಅವರನ್ನು ಪೊಲೀಸರು ಬಂಧಿಸಿದ್ದರು. ಅವರು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ.

'ಚಂದನವನ'ದ ಡ್ರಗ್ಸ್ ಪ್ರಕರಣದಲ್ಲಿ ಐದು ವರ್ಷಗಳ ಹಿಂದೆ ರಾಹುಲ್ ತೋನ್ಸೆ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು.

'ರಾಹುಲ್ ವಿದೇಶದಲ್ಲಿ ತಲೆಮರೆಸಿಕೊಂಡಿರುವ ಮಾಹಿತಿ ಸಿಕ್ಕಿದೆ. ತನಿಖೆಯ ಭಾಗವಾಗಿ ಲುಕ್‌ಔಟ್ ನೋಟಿಸ್ ಜಾರಿ ಮಾಡಲಾಗಿದೆ. ಆರೋಪಿಯ ಸಹೋದರಿ ಹಾಗೂ ಬಾವ ಸಹ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

2023ರ ಫೆಬ್ರುವರಿ 7ರಂದು ಉದ್ಯಮಿ ವಿವೇಕ್ ಹೆಗ್ಡೆ ಅವರಿಗೆ ರಾಹುಲ್ ತೋನ್ಸೆ ಅವರ ತಂದೆಯ ಪರಿಚಯವಾಗಿತ್ತು. ಅದಾದ ಮೇಲೆ ಕ್ಯಾಸಿನೊ ಹಾಗೂ ಬಿಟ್ ಕಾಯಿನ್‌ನಲ್ಲಿ ಹೂಡಿಕೆ ಮಾಡಿದರೆ ಲಾಭ ಬರಲಿದೆ ಎಂಬುದಾಗಿ ನಂಬಿಸಿ ಹಣ ಪಡೆದುಕೊಂಡಿದ್ದರು ಎಂದು ಮೂಲಗಳು ಹೇಳಿವೆ.

ಅಮೃತಸರಕ್ಕೆ ಬಂದಿಳಿದ 116 ಭಾರತೀಯರು

ಅಮೃತಸರ/ಚಂಡೀಗಢ (ಪಿಟಿಐ): ಅಮೆರಿಕದಲ್ಲಿ ಅಕ್ರಮವಾಗಿ ನೆಲಸಿರುವ 116 ಭಾರತೀಯರನ್ನು ಹೊತ್ತ ಅಮೆರಿಕದ ವಿಮಾನವು ಶನಿವಾರ ತಡರಾತ್ರಿ ಅಮೃತಸರ ವಿಮಾನ ನಿಲ್ದಾಣಕ್ಕೆ ಬಂದಿಳಿದಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ವಿವಿಧ ದೇಶಗಳಿಂದ ಬಂದಿರುವ ಅಕ್ರಮ ವಲಸಿಗರನ್ನು ಗಡೀಪಾರು ಮಾಡಲು ಡೊನಾಲ್ಡ್ ಟ್ರಂಪ್ ನೇತೃತ್ವದ ಸರ್ಕಾರ ತೆಗೆದುಕೊಂಡ ನಿರ್ಧಾರದ ಭಾಗವಾಗಿ ಈ ಪ್ರಕ್ರಿಯೆ ನಡೆದಿದ್ದು, ಅಮೆರಿಕವು ವಾಪಸ್ ಕಳುಹಿಸಿದ ಭಾರತೀಯರ ಎರಡನೇ ತಂಡ ಇದಾಗಿದೆ.

ರಾತ್ರಿ 10 ಗಂಟೆಗೆ ಬಂದಿಳಿಯಬೇಕಿದ್ದ ಈ ವಿಮಾನವು ಒಂದೂವರೆ ಗಂಟೆ ತಡವಾಗಿ 11.30 ರ ಸುಮಾರಿಗೆ ಬಂದಿಳಿಯಿತು ಎಂದು ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ತಡರಾತ್ರಿ 11.30ಕ್ಕೆ ಅಮೆರಿಕದಿಂದ ಬಂದಿಳಿದ ವಿಮಾನ
- ಪಂಜಾಬ್‌ನ 65, ಹರಿಯಾಣದ 33 ಮಂದಿ
- ಮೂರನೇ ವಿಮಾನ ಇಂದು ಬರುವ ಸಾಧ್ಯತೆ

ವಿಮಾನದಲ್ಲಿ 119 ವಲಸಿಗರಿದ್ದಾರೆ ಎಂದು ಈ ಮೊದಲು ವರದಿಯಾಗಿತ್ತು. ಆದರೆ, ಈಗ ಪರಿಷ್ಕೃತ ಪ್ರಯಾಣಿಕರ ಪಟ್ಟಿಯ ಪ್ರಕಾರ, ಎರಡನೇ ತಂಡದಲ್ಲಿ ಭಾರತಕ್ಕೆ ಬಂದವರ ಸಂಖ್ಯೆ 116 ಎಂದು ಅಧಿಕಾರಿಯೊಬ್ಬರು ಹೇಳಿದರು.

ಈ ವಿಮಾನದಲ್ಲಿ ಬಂದವರಲ್ಲಿ ಪಂಜಾಬ್‌ನ 65, ಹರಿಯಾಣದ 33, ಗುಜರಾತ್‌ನ 8, ಉತ್ತರ ಪ್ರದೇಶ, ಗೋವಾ, ಮಹಾರಾಷ್ಟ್ರ ಮತ್ತು ರಾಜಸ್ಥಾನದ ತಲಾ ಇಬ್ಬರು ಮತ್ತು ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರದಿಂದ ತಲಾ ಒಬ್ಬರು ಇದ್ದಾರೆ.

ಅಮೆರಿಕವು ವಾಪಸ್ ಕಳುಹಿಸಿದವರಲ್ಲಿ ಹೆಚ್ಚಿನವರು 18 ರಿಂದ 30 ವಯೋಮಾನದವರು ಇದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಮೆರಿಕವು ಇನ್ನಷ್ಟು ಅಕ್ರಮ ವಲಸಿಗರನ್ನು ಮತ್ತೊಂದು ವಿಮಾನದ ಮೂಲಕ ಇದೇ 16ರಂದು (ಭಾನುವಾರ) ಭಾರತಕ್ಕೆ ಕಳುಹಿಸಲಿದೆ ಎಂದು ಮೂಲಗಳು ಹೇಳಿವೆ. ಕಳೆದ ವಾರ 104 ಅಕ್ರಮ ವಲಸಿಗರಿದ್ದ ಅಮೆರಿಕದ ಸೇನಾ ವಿಮಾನವು ಅಮೃತಸರ ವಿಮಾನ ನಿಲ್ದಾಣದಲ್ಲಿ ಬಂದಿಳಿದಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

OTHERS

Furniture & Furnishings

FOR YOUR Classroom Furniture, Hostel and Office Furniture, Play Equipment & Canteen Furniture. 9148137818 9916751618

MATRIMONIAL

Brides Wanted

Hindu

WANTED A Hindu BRIDE for my son SUJAY KUMAR.N, 32 years, 5'8' Resident of Bangalore, running own Porter vehicles. Contact: 7019247507

Telugu

WANTED BRIDE
Settibalija 32 years, Height 5.8, Hotel Management Faculty, Hyderabad. Rs. 70,000/- PM. Groom Having Rs. 2 Crore Worth Property.
Wanted Bride any BC/ Having Job. 1st/ 2nd Marriage. No Brokers.
Call: 94401 22661

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Grooms Wanted

Telugu

LOOKING FOR Naidu boy settled in US for Naidu girl, 27/160. Very fair beautiful. No Siblings. Masters in Luxury Brand Management UK. Email to bharathi.bhasker@gmail.com

Matrimonial Bureaus

BRAHMINS BRIDES/ Bridegrooms, NRIs, Second Marriage, Wedding Planning. FREE REGISTRATION. Confidential Services. Call SHASTRY- 9448306701

PERSONAL

Change of Name

CHANGE OF NAME
I, BHUMIKA G.J, D/o. Jayarama, R/a Hosa Agrahara Hobli, 1st Block, Gandhanahalli, Mysore, Mysore District-571603, have changed my name to **BHOOMIKA G.J** vide affidavit dated 7.2.2025 before Notary H.Sridhar Rao, Bangalore. Henceforth, I shall be called **BHOOMIKA G.J,** only.

I, MARIA TYRONE GILBY, have changed to New name MARIA GILBY, Residing at 1-E-15 & 2-E-15, Isha Misty Green Channasandra Inner Circle, Bengaluru- 560067 vide affidavit dated 15.02.2025 before Veena.J, Notary Public.

CHANGE OF NAME
I, **SUPRIYA KARL NEUGEBAUER** Aged 45 (DOB:23-06-1979), W/o Chaitanya Karl Neugebauer, R/at # 401, Sterling Apartment, No.10, Papanna Street,Shanthalanagar, Ashoknagar, Bengaluru-560 001 , have changed my name to **SUPREETH NEUGEBAUER** vide affidavit dated 12.02.2025 sworn before Notary Meer Hassan, Bengaluru.

CHANGE OF NAME
I, **LAKSHMI C. CHANDRAN, CHANDRA LAXMI, C.C.LAXMI, LAXMI C.C.** Residing at # 12, Sri, Lakshmi Nivas, Anandapura, Varanasi, TC Palya, Bangalore-560036 Declare that the above names pertain to me and henceforth I shall known as **LAKSHMI C. CHANDRAN** vide affidavit dated 8.2.2025 before Notary A.R. Muneer Ahmed, Bangalore.


BUSINESS

Business to Business

Business

SUPPLIERS WANTED
Suppliers in Bulk Quantity needed for Supply of All kinds of
MS AND CAST IRON SCRAPS METALS
to Company
Qty : 200-500 Tons
Weekly Basis
Only Genuine Parties contact :
94434-00123
93858-32320
-CKNB-

WEEKEND CORNER ಕ್ಲಾಸಿಫೈಡ್ಸ್



SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 96322-37557/ 96065-47557

Building for Sale
30x52, 4 floor (G+3)
2 BHK 4 houses,
3 BHK duplex 1 house
Ganapathi Nagar,
Adjacent to Girinagar
Rent around 1.25 lakhs
Price: 3.30 crore
9632922604, 9448069581

VSL SRINIDHI DEVELOPERS
VSL SRINIDHI GREEN FIELDS LAYOUT
BEHIND 340 FEET KEMPEGOWDA MAIN ROAD
BDA APPROVED SITES FOR SALE
Near Kempegowda Layout & Vishveshwaraiah Layout
DISTANCE INDICATOR: Nice Road- 1 Km, Jnana Bharathi- 5 mins Kengeri Upanagar- 5 mins, Magadi Road & Nagarbhavi - 10 mins.
AMENITIES: Fully developed gated community with Park, Basket Ball Court & Children's play area
RERA APPROVED 99000 15805/90083 38098

RV Institute of Management
Go, change the world
in collaboration with
Boston IT Solutions India Pvt. Ltd
is offering an
Industry-Curated One Year
POST GRADUATE DIPLOMA IN BUSINESS ANALYTICS (PGDBA)
Approved by Bengaluru City University
from March 2025

COURSE DETAILS
- Venue: **Centre for Business Analytics,** RV Institute of Management, Jayanagar, Bengaluru
- Eligibility: Graduates from any discipline
- Mode: Hybrid (Blend of Online & Offline)
- Duration: ONE year - 2 semesters of 5 months each & Two months Real World Capstone Project
- Tuition fees: Rs 1,60,000/-
- Timings: Mon to Fri: 6.30pm to 9.00pm; Sat: 2.30pm to 9.00pm

Scan QR code for Course details, to register & pay the fee
Contact Person : Prof. Mithun D J
Mob: 9844284240 Ph: 08042540300
Website : www.rvim.edu.in

DH Classifieds More value, more impact — ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164
*Conditions apply





ಕಾವೇರಿ ನದಿಯಲ್ಲಿ ಮುಳುಗಿ ಇಬ್ಬರು ಮಹಿಳೆಯರು ಸಾವು

ಪ್ರಜಾವಾಣಿ ವಾರ್ತೆ

ಹಲಗೂರು (ಮಂಡ್ಯ ಜಿಲ್ಲೆ): ಸಮೀಪದ ಮುತ್ತತ್ತಿಯ ಕಾವೇರಿ ನದಿಯಲ್ಲಿ ಶನಿವಾರ ನೀರಿನ ಸೆಳೆತಕ್ಕೆ ಸಿಲುಕಿ ಇಬ್ಬರು ಮಹಿಳೆಯರು ಮೃತಪಟ್ಟರು.

ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಗಾಣಾಳು ಗ್ರಾಮದ ಶೋಭಾ (23) ಮತ್ತು ನದೀಯಾ (19) ಮೃತರು. ಇವರು ಸ್ನಾನಕ್ಕೆಂದು ನದಿಗೆ ಇಳಿದಿದ್ದರು.

ಪೂಜಾ ಕಾರ್ಯದ ನಿಮಿತ್ತ ಮುತ್ತತ್ತಿ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ಶನಿವಾರ ಬಸ್‌ನಲ್ಲಿ ಬಂದಿದ್ದ 40 ಮಂದಿಯೊಂದಿಗೆ ಶೋಭಾ ಹಾಗೂ ನದೀಯಾ ಕೂಡ ಇದ್ದರು. ಈಜುಗಾರರ ಸಹಾಯದಿಂದ ಮೃತದೇಹವನ್ನು ಹೊರತೆಗೆದು, ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಗಳೂರಿನ ಸುತ್ತ 287 ಕಿ.ಮೀ. ಉದ್ದದ ವೃತ್ತ ರೈಲು ಜಾಲ: ರೈಲ್ವೆ ಸಚಿವ ಅಶ್ವಿನಿ ವೈಷ್ಣವ್

ವಿಮಾನ ನಿಲ್ದಾಣಕ್ಕೆ ನೇರ ರೈಲು ಸಂಪರ್ಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸುತ್ತಮುತ್ತಲಿನ ಏಳು ರೈಲು ನಿಲ್ದಾಣಗಳನ್ನು ಸಂಪರ್ಕಿಸುವ ವೃತ್ತ ರೈಲು ಸಂಪರ್ಕ ಜಾಲಕ್ಕೆ ಯೋಜನೆ ರೂಪಿಸಲಾಗಿದೆ. ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ನೇರ ಸಂಪರ್ಕ ದೊರಕಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.


ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಜನಸಂಖ್ಯೆ ಹೆಚ್ಚಳದಿಂದ ಬೆಂಗಳೂರು ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿದೆ. ಒಂದು ರೈಲು ನಿಲ್ದಾಣದಿಂದ ಮತ್ತೊಂದು ರೈಲು ನಿಲ್ದಾಣಕ್ಕೆ ತಲುಪುವುದು ಸವಾಲಿನ ಕೆಲಸವಾಗಿದೆ. ದಟ್ಟಣೆಯ ಒತ್ತಡ ತಪ್ಪಿಸುವುದಕ್ಕೆ ಸುರಂಗ ರಸ್ತೆಗಳಿಗಿಂತ ವೃತ್ತ ರೈಲು ಯೋಜನೆ ಇಂತಹ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರಕಲಿದೆ. ಸಮಯದ ಉಳಿತಾಯವೂ ಆಗಲಿದೆ. ಮುಂದಿನ 50 ವರ್ಷಗಳಲ್ಲಿ ಉಂಟಾಗಬಹುದಾದ ವಾಹನದಟ್ಟಣೆ, ಜನದಟ್ಟಣೆ ತಪ್ಪಿಸುವ ಗುರಿ ಇಟ್ಟುಕೊಂಡು ಯೋಜನೆ ರೂಪಿಸಲಾಗಿದೆ. ನಿಡವಂದ–ದೊಡ್ಡಬಳ್ಳಾಪುರ–ದೇವನಹಳ್ಳಿ–ಮಾಲೂರು–ಹೀಲಲಿಗೆ–ಸೋಲೂರು–ನಿಡವಂದ ನಿಲ್ದಾಣಗಳನ್ನು ಸಂಪರ್ಕಿಸುವ ವೃತ್ತರೈಲು ಸಂಪರ್ಕ ಜಾಲ 287 ಕಿ.ಮೀ. ಇರಲಿದೆ ಎಂದರು.

ಯಲಹಂಕದಿಂದ ವಿಮಾನ ನಿಲ್ದಾಣಕ್ಕೆ ನೇರ ಸಂಪರ್ಕ ಕಲ್ಪಿಸುವ 7.90 ಕಿ.ಮೀ ರೈಲುಮಾರ್ಗ ನಿರ್ಮಾಣಕ್ಕೆ ಯೋಜನೆ ಸಿದ್ಧಪಡಿಸಲಾಗುತ್ತಿದೆ. ಇದರಲ್ಲಿ 1.65 ಕಿ.ಮೀ ಸುರಂಗ ಮಾರ್ಗ ನಿರ್ಮಿಸಲಾಗುವುದು. ವಿವಿಧೆಡೆಯಿಂದ ರೈಲು ಮೂಲಕ ಬೆಂಗಳೂರಿಗೆ ಬರುವ ಪ್ರಯಾಣಿಕರು ನೇರವಾಗಿ ವಿಮಾನ ನಿಲ್ದಾಣ ತಲುಪಬಹುದು. ಬೇರೆ ನಗರಗಳಿಗೆ ತೆರಳಲು ಅಲ್ಲಿಂದಲೇ ರೈಲು ಸೇವೆ ಪಡೆಯಬಹುದು ಎಂದು ಮಾಹಿತಿ ನೀಡಿದರು.

ಸಚಿವೆ ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದರಾದ ಪಿ.ಸಿ. ಮೋಹನ್, ತೇಜಸ್ವಿಸೂರ್ಯ, ಡಾ.ಸಿ.ಎನ್. ಮಂಜುನಾಥ್, ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೊಯಾ, ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಉಪಸ್ಥಿತರಿದ್ದರು.

61 ನಿಲ್ದಾಣಗಳಿಗೆ ಹೈಟೆಕ್ ಸ್ಪರ್ಶ

ಅಮೃತ್ ಭಾರತ್ ಯೋಜನೆಯಲ್ಲಿ ₹2 ಸಾವಿರ ಕೋಟಿ ವೆಚ್ಚದಲ್ಲಿ ರಾಜ್ಯದ 61 ರೈಲು ನಿಲ್ದಾಣಗಳಿಗೆ ಹೈಟೆಕ್ ಸ್ಪರ್ಶ ನೀಡಲಾಗುತ್ತಿದೆ. ಪ್ರತಿ ನಿಲ್ದಾಣದಲ್ಲೂ ಆಯಾ ವ್ಯಾಪ್ತಿಯ ಸಂಸ್ಕೃತಿ, ಪರಂಪರೆಗೆ ಅನುಗುಣವಾಗಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಜನ, ವಾಹನದಟ್ಟಣೆ ನಿರ್ವಹಿಸಲು ವಿಶಾಲ ರಸ್ತೆಗಳು, ಹಸಿರು ಪರಿಸರಕ್ಕೆ ಆದ್ಯತೆ ನೀಡಲಾಗಿದೆ. ಎಲ್ಲ ರೀತಿಯ ಮೂಲ ಸೌಕರ್ಯಗಳನ್ನೂ ನಿಲ್ದಾಣಗಳು ಒಳಗೊಂಡಿರುತ್ತವೆ ಎಂದು ಅಶ್ವಿನಿ ವೈಷ್ಣವ್ ವಿವರ ನೀಡಿದರು.



ಎಂ.ಡಿ. ನೇಮಕಕ್ಕೆ ಸಲಹೆ

ಉಪನಗರ ರೈಲ್ವೆ ಯೋಜನೆಯ ಟೆಂಡರ್ ತಾಂತ್ರಿಕ ಕಾರಣಗಳಿಂದ ಮೂರು ಬಾರಿ ರದ್ದಾಗಿದೆ. ಉಪನಗರ ರೈಲು ನಿಗಮಕ್ಕೆ ರಾಜ್ಯ ಸರ್ಕಾರ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಕ ಮಾಡಬೇಕು. 12ರಿಂದ 13 ತಾಂತ್ರಿಕ ಪರಿಣತ ಎಂಜಿನಿಯರ್‌ಗಳನ್ನು ಒದಗಿಸಬೇಕು. ಪೂರ್ಣಾವಧಿ ವ್ಯವಸ್ಥಾಪಕ ನಿರ್ದೇಶಕರು ಇಲ್ಲದಿದ್ದರೆ ಯೋಜನೆ ನಿರೀಕ್ಷಿತ ವೇಗದಲ್ಲಿ ಪೂರ್ಣಗೊಳ್ಳದು ಎಂದು ಅಶ್ವಿನಿ ವೈಷ್ಣವ್ ಹೇಳಿದರು.

ಹಲ್ಲೆ: ಗೋವಾ ಮಾಜಿ ಶಾಸಕ ಲಾವೂ ಸಾವು

ಬೆಳಗಾವಿ: ಗೋವಾದ ಪೋಂಡಾ ಕ್ಷೇತ್ರದ ಮಾಜಿ ಶಾಸಕ ಲಾವೂ ಮಾಮಲೇದಾರ್ (69) ಅವರ ಮೇಲೆ ಬೆಳಗಾವಿಯಲ್ಲಿ ಶನಿವಾರ ಆಟೊ ಚಾಲಕ ಹಲ್ಲೆ ಮಾಡಿದ ಕೆಲವೇ ನಿಮಿಷಗಳಲ್ಲಿ, ಅವರು ಕುಸಿದುಬಿದ್ದು ಮೃತಪಟ್ಟಿದ್ದಾರೆ.



‘ನಗರದ ಖಡೇಬಜಾರ್ ರಸ್ತೆಯಲ್ಲಿರುವ ಶ್ರೀನಿವಾಸ ಲಾಡ್ಜ್ ಎದುರು ಘಟನೆ ನಡೆದಿದೆ. ಲಾವೂ ಅವರು ಲಾಡ್ಜ್‌ಗೆ ಮರಳುವಾಗ, ಮೆಟ್ಟಿಲುಗಳ ಬಳಿ ಕುಸಿದುಬಿದ್ದು ಮೃತಪಟ್ಟರು. ಈ ದೃಶ್ಯಾವಳಿಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆ ಆಗಿವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಸುಭಾಷ ನಗರದ ನಿವಾಸಿ, ಆಟೊ ಚಾಲಕ ಮುಜಾಹಿದಿಲ್ ಶಕೀಲ್ ಜಮಾದಾರ್ (28) ಎಂಬುವರನ್ನು ಬಂಧಿಸಲಾಗಿದ್ದು, ಕೊಲೆ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ನಡೆದಿದ್ದೇನು?: ‘ಕಾರ್ಯನಿಮಿತ್ತ ಬೆಳಗಾವಿಗೆ ಬಂದಿದ್ದ ಲಾವೂ ಅವರು ಶ್ರೀನಿವಾಸ ಲಾಡ್ಜ್‌ನಲ್ಲಿ ತಂಗಿದ್ದರು. ಮಧ್ಯಾಹ್ನ ಅವರ ಕಾರು ಎದುರಿಗಿದ್ದ ಆಟೊಕ್ಕೆ ತಾಗಿತು. ಕೋಪಗೊಂಡ ಆಟೊ ಚಾಲಕ ಜಗಳ ಶುರು ಮಾಡಿದ. ಇಬ್ಬರ ಜಗಳ ತಾರಕಕ್ಕೇರಿ, ಆತ ಲಾವೂ ಅವರನ್ನು ಹಿಗ್ಗಾಮುಗ್ಗಾ ಥಳಿಸಿದ. ಜನರು ಜಗಳ ಬಿಡಿಸಿದರು. ನಂತರ ಲಾವೂ ಅವರು ಲಾಡ್ಜ್‌ಗೆ ಮರಳಲು ಮೆಟ್ಟಿಲು ಏರಿ ಬರುವಾಗ, ಲಿಫ್ಟ್ ಬಳಿ ಕುಸಿದು ಬಿದ್ದರು. ಅವರನ್ನು ತಕ್ಷಣವೇ ಜಿಲ್ಲಾಸ್ಪತ್ರೆಗೆ ಕರೆದೊಯ್ಯಲಾಯಿತು. ಅಷ್ಟರಲ್ಲಿ ಅವರು ಪ್ರಾಣ ಬಿಟ್ಟಿದ್ದರು’ ಎಂದು ಮಾರ್ಕೆಟ್ ಠಾಣೆ ಪೊಲೀಸರು ತಿಳಿಸಿದರು.

‘489 ಮಂದಿಗೆ ನೇರ ಉದ್ಯೋಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಖುದ್ದೂಸ್ ಸಾಹೇಬ್ ಈದ್ಗಾ ಮೈದಾನದಲ್ಲಿ ಪ್ರೆಸಿಡೆನ್ಸಿ ಫೌಂಡೇಶನ್ ಶನಿವಾರ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಸಾವಿರಾರು ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಯುವಕ–ಯುವತಿಯರೂ ಸ್ವವಿವರದ ಪತ್ರ ಹಿಡಿದು ಉದ್ಯೋಗ ಮೇಳದತ್ತ ದೌಡಾಯಿಸಿದ್ದರು.

ಎಸ್‌ಎಸ್‌ಎಲ್‌ಸಿಯಿಂದ ಸ್ನಾತಕೋತ್ತರ ಪದವಿವರೆಗೆ ವಿದ್ಯಾಭ್ಯಾಸ ಪೂರೈಸಿದವರಿಗೆ ಒಂದೇ ಸೂರಿನಡಿ ವಿವಿಧ ಉದ್ಯೋಗಗಳ ಅವಕಾಶಗಳಿದ್ದವು. ಎಸ್‌ಎಸ್‌ಎಲ್‌ಸಿಗಿಂತ ಕಡಿಮೆ ಓದಿದವರಿಗೂ ಉದ್ಯೋಗಾವಕಾಶವಿತ್ತು. ಡಿಪ್ಲೊಮಾ, ಐಟಿಐ, ಬಿಇ, ಎಂಬಿಎ, ಬಿಕಾಂ, ಬಿಎ, ಬಿಎಸ್‌ಸಿ, ಎಂಎಸ್‌ಸಿ, ಎಂಎ ಸೇರಿದಂತೆ ವಿವಿಧ ವಿದ್ಯಾರ್ಹತೆಯುಳ್ಳವರು ಮೇಳದಲ್ಲಿದ್ದ ಕಂಪನಿಗಳ ಮಳಿಗೆಗಳಲ್ಲಿ ಉದ್ಯೋಗಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದರು.

‘ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲು ಬಂದಿದ್ದ ಉದ್ಯೋಗಾಕಾಂಕ್ಷಿಗಳಿಗೆ ಕುಡಿಯುವ ನೀರು, ವಾಹನಗಳ ನಿಲುಗಡೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿತ್ತು. ಅಲ್ಲಲ್ಲಿ ಆಹಾರ ಮಳಿಗೆಗಳನ್ನು ತೆರೆಯಲಾಗಿತ್ತು’ ಎಂದು ಪ್ರೆಸಿಡೆನ್ಸಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಉಪಾಧ್ಯಕ್ಷ ಸಲ್ಮಾನ್ ಅಹಮದ್ ಮಾಹಿತಿ ನೀಡಿದರು.

‘ಮೇಳದಲ್ಲಿ ಒಟ್ಟು 139 ಕಾರ್ಪೊರೇಟ್ ಕಂಪನಿಗಳು ಭಾಗವಹಿಸಿದ್ದು, 6,500ಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು. ಇದರಲ್ಲಿ 489 ಉದ್ಯೋಗಾಕಾಂಕ್ಷಿಗಳಿಗೆ ಸ್ಥಳದಲ್ಲಿ ಉದ್ಯೋಗ ನೀಡಲಾಗಿದೆ. 1,687 ಜನರ ಅಂತಿಮ ಆಯ್ಕೆ ಪಟ್ಟಿ ತಯಾರಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಉದ್ಯೋಗ ಮೇಳದಲ್ಲಿ ಅಲ್ಪಸಂಖ್ಯಾತ ಇಲಾಖೆ ಸಚಿವ ಜಮೀರ್ ಅಹಮದ್ ಖಾನ್, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ಪ್ರೆಸಿಡೆನ್ಸಿ ಇನ್‌ಸ್ಟಿಟ್ಯೂಷನ್ಸ್‌ನ ಉಪಾಧ್ಯಕ್ಷ ಸುಹೇಲ್ ಅಹಮದ್ ಭಾಗವಹಿಸಿದ್ದರು.



ನಗರದ ಖುದ್ದೂಸ್ ಸಾಹೇಬ್ ಈದ್ಗಾ ಮೈದಾನದಲ್ಲಿ ನಡೆದ ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿದ್ದ ಉದ್ಯೋಗಾಕಾಂಕ್ಷಿಗಳು ಕಂಪನಿಗಳ ಸಿಬ್ಬಂದಿ ಜೊತೆ ಚರ್ಚಿಸಿದರು ಪ್ರಜಾವಾಣಿ ಚಿತ್ರ

ತನಿಖೆಗೆ ಬಿಎಸ್‌ಡಬ್ಲ್ಯುಎಂಎಲ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ವಾರ್ಡ್ ಹಾಗೂ ಬೊಮ್ಮನಹಳ್ಳಿ ವಿಭಾಗದಲ್ಲಿ ಘನತ್ಯಾಜ್ಯ ನಿರ್ವಹಣೆಯಲ್ಲಿನ ಲೋಪಗಳ ಕುರಿತು ತನಿಖೆ ನಡೆಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯು-ಎಂಎಲ್) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆದೇಶ ಹೊರಡಿಸಿದ್ದಾರೆ.

ವಾರ್ಡ್‌ಗಳಲ್ಲಿ ಘನತ್ಯಾಜ್ಯ ನಿರ್ವಹಣೆಯಲ್ಲಿ ಲೋಪಗಳಾಗಿದ್ದು, ಸಮಗ್ರ ತನಿಖೆ ನಡೆಸಬೇಕು ಎಂದು ಮನವಿಗಳು ಸಲ್ಲಿಕೆಯಾಗಿವೆ. ಈ ಮನವಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸಮಗ್ರ ತನಿಖೆ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ. ಬಿಎಸ್‌ಡಬ್ಲ್ಯುಎಂಎಲ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ ರಮಾಮಣಿ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿದೆ. ಏಳು ದಿನಗಳಲ್ಲಿ ವರದಿ ಸಲ್ಲಿಸುವಂತೆ ಸಿಇಒ ಹರೀಶ್ ಕುಮಾರ್ ಅವರು ಫೆಬ್ರುವರಿ 10ರಂದು ಆದೇಶ ಹೊರಡಿಸಿದ್ದಾರೆ.

ಬಿಬಿಎಂಪಿಯ ಮಾಜಿ ಆಡಳಿತ ಪಕ್ಷದ ನಾಯಕ ಎನ್.ಆರ್. ರಮೇಶ್ ಅವರು ಫೆ. 10ರಂದು ಸಲ್ಲಿಸಿರುವ ನಾಲ್ಕು ಮನವಿಗಳನ್ನು ಪರಿಶೀಲಿಸಿ, ತನಿಖೆಗೆ ಸೂಚಿಸಲಾಗಿದೆ.

ಘನತ್ಯಾಜ್ಯ ನಿರ್ವಹಣೆ ಲೋಪ

ಮನವಿಗಳಲ್ಲಿ ಏನಿದೆ?: ಕೆ.ಆರ್. ಮಾರುಕಟ್ಟೆ ವಾರ್ಡ್‌ನಲ್ಲಿ ಘನತ್ಯಾಜ್ಯ ವಿಲೇವಾರಿ, ಸಂಗ್ರಹ ಮತ್ತು ಸಾಗಾಣಿಕೆಗೆ ಲವಕುಶ ಟ್ರಾನ್ಸ್‌ಪೋರ್ಟ್ ಸಂಸ್ಥೆಗೆ ಕಾರ್ಯಾದೇಶ ನೀಡಲಾಗಿದೆ. ಈ ಗುತ್ತಿಗೆದಾರರು ವಾಹನಗಳಿಗೆ ಆರ್‌ಎಫ್‌ಐಡಿ, ಜಿಪಿಎಸ್ ಯಂತ್ರ ಅಳವಡಿಸಿಲ್ಲ ಎಂದು ಸಾರ್ವಜನಿಕರು, ವಾರ್ಡ್ ವಾಟ್ಸ್ ಆ್ಯಪ್ ಗ್ರೂಪ್‌ನಿಂದ ದೂರುಗಳು ಬಂದಿದ್ದು, ಕಾನೂನು ರೀತಿ ನೋಟಿಸ್ ನೀಡಿ 2022ರ ಅಕ್ಟೋಬರ್ 16ರಿಂದ ಕಾರ್ಯಾದೇಶ ರದ್ದು ಮಾಡಲಾಗಿದೆ. ಇದನ್ನು ಮರೆಮಾಚಿ, ಗಿರಿನಗರ, ವಿದ್ಯಾಪೀಠ ವಾರ್ಡ್‌ಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಕಾರ್ಯವನ್ನು ವಹಿಸಲಾಗಿದೆ.

ಹೊಸಕೆರೆಹಳ್ಳಿ ವಾರ್ಡ್‌ನಲ್ಲಿ ತ್ಯಾಜ್ಯ ವಿಲೇವಾರಿ, ಸಂಗ್ರಹ ಮತ್ತು ಸಾಗಾಣಿಕೆಯನ್ನು ವಿಷನ್ ಮ್ಯಾನ್ ಪವರ್ ಸಂಸ್ಥೆಗೆ ನೀಡಲಾಗಿದ್ದು, ಮಾನವ ಸಂಪನ್ಮೂಲ, ವಾಹನ ಸಲಕರಣೆಗಳನ್ನು ಅವರು ಸರಬರಾಜು ಮಾಡಿಲ್ಲ. ಇವರ ಕಾರ್ಯಾದೇಶವನ್ನು 2014ರ ನವೆಂಬರ್ 3ರಂದು ರದ್ದು ಮಾಡಲಾಗಿದೆ.

ಜಯನಗರ, ಜಕ್ಕಸಂದ್ರ, ಸಾರಕ್ಕಿ ವಾರ್ಡ್‌ಗಳಲ್ಲಿ ಎಸ್‌ಪಿಟಿ ಎಂಟರ್‌ಪ್ರೈಸಸ್ ಘನತ್ಯಾಜ್ಯ ನಿರ್ವಹಣೆಯ ಗುತ್ತಿಗೆಯನ್ನು 2021ರಲ್ಲಿ ಪಡೆದುಕೊಂಡಿದ್ದು, ಕಾರ್ಯಾದೇಶದಂತೆ ಕೆಲಸ ನಿರ್ವಹಿಸಿಲ್ಲ.

ಬೊಮ್ಮನಹಳ್ಳಿ ವಿಭಾಗ ವ್ಯಾಪ್ತಿಯಲ್ಲಿ ತ್ಯಾಜ್ಯ ವಿಲೇವಾರಿ ಕಾರ್ಯವನ್ನು ಅನ್ನಪೂರ್ಣೇಶ್ವರಿ ಅಸೋಸಿಯೇಟ್ಸ್ ಅವರಿಗೆ ನಿಯಮಗಳನ್ನು ಉಲ್ಲಂಘಿಸಿ ಗುತ್ತಿಗೆ ನೀಡಲಾಗಿದೆ. ಬೊಮ್ಮನಹಳ್ಳಿ ವಿಧಾನಸಭೆ ಕ್ಷೇತ್ರದ ಎಂಟು ವಾರ್ಡ್‌ಗಳ ಪೈಕಿ ಐದು ವಾರ್ಡ್‌ಗಳಲ್ಲಿ ತ್ಯಾಜ್ಯ ವಿಲೇವಾರಿ ಕಾರ್ಯಕ್ಕೆ ಆರೂವರೆ ವರ್ಷಗಳಲ್ಲಿ ಸುಮಾರು ₹140 ಕೋಟಿಗೂ ಹೆಚ್ಚು ಹಣವನ್ನು ಪಾಲಿಕೆಯಿಂದ ಅವರು ಪಡೆದುಕೊಂಡಿದ್ದಾರೆ. ಕಾಂಪ್ಯಾಕ್ಟರ್, ಆಟೊ ಟಿಪ್ಪರ್‌ಗಳನ್ನು ನಿಗದಿತ ಸಂಖ್ಯೆಗೆ ಬದಲು ದುಪ್ಪಟ್ಟಾಗಿ ಮಂಜೂರು ಮಾಡಿಸಿಕೊಂಡಿದ್ದಾರೆ. ಆದರೆ, ದಾಖಲೆಯಲ್ಲಿ ತೋರಲಾಗಿರುವ ಮೂರನೇ ಒಂದರಷ್ಟು ಭಾಗದಷ್ಟು ವಾಹನಗಳನ್ನು ಬಳಸಿಕೊಳ್ಳಲಾಗಿದೆ.

ಹೀಗೆ ನಾಲ್ಕು ಮನವಿಗಳನ್ನು ಉಲ್ಲೇಖಿಸಿ, ತನಿಖೆ ನಡೆಸಬೇಕು ಎಂದು ಹರೀಶ್ ಕುಮಾರ್ ಆದೇಶಿಸಿದ್ದಾರೆ.



FARNAZ

ನಗರದಲ್ಲಿ ಇಂದು

‘ಪವಿತ್ರ ತಿಪಿಟಕ ಸದ್ಧಮ್ಮ ಸಜ್ಝಾಯನ’: ಬೆಳಿಗ್ಗೆ 8ಕ್ಕೆ ‘ದಮ್ಮಚಾರಿಕ–ದಮ್ಮ ನಡಿಗೆ’ ಸಂಚರಿಸುವ ಮಾರ್ಗ: ಮಹಾಬೋಧಿ ಸೊಸೈಟಿ, ಕೆ.ಆರ್. ವೃತ್ತ, ವಿಧಾನಸೌಧ, ರಾಜಭವನ, ಚಾಲುಕ್ಯ ವೃತ್ತದಿಂದ ಮಹಾಬೋಧಿ ಸೊಸೈಟಿವರೆಗೆ, ಬೆಳಿಗ್ಗೆ 9.30ಕ್ಕೆ ತಿಪಿಟಕ ಪಠಣೆಯ ಉದ್ಘಾಟನೆ, ಆಯೋಜನೆ ಮತ್ತು ಸ್ಥಳ: ಮಹಾಬೋಧಿ ಸೊಸೈಟಿ, ಕಾಳಿದಾಸ ರಸ್ತೆ, ಗಾಂಧಿನಗರ

ಶ್ರೀಕೃಷ್ಣದೇವರಾಯರ ಜಯಂತಿ: ಆಯೋಜನೆ: ಕರ್ನಾಟಕ ರಾಜ್ಯ ಬಲಿಜ ಯುವ ಶಕ್ತಿ, ಸ್ಥಳ: ರಾಜೀವ್‌ಗಾಂಧಿ ಆಟದ ಮೈದಾನ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪುರ, ಬೆಳಿಗ್ಗೆ 9

ವಿದ್ಯುತ್ ಚಾಲಿತ ವಾಹನಗಳ ಪ್ರದರ್ಶನ ಮತ್ತು ಬೃಹತ್ ಸಾಲ ಮೇಳದ ಉದ್ಘಾಟನೆ: ಎಚ್.ಡಿ. ಕುಮಾರಸ್ವಾಮಿ, ಅಧ್ಯಕ್ಷತೆ: ಎಲ್.ಎ. ರವಿಸುಬ್ರಮಣ್ಯ, ಅತಿಥಿಗಳು: ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಕೆ.ಎನ್. ಚನ್ನೇಗೌಡ, ಸಂಗಾತಿ ವೆಂಕಟೇಶ್, ಎಲ್. ಶ್ರೀನಿವಾಸ್, ಜೆ. ಮಂಜುನಾಥ್, ಪ್ರಾಸ್ತಾವಿಕ ನುಡಿ: ಎಂ.ಆರ್. ವೆಂಕಟೇಶ್, ಆಯೋಜನೆ: ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್, ಸ್ಥಳ: ಬಿಬಿಎಂಪಿ ಆಟದ ಮೈದಾನ, ಶಂಕರನಾಗ್ ವೃತ್ತ, ಬೆಳಿಗ್ಗೆ 9

‘ನೂಪುರ ಆರಾಧನಾ’ ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಹರ್ಷದಾ ಎ., ಪ್ರಣಿಕಾ ಡಿ.ಜಿ., ಜೆ. ಅದ್ವಿಕಾ ಆಧ್ಯಾ, ಆಯೋಜನೆ: ಶ್ರೀ ನಾಟ್ಯ ಕಲಾರ್ಪಣ ನೃತ್ಯ ಕೇಂದ್ರ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

ಶಶಿಕಿರಣ್ ಬಿ.ಎನ್. ಅವರು ಇಂಗ್ಲಿಷ್ ಭಾಷೆಗೆ ಅನುವಾದಿಸಿರುವ ‘ಸೆಲೆಕ್ಟೆಡ್ ರೈಟಿಂಗ್ಸ್ ಆಫ್ ಡಿ.ವಿ. ಗುಂಡಪ್ಪ’ ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಶಿವರುದ್ರ ಸ್ವಾಮೀಜಿ, ಅತಿಥಿಗಳು: ಕೃಷ್ಣ ಎಸ್. ದೀಕ್ಷಿತ್, ಎಸ್.ಆರ್. ರಾಮಸ್ವಾಮಿ, ಶತಾವಧಾನಿ ಆರ್. ಗಣೇಶ್, ಪುಸ್ತಕ ಪರಿಚಯ: ಸಂದೀಪ್ ಬಾಲಕೃಷ್ಣ, ಆಯೋಜನೆ ಮತ್ತು ಸ್ಥಳ: ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30



ಎನ್.ಸಂತೋಷ್ ಹೆಗ್ಡೆ

ಮಹಾಮಹೋಪಾಧ್ಯಾಯ ಪಂಡಿತ್ ಆರ್.ವಿ. ಶೇಷಾದ್ರಿ ಗವಾಯಿ ಜನ್ಮ ಶತಮಾನೋತ್ಸವ ‘ಸ್ವರ ನಮನ’: ಅಧ್ಯಕ್ಷತೆ: ಎಂ. ಸೂರ್ಯಪ್ರಸಾದ್, ‘ಪಂಡಿತ್ ಆರ್.ವಿ. ಶೇಷಾದ್ರಿ ಗವಾಯಿ ಪುರಸ್ಕಾರ’ ಪ್ರದಾನ: ಎನ್. ಸಂತೋಷ್ ಹೆಗ್ಡೆ, ಪುರಸ್ಕಾರ ಸ್ವೀಕರಿಸುವವರು: ಅಶ್ವಿನ್ ಬಾಳಿಗಾ, ಅತಿಥಿಗಳು: ಎನ್.ಎಸ್. ಗುಂಡಾಶಾಸ್ತ್ರಿ, ಬಿ.ವಿ. ಶ್ರೀನಿವಾಸ್, ಸತೀಶ್ ಹಂಪಿಹೊಳಿ, ಆಯೋಜನೆ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಶನ್ ಟ್ರಸ್ಟ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಮಧ್ಯಾಹ್ನ 3 (ಸಭಾ ಕಾರ್ಯಕ್ರಮ ಸಂಜೆ 6ಕ್ಕೆ)

ಸಂತ ತುಳಸಿದಾಸ ವಿರಚಿತ ಹನುಮಾನ್ ಚಾಲೀಸ್: ನಿರ್ದೇಶನ: ಗುರುಮೂರ್ತಿ ವೈದ್ಯ, ಆಯೋಜನೆ: ಸಪ್ತಕ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10.30

ಬಿವಿಎಸ್ ರಜತ ಮಹೋತ್ಸವ: ಸಾನ್ನಿಧ್ಯ: ಭಂತೆ ಬೋಧಿರತ್ನ, ಉದ್ಘಾಟನೆ: ಎಂ.ಎಸ್. ನೇತ್ರಪಾಲ್, ಪ್ರಾಸ್ತಾವಿಕ ಮಾತು: ಶ್ರೀನಿವಾಸ್ ಜಿ., ಬಿವಿಎಸ್ 25 ವರ್ಷಗಳ ಮೆಲುಕು: ಅರವಿಂದ ಮಾಲಗತ್ತಿ, ಪುಸ್ತಕಗಳ ಬಿಡುಗಡೆ: ಮಾವಳ್ಳಿ ಶಂಕರ್, ಅಧ್ಯಕ್ಷತೆ: ಶಿವಕುಮಾರ್, ಅತಿಥಿಗಳು: ಸಿ.ವಿ. ಲಕ್ಷ್ಮಿ, ಅತ್ರಾಡಿ ಅಮೃತಾ ಡೀಕಯ್ಯ, ಯೋಗೇಶ್ ಮಾಸ್ಟರ್, ಹರಿರಾಮ್ ಎ., ಆಯೋಜನೆ: ಭಾರತೀಯ ವಿದ್ಯಾರ್ಥಿ ಸಂಘ, ಸ್ಥಳ: ಡಾ. ಬಾಬು ಜಗಜೀವನರಾಮ್ ಭವನ, ಸುಮನಹಳ್ಳಿ, ಡಾ. ರಾಜ್‌ಕುಮಾರ್ ಸಮಾಧಿ ರಸ್ತೆ, ಬೆಳಿಗ್ಗೆ 10.30

ಬೆಳ್ಳಿ ಹಬ್ಬ, ನೂತನ ಕಟ್ಟಡ ಉದ್ಘಾಟನೆ, ಜ್ಯೋತಿ ಸ್ಮರಣ ಸಂಚಿಕೆ ಬಿಡುಗಡೆ: ಉದ್ಘಾಟನೆ: ‘ಮುಖ್ಯಮಂತ್ರಿ’ ಚಂದ್ರು, ಅಧ್ಯಕ್ಷತೆ: ಬಿ.ಎನ್. ಲಕ್ಷ್ಮೀಪತಿ, ಕಟ್ಟಡದ ಉದ್ಘಾಟನೆ: ಕೆ.ಎನ್. ರಾಜಣ್ಣ, ರಜತ ಭವನದ ಉದ್ಘಾಟನೆ: ವಿ. ಸೋಮಣ್ಣ, ಸಭಾಭವನದ ಉದ್ಘಾಟನೆ: ಶೋಭಾ ಕರಂದ್ಲಾಜೆ, ಆಯೋಜನೆ: ಸಾದು ಸಂಗಮ ಪತ್ತಿನ ಸಹಕಾರ ಸಂಘ, ಸ್ಥಳ: ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘ, ಬೆಳಿಗ್ಗೆ 10.30

ಪಕ್ಷಿಲೋಕದ ಕೆಲವು ವಿಸ್ಮಯಗಳು: ಕಲ್ಗುಂಡಿ ನವೀನ್, ಹೊಸ ತರ್ಕವನ್ನು ವಿಕಸನಗೊಳಿಸುವುದು–ತರ್ಕಧಾರ ವೇದ ಪಠ್ಯಗಳ ವ್ಯಾಖ್ಯಾನ: ಪ್ರಮೋದ್ ಪಾಠಕ್, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಸಂಗೀತ ಮಹೋತ್ಸವದ ಉದ್ಘಾಟನೆ: ಸದಾಶಿವ ಪಾಟೀಲ್, ಅಧ್ಯಕ್ಷತೆ: ಅಂಬಣ್ಣ ಜಮಾದಾರ್, ಅತಿಥಿಗಳು: ರಾಮಲಿಂಗಪ್ಪ ಜಲ್ಲಾಪುರ್, ಶಂಕರಣ್ಣ ಎಂ. ಪರಸಣ್ಣನವರ್, ಸನ್ಮಾನ ಸ್ವೀಕರಿಸುವವರು: ಚನ್ನವೀರಯ್ಯ ಜಂಬಗಿ, ಆಯೋಜನೆ: ಸಂಗೀತ ಸ್ವರ ಸಂಸ್ಕಾರ ಸೇವಾ ಟ್ರಸ್ಟ್, ಸ್ಥಳ: ಕೆಪಿಟಿಸಿಎಲ್ ಅಕೌಂಟ್ಸ್ ಆಫೀಸರ್ಸ್ ಅಸೋಸಿಯೇಶನ್, ರೇಸ್‌ಕೋರ್ಸ್ ರಸ್ತೆ, ಮಧ್ಯಾಹ್ನ 2.30

ಪಾ.ವೆಂ. ಸ್ಮೃತಿ: ಭಾಗವಹಿಸುವವರು: ಪುರುಷೋತ್ತಮ ಬಿಳಿಮಲೆ, ಬಿ.ಕೆ. ಸುಮತಿ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಪಾ.ವೆಂ. ಆಚಾರ್ಯ ಟ್ರಸ್ಟ್, ಸ್ಥಳ: ವಿನಾಯಕ ದೇವಸ್ಥಾನದ ಸಭಾಂಗಣ, ಆರ್.ಟಿ. ನಗರ, ಸಂಜೆ 4

ಪ್ರಸಂಗ ಪಂಚವಟಿ ಯಕ್ಷಗಾನ ಪ್ರದರ್ಶನ: ಭಾಗವತರು: ನಂದನ್ ಹೆಗಡೆ ದಂಟಕಲ್, ಗಜಾನನ ಹೆಗಡೆ ಕಲ್ಲಬ್ಬೆ, ಅನಂತ ಕುಮಾರ್, ಮದ್ದಳೆ: ಚಿನ್ಮಯ್, ನಾರಾಯಣ ಭಟ್, ಚಂಡೆ: ಮಿತ್ರ ಮಧ್ಯಸ್ಥ, ಭಾವನಾ, ಅರ್ಥಧಾರಿಗಳು: ಶರತ್ ಭಟ್ಟಾಜೆ, ಆದಿತ್ಯ ಸಿ. ಹಲ್ಕೋಡ್, ಯಶಸ್ ನಗರ, ಆನಂದ ಶೀಗೇಹಳ್ಳಿ, ಅಕ್ಷಯ್ ಹೆಗಡೆ, ಸಿರಿ ಹಳ್ಳದಾಚೆ, ಆಯೋಜನೆ: ನಿರ್ಮಾಣ್ ಯಕ್ಷ ಬಳ, ಸ್ಥಳ: ಕೋದಂಡರಾಮ ಸ್ವಾಮಿ ದೇವಸ್ಥಾನ, ರಾಮಮೂರ್ತಿನಗರ, ಸಂಜೆ 5



60ನೇ ನಾದಜ್ಯೋತಿ ಸಂಗೀತ ಸಂಭ್ರಮ–2025: ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಗಾಯನ: ಎಸ್. ಶಂಕರ್, ಪಿಟೀಲು: ಎಂ. ಶ್ರೀಕಾಂತ್, ಮೃದಂಗ: ವಿ. ಪ್ರವೀಣ್, ಘಟ: ಜಿ. ಓಂಕಾರ್ ರಾವ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್, ಮಲ್ಲೇಶ್ವರ, ಸಂಜೆ 6ರಿಂದ

ಪ್ರೀತಿ ಹಬ್ಬ–2025–ಸಾಹಿತ್ಯ, ಸಂವಾದ, ಸಂಗೀತ ನಾಟಕಗಳ ಹಬ್ಬ, ‘ಬಿಕ್ಕಟ್ಟು’ ನಾಟಕ ಪ್ರದರ್ಶನ: ನಿರ್ದೇಶನ: ದಾದಾಪೀರ್ ಜೈಮನ್, ಕಲಾವಿದರು: ರೂಮಿ ಹರೀಶ್, ಸೌಮ್ಯ ಎ., ಅಕ್ಕೈ ಪದ್ಮಶಾಲಿ, ಆಯೋಜನೆ: ಸ್ಪೇಸ್ ಫಾರ್ ಡ್ರೀಮ್, ಸ್ಥಳ: ಅಲಯನ್ಸ್ ಫ್ರಾಂಚೈಸ್, ವಸಂತನಗರ, ಸಂಜೆ 6

ನೃತ್ಯ ತರಂಗ–2025 ರಜತ ಮಹೋತ್ಸವ: ಅತಿಥಿ: ನಯನಾ ಎಸ್. ಮೋರೆ, ಆಯೋಜನೆ: ನೃತ್ಯ ಗಂಗೋತ್ರಿ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in



ಬಿಬಿಎಂಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರು ಅನಧಿಕೃತವಾಗಿ ಕಸ ಹಾಕುವ ಸ್ಥಳಗಳನ್ನು ಸ್ವಚ್ಛಗೊಳಿಸಿ, ಮುಂದೆ ಕಸ ಹಾಕದಂತೆ ಅರಿವು ಮೂಡಿಸುವ ಅಭಿಯಾನವು ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ಲಿಮಿಟೆಡ್ ವತಿಯಿಂದ ನಡೆಯಿತು

ಬಿಬಿಎಂಪಿ: 8 ವಲಯಗಳಲ್ಲಿ ಸ್ವಚ್ಛತಾ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 8 ವಲಯಗಳಲ್ಲಿ ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ಲಿಮಿಟೆಡ್ (ಬಿಎಸ್‌ಡಬ್ಲ್ಯುಎಂಎಲ್) ವತಿಯಿಂದ ಸ್ವಚ್ಛತಾ ಅಭಿಯಾನ ನಡೆಸಲಾಯಿತು.

ಪೌರಕಾರ್ಮಿಕರು ನಿತ್ಯ ಕಾರ್ಯನಿರ್ವಹಿಸಿದ್ದರೂ, ಹಸಿ ಕಸ ಸಂಗ್ರಹಿಸಲು ಆಟೊ ಟಿಪ್ಪರ್‌ಗಳು ಮನೆ-ಮನೆ ಭೇಟಿ ನೀಡಿದರೂ ನಗರದಲ್ಲಿ ರಸ್ತೆ ಬದಿ, ಪಾದಚಾರಿ ಮಾರ್ಗ, ಖಾಲಿ ಜಾಗಗಳಲ್ಲಿ ಕಸ ಬಿಸಾಡುವುದು ನಿಂತಿಲ್ಲ. ಕಸ ಬಿಸಾಡುವ ಸ್ಥಳಗಳನ್ನು (ಬ್ಲಾಕ್ ಸ್ಪಾಟ್ಸ್) ನಿರ್ಮೂಲನೆ ಮಾಡುವ ಹಾಗೂ ಕಸ ಎಲ್ಲೆಂದರಲ್ಲಿ ಎಸೆಯದಂತೆ ಜಾಗೃತಿ ಮೂಡಿಸಲು ಈ ಅಭಿಯಾನ ನಡೆಸಲಾಗುತ್ತಿದೆ.

ರಸ್ತೆ ಬದಿ, ಪಾದಚಾರಿ ಮಾರ್ಗಗಳಲ್ಲಿ ತ್ಯಾಜ್ಯ ಹಾಕಿರುವ ಸ್ಥಳಗಳನ್ನು ಸ್ವಚ್ಛಗೊಳಿಸಿ ಗೋಡೆಗಳಿಗೆ ಬಣ್ಣ ಬಳಿದು, ನೆಲದಲ್ಲಿ ರಂಗೋಲಿ ಬಿಡಿಸಿ, ಸಸಿ ನೆಟ್ಟು ಸುಂದರಗೊಳಿಸಲಾಗುತ್ತಿದೆ. ಆ ಸ್ಥಳದಲ್ಲಿ ಮತ್ತೆ ಕಸ ಹಾಕದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಸಾರಕ್ಕಿ ಕೆರೆ ಒತ್ತುವರಿ ತೆರವುಗೊಳಿಸಿದ ಬಿಬಿಎಂಪಿ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮನಹಳ್ಳಿ ವಲಯದ ಸಾರಕ್ಕಿ ಕೆರೆಯಲ್ಲಿ 21.68 ಗುಂಟೆ ಜಮೀನು ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದ್ದಾರೆ.

ಪಾಲಿಕೆ ವಶದಲ್ಲಿರುವ ಕೆರೆಗಳ ಒತ್ತುವರಿ ತೆರವಿಗೆ, ಒತ್ತುವರಿ ಸರ್ವೆ ಹಾಗೂ ತೆರವುಗೊಳಿಸುವ ಕಾರ್ಯ ಜಾರಿಯಲ್ಲಿದೆ. ಬೊಮ್ಮನಹಳ್ಳಿ ವಲಯದ ಸಾರಕ್ಕಿ ಕೆರೆಗೆ (ಜರಗನಹಳ್ಳಿ ಸರ್ವೆ 7) ಸಂಬಂಧಿಸಿದಂತೆ ಕಂದಾಯ ಇಲಾಖೆಯು ಸರ್ವೆ ನಡೆಸಿದಾಗ, 21.68 ಗುಂಟೆಯಲ್ಲಿ ಶೆಡ್, ಖಾಲಿ ಜಾಗ ಹಾಗೂ ರಸ್ತೆಗಾಗಿ ಅತಿಕ್ರಮಣವಾಗಿರುವುದು ಪತ್ತೆಯಾಗಿತ್ತು.

ಬಿಬಿಎಂಪಿ ಕೆರೆಗಳ ವಿಭಾಗದ ಎಂಜಿನಿಯರ್‌ಗಳು ಒತ್ತುವರಿಯನ್ನು ತೆರವುಗೊಳಿಸಿ, ತಂತಿಬೇಲಿ ಅಳವಡಿಸಿದ್ದಾರೆ. ಈ ಒತ್ತುವರಿ ಪ್ರದೇಶದ ಮಾರುಕಟ್ಟೆ ಮೌಲ್ಯವು ಸುಮಾರು ₹20 ಕೋಟಿಗಳಾಗಿದೆ ಎಂದು ಕಾರ್ಯಪಾಲಕ ಎಂಜಿನಿಯರ್ ದೀಪಶ್ರೀ ತಿಳಿಸಿದ್ದಾರೆ.

'ನಮ್ಮ ಮೆಟ್ರೊ' ಪ್ರಯಾಣ ದರ ಏರಿಕೆಯ ಅಡ್ಡ ಪರಿಣಾಮ: ಹೆಚ್ಚಿದ ದಟ್ಟಣೆ

ರಸ್ತೆಗೆ ಇಳಿದ ವೈಯಕ್ತಿಕ ವಾಹನ

• ಗಾಣಧಾಳು ಶ್ರೀಕಂಠ

ಮುಖ್ಯಾಂಶಗಳು

- ಪಾರ್ಕಿಂಗ್ ಜಾಗದಲ್ಲಿ ವಾಹನಗಳ ಸಂಖ್ಯೆ ಇಳಿಕೆ
- ನಗರದ ಕೆಲ ರಸ್ತೆಗಳಲ್ಲಿ ದಟ್ಟಣೆ ಹೆಚ್ಚಳ
- ಪರ್ಯಾಯ 'ಸಂಚಾರ'ದತ್ತ ಜನರ ಚಿತ್ತ

ಬೆಂಗಳೂರು: ಮೆಟ್ರೊ ನಿಲ್ದಾಣಗಳಲ್ಲಿ ಪಾರ್ಕಿಂಗ್ ಸ್ಥಳಗಳಲ್ಲಿ ಜಾಗವೇ ಇಲ್ಲದಷ್ಟು ದಟ್ಟಣೆ ಇರುತ್ತಿತ್ತು. 'ನಮ್ಮ ಮೆಟ್ರೊ' ಪ್ರಯಾಣ ದರ ಏರಿಕೆಯಾದ ಮೇಲೆ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸುವ ವಾಹನಗಳ ಸಂಖ್ಯೆಯೂ ಕುಸಿದಿದೆ.

ಸಾರ್ವಜನಿಕ ಸಾರಿಗೆ ಬಳಕೆ ಹೆಚ್ಚಾಗಬೇಕು. ವೈಯಕ್ತಿಕ ವಾಹನಗಳ ಬಳಕೆ ಕಡಿಮೆಯಾಗಬೇಕು ಎಂಬ ಉದ್ದೇಶವನ್ನು 'ನಮ್ಮ ಮೆಟ್ರೊ' ಪ್ರಯಾಣದರ ಏರಿಕೆಯು ತಿರುಗುಮುರುಗು ಮಾಡಿದೆ. ಮೆಟ್ರೊ ಟಿಕೆಟ್ ದರಕ್ಕಿಂತ ಬೈಕ್‌ಗಳಲ್ಲಿ ಸಾಗಲು ಕಡಿಮೆ ಖರ್ಚು ಆಗುತ್ತಿರುವುದರಿಂದ ಕಚೇರಿಗೆ, ಇನ್ನಿತರ ಕೆಲಸಗಳಿಗೆ ಮೆಟ್ರೊ ಅವಲಂಬಿಸಿದವರೆಲ್ಲ ಈಗ ತಮ್ಮ ಖಾಸಗಿ ವಾಹನಗಳಲ್ಲಿಯೇ ಸಾಗುತ್ತಿದ್ದಾರೆ. ಪರಿಣಾಮವಾಗಿ ನಿತ್ಯ ಮೆಟ್ರೊದಲ್ಲಿ ಪ್ರಯಾಣಿಸುವವರ ಸಂಖ್ಯೆ 80 ಸಾವಿರದಿಂದ 1 ಲಕ್ಷದಷ್ಟು ಇಳಿಕೆ ಯಾಗಿದೆ. ರಸ್ತೆಯಲ್ಲಿ ಸಂಚರಿಸುವ ವಾಹನಗಳ ಸಂಖ್ಯೆ ಏರಿಕೆಯಾಗಿದೆ.

ನಾಗಸಂದ್ರದಂತಹ ಪ್ರಮುಖ ಮೆಟ್ರೊ ನಿಲ್ದಾಣದ ಪಾರ್ಕಿಂಗ್‌ನಲ್ಲಿ ನಿತ್ಯ ಸಾವಿರಕ್ಕೂ ಹೆಚ್ಚು ದ್ವಿಚಕ್ರ ವಾಹನ ಮತ್ತು ನಾಲ್ಕು ಚಕ್ರದ ವಾಹನಗಳು ನಿಲುಗಡೆ ಆಗುತ್ತಿದ್ದವು. ಈಗ ಪಾರ್ಕಿಂಗ್ ಮಾಡುವ ವಾಹನಗಳ ಸಂಖ್ಯೆ ಕಡಿಮೆಯಾಗಿದೆ.

'ನಿತ್ಯ 750ರಿಂದ 850 ದ್ವಿಚಕ್ರ ವಾಹನಗಳು, 50ರಿಂದ 60 ಕಾರುಗಳು ನಿಲುಗಡೆ ಆಗುತ್ತಿದ್ದವು. ಫೆಬ್ರುವರಿ 10ರಿಂದ ಈಚೆಗೆ ದ್ವಿಚಕ್ರವಾಹನ ಸಂಖ್ಯೆ 600ರ ಆಸುಪಾಸಿನಲ್ಲಿದೆ. ಕಾರುಗಳ ಸಂಖ್ಯೆಯೂ ಹತ್ತಿಪ್ಪತ್ತು ಕಡಿಮೆಯಾಗಿವೆ. ಸಾಮಾನ್ಯವಾಗಿ ವಾರಾಂತ್ಯ ಹಾಗೂ ರಜೆ ದಿನಗಳಲ್ಲಿ ವಾಹನಗಳ ನಿಲುಗಡೆ ಸಂಖ್ಯೆ ಕಡಿಮೆಯಾಗುತ್ತಿದ್ದವು. ಆದರೆ, ಈಗ ಕೆಲಸದ ದಿನಗಳಲ್ಲಿಯೂ ಕಡಿಮೆಯಾಗಿದೆ. ಪಾರ್ಕಿಂಗ್ ಗುತ್ತಿಗೆ ಪಡೆದಿರುವ ನಮಗೆ ಇದರಿಂದ ನಷ್ಟವಾಗುತ್ತಿದೆ' ಎಂದು ನಾಗಸಂದ್ರ ನಿಲ್ದಾಣದ ಪಾರ್ಕಿಂಗ್ ಉಸ್ತುವಾರಿ ಅಲವತ್ತುಕೊಂಡರು.

'ಜ್ಞಾನಭಾರತಿ ಮೆಟ್ರೊ ನಿಲ್ದಾಣದಲ್ಲಿ ಬೆಳಿಗ್ಗೆ ವೇಳೆ (ದಟ್ಟಣೆಯ ಅವಧಿ) ವಾಹನ ನಿಲ್ಲಿಸಲು ಜಾಗವಿರುತ್ತಿರಲಿಲ್ಲ. ಬೈಕ್ ನಿಲ್ಲಿಸುವುದೇ ಸಾಹಸವಾಗುತ್ತಿತ್ತು. ಈಗ ಸುಲಭವಾಗಿ ನಿಲ್ಲಿಸಬಹುದು' ಎಂದು ಯಾವಾಗಲೂ ಅಲ್ಲಿ ಬೈಕ್ ನಿಲ್ಲಿಸುವ ಪ್ರಯಾಣಿಕರು ಅನುಭವ ಹಂಚಿಕೊಂಡರು.

ನಿತ್ಯ 3 ಸಾವಿರ ಬೈಕ್/ ಸ್ಕೂಟರ್‌ಗಳು ನಿಲುಗಡೆಯಾಗುತ್ತಿದ್ದವು. ಕಳೆದ ಸೋಮವಾರದಿಂದ (ಫೆ.10ರಿಂದ), ನಿತ್ಯ ಸುಮಾರು ನೂರು ವಾಹನಗಳು ಕಡಿಮೆಯಾಗುತ್ತಿವೆ' ಎಂದು ಇಲ್ಲಿನ ಪಾರ್ಕಿಂಗ್ ಉಸ್ತುವಾರಿ ಮಾಹಿತಿ ನೀಡಿದರು.

ರಸ್ತೆಗಿಳಿದಿರುವ ವಾಹನಗಳು: ಪರಿಷ್ಕೃತ ಪ್ರಯಾಣ ದರಕ್ಕೂ ವಾಹನ ಬಳಕೆಯಿಂದಾಗುವ ಖರ್ಚು ವೆಚ್ಚ ಎಲ್ಲ ಲೆಕ್ಕ ಹಾಕಿ, ವೈಯಕ್ತಿಕ ವಾಹನಗಳೊಂದಿಗೆ ತಮ್ಮ ತಮ್ಮ ಕೆಲಸಗಳಿಗೆ ಹೊರಟಿರುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಿದೆ. ಮೆಟ್ರೊ ನಿಲ್ದಾಣದವರೆಗೆ ವಾಹನ ಒಯ್ದು ಅಲ್ಲಿ ಪಾರ್ಕಿಂಗ್ ಶುಲ್ಕ ಪಾವತಿಸಿ, ಆಮೇಲೆ ಮೆಟ್ರೊ ಟಿಕೆಟ್ ದರ ಪಾವತಿಸಿ ಹೋಗುವುದಕ್ಕಿಂತ ವಾಹನದಲ್ಲಿ ನೇರವಾಗಿ ಕಚೇರಿಗೆ ಹೋಗುವ ಮೂಲಕ ಖರ್ಚು ಕಡಿಮೆ ಮಾಡುವ ದಾರಿಯನ್ನು ಹಲವು ಪ್ರಯಾಣಿಕರು ಕಂಡುಕೊಂಡಿದ್ದಾರೆ.

ಸ್ವಂತ ವಾಹನ ಬಳಕೆ ಮಾಡದವರು ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಸುವುದು, 'ಕಾರ್‌ಪೂಲಿಂಗ್' ನಂತಹ ವ್ಯವಸ್ಥೆಗೆ ಹೊರಳುತ್ತಿದ್ದಾರೆ. 'ನಗರದ ವಾಹನ ಸಂಚಾರ ದಟ್ಟಣೆಗೆ, ವಾತಾವರಣ ಹದಗೆಡುವುದಕ್ಕೂ ಮೆಟ್ರೊ ಪ್ರಯಾಣ ದರ ಏರಿಕೆ ಬಹುದೊಡ್ಡ ಕೊಡುಗೆ ನೀಡುತ್ತಿದೆ' ಎಂದು ಪರಿಸರ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮೆಟ್ರೊ ನಿಲ್ದಾಣದಲ್ಲಿ ಪಾರ್ಕಿಂಗ್ ಮಾಡುವ ವಾಹನಗಳ ಸಂಖ್ಯೆ ಕಡಿಮೆಯಾಗಿದೆ

ಪ್ರಯಾಣಿಕರ ಸಂಖ್ಯೆ ಇಳಿಕೆ

ಮೆಟ್ರೊ ಪ್ರಯಾಣದರ ಹೆಚ್ಚಳ ಮಾಡಿದ ಮೇಲೆ ಪ್ರಯಾಣಿಕರ ಸಂಖ್ಯೆ ಇಳಿಕೆಯಾಗಿದ್ದು, ಗುರುವಾರವೂ ಅದೇ ಪರಿಸ್ಥಿತಿ ಮುಂದುವರಿದಿದೆ.

ಜನವರಿಯಲ್ಲಿ ವಾರಾಂತ್ಯ ಹೊರತುಪಡಿಸಿ ಪ್ರಯಾಣಿಸುವವರ ಸಂಖ್ಯೆ ಸರಾಸರಿ 8.5 ಲಕ್ಷ ಇತ್ತು. ಗುರುವಾರ 7.63 ಲಕ್ಷ ಮಂದಿ ಪ್ರಯಾಣಿಸಿದ್ದಾರೆ.

ಭಾನುವಾರದ ಸರಾಸರಿಯು 7 ಲಕ್ಷ ಆಗಿದ್ದು, ಹೆಚ್ಚಳವಾದ ಮೊದಲ ದಿನವಾದ ಭಾನುವಾರ 6.23 ಲಕ್ಷಕ್ಕೆ ಇಳಿದಿತ್ತು. ಪ್ರತಿ ಸೋಮವಾರ ಪ್ರಯಾಣಿಕರ ಸಂಖ್ಯೆ ಅಧಿಕ (ಸರಾಸರಿ 8.80 ಲಕ್ಷ) ಇರುತ್ತಿತ್ತು. ಫೆ.10ರಂದು 8.28 ಲಕ್ಷಕ್ಕೆ ಇಳಿದಿತ್ತು. ಮಂಗಳವಾರ 7.78 ಲಕ್ಷ, ಬುಧವಾರ 7.62 ಲಕ್ಷ, ಗುರುವಾರ 7.51 ಲಕ್ಷ ಜನರು ಪ್ರಯಾಣಿಸಿದ್ದಾರೆ.

ಸುದ್ದಿ 2 ನಿಮಿಷ

ಕೃಷ್ಣದೇವರಾಯ ಜಯಂತಿ ಬೈಕ್ ರ‍್ಯಾಲಿ ಇಂದು

ಕೆ.ಆರ್.ಪುರ: ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಶ್ರೀ ಕೃಷ್ಣದೇವರಾಯರ 555ನೇ ಜಯಂತ್ಯುತ್ಸವ ಅಂಗವಾಗಿ ಭಾನುವಾರ ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಬಲಿಜ ಯುವಶಕ್ತಿ ಸಮಿತಿ ಅಧ್ಯಕ್ಷ ಕೆ.ಟಿ.ರಾಜಕುಮಾರ್ ತಿಳಿಸಿದರು.

ಕೆ.ಆರ್.ಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಬೆಳಿಗ್ಗೆ 9 ಗಂಟೆಗೆ ಆವಲಹಳ್ಳಿಯ ಶ್ರೀಮುನೇಶ್ವರ-ಸ್ವಾಮಿ ದೇವಸ್ಥಾನದಿಂದ ಕೆ.ಆರ್.ಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೈದಾನದವರೆಗೂ ಬೈಕ್ ರ‍್ಯಾಲಿ ನಡೆಯಲಿದೆ.

ವೇದಿಕೆ ಕಾರ್ಯಕ್ರಮದಲ್ಲಿ ಶ್ರೀಕೈವಾರ ಕ್ಷೇತ್ರದ ಧರ್ಮದರ್ಶಿ ಎಂ.ಆರ್.ಜಯರಾಮ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಪಿ.ಸಿ.ಮೋಹನ್, ಶಾಸಕ ಬೈರತಿ ಬಸವರಾಜ ಹಾಗೂ ಧಾರ್ಮಿಕ ಗುರುಗಳು ಬಲಿಜ ಸಮಾಜದ ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದು ಸಮಿತಿ ಗೌರವಾಧ್ಯಕ್ಷ ಆರ್.ಸುರೇಂದ್ರ ಹೇಳಿದರು.



'ವಿ.ವಿಗಳ ಬಂದ್: ರಾಜ್ಯಪಾಲರು ತಕ್ಷಣ ಮಧ್ಯಪ್ರವೇಶಿಸಬೇಕು'

ಬೆಂಗಳೂರು: 'ಹೊಸದಾಗಿ ಸ್ಥಾಪಿಸಿದ ವಿಶ್ವವಿದ್ಯಾಲಯಗಳನ್ನು ಆರ್ಥಿಕ ಹೊರೆ, ಮೂಲಸೌಕರ್ಯದ ಕೊರತೆ, ಬೋಧಕ – ಬೋಧಕೇತರ ಸಿಬ್ಬಂದಿ ಕೊರತೆ, ವಿದ್ಯಾರ್ಥಿಗಳ ದಾಖಲಾತಿ ಸೇರಿದಂತೆ ಅನೇಕ ಕಾರಣಗಳನ್ನು ನೀಡಿ ಮುಚ್ಚಲು ನಿರ್ಧರಿಸಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಧಾರದ ವಿಷಯದಲ್ಲಿ ರಾಜ್ಯಪಾಲರು ತಕ್ಷಣ ಮಧ್ಯಪ್ರವೇಶಿಸಬೇಕು' ಎಂದು ವಿಧಾನ ಪರಿಷತ್ ಬಿಜೆಪಿ ಸದಸ್ಯ ಎನ್. ರವಿಕುಮಾರ್ ಆಗ್ರಹಿಸಿದ್ದಾರೆ.

'ಉನ್ನತ ಶಿಕ್ಷಣವನ್ನು ಬಡವರ, ಮಹಿಳೆಯರ ಮನೆಬಾಗಿಲಿಗೆ ಕೊಂಡೊಯ್ಯುವ ಉದ್ದೇಶದಿಂದ ಈ ವಿಶ್ವವಿದ್ಯಾಲಯಗಳನ್ನು ಆರಂಭಿಸಲಾಗಿದೆ. ಆರ್ಥಿಕವಾಗಿ ವಿಶ್ವವಿದ್ಯಾಲಯಗಳನ್ನು ಬಲಪಡಿಸಬೇಕಾದುದು ಸರ್ಕಾರದ ಕರ್ತವ್ಯ. ಆದರೆ, ಸರ್ಕಾರ ₹ 300 ಕೋಟಿ ಹಣ ಕೊಡಲಾಗದೆ ಅವುಗಳನ್ನು ಮುಚ್ಚುವ ನಿರ್ಧಾರ ಶೈಕ್ಷಣಿಕ ಹಿನ್ನಡೆಗೆ ಕಾರಣವಾಗಲಿದೆ. ಈ ನಿರ್ಣಯದಿಂದ ಸರ್ಕಾರ ಹಿಂದೆ ಸರಿಯಬೇಕು' ಎಂದು ಅವರು ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

'ಅನುದಾನ, ದುಡ್ಡಿಲ್ಲ ಅಂದರೆ ಇತರ ಸರ್ಕಾರಿ ವಿಶ್ವವಿದ್ಯಾಲಯಗಳನ್ನೂ ಮುಚ್ಚುತ್ತೀರಾ? ಆರ್ಥಿಕ ಕಾರಣಕ್ಕಾಗಿ ವಿಶ್ವವಿದ್ಯಾಲಯಗಳನ್ನು ಬಂದ್ ಮಾಡುವುದು ಪರಿಹಾರವಲ್ಲ. ಸುಸಜ್ಜಿತ ಮೂಲಸೌಕರ್ಯ ಕಲ್ಪಿಸಬೇಕು, ಕಾಲಕಾಲಕ್ಕೆ ಶಿಕ್ಷಕರ, ಉಪನ್ಯಾಸಕರ, ಅಗತ್ಯ ಸಿಬ್ಬಂದಿ ನೇಮಕ ಮಾಡಬೇಕು. ಆಗ ಮಾತ್ರ ಸರ್ಕಾರಿ ವಿಶ್ವವಿದ್ಯಾಲಯ, ಶಾಲಾ, ಕಾಲೇಜುಗಳತ್ತ ವಿದ್ಯಾರ್ಥಿಗಳು, ಪೋಷಕರು ಮುಖ ಮಾಡುತ್ತಾರೆ. ಈ ಬಗ್ಗೆ ಸರ್ಕಾರ ಗಂಭೀರ ಚಿಂತನೆ ನಡೆಸಬೇಕು' ಎಂದೂ ಆಗ್ರಹಿಸಿದ್ದಾರೆ.

16 ಮಂದಿ ವಿರುದ್ಧ ಎಫ್‌ಐಆರ್

ಬೆಂಗಳೂರು: 'ನಮ್ಮ ಮೆಟ್ರೊ' ಪ್ರಯಾಣದ ದರ ಏರಿಕೆ ಖಂಡಿಸಿ ಪ್ರತಿಭಟನೆ ನಡೆಸಿದ್ದ ಎಬಿವಿಪಿಯ 16 ಮಂದಿ ಕಾರ್ಯಕರ್ತರ ವಿರುದ್ಧ ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಅನುಮತಿ ಪಡೆಯದೆ ಶುಕ್ರವಾರ ನಾಡಪ್ರಭು ಕೆಂಪೇಗೌಡ (ಮೆಜೆಸ್ಟಿಕ್) ಮೆಟ್ರೊ ನಿಲ್ದಾಣದ ಬಳಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ನೋಟಿಸ್ ಜಾರಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಎಲ್ಲ ಸ್ಟೇಜ್‌ಗಳ ಪ್ರಯಾಣ ದರ ಇಳಿಸಿ'

ಬೆಂಗಳೂರು: ನಮ್ಮ ಮೆಟ್ರೊ ಪ್ರಯಾಣ ದರವನ್ನು ವಿಪರೀತ ಏರಿಸಿರುವ ಬಿಎಂಆರ್‌ಸಿಎಲ್ ಆನಂತರ ಕೆಲವು ಸ್ಟೇಜ್‌ಗಳಿಗೆ ಸ್ವಲ್ಪ ಪ್ರಮಾಣದಲ್ಲಿ ದರ ಇಳಿಸಿ ಮುಂಗೈಗೆ ಬೆಲ್ಲ ಸವರುವ ಕೆಲಸ ಮಾಡಿದೆ. ಆದರೆ ಎಲ್ಲ ಸ್ಟೇಜ್‌ಗಳ ಪ್ರಯಾಣ ದರ ಇಳಿಸಬೇಕು' ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.







ಮೆಟ್ರೊ ಪ್ರಯಾಣ ದರ ಹೆಚ್ಚಿಸಿದ್ದ ಬಿಎಂಆರ್‌ಸಿಎಲ್, ದರ ಪರಿಷ್ಕರಣೆಯ ಹೆಸರಲ್ಲಿ ಕೆಲ ನಿಲ್ದಾಣಗಳ ದರಗಳನ್ನು ಮಾತ್ರ ಕಡಿಮೆ ಮಾಡಿದೆ. ಆದರೆ ಈ ಪರಿಷ್ಕೃತ ದರ ಕೆಲ ನಿಲ್ದಾಣಗಳಿಗೆ ಮಾತ್ರ ಸೀಮಿತವಾಗಿದೆ. ಎಲ್ಲ ನಿಲ್ದಾಣಗಳಿಗೆ ಅನ್ವಯವಾಗುವಂತೆ ಪ್ರಯಾಣ ದರವನ್ನು ಕೂಡಲೇ ಕಡಿಮೆ ಮಾಡಬೇಕು.

ಡಿ.ಭರತ್, ಕತ್ರಿಗುಪ್ಪೆ



ಸುಗಮ ಸಂಚಾರಕ್ಕೆ ಮೆಟ್ರೊ ಪ್ರಯಾಣವನ್ನು ಅವಲಂಬಿಸಿರುವ ಎಲ್ಲ ವರ್ಗದ ಜನರು, ಈಗ ಪ್ರಯಾಣ ದರ ಏರಿಕೆಯಿಂದ ಹೈರಾಣಾಗಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೆಟ್ರೊವನ್ನು ಲಾಭದಾಯಕ ದೃಷ್ಟಿಯಿಂದ ನೋಡದೇ, ಅದನ್ನು ಒಂದು ಸೇವೆಯಾಗಿ ನೋಡಬೇಕು. ಕೂಡಲೇ ಪ್ರಯಾಣ ದರ ಇಳಿಕೆ ಮಾಡಬೇಕು.

ಕೆ.ಪಿ. ಸತ್ಯನಾರಾಯಣ, ಜೆ.ಪಿ. ನಗರ



ಮೆಟ್ರೊ ಪ್ರಯಾಣ ದರ ದಿಢೀರ್ ಏರಿಕೆ ಮಾಡಿರುವ ಕಾರಣ ನಾನೂ ಸೇರಿದಂತೆ ಸಾರ್ವಜನಿಕರು ಖಾಸಗಿ ವಾಹನಗಳು ಮತ್ತು ಬಿಎಂಟಿಸಿ ಬಸ್‌ಗಳ ಮೊರೆ ಹೋಗುತ್ತಿದ್ದಾರೆ. ನಮ್ಮ ಮೆಟ್ರೊ ಈಗ ಕೆಲವರ ಮೆಟ್ರೊ ಆಗಿ ಬದಲಾಗಿದೆ. ಬಿಎಂಆರ್‌ಸಿಎಲ್ ಕೂಡಲೇ ಪ್ರಯಾಣ ದರ ಇಳಿಸುವ ಕುರಿತು ಚಿಂತನೆ ನಡೆಸಬೇಕು. ಇಲ್ಲದಿದ್ದರೆ ಸಾರ್ವಜನಿಕರು ಮೆಟ್ರೊ ಬಿಟ್ಟು ಪರ್ಯಾಯ ವ್ಯವಸ್ಥೆಯತ್ತ ಚಿತ್ತ ಹರಿಸಲಿದ್ದಾರೆ.

ಆನಂದ್, ಹಲಸೂರು



ಸಾರ್ವಜನಿಕರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಮೆಟ್ರೊ ರೈಲು ಆರಂಭಿಸಲಾಗಿದೆ. ಈಗ ಅದೇ ರೈಲಿನ ಪ್ರಯಾಣ ದರವನ್ನು ಹೆಚ್ಚಿಸುತ್ತಿರುವುದು ಖಂಡನೀಯ. ವ್ಯಾಪಾರಿಗಳು, ದಿನಗೂಲಿ ನೌಕರರು, ವಿದ್ಯಾರ್ಥಿಗಳಂತಹ ಅತಿದೊಡ್ಡ ಸಮೂಹ ಮೆಟ್ರೊ ರೈಲಿನ ಮೂಲಕವೇ ಸಂಚರಿಸುತ್ತದೆ. ಈಗ ಪ್ರಯಾಣ ದರ ಏರಿಕೆ ಮಾಡಿರುವುದು ಈ ದೊಡ್ಡ ಸಮೂಹದ ಮೇಲೆ ಹೊರೆಯಾಗಲಿದೆ. ಆದ್ದರಿಂದ ಬಿಎಂಆರ್‌ಸಿಎಲ್ ಎಲ್ಲ ಸ್ಟೇಜ್‌ಗಳ ಮೆಟ್ರೊ ಪ್ರಯಾಣ ದರ ಇಳಿಸಬೇಕು.

ಶ್ವೇತಾ ಸುರೇಶ್ ಪಾಟೀಲ್, ಬೆಂಗಳೂರು



ಪೀಣ್ಯ ಮೆಟ್ರೊ ನಿಲ್ದಾಣದಿಂದ ಸರ್.ಎಂ. ವಿಶ್ವೇಶ್ವರಯ್ಯ ಸೆಂಟ್ರಲ್ ಕಾಲೇಜು ಮೆಟ್ರೊ ನಿಲ್ದಾಣಕ್ಕೆ ₹28.50 ಪ್ರಯಾಣ ದರ ಪಾವತಿಸುತ್ತಿದ್ದೆ. ಈಗ ಇದೇ ಮಾರ್ಗಕ್ಕೆ ₹ 60 ಪಾವತಿಸುತ್ತಿದ್ದೇನೆ. ಈ ಮಾರ್ಗದಲ್ಲಿ ಶೇಕಡ 100 ರಷ್ಟು ದರ ಏರಿಕೆ ಮಾಡಿರುವುದರಿಂದ ನಮ್ಮಂತಹ ಮಧ್ಯಮ ವರ್ಗದ ಜನರಿಗೆ ಹೊರೆಯಾಗಲಿದೆ.

ಆಶಿಕಾ, ಪೀಣ್ಯ



ನಮ್ಮ ಮೆಟ್ರೊ ಎಂಬ ಹೆಸರು ನೋಡಿದಾಗಲೆಲ್ಲಾ, ಇದು ನಮಗೋಸ್ಕರ ಇಟ್ಟಿರುವ ಹೆಸರು ಅಂತ ಭಾವಿಸುತ್ತಿದ್ದೆ. ಈಗ ಬಿಎಂಆರ್‌ಸಿಎಲ್ ಸಂಸ್ಥೆ ಅವೈಜ್ಞಾನಿಕವಾಗಿ ದರ ಪರಿಷ್ಕರಣೆ ಮಾಡುತ್ತಿರುವುದು ನೋಡಿದರೆ ಇದು ನಮ್ಮದ್ದಲ್ಲವೆಂದು ಭಾಸವಾಗುತ್ತಿದೆ. ಬಿಎಂಆರ್‌ಸಿಎಲ್ ಸಾರ್ವಜನಿಕರ ಸಾರಿಗೆ ಹೆಸರಿನಲ್ಲಿ ಸೇವೆ ನೀಡುವ ಉದ್ದೇಶವನ್ನು ಬಿಟ್ಟು, ಲಾಭ ಮಾಡುವ ಉದ್ದೇಶಕ್ಕೆ ಇಳಿದಿರುವುದು ದುರಂತ.

ಮನೋಜ್, ವಿಜಯನಗರ



ಮೆಟ್ರೊ ಪ್ರಯಾಣ ದರ ಏರಿಕೆ ಎಲ್ಲ ವರ್ಗದವರಿಗೆ ಆಘಾತ ಉಂಟು ಮಾಡಿದೆ. ಈಗಾಗಲೇ ಬಸ್ ಪ್ರಯಾಣ ದರ ಏರಿಕೆಯಿಂದ ಕಂಗೆಟ್ಟಿದ್ದ ಜನತೆಗೆ ಮೆಟ್ರೊ ಪ್ರಯಾಣ ದರ ಏರಿಕೆ ಮಾಡುವ ಮೂಲಕ ಸರ್ಕಾರ ಶಾಕ್ ನೀಡಿದೆ. ಮೆಟ್ರೊ ಸಂಚಾರ ದಟ್ಟಣೆ ಸಮಸ್ಯೆಗೆ ಮುಕ್ತಿ ನೀಡಿತ್ತು. ಈಗ ಪ್ರಯಾಣ ದರ ಹೆಚ್ಚಿಸಿರುವುದರಿಂದ ಸಾರ್ವಜನಿಕರು ಸ್ವಂತ ವಾಹನಗಳ ಬಳಸುತ್ತಿದ್ದಾರೆ. ನಗರದಲ್ಲಿ ಮತ್ತೆ ಸಂಚಾರ ದಟ್ಟಣೆ ಹೆಚ್ಚಾಗಲು ಮೆಟ್ರೊ ಕಾರಣವಾಗುತ್ತಿರುವುದು ವಿಪರ್ಯಾಸವೇ ಸರಿ.

ಪಟ್ಟಡಿ ಎ.ಬಸವರಾಜ್, ನಾಗವಾರ



ನಗರದ ಜನರು ಸ್ವಂತ ವಾಹನಗಳನ್ನು ಬಳಸದೇ ಸಾರ್ವಜನಿಕ ಸಾರಿಗೆಯಲ್ಲಿ ಹೆಚ್ಚು ಪ್ರಯಾಣಿಸುತ್ತಿದ್ದಾರೆ. ಆದರೆ ಇತ್ತೀಚೆಗೆ ಸರ್ಕಾರಿ ಬಸ್‌ಗಳ ಪ್ರಯಾಣ ದರ ಹೆಚ್ಚಿಸಲಾಗಿತ್ತು. ಈಗ ಮೆಟ್ರೊ ಪ್ರಯಾಣ ದರವನ್ನು ಶೇಕಡ 100ರಷ್ಟು ಹೆಚ್ಚಿಸಿರುವುದು ಖಂಡನೀಯ. ಬಿಎಂಆರ್‌ಸಿಎಲ್ ಪ್ರತಿವರ್ಷ ಶೇಕಡ 5ರಷ್ಟು ದರ ಹೆಚ್ಚಳ ಮಾಡಬಹುದಿತ್ತು. ಏಕಾಏಕಿ ಅವೈಜ್ಞಾನಿಕವಾಗಿ ದರ ಏರಿಕೆ ಮಾಡಲಾಗಿದೆ. ಪ್ರಯಾಣ ದರ ಕಡಿಮೆ ಮಾಡದಿದ್ದರೆ ವೈಯಕ್ತಿಕ ವಾಹನಗಳ ಬಳಕೆ ಹೆಚ್ಚಾಗಿ, ವಾಯು ಮಾಲಿನ್ಯ, ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತದೆ. ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಚಿಂತನೆ ನಡೆಸಬೇಕು.

ಜ್ಯೋತಿ ಬಿರಾದಾರ, ಬಸವನಗುಡಿ



ಬೆಂಗಳೂರು ನಗರ ಸಂಚಾರ ದಟ್ಟಣೆ ನಿಯಂತ್ರಿಸುವಲ್ಲಿ 'ನಮ್ಮ ಮೆಟ್ರೊ' ಪ್ರಮುಖ ಪಾತ್ರ ವಹಿಸುತ್ತದೆ. ಈಗ ಮೆಟ್ರೊ ಪ್ರಯಾಣ ದರ ಹೆಚ್ಚಳದಿಂದ ಎಲ್ಲ ವರ್ಗದವರ ಮೇಲೆ ಪರಿಣಾಮ ಬೀರಲಿದೆ. ಸಾರ್ವಜನಿಕರು ಮೆಟ್ರೊ ಬಿಟ್ಟು ಸ್ವಂತ ವಾಹನಗಳ ಬಳಕೆ ಪ್ರಾರಂಭಿಸುತ್ತಿದ್ದಾರೆ. ಇದು ನಗರದಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಲು ಪ್ರಮುಖ ಕಾರಣವಾಗಲಿದೆ. ಮೆಟ್ರೊ ಪ್ರಯಾಣ ದರ ಇಳಿಕೆ ಮಾಡುವಂತೆ ಎಲ್ಲ ಪಕ್ಷಗಳ ನಾಯಕರು ಒತ್ತಡ ಹೇರಬೇಕು.

ಜಿ.ಎ. ಶವಾದ್, ಮಡಿವಾಳ



ಸಾರ್ವಜನಿಕರಿಗೆ ಸೇವೆ ನೀಡುವ ಉದ್ದೇಶದಿಂದ ಪ್ರಾರಂಭಿಸಿರುವ ಬಿಎಂಆರ್‌ಸಿಎಲ್ ಸಂಸ್ಥೆ ಇಂದು ಲಾಭ, ನಷ್ಟದ ಕುರಿತು ಲೆಕ್ಕ ಹಾಕುತ್ತಿದೆ. ಲಾಭ ನಷ್ಟದ ಲೆಕ್ಕವೇ ಹಾಕಬೇಕಿದ್ದರೆ ಇದೊಂದು ಉದ್ಯಮವನ್ನಾಗಿ ಮಾಡಬೇಕಿತ್ತು. ಅದನ್ನು ಬಿಟ್ಟು ಸಾರ್ವಜನಿಕರ ತೆರಿಗೆಯಲ್ಲಿ ದೊಡ್ಡ ಸಂಸ್ಥೆ ಕಟ್ಟಿ ಬೆಳೆಸಿ, ಅದರ ಸೇವೆ ಪಡೆಯುವ ಸಂದರ್ಭದಲ್ಲಿ ಏಕಾಏಕಿ ಪ್ರಯಾಣ ದರ ಏರಿಕೆ ಮಾಡಿರುವುದು ಖಂಡನೀಯ.

ಸಂತೋಷ್ ಕುಮಾರ್, ಟಿ. ದಾಸರಹಳ್ಳಿ

ಅಭಿಪ್ರಾಯ ಕಳುಹಿಸಿ ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ. ವಾಟ್ಸ್‌ಆ್ಯಪ್ ಸಂಖ್ಯೆ: 96060 38256

ಮೆಟ್ರೊ ಪ್ರಯಾಣಿಕರ ಸಂಘದಿಂದ ಪ್ರತಿಭಟನೆ

ಶ್ವೇತಪತ್ರ ಹೊರಡಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರಿಕೆ ಆಗಿರುವ 'ನಮ್ಮ ಮೆಟ್ರೊ' ಪ್ರಯಾಣ ದರವನ್ನು ತಕ್ಷಣವೇ ಇಳಿಸಬೇಕು ಎಂದು ಆಗ್ರಹಿಸಿ ಬೆಂಗಳೂರು ಮೆಟ್ರೊ ಪ್ರಯಾಣಿಕರ ಸಂಘದ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು.

ಪ್ರಯಾಣ ದರವನ್ನು ಮಿತಿಮೀರಿ ಏರಿಸಲಾಗಿದೆ. ಇದರಿಂದ ಮೆಟ್ರೊ ರೈಲಿನ ಪ್ರಯಾಣಿಕರು ಆಘಾತಕ್ಕೆ ಒಳಗಾಗಿದ್ದಾರೆ. ಕೂಡಲೇ ದರ ಏರಿಕೆಯನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಮೆಟ್ರೊ ಪ್ರಯಾಣಿಕರಲ್ಲಿ ಹೆಚ್ಚಿನವರು ಮಧ್ಯಮ ವರ್ಗ, ಕೆಳ ಮಧ್ಯಮ ವರ್ಗ, ಕಾರ್ಮಿಕರು ಮತ್ತು ವಿದ್ಯಾರ್ಥಿಗಳು. ಇವರಿಗೆ ದರ ಏರಿಕೆಯ ಬಿಸಿ ತಟ್ಟಿದೆ. ತಿಂಗಳಿಗೆ ಕನಿಷ್ಠ ₹3 ಸಾವಿರದಿಂದ ಗರಿಷ್ಠ ₹5 ಸಾವಿರದವರೆಗೆ ಮೆಟ್ರೊ ಪ್ರಯಾಣಕ್ಕೆ ವೆಚ್ಚವಾಗಲಿದೆ ಎಂದು ಪ್ರತಿಭಟನಕಾರರು ಆತಂಕ ವ್ಯಕ್ತಪಡಿಸಿದರು.

ದರ ಏರಿಕೆಯನ್ನು ಇಳಿಸದೇ ಇದ್ದರೆ ವಿದ್ಯಾರ್ಥಿಗಳು ಹಾಗೂ ಕಾರ್ಮಿಕರು ಪರ್ಯಾಯ ಸಾರಿಗೆ ವ್ಯವಸ್ಥೆಯತ್ತ ಮುಖ ಮಾಡಲಿದ್ದಾರೆ. ಮೆಟ್ರೊ ಪ್ರಯಾಣಿಕರಿಂದ ಬರುತ್ತಿರುವ ಆದಾಯ ಹಾಗೂ ಮುಂದಿನ ಯೋಜನೆ ಗಳಿಗೆ ಮಾಡುತ್ತಿರುವ ವೆಚ್ಚದ ಕುರಿತು ಬಿಎಂಆರ್‌ಸಿಎಲ್ ಶ್ವೇತಪತ್ರ ಹೊರಡಿಸಬೇಕು. ಅಲ್ಲಿಯವರೆಗೆ ಏರಿಕೆ ಮಾಡಿರುವ ದರವನ್ನು ತಡೆ ಹಿಡಿಯಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಬೆಂಗಳೂರು ಉಳಿಸಿ ಸಮಿತಿ'ಯ ವಿ.ಎನ್. ರಾಜಶೇಖರ್, ರವಿ ಮತ್ತು ಬೆಂಗಳೂರು ಮೆಟ್ರೊ ಪ್ರಯಾಣಿಕರ ಸಂಘಟನೆಯ ಪರವಾಗಿ ರಾಜೇಶ್ ಭಟ್, ಸುಧಾ ಕಾಮತ್, ಎಂ.ಎನ್. ಶ್ರೀರಾಮ್, ಜ್ಞಾನಮೂರ್ತಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ಮೆಟ್ರೊ ಪ್ರಯಾಣ ದರ ಏರಿಕೆ ಖಂಡಿಸಿ ಬೆಂಗಳೂರು ಮೆಟ್ರೊ ಪ್ರಯಾಣಿಕರ ಸಂಘದಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

112ಕ್ಕೆ ಕರೆ ಮಾಡಿದವರ ಹೆಸರು ಗೋಪ್ಯ

ಬೆಂಗಳೂರು: ಪೊಲೀಸ್ ಸಹಾಯವಾಣಿ 112ಕ್ಕೆ ಕರೆ ಮಾಡುವವರು ಇಚ್ಛಿಸಿದಲ್ಲಿ ಇನ್ನು ಮುಂದೆ ತಮ್ಮ ಗುರುತು ಗೋಪ್ಯವಾಗಿರಿಸಿಕೊಳ್ಳಬಹುದು ಎಂದು ನಗರ ಪೊಲೀಸರು ತಿಳಿಸಿದ್ದಾರೆ.

ಮಾಹಿತಿ ಹಕ್ಕು ಕಾಯ್ದೆ ಅಡಿ ಬ್ರೊಸ್ರೆಫ್ ಫೌಂಡೇಷನ್‌ನ ಸ್ಥಾಪಕ ದುಶ್ಯಂತ್ ದುಬೆ ಅವರು ಮಾಹಿತಿ ಕೋರಿ ಕಮಾಂಡ್ ಸೆಂಟರ್‌ನ ಡಿಸಿಪಿ ಅವರಿಗೆ ಅರ್ಜಿ ಸಲ್ಲಿಸಿದ್ದರು.

ನೆರವು ಕೋರಿ ಅಥವಾ ಅಪರಾಧ ಪ್ರಕರಣಗಳ ಬಗ್ಗೆ ಕರೆ ಮಾಡಿ ದೂರು ಕೊಡುವವರ ವಿವರಗಳು ಬಹಿರಂಗವಾಗುವ ಆತಂಕ ಕಾಡಿತ್ತು. ಆದರೆ, ಕರೆ ಮಾಡಿದ ವ್ಯಕ್ತಿಯು ಬಯಸಿದಲ್ಲಿ ಅವರ ಗುರುತಿನ ಮಾಹಿತಿಯನ್ನು ಗೋಪ್ಯವಾಗಿ ಇರಿಸಲಾಗುತ್ತದೆ ಎಂದು ಪೊಲೀಸ್ ಇಲಾಖೆ ಸ್ಪಷ್ಟಪಡಿಸಿದೆ.



ಶೋ ರೂಂ ಉದ್ಘಾಟನೆ

ನಗರದ ಡಿಕೆನ್ಸನ್ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಜೋಯಾಲುಕ್ಕಾಸ್‌ನ ಶೋ ರೂಂ ಅನ್ನು ಶಾಸಕ ರಿಜ್ವಾನ್ ಅರ್ಷದ್ ಅವರು ಶನಿವಾರ ಉದ್ಘಾಟಿಸಿದರು. ಆರ್‌ಬಿಎಎನ್‌ಎಂ ಎಜುಕೇಷನಲ್ ಚಾರಿಟೀಸ್‌ನ ಅಧ್ಯಕ್ಷ ನಂದಕುಮಾರ್ ಜೈರಾಮ್, ಜೋಯಾಲುಕ್ಕಾಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಥಾಮಸ್ ಮ್ಯಾಥ್ಯೂ, ಮುಖ್ಯ ಕಾರ್ಯಾಚರಣೆ ಅಧಿಕಾರಿ ಹೆನ್ರಿ ಜಾರ್ಜ್, ಆಭರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ನಿರ್ದೇಶಕ ಪಿ.ಡಿ. ಜೋಸ್, ಉಪ ಪ್ರಧಾನ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಕೃಷ್ಣನ್, ಪ್ರಾದೇಶಿಕ ವ್ಯವಸ್ಥಾಪಕ ಜಿನೇಶ್ ಉಪಸ್ಥಿತರಿದ್ದರು

ದೆಹಲಿ ರೈಲು ನಿಲ್ದಾಣದಲ್ಲಿ ಕಾಲ್ತುಳಿತ: 15 ಸಾವು

ನವದೆಹಲಿ (ರಾಯಿಟರ್ಸ್): ಇಲ್ಲಿನ ರೈಲು ನಿಲ್ದಾಣದಲ್ಲಿ ಶನಿವಾರ ರಾತ್ರಿ ಸಂಭವಿಸಿದ ಕಾಲ್ತುಳಿತದಲ್ಲಿ 10 ಮಹಿಳೆಯರು ಮತ್ತು ಮೂವರು ಮಕ್ಕಳು ಸೇರಿದಂತೆ 15 ಮಂದಿ ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ಲಾಟ್‌ಫಾರ್ಮ್ 14 ಮತ್ತು 15ರಿಂದ ಪ್ರಯಾಗರಾಜ್‌ಗೆ ತೆರಳಬೇಕಿದ್ದ ರೈಲುಗಳನ್ನು ರದ್ದುಗೊಳಿಸಿದ್ದರಿಂದ ಏಕಾಏಕಿ ನೂಕುನುಗ್ಗಲು ಉಂಟಾದದ್ದು ಕಾಲ್ತುಳಿತಕ್ಕೆ ಕಾರಣ ಎನ್ನಲಾಗಿದೆ.

ಘಟನೆಯಲ್ಲಿ ಹಲವಾರು ಮಂದಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸ್ ಮೂಲಗಳು ದೃಢಪಡಿಸಿವೆ.

12ರಿಂದ 15 ಗಾಯಾಳುಗಳನ್ನು ಎಲ್‌ಎನ್‌ಜೆಪಿ ಆಸ್ಪತ್ರೆಗೆ ದಾಖಲಿಸಲಾಗಿದೆ.

'ರೈಲ್ವೆ ಪೊಲೀಸರು ಮತ್ತು ದೆಹಲಿ ಪೊಲೀಸರು ನಿಲ್ದಾಣ ತಲುಪಿದ್ದಾರೆ. ಪರಿಸ್ಥಿತಿ ನಿಯಂತ್ರಣದಲ್ಲಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ' ಎಂದು ಭಾರತೀಯ ರೈಲ್ವೆಯು ತಿಳಿಸಿದೆ.



ದೆಹಲಿ ರೈಲು ನಿಲ್ದಾಣದಲ್ಲಿ ಶನಿವಾರ ರಾತ್ರಿ ನೂಕುನುಗ್ಗಲು ಉಂಟಾದ ದೃಶ್ಯ – ಪಿಟಿಐ ಚಿತ್ರ

'ಗ್ರಾ.ಪಂ, ವಾರ್ಡ್‌ಮಟ್ಟದಲ್ಲಿ ಜನಸ್ಪಂದನಾ ಸಭೆ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ನಾಲ್ಕು ದಶಕಗಳಿಂದ ಉಳುಮೆ ಮಾಡಿಕೊಂಡು ಜೀವನ ಸಾಗಿಸುತ್ತಿರುವ 1,500 ಬಡ ರೈತರಿಗೆ ಉಳುಮೆ ಚೀಟಿ ಸಿಕ್ಕಿಲ್ಲ. ಜಮೀನುಗಳಿಗೆ ಖಾತೆಯಾಗುತ್ತಿಲ್ಲ. ಊರಿಗೆ ಬಿಎಂಟಿಸಿ ಬಸ್ ಬರುತ್ತಿಲ್ಲ...

ಬೆಂಗಳೂರು ನಗರ ಜಿಲ್ಲಾಡಳಿತ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ, ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ಮತ್ತು ವಿವಿಧ ಇಲಾಖೆಗಳ ಸಹಯೋಗದಲ್ಲಿ ಚಿಕ್ಕನಹಳ್ಳಿಯಲ್ಲಿ ಆಯೋಜಿಸಿದ್ದ ಜನಸ್ಪಂದನಾ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಕೇಳಿ ಬಂದ ದೂರುಗಳಿವು.

ದೊಡ್ಡೇರಿಯ ಗ್ರಾಮ ಪಂಚಾಯಿತಿ ಸದಸ್ಯ ಉಮಾಶಂಕರ್ 'ಹಲವು ದಶಕಗಳಿಂದ ಉಳುಮೆ ಮಾಡಿಕೊಂಡು ಜೀವನ ಸಾಗಿಸುತ್ತಿರುವ ನೂರಾರು ಕುಟುಂಬಗಳಿಗೆ ಈ ಜಮೀನೊಂದೇ ಆಸರೆ. ತಾವರೆಕೆರೆ ಹೋಬಳಿ ವ್ಯಾಪ್ತಿಯ 1,800 ಕುಟುಂಬಗಳಿಗೆ ಉಳುಮೆ ಚೀಟಿ ಕೊಡಿಸಿ' ಎಂದು ಮನವಿ ಮಾಡಿದರು.

ದೂರುಗಳಿಗೆ ಪ್ರತಿಕ್ರಿಯಿಸಿದ ಶಾಸಕ ಎಸ್.ಟಿ. ಸೋಮಶೇಖರ್ ಅವರು,'ಮಾಜಿ ಶಾಸಕರು ಮತ್ತು ವಕೀಲರ ಕುಟುಂಬಕ್ಕೆ ತಲಾ 18 ಎಕರೆ ಜಮೀನು ಮಂಜೂರಾಗಿದೆ. ಅವರಿಗೆ ಸಾಗುವಳಿ ಚೀಟಿ ಸಿಕ್ಕದೆ. ಬಡವರು ಮನುಷ್ಯರಲ್ಲವೇ' ಎಂದು ಕಂದಾಯ ಅಧಿಕಾರಿಗಳನ್ನು ಪ್ರಶ್ನಿಸಿದರು.

'ಎಲ್ಲರಿಗೂ ನ್ಯಾಯ ಕೊಡಿಸಲು, ಸರ್ಕಾರದ ಸವಲತ್ತನ್ನು ಮನೆ ಬಾಗಿಲಿಗೆ ತಲುಪಿಸಲು ಗ್ರಾಮ ಪಂಚಾಯಿತಿ, ವಾರ್ಡ್ ಮಟ್ಟದಲ್ಲಿ ಜನಸ್ಪಂದನಾ ಕಾರ್ಯಕ್ರಮ ನಡೆಸುವುದಾಗಿ' ಅವರು ಭರವಸೆ ನೀಡಿದರು.

ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಎಚ್.ಶ್ರೀನಿವಾಸ್, ಉಪ ತಹಸಿಲ್ದಾರ್ ಕೆಂಪೇಗೌಡ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಬಿಂದು, ಹಾಪ್ ಕಾಮ್ಸ್ ನಿರ್ದೇಶಕ ಎಂ.ಜೈಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನೀಲವ್ವ ಅಂದಪ್ಪನ ಹಳ್ಳಿ ಮತ್ತಿತರರು ಹಾಜರಿದ್ದರು.

ಕಾರ್ಯಕ್ರಮದಲ್ಲಿ 595 ಕುಟುಂಬಗಳಿಗೆ ಹಕ್ಕುಪತ್ರ, ವೃದ್ಧಾಪ್ಯ, ಅಂಗವಿಕಲ, ವಿಧವಾ ವೇತನ, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು. ಇದರೊಂದಿಗೆ ಉಚಿತ ಆರೋಗ್ಯ ತಪಾಸಣೆ ಹಮ್ಮಿಕೊಳ್ಳಲಾಗಿತ್ತು. ಕೃಷಿಉಪಕರಣ ಸೇರಿದಂತೆ ವಿವಿಧ ಸವಲತ್ತುಗಳನ್ನು ಫಲಾನುಭವಿಗಳಿಗೆ ವಿತರಿಸಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷ ವಿ.ನಾಗರಾಜಯ್ಯ, ಉಪಾಧ್ಯಕ್ಷೆ ಸೇರಿ ಗ್ರಾಮ ಪಂಚಾಯಿತಿಯ ಹಲವು ಸದಸ್ಯರು ಸಭೆಗೆ ಗೈರಾಗಿದ್ದರು.



ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಬಿಂದು ಅವರು ಧಾನ್ಯಗಳಿಗೆ ಪೂಜೆ ಸಲ್ಲಿಸುವ ಮೂಲಕ ಜನಸ್ಪಂದನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು

ಶ್ರೀ ಶ್ರೀಮದ್
ಎ.ಸಿ.ಭಕ್ತಿವೇದಾಂತ ಸ್ವಾಮಿ ಶ್ರೀಲ ಪ್ರಭುಪಾದರು
ಇಸ್ಕಾನ್ ಮತ್ತು ವಿಶ್ವವ್ಯಾಪಿ ಹರೇ ಕೃಷ್ಣ ಆಂದೋಲನದ
ಸಂಸ್ಥಾಪಕ–ಆಚಾರ್ಯರು



ಶ್ರೀಲ ಪ್ರಭುಪಾದರು ತಮ್ಮ ಗುರು ಶ್ರೀ ಶ್ರೀಮದ್ ಭಕ್ತಿಸಿದ್ಧಾಂತ ಸರಸ್ವತಿ ಠಾಕುರರ ಆದೇಶವನ್ನು ಪಾಲಿಸಲು ತಮ್ಮ 70ರ ಇಳಿ ವಯಸ್ಸಿನಲ್ಲಿ ಅತ್ಯಂತ ಪ್ರಯಾಸಕರವಾದ ಪ್ರಯಾಣವನ್ನು ಕೈಗೊಂಡರು. ನ್ಯೂಯಾರ್ಕ್ ನಗರಕ್ಕೆ ಹೊರಟಿದ್ದ ಸರಕು ಸಾಗಣೆ ಹಡಗಿನಲ್ಲಿ ದೃಢ ಸಂಕಲ್ಪದಿಂದ ಹೊರಟರು. ಆಗ ಅವರ ಬಳಿ ಇದ್ದದ್ದು ಕೇವಲ 40 ರೂಪಾಯಿಗಳು ಮಾತ್ರ. ಅವರಿಗೆ ಯಾವುದೇ ಸಂಸ್ಥೆಯ ಅಥವಾ ಶ್ರೀಮಂತರ ಬೆಂಬಲವಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿಯೂ ಕೂಡ, ಅವರು 1966ರಲ್ಲಿ ಇಸ್ಕಾನ್ ಸ್ಥಾಪಿಸಿದರು. ಅದು ವಿಶ್ವವ್ಯಾಪಿ ಆಂದೋಲನವಾಗಿ ಬೆಳೆಯಿತು. ಮುಂದಿನ 11 ವರ್ಷಗಳಲ್ಲಿ ಶ್ರೀಲ ಪ್ರಭುಪಾದರು ಜಗತ್ತಿನಾದ್ಯಂತ 108 ಕೃಷ್ಣ ಮಂದಿರಗಳನ್ನು ಸ್ಥಾಪಿಸಿದರು, 70ಕ್ಕೂ ಹೆಚ್ಚು ಸಂಪುಟಗಳ ಆಧ್ಯಾತ್ಮಿಕ ಪುಸ್ತಕಗಳ ಕರ್ತೃವಾದರು. ಅವರು 1977ರಲ್ಲಿ ವೃಂದಾವನದಲ್ಲಿ ಮಹಾಸಮಾಧಿಸ್ತರಾದರು.

ಅವರ ಬದುಕು ಶ್ರದ್ಧೆ, ಸಮರ್ಪಣೆ, ಕರುಣೆ ಮತ್ತು ಸನಾತನ ಧರ್ಮಕ್ಕೆ, ವಿಶೇಷವಾಗಿ ಶ್ರೀ ಕೃಷ್ಣ ಭಕ್ತಿಗೆ ಅವರಲ್ಲಿದ್ದ ಬದ್ಧತೆಯು ಸ್ಫೂರ್ತಿದಾಯಕ.

ಮಹಾಕುಂಭ 2025

ಅತ್ಯಂತ ಪ್ರತಿಷ್ಠಿತ

ಅಖಿಲ ಭಾರತೀಯ ಅಖಾಡ ಪರಿಷತ್ತು

ಶ್ರೀ ಶ್ರೀಮದ್ ಓಂ ವಿಷ್ಣುಪಾದ 108

ಎ.ಸಿ.ಭಕ್ತಿವೇದಾಂತ ಸ್ವಾಮಿ

ಶ್ರೀಲ ಪ್ರಭುಪಾದ

(ಬ್ರಹ್ಮ–ಮಧ್ವ–ಗೌಡೀಯ ವೈಷ್ಣವ ಪರಂಪರೆಯ 32ನೆಯ ಆಚಾರ್ಯ)

ಅವರಿಗೆ

ಸನಾತನ ಧರ್ಮವನ್ನು ಹರಡಿದ, ವಿಶ್ವಾದ್ಯಂತ ಭಗವದ್ಗೀತೆಯ ಸಂದೇಶವನ್ನು ಹಂಚಿದ ಮತ್ತು ಜಾಗತಿಕವಾಗಿ ಹರಿನಾಮ ಸಂಕೀರ್ತನೆಯನ್ನು ಪ್ರಚುರ ಪಡಿಸಲು ನೀಡಿದ ಅಪೂರ್ವ ಕೊಡುಗೆಗಾಗಿ

ವಿಶ್ವ ಗುರು

ವಿಶೇಷ ಉಪಾಧಿಯನ್ನು ಸಂತರ ಸಮ್ಮುಖದಲ್ಲಿ ನೀಡಿ ಗೌರವಿಸಲಾಗಿದೆ

ಆಚಾರ್ಯ ಮಹಾಮಂಡಲೇಶ್ವರ
ಶ್ರೀ ಕೈಲಾಶಾನಂದ ಗಿರಿಜೀ ಮಹಾರಾಜ್
ನಿರಂಜನಿ ಅಖಾಡ


ಶ್ರೀ ಮಹಂತ್
ರವಿಂದ್ರ ಪುರಿಜೀ ಮಹಾರಾಜ್
ಅಧ್ಯಕ್ಷರು, ಅಖಿಲ ಭಾರತೀಯ ಅಖಾಡ ಪರಿಷತ್ತು


ಮತ್ತು ವಿವಿಧ ಅಖಾಡಗಳ ಪೂಜ್ಯ ಸಂತರ
ಪವಿತ್ರ ಉಪಸ್ಥಿತಿಯಲ್ಲಿ

ಫೆಬ್ರವರಿ 10, 2025 ರಂದು ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭದ ಸಂದರ್ಭದಲ್ಲಿ ಅರ್ಪಿಸಲಾಯಿತು.

ಅಧ್ಯಕ್ಷತೆ
ಶ್ರೀ ಮಧು ಪಂಡಿತ ದಾಸ
ಅಧ್ಯಕ್ಷರು–ಇಸ್ಕಾನ್ ಬೆಂಗಳೂರು, ಸ್ಥಾಪಕರು ಮತ್ತು ಅಧ್ಯಕ್ಷರು–ಅಕ್ಷಯ ಪಾತ್ರ ಪ್ರತಿಷ್ಠಾನ,
ಅಧ್ಯಕ್ಷರು–ವೃಂದಾವನ ಚಂದ್ರೋದಯ ಮಂದಿರ, ಅಧ್ಯಕ್ಷರು ಮತ್ತು ಮಾರ್ಗದರ್ಶಕರು–ಗ್ಲೋಬಲ್ ಹರೇ ಕೃಷ್ಣ ಮೂವ್‌ಮೆಂಟ್







ಇಸ್ಕಾನ್ ಬೆಂಗಳೂರಿನ ಶ್ರೀ ಮಧು ಪಂಡಿತ ದಾಸ ಮತ್ತು ಶ್ರೀ ಚಂಚಲಾಪತಿ ದಾಸ ಅವರು ಶ್ರೀಲ ಪ್ರಭುಪಾದರ ಪರವಾಗಿ ಆಚಾರ್ಯ ಮಹಾಮಂಡಲೇಶ್ವರ ಶ್ರೀ ಕೈಲಾಶಾನಂದ ಗಿರಿಜೀ ಮಹಾರಾಜ್ ಅವರಿಂದ ಅಭಿನಂದನಾ ಪತ್ರವನ್ನು ಸ್ವೀಕರಿಸಿದರು.

ಸ್ವತಂತ್ರ ಮತ್ತು ಸಂಬಂಧಿತ ಘಟಕಗಳು:

Srila Prabhupada's ISKCON BANGALORE

SRILA PRABHUPADA'S HARE KRISHNA MOVEMENT

Vrindavan Chandrodaya Mandir — THE RISING MOON OF VRINDAVAN

INDIA HERITAGE FOUNDATION — BAY AREA - NEW JERSEY - BOSTON DALLAS - LONDON

AKSHAYA PĀTRA™ — Unlimited food for education

ಟ್ರಸ್ಟ್‌ನ ಭಕ್ತರಿಂದ ಪ್ರಾಯೋಜಿತ ಜಾಹೀರಾತು

ಯುವಜನತೆಯ ಭವಿಷ್ಯಕ್ಕೆ ಕುತ್ತು • ಬಲೆಗೆ ಬೀಳದ ರೂವಾರಿಗಳು

ಡ್ರಗ್ಸ್: ಮೂಲವೇ ನಾಪತ್ತೆ



ಎಐ ಚಿತ್ರ: ಕಣಕಾಲಮಠ

• ಸಂತೋಷ ಜಿಗಳಿಕೊಪ್ಪ

ಹಾವೇರಿ: ಪ್ರಕರಣ 1: ಬೆಂಗಳೂರಿನ ರಾಮಮೂರ್ತಿನಗರದ ಮನೆಯೊಂದರ ಮೇಲೆ 2023ರ ಡಿಸೆಂಬರ್‌ನಲ್ಲಿ ದಾಳಿ ಮಾಡಿದ್ದ ಸಿಸಿಬಿ ಪೊಲೀಸರು, ನೈಜೀರಿಯಾದ ಲಿಯೋನಾರ್ಡ್ ಒಕ್ವುಡಿಲಿಯನ್ನು (44) ಬಂಧಿಸಿ, ₹ 21 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದರು. ಆತನಿಗೆ ಡ್ರಗ್ಸ್ ಪೂರೈಸಿದ್ದು ಯಾರು ಎಂಬ ಬಗ್ಗೆ ಸಣ್ಣ ಸುಳಿವು ಕೂಡ ಸಿಗಲಿಲ್ಲ.

ಪ್ರಕರಣ 2: ನೈಜೀರಿಯಾದ ಮಿಖಾಯಿಲ್ ಐಗ್ಬೆರೆ (35) ಮತ್ತು ಅಗ್ವು ಇಜೆಕೈಲ್ ಒಸಿತಾ (32) ಎಂಬುವರನ್ನು 2024ರ ನವೆಂಬರ್ 21ರಂದು ಬಂಧಿಸಿದ್ದ ಪೊಲೀಸರು, ₹ 3 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದರು. ಇವರಿಬ್ಬರಿಗೆ ಡ್ರಗ್ಸ್ ಪೂರೈಸಿದ್ದ ಪ್ರಮುಖ ಪೆಡ್ಲರ್ ಯಾರು ಎಂಬ ಮಾಹಿತಿ ಇನ್ನೂ ಗೊತ್ತಾಗಿಲ್ಲ.

ಪ್ರಕರಣ 3: ಸೋಲದೇವನಹಳ್ಳಿ ಬಳಿ ನೈಜೀರಿಯಾದ ಇಮಾನ್ಯುಯಲ್ ಕ್ವಾಸ್ಸೈ (32), ಚೈನಾಸ್ ಸೈಪ್ರಿಲನ್ ಒಕೊಯೊ (38) ಮತ್ತು ಕಾಲು ಚುಕ್ವಾನನ್ನು (40) 2024ರ ಫೆಬ್ರುವರಿಯಲ್ಲಿ ಬಂದಿಸಿದ್ದ ಪೊಲೀಸರು, ₹ 2.32 ಕೋಟಿ ಮೌಲ್ಯದ ಡ್ರಗ್ಸ್ ವಶಕ್ಕೆ ಪಡೆದಿದ್ದರು. ಈ ಪ್ರಕರಣದಲ್ಲೂ ಡ್ರಗ್ಸ್ ಮೂಲ ಇನ್ನೂ ನಿಗೂಢವಾಗಿ ಉಳಿದಿದೆ.

ಪ್ರಕರಣ 4: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೀನ್ಯಾದ ಅಜೆಂಗ್ ಓ ಕ್ಯಾರೋಲಿನ್ ಅಗೋಲಾ ಎಂಬ ಮಹಿಳೆಯನ್ನು ಬಂಧಿಸಿದ್ದ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಅಧಿಕಾರಿಗಳು, ₹ 12 ಕೋಟಿ ಮೌಲ್ಯದ ಹೈಗ್ರೇಡ್ ಕೊಕೇನ್ ವಶಕ್ಕೆ ಪಡೆದಿದ್ದರು. ಈ ಡ್ರಗ್ಸ್ ಎಲ್ಲಿಂದ ಬಂತು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಇವಷ್ಟೇ ಅಲ್ಲ, ರಾಜ್ಯದಲ್ಲಿ ದಾಖಲಾಗುತ್ತಿರುವ ಬಹುತೇಕ ಡ್ರಗ್ಸ್ ಪ್ರಕರಣಗಳಲ್ಲಿ ಮೂಲ ಪತ್ತೆಯೇ ಪೊಲೀಸರಿಗೆ ಸವಾಲು ಆಗಿದೆ. ಡ್ರಗ್ಸ್ ಎಂಬ ಹೆಮ್ಮರದ ಎಲೆ–ಕೊಂಬೆಗಳನ್ನು ಮಾತ್ರ ಪೊಲೀಸರು ಕತ್ತರಿಸಿದ್ದಾರೆ ಹೊರತು ಅದರ ಬುಡದವರೆಗೆ ತಲುಪಲು ಆಗಿಲ್ಲ. ಇದರಿಂದ, 'ಡ್ರಗ್ಸ್' ಮರದ ಬೇರು ಇನ್ನಷ್ಟು ಆಳ ಹೋಗುತ್ತಿದೆ. ಗಟ್ಟಿಯಾಗುತ್ತಿದೆ.

ನೈಸರ್ಗಿಕ ಹಾಗೂ ಸಿಂಥೆಟಿಕ್ ಡ್ರಗ್ಸ್ ತರಿಸಿ, ಮಾರುವ ಆರೋಪಿಗಳು ಮಾತ್ರ ಪೊಲೀಸರಿಗೆ ಸಿಕ್ಕಿಬೀಳುತ್ತಾರೆ. ಆದರೆ, ಡ್ರಗ್ಸ್ ಕೊಟ್ಟವರು ಮತ್ತು ತಯಾರಿಸಿದವರು ಯಾರು ಎಂಬುದನ್ನು ಪತ್ತೆ ಮಾಡಲು ಪೊಲೀಸರಿಗೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಕೆಲಸದ ಒತ್ತಡ, ಮಾನವ ಸಂಪನ್ಮೂಲ ಮತ್ತು ಆರ್ಥಿಕ ಕೊರತೆಯೂ ಕಾರಣ.

ಮುಂಬೈ, ಬೆಂಗಳೂರಿನಂತಹ ಮಹಾನಗರಿ ಗಳಿಗೆ ಸೀಮಿತವಾಗಿದ್ದ ಡ್ರಗ್ಸ್ ದಂಧೆ ಹಾವೇರಿ, ಹುಬ್ಬಳ್ಳಿ, ಬೆಳಗಾವಿ, ಮಂಗಳೂರು, ದಾವಣಗೆರೆ ಮುಂತಾದ ನಗರಗಳಿಗೂ ವ್ಯಾಪಿಸಿದೆ. ಡ್ರಗ್ಸ್ ವ್ಯಸನಿಗಳ ಸಂಖ್ಯೆಯೂ ಹೆಚ್ಚಿದೆ. ಎಷ್ಟೇ ಪ್ರಮಾಣದಲ್ಲಿ ಡ್ರಗ್ಸ್ ಜಪ್ತಿ ಮಾಡಿದರೂ, ಆರೋಪಿಗಳನ್ನು ಬಂಧಿಸಿದರೂ ದಂಧೆಯ ಮೂಲ ಪತ್ತೆ ಆಗುತ್ತಿಲ್ಲ. ಇದಕ್ಕೆ ಪೊಲೀಸರಲ್ಲೂ ಸ್ಪಷ್ಟ ಉತ್ತರವಿಲ್ಲ.

'ಡ್ರಗ್ಸ್ ಮಾರಾಟ ಮತ್ತು ಖರೀದಿ ಎಷ್ಟು ವ್ಯವಸ್ಥಿತವಾಗಿ ಕದ್ದು–ಮುಚ್ಚಿ ನಡೆಯುತ್ತದೆ ಎಂದರೆ, ಅದರ ಕುರಿತು ಕಿಂಚಿತ್ತೂ ಸುಳಿವು ಸಿಗುವುದಿಲ್ಲ. ಪ್ರತಿ ಬಾರಿಯೂ ಮಾರಾಟದ ಸ್ವರೂಪ ಬದಲಾಗುತ್ತದೆ. ಡ್ರಗ್ಸ್ ವ್ಯವಹಾರ ಕ್ಷಿಪ್ರವಾಗಿ ನಡೆಯುತ್ತದೆ. ಎಲ್ಲಿ, ಯಾವಾಗ ಮತ್ತು ಯಾರೆಲ್ಲ ಇಂಥ ಕೃತ್ಯಗಳಲ್ಲಿ ಭಾಗಿಯಾಗಿದ್ದಾರೆ ಎಂಬುದನ್ನು ಪತ್ತೆ ಮಾಡಲು ಆಗುತ್ತಿಲ್ಲ' ಎಂದು ಬೆಂಗಳೂರು ಸಿಸಿಬಿ ಹೆಚ್ಚುವರಿ ಕಮಿಷನರ್ ಚಂದ್ರಗುಪ್ತ 'ಪ್ರಜಾವಾಣಿ'ಗೆ ಹೇಳಿದರು.

'ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಜಿ.ಆರ್.ಫಾರ್ಮ್‌ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿ ಮೇಲೆ ದಾಳಿ ಮಾಡಲಾಗಿತ್ತು. ಸಿನಿಮಾ ನಟ–ನಟಿಯರು ಮತ್ತಿತರರು ಪಾರ್ಟಿಯಲ್ಲಿದ್ದರು. ಕೆಲವರು ಡ್ರಗ್ಸ್ ಸೇವಿಸಿದ್ದು ಪರೀಕ್ಷೆಯಿಂದ ದೃಢಪಟ್ಟಿತ್ತು. ಡ್ರಗ್ಸ್ ಮಾರಾಟಗಾರನನ್ನೂ ಬಂಧಿಸಲಾಗಿತ್ತು. ಆತ ನೀಡಿದ್ದ ಹೇಳಿಕೆ ಆಧರಿಸಿ ತನಿಖೆ ಮುಂದುವರಿಸಿದಾಗ, ಯಾವುದೇ ಸುಳಿವು ಸಿಗಲಿಲ್ಲ. ವಿಚಾರಣೆಯಲ್ಲಿ ಆತ ಹೇಳಿದ್ದು ಸುಳ್ಳು ಎಂಬುದು ತಿಳಿಯಿತು. ಈ ಪ್ರಕರಣದ ಮೂಲದ ಬಗ್ಗೆ ಇದುವರೆಗೂ ಸುಳಿವು ಸಿಕ್ಕಿಲ್ಲ' ಎಂದು ಅವರು ತಿಳಿಸಿದರು.

ವಿದೇಶಿಯರಿಂದ ದಂಧೆ: ಆಫ್ರಿಕಾ ಖಂಡದ ವಿವಿಧ ದೇಶಗಳಿಂದ ಉದ್ಯೋಗ ಮತ್ತು ಶಿಕ್ಷಣದ ನೆಪದಲ್ಲಿ ಬೆಂಗಳೂರಿಗೆ ಬರುವ ಹಲವರು, ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದಾರೆ. ಬಟ್ಟೆ ವ್ಯಾಪಾರದ ಸೋಗಿನಲ್ಲಿ ಸುತ್ತಾಡುವ ಇವರು, ಬಟ್ಟೆಗಳ ಜೊತೆಯಲ್ಲಿಯೇ ಸಿಂಥೆಟಿಕ್ ಡ್ರಗ್ಸ್ ಮಾರುತ್ತಾರೆ.

ಬೆಂಗಳೂರಿನ ಬಾಣಸವಾಡಿ, ಕಮ್ಮನಹಳ್ಳಿ, ರಾಮಮೂರ್ತಿ ನಗರ, ಕೆ.ಆರ್.ಪುರ ಮತ್ತು ಸುತ್ತಮುತ್ತಲ ಸ್ಥಳಗಳಲ್ಲಿ ಆಫ್ರಿಕಾ ಪ್ರಜೆಗಳು ಹೆಚ್ಚಿದ್ದಾರೆ. ಅವರಲ್ಲಿ ಬಹುತೇಕರು, ಮನೆ ಯಲ್ಲಿಯೇ ಸಿಂಥೆಟಿಕ್ ಡ್ರಗ್ಸ್ ತಯಾರಿಸುವಲ್ಲಿ ನಿಪುಣರು. ಇತ್ತೀಚೆಗೆ ಮನೆಯೊಂದರ ಮೇಲೆ ದಾಳಿ ನಡೆಸಿದಾಗ, ಡ್ರಗ್ಸ್ ತಯಾರಿಸುವ ಮಿನಿ ಪ್ರಯೋಗಾಲಯ ಪತ್ತೆಯಾಗಿತ್ತು.

ಹೆಚ್ಚು ಹಣ ನೀಡುವುದಾಗಿ ಮಾಲೀಕರಿಗೆ ಹೇಳಿ ಮನೆ ಅಥವಾ ಕೊಠಡಿ ಬಾಡಿಗೆ ಪಡೆಯುತ್ತಾರೆ. ಅದೇ ಮನೆಯಲ್ಲಿ ಡ್ರಗ್ಸ್ ಸಂಗ್ರಹಿಸಿ ಮಾರುತ್ತಾರೆ. ಹಲವು ಬಾರಿ ಜೈಲಿಗೆ ಹೋಗಿ ಬಂದರೂ ಅವರು ಡ್ರಗ್ಸ್ ಮಾರುವುದನ್ನು ಬಿಟ್ಟಿಲ್ಲ. ದೊಡ್ಡ ಪಾರ್ಟಿಗಳಿಗೂ ಅವರೇ ಡ್ರಗ್ಸ್ ಪೂರೈಸುತ್ತಾರೆ ಎನ್ನುವುದು ಪತ್ತೆಯಾಗಿದೆ.

ಸೆರೆಲ್ಯಾಕ್ ಪೊಟ್ಟಣಗಳಲ್ಲಿ ಬಚ್ಚಿಟ್ಟು ಮುಂಬೈನಿಂದ ಬೆಂಗಳೂರಿಗೆ ಸಾಗಿಸುತ್ತಿದ್ದ ಆರೋಪಿ ನೈಜೀರಿಯಾ ಚುಕ್ಕುದ್ದೀನ್, ಬೀದರ್ ತಾಲ್ಲೂಕಿನ ಭಂಗೂರ್ ಚೆಕ್‌ಪೋಸ್ಟ್ ಬಳಿ ಗಾಂಜಾ ಜೊತೆ ಸಿಕ್ಕಿಬಿದ್ದ ಒಡಿಶಾದ ನಾಲ್ವರು, ಗುಜರಾತ್‌ನ ಕರಾವಳಿ ಮೂಲಕ ಪಾಕಿಸ್ತಾನದ ಹಡಗಿನಲ್ಲಿ ಸಿಕ್ಕಿಬಿದ್ದ 13 ಆರೋಪಿಗಳ ಹಿನ್ನೆಲೆಯನ್ನು ಮಾತ್ರ ತನಿಖಾ ಸಂಸ್ಥೆಗಳು ತಿಳಿದುಕೊಂಡಿವೆ. ಅಂತರರಾಷ್ಟ್ರೀಯ ಮಟ್ಟದಿಂದ ಹಳ್ಳಿ ಹಳ್ಳಿಗೂ ಡ್ರಗ್ಸ್ ತಲುಪುತ್ತಿರುವ ಮಾರ್ಗ ಹಾಗೂ ಜಾಲದ ರೂವಾರಿಗಳ ಬಗ್ಗೆ ಮಾತ್ರ ಮಾಹಿತಿ ಸಿಕ್ಕಿಲ್ಲ. ಬೆಂಗಳೂರಿನಲ್ಲಿ ಜುಲೈ ತಿಂಗಳಲ್ಲಿ ಡ್ರಗ್ಸ್ ಪ್ರಕರಣದಲ್ಲಿ 54 ಮಂದಿಯನ್ನು ಬಂಧಿಸಿದ್ದ ಪೊಲೀಸರು, ಸಿಂಥೆಟಿಕ್ ಡ್ರಗ್ಸ್ ವಶಪಡಿಸಿಕೊಂಡಿದ್ದರು. ಆದರೆ, ನಿರೀಕ್ಷಿತ ಮಟ್ಟದಲ್ಲಿ ತನಿಖೆ ನಡೆಯಲಿಲ್ಲ. ಮಾಹಿತಿಯೂ ಸಿಗಲಿಲ್ಲ.

ಪಾಕಿಸ್ತಾನದಿಂದ ಭಾರತಕ್ಕೆ ಸಾಗಿಸುತ್ತಿದ್ದ ₹ 480 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದ ಭಾರತೀಯ ಕರಾವಳಿ ಕಾವಲು ಪಡೆ (ಐಸಿಜಿ), ಗುಜರಾತ್‌ನ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಹಾಗೂ ಎನ್‌ಸಿಬಿ ಅಧಿಕಾರಿಗಳು, ಪಾಕಿಸ್ತಾನದ ಆರು ಪ್ರಜೆಗಳನ್ನು ಬಂಧಿಸಿದ್ದರು. ಭಾರತದಲ್ಲಿ ವಿವಿಧ ರಾಜ್ಯಗಳಿಗೆ ಡ್ರಗ್ಸ್ ತಲುಪಿಸುವ ಜವಾಬ್ದಾರಿ ಇತ್ತೆಂದು ಆರೋಪಿಗಳು ಹೇಳಿದ್ದಾರೆ. ಆದರೆ, ಭಾರತದಲ್ಲಿ ಯಾರೆಲ್ಲ ಡ್ರಗ್ಸ್ ತರಿಸಿಕೊಳ್ಳುತ್ತಿದ್ದರು ಎಂಬುದರ ಬಗ್ಗೆ ಇದುವರೆಗೂ ಮಾಹಿತಿ ಲಭ್ಯವಾಗಿಲ್ಲ.

ಗುಜರಾತ್ ಹಾಗೂ ರಾಜಸ್ಥಾನದ 13 ಸ್ಥಳಗಳ ಮೇಲೆ ಎನ್‌ಸಿಬಿ ಹಾಗೂ ಎಟಿಎಸ್ ಅಧಿಕಾರಿಗಳು ಇತ್ತೀಚೆಗೆ ದಾಳಿ ಮಾಡಿದ್ದರು. ₹ 230 ಕೋಟಿ ಮೌಲ್ಯದ ಮೆಫೆಡ್ರೋನ್ ಡ್ರಗ್ಸ್ ಜಪ್ತಿ ಮಾಡಿದ್ದರು. ಇದನ್ನು ಸಿಂಥೆಟಿಕ್ ಡ್ರಗ್ಸ್ ಆಗಿ ದೇಶದ ವಿವಿಧ ರಾಜ್ಯಗಳಿಗೆ ಪೂರೈಸಲು ಆರೋಪಿಗಳು ಪ್ರಯತ್ನಿಸುತ್ತಿದ್ದರು ಎಂಬ ಮಾಹಿತಿ ಲಭ್ಯವಾಗಿತ್ತು. ಈ ಬಗ್ಗೆ ಎನ್‌ಸಿಬಿ ಅಧಿಕಾರಿಯೊಬ್ಬರನ್ನು ಮಾತನಾಡಿಸಿದಾಗ, 'ತನಿಖೆ ನಡೆಯುತ್ತಿದೆ. ಸದ್ಯಕ್ಕೆ ಯಾವುದೇ ಮಾಹಿತಿ ನೀಡಲಾಗದು' ಎಂದರು.

'2021ರ ಜನವರಿಯಲ್ಲಿ ಕೊರಿಯರ್ ಕೇಂದ್ರವೊಂದರ ಮೇಲೆ ದಾಳಿ ಮಾಡಲಾಗಿತ್ತು. ಅಡುಗೆ ಪಾತ್ರೆಗಳಲ್ಲಿ ಬಚ್ಚಿಟ್ಟಿದ್ದ ₹ 20 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿತ್ತು. ಕೊರಿಯರ್ ವಿಳಾಸ ಆಧರಿಸಿ ತಮಿಳುನಾಡಿನ ಎಂ. ಮೈದೀನ್ ಹಾಗೂ ಕೆ. ಮೇರನ್‌ನನ್ನು ಬಂಧಿಸಲಾಗಿತ್ತು. ಎಲ್ಲ ರೀತಿಯಲ್ಲಿ ವಿಚಾರಣೆ ನಡೆಸಿದರೂ, ಡ್ರಗ್ಸ್ ಕಳುಹಿಸಿದ್ದ ಮೂಲ ರೂವಾರಿ ಬಗ್ಗೆ ಆರೋಪಿಗಳು ಬಾಯ್ಬಿಡಲಿಲ್ಲ. ಇದರಲ್ಲಿ ಕೆಲ ವಿದೇಶಿ ಪ್ರಜೆಗಳು ಶಾಮೀಲಾಗಿರುವ ಮಾಹಿತಿಯಿತ್ತು. ಆದರೆ, ಯಾರು ಎಂಬುದು ಖಚಿತವಾಗಲಿಲ್ಲ' ಎಂದು ತಿಳಿಸಿದರು.

ಬೆಂಗಳೂರು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು, 'ಡ್ರಗ್ಸ್ ಪ್ರಕರಣದಲ್ಲಿ ನೈಜೀರಿಯಾದ ಹಲವರನ್ನು ಬಂಧಿಸಿದ್ದೇನೆ. ಇವರ್‍ಯಾರೂ ಡ್ರಗ್ಸ್ ದಂಧೆಯ ಮೂಲ ರೂವಾರಿ ಹೆಸರು ಬಾಯ್ಬಿಡಲಿಲ್ಲ. ವಿದೇಶದಿಂದ ಇವರು ಡ್ರಗ್ಸ್ ತರಿಸಿ ಮಾರುತ್ತಿದ್ದರು. ಆರೋಪಿಗಳ ಅಸಹಕಾರ, ಬೇರೆ ಕೆಲಸಗಳ ಒತ್ತಡ ಹಾಗೂ ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ತನಿಖೆ ನಡೆಸಲು ಸಾಧ್ಯವಾಗುತ್ತಿಲ್ಲ' ಎಂದು ಹೇಳಿದರು.

ಮೊಬೈಲ್ ಸಂದೇಶ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಪೆಡ್ಲರ್‌ಗಳು, ಡ್ರಗ್ಸ್ ವಹಿವಾಟು ನಡೆಸುತ್ತಿದ್ದಾರೆ. ಒಂದು ವೇಳೆ ಆರೋಪಿ ಸಿಕ್ಕಿಬಿದ್ದರೂ ಆತ ನಿಖರ ಮಾಹಿತಿ ನೀಡುವುದಿಲ್ಲ. ಹೀಗಾಗಿ, ಬಹುತೇಕ ಸಂದರ್ಭದಲ್ಲಿ ಸಿಕ್ಕ ಆರೋಪಿಯೊಬ್ಬನನ್ನೇ ಕೇಂದ್ರೀಕರಿಸಿ ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿ, ಕೈ ತೊಳೆದುಕೊಳ್ಳುತ್ತಾರೆ.

ನೂರಾರು ಕೋಟಿ ವ್ಯವಹಾರ: ಡ್ರಗ್ಸ್ ವ್ಯಸನಿಗಳು ನಶೆಯ ಜೊತೆ ಅಪರಾಧ ಕೃತ್ಯಗಳಲ್ಲೂ ಭಾಗಿ ಆಗುತ್ತಾರೆ. 'ಹಣ ಮತ್ತು ಡ್ರಗ್ಸ್'ಗಾಗಿ ಏನಾದರೂ ಮತ್ತು ಎಂಥದ್ದಾದರೂ ಕೆಲಸಕ್ಕೆ ಸಿದ್ಧ ಎಂಬ ಸ್ಥಿತಿಗೆ ತಲುಪುತ್ತಾರೆ. ನೈಸರ್ಗಿಕವಾಗಿ ಬೆಳೆಯುವ ಗಾಂಜಾದಿಂದ ಶುರುವಾದ 'ಡ್ರಗ್ಸ್' ಎಂಬ ಅಮಲೇರಿಸುವ ದಂಧೆ, ನೈಸರ್ಗಿಕ ಮತ್ತು ರಸಾಯನಿಕ ಅಂಶ ಮಿಶ್ರಣ ಮಾಡಿ ತಯಾರಿಸಿರುವ ಸಿಂಥೆಟಿಕ್ ಡ್ರಗ್ಸ್‌ವರೆಗೆ ಹೆಮ್ಮರವಾಗಿ ಬೆಳೆದಿದೆ. ವರ್ಷಕ್ಕೆ ನೂರಾರು ಕೋಟಿ ಮೌಲ್ಯದ ವಹಿವಾಟು ನಡೆಯುತ್ತದೆ.

ಉದ್ಯೋಗಿಗಳು, ವಿದ್ಯಾರ್ಥಿಗಳು ಮತ್ತು ಹೆಚ್ಚಿನ ಸಂಖ್ಯೆ ವಿದ್ಯಾವಂತರೇ ಡ್ರಗ್ಸ್ ವ್ಯಸನಿಗಳು. ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಕಲಬುರಗಿ ಮುಂತಾದ ಕಡೆ ಅಪರಾಧ ಕೃತ್ಯ ಎಸಗುವವರಲ್ಲಿ ಅಂಥವರ ಸಂಖ್ಯೆಯೇ ಹೆಚ್ಚಿದೆ.

ಗಾಂಜಾ ಮತ್ತು ಸಿಂಥೆಟಿಕ್ ಡ್ರಗ್ಸ್ ಮಿಶ್ರಿತ ಚಾಕೊಲೇಟ್, ಚ್ಯೂಯಿಂಗ್‌ಗಮ್, ಮಾತ್ರೆಗಳು, ಸಿಹಿ ಪದಾರ್ಥಗಳು ವ್ಯಸನಿಗಳಿಗೆ ಅಲ್ಲದೇ ಯುವಜನರು–ಮಕ್ಕಳಿಗೂ ಸುಲಭವಾಗಿ ಸಿಗುತ್ತಿದೆ. ಅಪರಾಧ ಚಟುವಟಿಕೆಗೂ ಪ್ರಚೋದಿಸುತ್ತಿದೆ. ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಯುವತಿಯ ಮೇಲೆ ಅತ್ಯಾಚಾರ ನಡೆಸಿದ್ದ ಆರೋಪಿ ಅಲ್ತಾಫ್, ಡ್ರಗ್ಸ್ ಸೇವಿಸಿ ಕೃತ್ಯ ಎಸಗಿದ್ದ. ಜೊತೆಗೆ, 'ಯುವತಿಗೂ ಡ್ರಗ್ಸ್ ನೀಡಿದ್ದ' ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ಮಧ್ಯಮವರ್ಗದವರನ್ನು ಅದರಲ್ಲೂ ಯುವ ಜನರನ್ನು ಪರಿಚಯಿಸಿಕೊಳ್ಳುವ ಡ್ರಗ್ಸ್ ಪೂರೈಕೆದಾರರು ಮತ್ತು ಮಾರಾಟಗಾರರು ನಿಧಾನವಾಗಿ ಸ್ನೇಹದಿಂದ ಸಲಿಗೆ ಬೆಳೆಸಿಕೊಳ್ಳುತ್ತಾರೆ. ಕ್ರಮೇಣ ಡ್ರಗ್ಸ್ ಸೇವನೆ ಚಟ ಹಚ್ಚುತ್ತಾರೆ. ಒಂದು ದಿನ ಅದರ ಸೇವನೆ ಬಿಟ್ಟರೂ ಚಡಪಡಿಸುವ ಸ್ಥಿತಿಗೆ ತರುತ್ತಾರೆ. 'ಹಣ ನೀಡಿದರಷ್ಟೇ ಸಿಗುತ್ತದೆ' ಎಂಬ ಸ್ಥಿತಿ ನಿರ್ಮಿಸುತ್ತಾರೆ. ನಂತರ ಅವರನ್ನೇ ಮದ್ಯವ್ಯಸನಿ ಆಗಿಸಿ, ಮಾರಾಟಗಾರರಾಗಿ ಪರಿವರ್ತಿಸುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಹೊಸ ಮಾರಾಟಗಾರರು ಪೊಲೀಸರ ಬಲೆಗೆ ಬೀಳುತ್ತಾರೆ. ಆದರೆ, ಅದೇ ದಂಧೆಯಲ್ಲಿ ಪಳಗಿದವರ ಚಹರೆ ಮತ್ತು ಹೆಸರಿನ ಸುಳಿವು ಸಿಗುವುದಿಲ್ಲ.

ಈ ಜಾಲ ಹೀಗೆ ವ್ಯಾಪಿಸಲು ಪೊಲೀಸರದ್ದು ಸೇರಿ ಕೆಲ ಇಲಾಖೆಗಳ 'ಕೈವಾಡ'ವೂ ಇದೆ. ಪೊಲೀಸ್, ಅರಣ್ಯ, ಅಬಕಾರಿ, ಸಾರಿಗೆ ಇಲಾಖೆಯ ಕೆಲ ಅಧಿಕಾರಿಗಳು ಮತ್ತು ಸಿಬ್ಬಂದಿ ಹಲವು ವರ್ಷಗಳಿಂದ ಒಂದೇ ಸ್ಥಳದಲ್ಲಿದ್ದಾರೆ. ವಾಹನ ಚಾಲಕರೂ ವರ್ಗಾವಣೆ ಆಗುವುದು ಕಡಿಮೆ. ಆ ಅಧಿಕಾರಿಗಳು ಮತ್ತು ಸಿಬ್ಬಂದಿ ಡ್ರಗ್ಸ್ ಜಾಲಕ್ಕೆ ಕೊಂಚ ನಿಕಟವಾಗಿದ್ದಾರೆ. 'ಕಾರ್ಯಾಚರಣೆಯ ಸುಳಿವು ಸಿಕ್ಕ ಕೂಡಲೇ ಆಯಾ ಇಲಾಖೆಯ ಕೆಲ ವಾಹನ ಚಾಲಕರೇ, ಆರೋಪಿಗಳಿಗೆ ಸುಳಿವು ನೀಡಿ, ಪರಾರಿಯಾಗಲು ಸಹಕರಿಸುತ್ತಾರೆ' ಎಂದು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಕೋಡ್ ಬಳಸಿ ಡ್ರಗ್ಸ್ ಮಾರಾಟ: ಡ್ರಗ್ಸ್ ಮಾರಾಟ ಕೂಡ ಸುಲಭದ ಸಂಗತಿಯಲ್ಲ. ಯಾರಾದರೂ ಹೊಸಬರು ನೇರವಾಗಿ ಬಂದು ಕೇಳಿದರೆ, ಡ್ರಗ್ಸ್ ಕೊಡುವುದಿಲ್ಲ. ಪರಿಚಯಸ್ಥರು ಅಥವಾ ಕಾಯಂ ಗ್ರಾಹಕರ ಮೂಲಕವೇ ಡ್ರಗ್ಸ್ ಮಾರಾಟಗಾರರನ್ನು ಸಂಪರ್ಕಿಸಬೇಕು. ಬಹುತೇಕ ಉಪ ಪೆಡ್ಲರ್‌ಗಳು ತಮ್ಮದೇ ಕೋಡ್ ಮತ್ತು ಸಂಜ್ಞೆ ಭಾಷೆಯಲ್ಲಿ ವ್ಯವಹರಿಸುತ್ತಾರೆ.

ಉಪ ಪೆಡ್ಲರ್‌ಗಳಿಗೆ ತಮ್ಮದೇ ಗ್ರಾಹಕರ ಬಳಗವಿದೆ. ಆರ್ಡರ್ ಬಂದ ಕೂಡಲೇ ಪೊಟ್ಟಣ ರೂಪದಲ್ಲಿ ಡ್ರಗ್ಸ್ ಇಟ್ಟು ತಲುಪಿಸಲಾಗುತ್ತದೆ. ಆಹಾರ ಪೂರೈಕೆ ಕಂಪನಿಯ ಕೆಲ ಡೆಲಿವರಿ ಬಾಯ್‌ಗಳೂ ಈ ಕೆಲಸದಲ್ಲಿ ತೊಡಗಿದ್ದಾರೆ. ಪೊಲೀಸ್ ಕಾರ್ಯಾಚರಣೆ ಸುಳಿವು ಸಿಕ್ಕರೆ, ಬೇರೆಯದ್ದೇ ತಂತ್ರಗಾರಿಕೆ ಅನುಸರಿಸುತ್ತಾರೆ. ನಿರ್ಜನ ಪ್ರದೇಶದಲ್ಲಿ ಡ್ರಗ್ಸ್ ಇಟ್ಟು, ಅದರ ಗೂಗಲ್ ಮ್ಯಾಪ್ ಲೊಕೇಶನ್ ವಾಟ್ಸ್‌ಆ್ಯಪ್‌ನಲ್ಲಿ ಕಳುಹಿಸುತ್ತಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕೆಲ ಡ್ರಗ್ಸ್ ಮಾರಾಟಗಾರರು, ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿ ಅದರ ಮೂಲಕ ಗ್ರಾಹಕರನ್ನು ಸಂಪರ್ಕಿಸಿ ಡ್ರಗ್ಸ್ ಮಾರುತ್ತಾರೆ. ಮನೆಗಳಿಗೆ ಕೊರಿಯರ್ ಮೂಲಕ ತಲುಪಿಸುತ್ತಾರೆ. ವಿದೇಶದಲ್ಲಿರುವ ಸಾಫ್ಟ್‌ವೇರ್ ಎಂಜಿನಿಯರ್ ನೆರವಿನಿಂದ ಆ್ಯಪ್ ಮಾಡಿಸುವ ಆರೋಪಿಗಳು, ಸಾಮಾಜಿಕ ಮಾಧ್ಯಮಗಳ ಮೂಲಕ ಅದನ್ನು ಪ್ರಚಾರ ಮಾಡುತ್ತಾರೆ. ಅದನ್ನು ಇನ್‌ಸ್ಟಾಲ್ ಮಾಡಿಕೊಳ್ಳುವ ಗ್ರಾಹಕರು, ಅದರ ಮೂಲಕವೇ ಆರ್ಡರ್ ನೀಡುತ್ತಾರೆ. ಇದಾದ ನಂತರ, ಗ್ರಾಹಕರಿಗೆ ಪಾರ್ಸೆಲ್ ತಲುಪುತ್ತದೆ.

'ಪೊಲೀಸರ ದಾಳಿ; ಗಾಂಜಾ ಮತ್ತು ಸಿಂಥೆಟಿಕ್ ಡ್ರಗ್ಸ್ ಜಪ್ತಿ' ಎಂಬ ಸುದ್ದಿ ಪತ್ರಿಕೆಗಳಲ್ಲಿ ಆಗಾಗ ಕಾಣಿಸಿಕೊಳ್ಳುತ್ತದೆ. ಇದರ ಜಾಡು ಹಿಡಿದು ಹೊರಟರೆ, ಡ್ರಗ್ಸ್ ಮಾರಾಟಗಾರರು ಸಿಕ್ಕಿಬೀಳುತ್ತಾರೆ ಹೊರತು ಅದನ್ನು ಪೂರೈಸಿದವರು ಮತ್ತು ತಯಾರಿಸಿದವರು ಸಿಕ್ಕಿಬೀಳಲ್ಲ. ಕೆಳ ಮಟ್ಟದ ಮಾರಾಟಗಾರರನ್ನು ಹಿಡಿಯುವ ಪೊಲೀಸರಿಗೆ, ಜಾಲವನ್ನು ಪತ್ತೆ ಮಾಡಿ ಬುಡ ಸಮೇತ ಕೀಳಲು ಸಾಧ್ಯವಾಗುತ್ತಿಲ್ಲ.

ಪೂರಕ ಮಾಹಿತಿ: ಮಲ್ಲಿಕಾರ್ಜುನ ನಾಲವಾರ, ಪ್ರವೀಣ್ ಕುಮಾರ್ ಪಿ.ವಿ, ನವೀನ್ ಕುಮಾರ್, ಆರ್. ಚಂದ್ರಶೇಖರ್, ಸಂತೋಷ ಚಿನಗುಡಿ, ನಾಗರಾಜ್ ಬಿ.ಎನ್

ಪರಿಕಲ್ಪನೆ: **ಯತೀಶ್ ಕುಮಾರ್ ಜಿ.ಡಿ.**

ಪ್ರತಿಷ್ಠಿತರ ಪಾರ್ಟಿಗಳಿಗೆ ಸಿಂಥೆಟಿಕ್ ಡ್ರಗ್ಸ್

ರಾಸಾಯನಿಕ ಅಂಶಗಳಿಂದ ಕೂಡಿದ ಸಿಂಥೆಟಿಕ್ ಡ್ರಗ್ಸ್‌ಗೆ ಹೆಚ್ಚು ಬೇಡಿಕೆ ಇರುವ ಕಾರಣ ವಿದೇಶದಿಂದ ಭಾರತಕ್ಕೆ ಹಡಗುಗಳ ಮೂಲಕ ರವಾನೆಯಾಗುತ್ತದೆ. ಮೆಥಾಂಫೆಟಮೈನ್, ಆ್ಯಂಫೆಟಮೈನ್, ಎಂಡಿಎಂಎ, ಕೆಟಾಮಿನ್, ಸೂಡೊ ಎಫೆಡ್ರೈನ್, ಟ್ರಮಡೋಲ್, ಡಯಾಝೆಫಮ್, ಆಲ್ಪ್ರಝೋಲಮ್, ಕ್ಲೋನಾಝೆಫಮ್, ಫೆನ್ಸೆಡೈಲ್ ಸಿರಪ್ ಹಾಗೂ ಇತರೆ ಸಿಂಥೆಟಿಕ್ ಡ್ರಗ್ಸ್ ಸೇವಿಸುತ್ತಾರೆ.

ಸಿಂಥೆಟಿಕ್ ಡ್ರಗ್ಸ್ ಗುರುತಿಸುವುದು ಕಷ್ಟ. ಡ್ರಗ್ಸ್ ನೆಕ್ಕಿ ನೋಡಿದಾಗ ಮಾತ್ರ ಅದರ ಅಸಲಿಯತ್ತು ಗೊತ್ತಾಗುತ್ತದೆ. ಡಾರ್ಕ್ ವೆಬ್, ಮೊಬೈಲ್ ಆ್ಯಪ್ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಪೆಡ್ಲರ್‌ಗಳನ್ನು ಸಂಪರ್ಕಿಸುವ ರಾಜ್ಯದ ಉಪ ಪೆಡ್ಲರ್‌ಗಳು–ಗ್ರಾಹಕರು, ಡ್ರಗ್ಸ್ ಆರ್ಡರ್ ನೀಡುತ್ತಾರೆ. ಕ್ರಿಪ್ಟೊ ಕರೆನ್ಸಿ ಮೂಲಕ ಹಣ ಪಾವತಿಸುತ್ತಾರೆ. ಯಾರಿಗೂ ತಿಳಿಯದಂತೆ ಆಟಿಕೆ ವಸ್ತು, ಬಟ್ಟೆಗಳು, ಒಳ ಉಡುಪುಗಳು, ವೈದ್ಯಕೀಯ ಉಪಕರಣಗಳಲ್ಲಿ ಡ್ರಗ್ಸ್ ಬಚ್ಚಿಟ್ಟು ಪಾರ್ಸಲ್ ಮಾಡಲಾಗುತ್ತದೆ.

> ಮಾದಕ ವ್ಯಸನಿಯಾದವರು ಬೇಗನೇ ಖಿನ್ನತೆಗೆ ಒಳಗಾಗುತ್ತಾರೆ. ತಮ್ಮ ಜೀವನವೇ ಮುಗಿಯಿತು ಎಂಬ ಭಾವನೆ ಅವರಲ್ಲಿ ಮೂಡುತ್ತದೆ. ಶ್ರದ್ಧೆ, ಆತ್ಮವಿಶ್ವಾಸ ರೂಢಿಸಿಕೊಂಡು ಅವರು ಚಿಕಿತ್ಸೆ ಪಡೆಯಬಹುದು
>
> **ಡಾ. ಆದಿತ್ಯ ಪಾಂಡುರಂಗಿ,** ಮನಶಾಸ್ತ್ರಜ್ಞ

> ಡ್ರಗ್ಸ್ ಮಾರಾಟ ಜಾಲ ವ್ಯಾಪಕವಾಗಿದ್ದು, ವಿದ್ಯಾರ್ಥಿಗಳನ್ನು ವ್ಯಸನಿಗಳಾಗಿ ಮಾಡಲಾಗುತ್ತಿದೆ. ಕೆಟ್ಟ ಹೆಸರು ಬರುತ್ತದೆಂದು ತಿಳಿದು, ಶಿಕ್ಷಣ ಸಂಸ್ಥೆಗಳು ವ್ಯಸನಿ ವಿದ್ಯಾರ್ಥಿಗಳ ಬಗ್ಗೆ ಮಾಹಿತಿ ನೀಡುತ್ತಿಲ್ಲ
>
> **ಸಂದೇಶ್ ಕುಮಾರ್,** ಮೈಸೂರು ಸಿಸಿಬಿ ಎಸಿಪಿ


> ಬೆಳಗಾವಿಯಲ್ಲಿ ಮಾದಕ ವಸ್ತುಗಳ ಮಾರಾಟದ ಮೇಲೆ ನಿಗಾ ಇಡಲಾಗಿದೆ. ಕಾಲೇಜು ಆಡಳಿತ ಮಂಡಳಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅರಿವು ಮೂಡಿಸಲಾಗುವುದು
>
> **ಯಡಾ ಮಾರ್ಟಿನ್ ಮಾರ್ಬನ್ಯಾಂಗ್,** ಪೊಲೀಸ್ ಕಮಿಷನರ್, ಬೆಳಗಾವಿ

> ಡ್ರಗ್ಸ್ ದಂಧೆಯಲ್ಲಿ ರಾಜಸ್ಥಾನ, ಗುಜರಾತ್‌ನ ಕೆಲವರು ಶಾಮೀಲಾಗಿದ್ದಾರೆ. ಅಲ್ಲಲ್ಲಿ ಕೆಲಸ ಮಾಡುವ ಅವರು, ತಮ್ಮ ರಾಜ್ಯದ ವಿದ್ಯಾರ್ಥಿಗಳು, ವ್ಯಕ್ತಿಗಳ ಮೂಲಕ ವಹಿವಾಟು ನಡೆಸುತ್ತಾರೆ
>
> **ಎನ್. ಶಶಿಕುಮಾರ್,** ಪೊಲೀಸ್ ಕಮಿಷನರ್, ಹುಬ್ಬಳ್ಳಿ–ಧಾರವಾಡ

> ಮಾದಕ ವಸ್ತುಗಳನ್ನು ಬಳಸುವವರ ವಿರುದ್ಧ ಕ್ರಮ ಕೈಗೊಳ್ಳುವುದರ ಜೊತೆಗೆ, ಅವುಗಳ ಮೂಲ ಪತ್ತೆ ಮಾಡಬೇಕು. ಈ ವಿಷಯದಲ್ಲಿ ಪೊಲೀಸ್ ಇಲಾಖೆ ಸಂಪೂರ್ಣ ವಿಫಲವಾಗಿದೆ
>
> **ವಿಜಯಲಕ್ಷ್ಮಿ ಧಾರವಾಡಕರ್,** ಅಧ್ಯಕ್ಷೆ, ಭ್ರಷ್ಟಾಚಾರ ನಿರ್ಮೂಲನ ಮತ್ತು ಮಾನವ ಹಕ್ಕುಗಳ ವಿಂಗ್

> ವಿದ್ಯಾರ್ಥಿಗಳ ರಕ್ತ ಪರೀಕ್ಷೆ ನಡೆಸುತ್ತೇವೆ. ಡ್ರಗ್ಸ್ ಇರುವುದು ದೃಢಪಟ್ಟರೆ, ಶಿಕ್ಷಣ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ವ್ಯಸನಿ ವಿದ್ಯಾರ್ಥಿಗಳ ಆಪ್ತ ಸಮಾಲೋಚನೆ ನಡೆಯುತ್ತದೆ
>
> **ಡಾ. ಅರುಣ್ ಕೆ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಉಡುಪಿ

ಮಾದಕ ವಸ್ತುಗಳು ಹಾಗೂ ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ (ಎನ್‌ಡಿಪಿಎಸ್) ಪ್ರಕರಣಗಳು



(ರಾಜ್ಯ ಪೊಲೀಸ್ ಇಲಾಖೆ ಮಾಹಿತಿ)



ಪೊಲೀಸರು ಜಪ್ತಿ ಮಾಡಿದ ಸಿಂಥೆಟಿಕ್ ಡ್ರಗ್ಸ್ ತಯಾರಿಸಲು ಬಳಸುತ್ತಿದ್ದ ಉಪಕರಣಗಳು

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 16-2-2000

• **'ಆಂಧ್ರ ನೀರು ಬಳಕೆಯಿಂದ ಸಮಸ್ಯೆ ಆರಂಭ'**

ನವದೆಹಲಿ, ಫೆ.15– ಕೃಷ್ಣಾ ಜಲವಿವಾದಗಳ ನ್ಯಾಯಮಂಡಳಿಯು ಮೂರು ರಾಜ್ಯಗಳಿಗೂ ನೀರು ಹಂಚಿಕೆ ಮಾಡಿ, ಸ್ಕೀಂ 'ಎ' ಜಾರಿಗೆ ತಂದರೂ, ಮತ್ತೆ ಸಮಸ್ಯೆ ಆರಂಭವಾದದ್ದು ತೆಲುಗು–ಗಂಗಾ ಯೋಜನೆಯಿಂದ ಆಂಧ್ರ ಪ್ರದೇಶವು ನೀರಾವರಿಗಾಗಿ ನೀರು ಬಳಸಲು ಆರಂಭಿಸಿದ್ದರಿಂದ ಎಂದು ಕೇಂದ್ರ ಸರ್ಕಾರ ಇಂದು ಸಮಸ್ಯೆಯ ಮೂಲವನ್ನು ಬಿಚ್ಚಿಟ್ಟಿತು. ಈ ಬಗ್ಗೆ, ಕರ್ನಾಟಕದ ದಾವೆಯ ಮೇಲೆ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್‌ನ ನ್ಯಾ. ಮಜ್ಮುದಾರ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ಮುಂದೆ ಸಾಲಿಸಿಟರ್ ಜನರಲ್ ಹರೀಶ್ ಸಾಳ್ವೆ ಕೇಂದ್ರದ ಪರವಾಗಿ ವಾದ ಮಂಡಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 16-2-1975

• **ಕಾವೇರಿ ನೀರು ಹಂಚಿಕೆ: ರಾಜ್ಯದಿಂದ ಹೊಸ ಕರಡು ಒಪ್ಪಂದ ಸಲ್ಲಿಕೆ**

ನವದೆಹಲಿ, ಫೆ. 15– ಕಾವೇರಿ ನೀರು ಹಂಚಿಕೆ ಕುರಿತ ಹೊಸ ಕರಡು ಒಪ್ಪಂದವೊಂದನ್ನು ಕರ್ನಾಟಕ ಇಂದು ಕೇಂದ್ರಕ್ಕೆ ಸಲ್ಲಿಸಿತೆಂದು ಗೊತ್ತಾಗಿದೆ.

ಕೇರಳವೂ ಹೊಸ ಕರಡು ಒಪ್ಪಂದವನ್ನು ಸಲ್ಲಿಸಿತೆಂದು ತಿಳಿದು ಬಂದಿದೆ.

ದೀರ್ಘ ಕಾಲದಿಂದ ಇತ್ಯರ್ಥವಾಗದೆ ಉಳಿದಿರುವ ಕಾವೇರಿ ನೀರು ಹಂಚಿಕೆ ಕುರಿತ ವಿವಾದವನ್ನು ಚರ್ಚಿಸಲು ಕರ್ನಾಟಕ, ತಮಿಳುನಾಡು ಮತ್ತು ಕೇರಳ ಮುಖ್ಯಮಂತ್ರಿಗಳು ಇಂದು ಇಲ್ಲಿ ಸಭೆ ಸೇರಿದ್ದರು. ಕೇಂದ್ರ ಕೃಷಿ ಹಾಗೂ ನೀರಾವರಿ ಸಚಿವ ಜಗಜೀವನರಾಂ ಅವರು ಅಧ್ಯಕ್ಷತೆ ವಹಿಸಿದ್ದರು. ಈ ಬಗ್ಗೆ 5 ಗಂಟೆಗಳ ಕಾಲ ನಡೆದ ಚರ್ಚೆ ಅಪೂರ್ಣವಾಗಿತ್ತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಫೆಬ್ರುವರಿ 16, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಚತುರ್ಥಿ ಗಂ. 26-16 ನಕ್ಷತ್ರ: ಹಸ್ತ ಗಂ. 28-31 ಯೋಗ: ಧೃತಿ ಗಂ. 08-06 ಕರಣ: ಬವ ಗಂ. 13-02, ಕುಂಭ ಮಾಸದ 04 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 4.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-56 ಸೂರ್ಯಾಸ್ತ: 06-33
ಮುಸ್ಲಿಂ ದಿನಾಂಕ: 17 ಶಬನ್
ದಿನ ವಿಶೇಷ: ಸೆಪ್ತುಗೇಸಿಮಾ ಭಾನುವಾರ (ಕ್ರಿಶ್ಚಿಯನ್) **ಅದೃಷ್ಟ ಸಂಖ್ಯೆ:** 2, 10

ಮೇಷ: ಕೌಟುಂಬಿಕ ಸಮಸ್ಯೆಗಳಿಗೆ ಹಿಂದೆ ಮುಂದೆ ಯೋಚಿಸದೆ, ಏಕಾಏಕಿ ಕೋರ್ಟ್ ಮೊರೆ ಹೋಗುವ ಬದಲು, ಹಿರಿಯರ ಮಧ್ಯಸ್ಥಿಕೆಯಲ್ಲಿ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಿ.

ವೃಷಭ: ಬದಲಾದ ದಿನಚರಿ ಹಾಗೂ ಅನವಶ್ಯಕ ಮಾತಿನಿಂದ ಉದ್ವೇಗ ಉಂಟಾಗಬಹುದು. ಯೋಜನೆಗಳು ಕಾರ್ಯಗತಗೊಳ್ಳಲು ಹೆಚ್ಚಿನ ಪ್ರಯತ್ನ ಅಗತ್ಯ. ಕುಟುಂಬದಲ್ಲಿ ಹಿತಕರ ವಾತಾವರಣ ನಿರ್ಮಾಣವಾಗಲಿದೆ.

ಮಿಥುನ: ಮಕ್ಕಳ ವಿದ್ಯಾಭ್ಯಾಸ ಅಥವಾ ಅವರ ಆಕಾಂಕ್ಷೆಯನ್ನು ಈಡೇರಿಸಲು ಹೆಚ್ಚಿನ ಹಣ ಹೊಂದಿಸಬೇಕಾಗುತ್ತದೆ. ಗೃಹ ಖರೀದಿ ಅಥವಾ ಗೃಹ ನಿರ್ಮಾಣದಂತಹ ಕಾರ್ಯಗಳನ್ನು ಮುಂದೂಡುವುದು ಉತ್ತಮ.

ಕರ್ಕಾಟಕ: ಲೇವಾದೇವಿ ವ್ಯವಹಾರದಲ್ಲಿ ಸಮಸ್ಯೆಗಳು ತಲೆದೋರಿದರೆ, ದುರ್ಗಾದೇವಿಯ ಆರಾಧನೆಯಿಂದ ಬಗೆಹರಿಯಲಿವೆ. ನಿಮ್ಮ ರಾಜಕೀಯ ಕ್ಷೇತ್ರದಲ್ಲಿ ಜನಪ್ರಿಯತೆ ವೃದ್ಧಿಸಿಕೊಳ್ಳಲು ಹೆಚ್ಚಿನ ಪ್ರಯತ್ನ ಅನಿವಾರ್ಯ.

ಸಿಂಹ: ಹೋಟೆಲ್ ಅಥವಾ ಬೇಕರಿ ಉದ್ಯಮದವರಿಗೆ ವ್ಯಾಪಾರದಲ್ಲಿ ಹಿನ್ನಡೆ ಉಂಟಾಗಬಹುದು. ಈ ಸಮಸ್ಯೆ ದೀರ್ಘಕಾಲದ್ದಾದರೆ, ಅಂಗಡಿಯ ಜಾಗ ಬದಲಾವಣೆ ಮಾಡುವ ಮೂಲಕ ಬಗೆಹರಿಸಿಕೊಳ್ಳಬಹುದು.

ಕನ್ಯಾ: ಸುಖ-ದುಃಖ, ಲಾಭ-ನಷ್ಟಗಳೆರಡು ಸಮಾನವಾಗಿದ್ದರೂ ಸಜ್ಜನರ ಸಹಕಾರದಿಂದ ನಿಮ್ಮಲ್ಲಿ ಸುಧಾರಣೆ ಕಂಡು ಬರಲಿದೆ. ಆಹಾರ ಪದ್ಧತಿಯನ್ನು ಬದಲಿಸಿಕೊಂಡಲ್ಲಿ ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.

ತುಲಾ: ಕುಟುಂಬದ ಅಭಿವೃದ್ಧಿಯಿಂದ ಸಂತೋಷ ಹಾಗೂ ನೆಮ್ಮದಿ ಸಿಗಲಿದೆ. ಸಂಘ–ಸಂಸ್ಥೆಗಳಿಂದ ಮನ್ನಣೆ ಹಾಗೂ ಸನ್ಮಾನಗಳನ್ನು ಪಡೆಯುವಂತಾಗ ಬಹುದು. ಷೇರು ವ್ಯವಹಾರದಲ್ಲಿ ಹೆಚ್ಚು ಲಾಭ ಸಿಗಲಿದೆ.

ವೃಶ್ಚಿಕ: ಯಾವುದೇ ವಿಚಾರದಲ್ಲಿಯೂ ಆತುರ ತೋರದೆ, ಸಮಾಧಾನದಿಂದ ವರ್ತಿಸುವುದು ಉತ್ತಮ. ಕಾಲಕಳೆದಂತೆ ಅರಿವು–ಅನುಭವ ಹೆಚ್ಚಾಗಿ ನಿಮ್ಮ ಅಭಿಪ್ರಾಯ ಬದಲಾಗುವ ಸಾಧ್ಯತೆ ಇದೆ.

ಧನು: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ಅಥವಾ ಮಿತ್ರರ ಸಲಹೆಯ ಮೇರೆಗೆ ತೀರ್ಮಾನ ಕೈಗೊಳ್ಳುವುದು ಉತ್ತಮ. ಮಾನಸಿಕ ಯಾತನೆಯನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಮುಕ್ತವಾಗಿ ಮಾತನಾಡುವಿರಿ.

ಮಕರ: ಈ ಹಿಂದೆ ಕೈಗೊಂಡ ನಿರ್ಧಾರಗಳಲ್ಲಿ ಕೆಲ ಮಾರ್ಪಾಟುಗಳನ್ನು ಮಾಡಿಕೊಂಡರೆ, ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಲಾಭ ಸಿಗಲಿದೆ. ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮದಿಂದ ಶುಭಫಲ ಸಿಗಲಿದೆ.

ಕುಂಭ: ಅಧಿಕ ಸಿಟ್ಟು ಅಥವಾ ಯೋಚನಾ ರಹಿತ ನಿರ್ಧಾರಗಳು ಏಕಾಂಗಿತನಕ್ಕೆ ಕಾರಣವಾಗಲಿದ್ದು, ಜಾಗ್ರತೆವಹಿಸಿ. ಪ್ರೀತಿಪಾತ್ರರೊಂದಿಗೆ ಮುಕ್ತವಾಗಿ ಚರ್ಚಿಸ ಬೇಕೆಂದೆನಿಸುವುದು. ಸಂಸಾರ ನಿರ್ವಹಣೆಗೆ ಅಧಿಕ ಹಣ ವ್ಯಯಿಸುವಿರಿ.


ಮೀನ: ಶತ್ರುಗಳಿಂದ ಅಡೆತಡೆ ಹಾಗೂ ಆತಂಕಕಾರಿ ವಿಚಾರಗಳು ಎದುರಾಗಲಿವೆ. ನಿಮ್ಮಿಂದ ಪ್ರಯೋಜನ ಪಡೆದ ವ್ಯಕ್ತಿಗಳು ನಿಮ್ಮನ್ನು ದೂಷಿಸುವರು. ಹೊಸ ಉದ್ಯೋಗದ ಬಗ್ಗೆ ಭಯ ಬೇಡ.

ಪದಬಂಧ 5955

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಾಪದ ಹೊತ್ತಿನಲ್ಲಿ ತೋರಿದ ಶೌರ್ಯ (3)
3.ಸಂದೇಹ ತೋರಿದವನ ಮೈ! (2)
6.ತಕ್ಕಡಿ ಹಿಡಿದಿರುವುದಕ್ಕೆ ಬಂದಿತೇ ಈ ನವೆ (3)
8.ಹಿತ್ತಲ ಬಳಿ ಒಣ ಹಾಕಿದ ತೆಳುವಾದ ಸೀರೆ (3)
9.ತುಪ್ಪ ಬಡಿಸುವ ಸಣ್ಣ ಸೌಟು (2)
10.ನವ ಬಾಳಿದು (5)
11.ಗುರಿ ಅಥವಾ ಲಕ್ಷ್ಯ (2)
13.ಕಟಕಿಯಾಡುವವಳ ಮನೆಯ ವಾತಾಯನ (3)
14.ರಾಮನನ್ನು ಜೊತೆಯಲ್ಲಿಯೇ ಜೋಡಿಸಿಕೊಂಡಿದ್ದಾನೆ ಈ ನೀಚ! (3)
16.ವಸ್ತುಗಳನ್ನಿಡುವ ತಗಡಿನ ಪೆಟ್ಟಿಗೆ (2)
17.ದಿನವಿಡೀ ವಾದಿಸಿದ್ದು ಈ ಮಂತ್ರಿಯೇ! (3)

ಮೇಲಿಂದ ಕೆಳಕ್ಕೆ
1.ದೇಶದ ಪ್ರಗತಿಗೆ ವಿರುದ್ಧವಾದುದು (4)
2.ಪದ ಹೇಳಿದ್ದಕ್ಕೇ ಸಿಕ್ಕಿದ್ದು ಈ ಮೆಡಲ್ಲು (3)
4.ಮಾಲನ್ನೇ ಕದ್ದಿಹನಲ್ಲಾ ಭಾರ ಹೊರುವ ಈ ಕೂಲಿಯಾಳು (3)
5.ಪರಾಕು ಹೇಳಿದ್ದಕ್ಕೇ ಈ ಕಪಾಳಮೋಕ್ಷ (4)
7.ತರಲೆಯೇ ಬರೆದಿದ್ದು ಈ ಶೀರ್ಷಿಕೆ! (5)
10.ಉದರದಿಂದಲೇ ಬಂದಿರುವುದು ಈರ್ಷೆ (4)
12.ಅದ್ಯಾವುದೋ ಜಮಾನದ ಒಡೆಯನಿವನು (4)
13.ಬಯ್ದು ಬಿಡಿ! ಈತನಿಗೆ ಏನೂ ಕೇಳಿಸದು (3)
15.ಬಿಡದಿಯ ಹತ್ತಿರ ಒಕ್ಕರಿಸಿದಳಲ್ಲಾ ಈ ಸತಿ! (3)



5954ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಮುಷ್ಮಿಕ 3.ಸಾಲಂಕೃತ 5.ಟಿಸಿಲು 7.ರಾಡಿ 8.ದರ 10.ಪಾತಕಿ 11.ಶಪಥ 13.ರಿಪು 15.ಮಿತ್ರ 16.ಅಂಕುಶ 18.ತೆಗಳಿಕೆ 19.ರವಿಸುತ

ಮೇಲಿಂದ ಕೆಳಕ್ಕೆ:
1.ಆಯುರ್ವೇದ 2.ಕಟಿ 3.ಸಾಲು 4.ತಕ್ಕಡಿ 6.ಸಿಕತ 7.ರಾಯಭಾರಿ 9.ರಕ್ಷಾಪತ್ರ 12.ಪರಾಕು 14.ಪುರಸ್ಕೃತ 15.ಮಿಡತೆ 16.ಅಂಕೆ 17.ಶರ

ಸುಡೊಕು 6340

	6			9				8
1			8			5		
		2		6			9	7
		7			9	6		
4	2						5	9
6			7		8			
2		5	4		7	9		6
	4						7	
9		6	3		5		4	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6339 ಸುಡೊಕು

8	7	3	2	1	9	4	6	5
6	2	9	4	5	8	7	1	3
4	1	5	6	7	3	9	2	8
5	4	2	7	9	6	8	3	1
3	6	7	8	4	1	5	9	2
1	9	8	3	2	5	6	4	7
9	8	1	5	6	2	3	7	4
2	3	4	9	8	7	1	5	6
7	5	6	1	3	4	2	8	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಜ್ಯದಲ್ಲಿನ ನ್ಯಾಯಾಂಗ ಮೂಲಸೌಲಭ್ಯಕ್ಕೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಪ್ರಶಂಸೆ

'ಮಹಾ'ಗಿಂತ ಕರ್ನಾಟಕ ಉತ್ತಮ

ಮುಂಬೈ (ಪಿಟಿಐ): 'ಮಹಾರಾಷ್ಟ್ರದಲ್ಲಿ ನ್ಯಾಯಾಂಗವು ಮೂಲಸೌಕರ್ಯಗಳ ತೀವ್ರ ಕೊರತೆ ಎದುರಿಸುತ್ತಿದೆ. ಆದರೆ, ನೆರೆಯ ಕರ್ನಾಟಕದಲ್ಲಿ ಉತ್ತಮ ಮೂಲಸೌಕರ್ಯವಿದೆ' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಭಯ್ ಎಸ್. ಓಕಾ ಅವರು ಇಲ್ಲಿ ಹೇಳಿದ್ದಾರೆ.



ಅಭಯ್ ಎಸ್ ಓಕಾ

ನ್ಯಾ. ಓಕಾ ಅವರು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಳ್ಳುವ ಮೊದಲು ಬಾಂಬೆ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿ ಆಗಿದ್ದರು.

ಶನಿವಾರ ಇಲ್ಲಿ 'ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯ ತೊಡಕುಗಳು - ಕೆಲವು ಚಿಂತನೆ' ವಿಷಯ ಕುರಿತು ಅಶೋಕ್ ದೇಸಾಯಿ ಸ್ಮಾರಕ ಉಪನ್ಯಾಸದಲ್ಲಿ ಅವರು ಮಾತನಾಡಿದರು.

'ಮಹಾರಾಷ್ಟ್ರ ಸರ್ಕಾರದಿಂದ ಮೂಲ ಸೌಕರ್ಯ ಪಡೆಯಲು ಪರಿತಪಿಸಬೇಕಾಗಿದೆ. ಪುಣೆಯ ಸಿವಿಲ್ ಕೋರ್ಟ್ ಸಂಕೀರ್ಣದಲ್ಲಿ ನ್ಯಾಯಾಧೀಶರಿಗೆ ಪ್ರತ್ಯೇಕ ಕೋಣೆಯೂ ಇಲ್ಲ' ಎಂದರು. ಕಳೆದ ಐದು ವರ್ಷಗಳಲ್ಲಿ ಕೆಲಮಟ್ಟಿಗೆ ಸುಧಾರಣೆ ಕಂಡಿದೆಯಷ್ಟೆ ಎಂದು ಹೇಳಿದರು. ನೆರೆಯ ಕರ್ನಾಟಕದಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಕರ್ನಾಟಕ ಹೈಕೋರ್ಟ್‌ನ ಕಲಬುರಗಿ ಪೀಠದ ಸಂಕೀರ್ಣ ಪಂಚತಾರಾ ಹೋಟೆಲ್‌ನಂತಿದೆ ಎಂದು ಶ್ಲಾಘಿಸಿದರು.

'ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯು ಅನೇಕ ಸಮಸ್ಯೆ ಎದುರಿಸುತ್ತಿದೆ. ಆಡಳಿತ ವ್ಯವಸ್ಥೆ ಇಲ್ಲಿ ಸಾಮಾನ್ಯ ಜನರ ನಿರೀಕ್ಷೆಗಳನ್ನು ಈಡೇರಿಸಿಲ್ಲ' ಎಂದು ಅಭಿಪ್ರಾಯಪಟ್ಟರು.

ಎಲ್ಲ ವ್ಯಾಜ್ಯಕ್ಕೂ ಕೋರ್ಟ್ ಪರಿಹಾರ ಅಲ್ಲ: ಸಿಜೆಐ

ಮುಂಬೈ (ಪಿಟಿಐ): ಎಲ್ಲ ವ್ಯಾಜ್ಯಗಳೂ ನ್ಯಾಯಾಲಯದ ಮೂಲಕವೇ ಇತ್ಯರ್ಥವಾಗಬೇಕು ಎಂದಿಲ್ಲ. ರಾಜಿ ಸಂಧಾನದ ಮೂಲಕ ಸಹ ವ್ಯಾಜ್ಯಗಳನ್ನು ಪರಿಹರಿಸಿಕೊಳ್ಳಬಹುದು. ಇದು ಸಮಗ್ರ ಪರಿಹಾರ ನೀಡುವ ಜೊತೆಗೆ ಸಂಬಂಧಗಳನ್ನೂ ಬಲಪಡಿಸುತ್ತದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರು ಶನಿವಾರ ಅಭಿಪ್ರಾಯಪಟ್ಟರು.



ಸಂಜೀವ್ ಖನ್ನಾ

ಮಹಾರಾಷ್ಟ್ರದ ನಾಗ್ಪುರದಲ್ಲಿರುವ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ (ಎಂಎನ್‌ಎಲ್‌ಯು) ಮೂರನೇ ಘಟಿಕೋತ್ಸವ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿ, 'ಎಲ್ಲ ಪ್ರಕರಣಗಳನ್ನೂ ಕಾನೂನಿನ ಕಣ್ಣಿನಿಂದಲೇ ನೋಡಬೇಕಿಲ್ಲ, ಮಾನವೀಯ ಆಯಾಮದಲ್ಲಿಯೂ ನೋಡಬೇಕಾಗುತ್ತದೆ' ಎಂದು ಹೇಳಿದರು.

ವಕೀಲರು ಸಮಸ್ಯೆಗಳಿಗೆ ಪರಿಹಾರ ಸೂಚಿಸುವವರು. ಅವರು ಸಮಸ್ಯೆಯ ಕಾನೂನಾತ್ಮಕ ಮತ್ತು ಮಾನವೀಯ ಆಯಾಮವನ್ನು ಮುಂದಿಟ್ಟು, ಸೃಜನಶೀಲ ಪರಿಹಾರವನ್ನು ಸೂಚಿಸಬೇಕು ಎಂದರು.

'ನಮ್ಮ ಪೂರ್ವಜರು ಎಂದೂ ಊಹಿಸಿರದ ಸವಾಲುಗಳನ್ನು ಇಂದಿನ ಪೀಳಿಗೆ ಎದುರಿಸುತ್ತಿದೆ. ಹವಾಮಾನ ಬದಲಾವಣೆಯು ಪರಿಸರಕ್ಕೆ ಮಾತ್ರವಲ್ಲ ಮಾನವ ಹಕ್ಕುಗಳು, ಸಾಮಾಜಿಕ ನ್ಯಾಯ, ಡಿಜಿಟಲ್ ವಿಕಾಸವೂ ಬೆದರಿಕೆಯೊಡ್ಡುತ್ತಿದೆ. ಇದು ಖಾಸಗಿತನ, ಭದ್ರತೆ, ಮಾನವ ಸಂವಹನದ ಸ್ವಭಾವದ ಬಗ್ಗೆಯೂ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿದೆ' ಎಂದು ಹೇಳಿದರು.

ಹೊಸ ತಂತ್ರಜ್ಞಾನದಿಂದಾಗಿ ಪ್ರಜಾಪ್ರಭುತ್ವ ಸಹ ಹೊಸ ರೂಪ ಪಡೆದಿದೆ ಎಂದು ಅವರು ಹೇಳಿದರು. 'ಇವುಗಳೆಲ್ಲ ಕೇವಲ ಅಮೂರ್ತ ಸಮಸ್ಯೆಗಳಲ್ಲ, ಮಾನವೀಯತೆ, ಮನುಷ್ಯನ ಘನತೆ, ಸ್ವಾತಂತ್ರ್ಯಕ್ಕೆ ಎದುರಾಗಿರುವ ಮೂಲಭೂತ ಸವಾಲುಗಳು. ಇದಕ್ಕೆ ನವೀನ ರೀತಿಯ ಮಾರ್ಗೋಪಾಯಗಳ ಅಗತ್ಯವಿದೆ' ಎಂದು ಹೇಳಿದರು.

'ಸಾಕ್ಷಿ ಹಾಜರುಪಡಿಸದಿದ್ದರೆ ಪರೇಡ್ ವರದಿಗೆ ಕಿಮ್ಮತ್ತಿಲ್ಲ'

ನವದೆಹಲಿ: ಆರೋಪಿಯನ್ನು ಗುರುತಿಸಿದ ಸಾಕ್ಷಿಗಳನ್ನು ವಿಚಾರಣೆ ವೇಳೆ ಹಾಜರುಪಡಿಸಬೇಕು. ಇಲ್ಲದಿದ್ದರೆ, ಆರೋಪಿಯನ್ನು ಗುರುತಿಸುವುದಕ್ಕಾಗಿಯೇ ನಡೆಸಿದ ಪರೇಡ್‌ನ ವರದಿಯು ಸಾಕ್ಷ್ಯಾಧಾರವಾಗುವ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.



1999ರಲ್ಲಿ, ಚಲಿಸುತ್ತಿದ್ದ ಬಸ್‌ನಲ್ಲಿ ನಡೆದಿದ್ದ ಡಕಾಯಿತಿ ಪ್ರಕರಣದ ಆರೋಪಿಯನ್ನು ಖುಲಾಸೆಗೊಳಿಸಿದ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠವು, ಈ ಪ್ರಕರಣದಲ್ಲಿ ಬಸ್ ಚಾಲಕ, ಕಂಡಕ್ಟರ್ ಹಾಗೂ ಕ್ಲೀನರ್‌ನ ಸಹಿತ ಇಬ್ಬರು ಆರೋಪಿ ಗುರುತಿಸುವಿಕೆಯ ಪರೇಡ್ ನಡೆಸಿದ್ದೂ ವಿಚಾರಣೆ ವೇಳೆ ಸಾಕ್ಷಿಗಳನ್ನು ಹಾಜರುಪಡಿಸಿರಲಿಲ್ಲ ಎಂಬುದನ್ನು ಉಲ್ಲೇಖಿಸಿ, ಈ ರೀತಿ ಹೇಳಿದೆ.

'ಆರೋಪಿಯನ್ನು ಗುರುತಿಸುವ ವ್ಯಕ್ತಿಯನ್ನು ವಿಚಾರಣೆಯ ಸಮಯದಲ್ಲಿ ಸಾಕ್ಷಿಯಾಗಿ ಹಾಜರುಪಡಿಸದಿದ್ದರೆ, ಬೇರೆ ಸಾಕ್ಷ್ಯದಿಂದ ಗುರುತನ್ನು ಉಳಿಸಿಕೊಳ್ಳಲು ಪರೇಡ್ ವರದಿ ಉಪಯೋಗಕ್ಕೆ ಬರುವುದಿಲ್ಲ' ಎಂದು ಪೀಠ ಹೇಳಿದೆ.

ವಿನೋದ್ ಅಲಿಯಾಸ್ ನಸ್ಮುಲ್ಲಾ ಸಲ್ಲಿಸಿದ ಮೇಲ್ಮನವಿಯನ್ನು ಅಂಗೀಕರಿಸಿದ ಪೀಠವು, ಈ ಪ್ರಕರಣದಲ್ಲಿ ಅರ್ಜಿದಾರರನ್ನು ಅಪರಾಧಿ ಎಂದು 1999ರಲ್ಲಿ ವಿಚಾರಣಾ ನ್ಯಾಯಾಲಯ ನೀಡಿದ್ದ ತೀರ್ಪು ಮತ್ತು ಇದನ್ನು 2018ರಲ್ಲಿ ಎತ್ತಿಹಿಡಿದಿದ್ದ ಛತ್ತೀಸಗಢ ಹೈಕೋರ್ಟ್ ತೀರ್ಪನ್ನು ವಜಾಗೊಳಿಸಿತು.

'ಇಂತಹ ಪ್ರಕರಣಗಳಲ್ಲಿ ದೃಢೀಕರಿಸುವಂತಹ ಸಾಕ್ಷ್ಯಗಳನ್ನು ಪರಿಗಣಿಸಲು ನ್ಯಾಯಾಲಯವು ಸೂಕ್ಷ್ಮವಾಗಿ ಪರಿಶೀಲಿಸಬೇಕು' ಎಂದೂ ಪೀಠ ಹೇಳಿದೆ.

ಅಂಬಿಕಾಪುರದ ಸರ್ಗುಜಾ ಸಮೀಪ ರಾಯಪುರದ ಬಸ್‌ನಲ್ಲಿ ನಡೆದಿದ್ದ ಡಕಾಯಿತಿ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಂದು ಆರೋಪಿಸಲಾದ ಎಂಟು ಜನರಲ್ಲಿ ಇಬ್ಬರು ಆರೋಪಿಗಳನ್ನು ಮಾತ್ರ ವಿಚಾರಣೆಗೆ ಒಳಪಡಿಸಲಾಗಿದೆ ಮತ್ತು ಒಬ್ಬರನ್ನು ಸೆಷನ್ಸ್ ನ್ಯಾಯಾಧೀಶರು ಈಗಾಗಲೇ ಖುಲಾಸೆಗೊಳಿಸಿದ್ದಾರೆ ಎಂಬುದನ್ನು ಪೀಠ ಗಮನಿಸಿತು.

ವಯನಾಡ್: ಕೇಂದ್ರದಿಂದ ₹590 ಕೋಟಿ ಸಾಲ

ತಿರುವನಂತಪುರ (ಪಿಟಿಐ): ಭೂಕುಸಿತ, ಪ್ರವಾಹ ಬಾಧಿತ ವಯನಾಡ್‌ನಲ್ಲಿ ಪುನರ್ವಸತಿ ಕಾರ್ಯಕ್ರಮಗಳ ಜಾರಿಗೆ ಕೇಂದ್ರ ಸರ್ಕಾರ ₹529.50 ಕೋಟಿ ಸಾಲ ಮಂಜೂರು ಮಾಡಿದೆ. ಮಾರ್ಚ್ 31ರ ಒಳಗೇ ಈ ಮೊತ್ತವನ್ನು ಬಳಸಬೇಕು ಎಂಬ ಷರತ್ತನ್ನೂ ವಿಧಿಸಿದೆ.

ಬಂಡವಾಳ ಹೂಡಿಕೆ ಯೋಜನೆಯಡಿ ಈ ಮೊತ್ತವನ್ನು ಕೇಂದ್ರ ಮಂಜೂರು ಮಾಡಿದೆ. ಆದರೆ, ಇದಕ್ಕಾಗಿ ವಿಧಿಸಿರುವ ಗಡುವು 'ಪ್ರಾಯೋಗಿಕವಾಗಿ ದೊಡ್ಡ ತೊಡಕು' ಎಂದು ರಾಜ್ಯದ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್ ಪ್ರತಿಕ್ರಿಯಿಸಿದರು.

'ಬಂಡವಾಳ ಹೂಡಿಕೆಗಾಗಿ ರಾಜ್ಯಗಳಿಗೆ ವಿಶೇಷ ನೆರವು' ಯೋಜನೆಯಡಿ ಮಂಜೂರಾದ ಈ ಮೊತ್ತವನ್ನು ಷರತ್ತಿನನ್ವಯ 10 ದಿನಗಳಲ್ಲಿ ಉದ್ದೇಶಿತ ಯೋಜನೆಗಳ ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಬೇಕಾಗಿದೆ. ಒಂದು ವೇಳೆ ತಡವಾದರೆ, ಇಷ್ಟು ಮೊತ್ತಕ್ಕೆ ರಾಜ್ಯ ಸರ್ಕಾರ ಬಡ್ಡಿ ತೆರಬೇಕಾಗಿದೆ' ಎಂದು ಬಾಲಗೋಪಾಲ್ ಹೇಳಿದರು.

'ವಯನಾಡ್‌ನಲ್ಲಿ ಪುನರ್ವಸತಿಗಾಗಿ ಸಾಲದ ಜೊತೆಗೆ ಅನುದಾನ ಒದಗಿಸುವಂತೆ ರಾಜ್ಯ ಸರ್ಕಾರ ಕೋರಿತ್ತು. ಈಗ ಕೇಂದ್ರ ದೀರ್ಘಾವಧಿ ಸಾಲ ನೀಡಿದೆ. ಆದರೆ, ಕ್ಷಿಪ್ರವಾಗಿ ಬಳಸಿ ಎಂದು ಷರತ್ತು ವಿಧಿಸಿರುವುದರಿಂದ ಈಗ ಸಮಸ್ಯೆಯಾಗಿದೆ' ಎಂದರು.



'ಗಡುವಿನಲ್ಲಿ ಬಳಸಲು ಇರುವ ತೊಡಕುಗಳನ್ನು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿ, ಈ ಮೊತ್ತವನ್ನು ಪುನರ್ವಸತಿಗೆ ಬಳಸಲಿದ್ದೇವೆ. ಪ್ರಕೃತಿ ವಿಕೋಪ ಸಂಭವಿಸಿದಾಗ ಸಿಗುವ ಯಾವುದೇ ಅನುದಾನ ಕೇರಳ ಸರ್ಕಾರಕ್ಕೆ ಇನ್ನೂ ಲಭಿಸಿಲ್ಲ' ಎಂದು ತಿಳಿಸಿದರು.

ವಿಧಾನಸಭೆ ವಿಪಕ್ಷದ ನಾಯಕ ವಿ.ಡಿ.ಸತೀಶನ್ ಅವರೂ ಕೇಂದ್ರ ಷರತ್ತು ವಿಧಿಸಿರುವುದನ್ನು ಟೀಕಿಸಿದ್ದಾರೆ.

ಕಳೆದ ವರ್ಷ ಜುಲೈ ತಿಂಗಳಲ್ಲಿ ವಯನಾಡ್‌ನಲ್ಲಿ ಸಂಭವಿಸಿದ್ದ ಭೂಕುಸಿತ, ಪ್ರವಾಹ ಅವಘಡಗಳಲ್ಲಿ 200ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು.

ವಾಸ್ತವದಲ್ಲಿ ಅನುದಾನ: ಬಿಜೆಪಿ

ತಿರುವನಂತಪುರ (ಪಿಟಿಐ): ವಯನಾಡ್ ಸಂತ್ರಸ್ತರ ಪುನರ್ವಸತಿಗೆ ಕೇಂದ್ರ ಮಂಜೂರು ಮಾಡಿರುವ ₹529.50 ಕೋಟಿ ಸಾಲ 'ವಾಸ್ತವದಲ್ಲಿ ಅನುದಾನ' ಎಂದು ರಾಜ್ಯದ ಬಿಜೆಪಿ ಘಟಕವು ಸಮರ್ಥಿಸಿಕೊಂಡಿದೆ.

ರಾಜ್ಯ ಘಟಕದ ಬಿಜೆಪಿ ಅಧ್ಯಕ್ಷ ಕೆ.ಸುರೇಂದ್ರನ್ ಅವರು, ಇದು, 50 ವರ್ಷದ ಅವಧಿಗೆ ನೀಡಿರುವ ಬಡ್ಡಿರಹಿತ ಸಾಲ. ಅಂದರೆ, 'ವಾಸ್ತವದಲ್ಲಿ ಅನುದಾನವೇ ಆಗಿದೆ. ಪಿಣರಾಯಿ ವಿಜಯನ್ ನೇತೃತ್ವದ ರಾಜ್ಯ ಸರ್ಕಾರ, ಯುಡಿಎಫ್ ಮೈತ್ರಿ ಕೂಟಕ್ಕೆ ಸಾಲ ತೀರಿಸುವ ಆತಂಕ ಬೇಡ. ಐದು ವರ್ಷದ ಬಳಿಕ ಈ ಹೊಣೆ ರಾಜ್ಯದಲ್ಲಿ ರಾಷ್ಟ್ರೀಯ ಪಕ್ಷದ್ದೇ (ಬಿಜೆಪಿ) ಆಗಿರುತ್ತದೆ. ಆದರೆ, ಮಾರ್ಚ್ 31ರ ಗಡುವು ವಿಸ್ತರಿಸಲು ಒಟ್ಟಾಗಿ ಕೇಳಿಕೊಳ್ಳೋಣ. ಕೇಂದ್ರ ಇಂತಹ ಮನವಿಯನ್ನು ಪುರಸ್ಕರಿಸಲಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

'ಲವ್ ಜಿಹಾದ್' ಕಾನೂನಿಗೆ ಸಮಿತಿ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಲವ್ ಜಿಹಾದ್ ಪ್ರಕರಣಗಳಿಗೆ ಸಂಬಂಧಿಸಿದ ಕಾನೂನಾತ್ಮಕ ಹಾಗೂ ತಾಂತ್ರಿಕ ವಿಚಾರಗಳ ಕುರಿತು ಪರಿಶೀಲನೆಗಾಗಿ ದೇವೇಂದ್ರ ಫಡಣವೀಸ್ ನೇತೃತ್ವದ ಸರ್ಕಾರವು ಸಮಿತಿ ರಚಿಸಿದೆ. ಇದಕ್ಕೆ ವಿರೋಧ ಪಕ್ಷಗಳಿಂದ ಟೀಕೆ ವ್ಯಕ್ತವಾಗಿದೆ.

ಡಿಜಿಪಿ ನೇತೃತ್ವದ ಸಮಿತಿಯಲ್ಲಿ ಏಳು ಮಂದಿ ಸದಸ್ಯರಿದ್ದಾರೆ. ಫಡಣವೀಸ್ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನವದೆಹಲಿಯಲ್ಲಿ ಭೇಟಿಯಾದ ಬಳಿಕ ಈ ಬೆಳವಣಿಗೆ ನಡೆದಿದೆ.

'ಲವ್ ಜಿಹಾದ್ ಮತ್ತು ಬಲವಂತದ ಮತಾಂತರ ತಡೆಗಾಗಿ ಕಾನೂನು ರೂಪಿಸಲು ನಾಗರಿಕರು, ವಿವಿಧ ಸಂಘ–ಸಂಸ್ಥೆಗಳು, ಚುನಾಯಿತ ಪ್ರತಿನಿಧಿಗಳು ಒತ್ತಾಯಿಸುತ್ತಿದ್ದಾರೆ. ರಾಜ್ಯದಲ್ಲಿ ಪ್ರಕರಣಗಳ ಸ್ಥಿತಿ ಕುರಿತ ಅಧ್ಯಯನಕ್ಕೆ ಸಮಿತಿ ರಚಿಸಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಪ್ರಕಟಣೆಯಲ್ಲಿ ಗೃಹ ಇಲಾಖೆಯ ಉಪ ಕಾರ್ಯದರ್ಶಿ ಹೇಮಂತ್ ಮಹಾಜನ್ ಅವರ ಸಹಿ ಇದೆ.

ಸಂಕ್ಷಿಪ್ತ ಸುದ್ದಿ

'ಶೀಷಮಹಲ್ ಪ್ರಕರಣ ತನಿಖೆಗೆ ಸಿವಿಸಿ ಸೂಚನೆ'

ನವದೆಹಲಿ (ಪಿಟಿಐ): ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ವಾಸವಿದ್ದ ವಿವಾದಾತ್ಮಕ 'ಶೀಷಮಹಲ್' ಬಂಗಲೆ ನವೀಕರಣದ ಬಗ್ಗೆ ತನಿಖೆ ನಡೆಸುವಂತೆ ಕೇಂದ್ರ ಜಾಗೃತ ಆಯೋಗವು (ಸಿವಿಸಿ) ದೆಹಲಿಯ ಲೋಕೋಪಯೋಗಿ ಇಲಾಖೆಗೆ ನಿರ್ದೇಶಿಸಿದೆ.



ಅರವಿಂದ ಕೇಜ್ರಿವಾಲ್

'ಶೀಷ್‌ಮಹಲ್ ಹಗರಣದ ಬಗ್ಗೆ ಸಿವಿಸಿಗೆ ಎರಡು ಬಾರಿ ದೂರು ನೀಡಿದ್ದೆ. ಇದೀಗ ನನ್ನ ದೂರನ್ನು ಪರಿಗಣಿಸಿರುವ ಸಿವಿಸಿ, ಬಂಗಲೆ ನವೀಕರಣದ ಬಗ್ಗೆ ತನಿಖೆ ನಡೆಸಿ, ವಿಸ್ತೃತ ವರದಿ ಸಲ್ಲಿಸುವಂತೆ ದೆಹಲಿಯ ಲೋಕೋಪಯೋಗಿ ಸಚಿವಾಲಯಕ್ಕೆ ನಿರ್ದೇಶನ ನೀಡಿದೆ' ಎಂದು ದೆಹಲಿಯ ರೋಹಿಣಿ ಕ್ಷೇತ್ರದ ಬಿಜೆಪಿ ಶಾಸಕ ವಿಜೇಂದರ್ ಗುಪ್ತಾ ತಿಳಿಸಿದ್ದಾರೆ.

'ಕೇಜ್ರಿವಾಲ್ ಅವರು ನಿಯಮಗಳನ್ನು ಗಾಳಿಗೆ ತೂರಿ, ಬರೋಬ್ಬರಿ 8 ಎಕರೆಯಷ್ಟು (40 ಸಾವಿರ ಚ.ಅಡಿ) ಪ್ರದೇಶದಲ್ಲಿ ಐಶಾರಾಮಿ ಬಂಗಲೆ ನಿರ್ಮಿಸಿಕೊಂಡಿದ್ದಾರೆ. ತೆರಿಗೆದಾರರ ಹಣವನ್ನು ವೈಭೋಗದ ಜೀವನಕ್ಕಾಗಿ ಪೋಲು ಮಾಡಿದ್ದಾರೆ' ಎಂದು ಆರೋಪಿಸಿ ಗುಪ್ತಾ ಅವರು ಸಿವಿಸಿಗೆ ದೂರು ನೀಡಿದ್ದರು.

ಅಸಭ್ಯ ವರ್ತನೆ: ಮಗನ ಕೊಂದು, ಶವ ತುಂಡು ಮಾಡಿದ ತಾಯಿ


ಕುಂಬುಂ (ಪಿಟಿಐ): ಚಿಕ್ಕಮ್ಮನ ಮೇಲೆ ಅತ್ಯಾಚಾರ ಮಾಡಲು ಯತ್ನಿಸಿದ ಮಗನ ಅಸಭ್ಯ ವರ್ತನೆಯಿಂದ ಬೇಸತ್ತ ತಾಯಿ ಆತನನ್ನು ಹತ್ಯೆ ಮಾಡಿರುವ ಘಟನೆ ಆಂಧ್ರ ಪ್ರದೇಶದ ಪ್ರಕಾಶಂ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಆರೋಪಿ ಕೆ. ಲಕ್ಷ್ಮೀದೇವಿ (57) ಅವರು ತಮ್ಮ ಮಗ ಕೆ. ಶ್ಯಾಮ್ ಪ್ರಸಾದ್ ಅವರನ್ನು ಫೆ.13ರಂದು ಕೊಲೆ ಮಾಡಿದ್ದಾರೆ. ಲಕ್ಷ್ಮೀ ಅವರ ಸಂಬಂಧಿಕರು ಈ ಕೊಲೆ ಮಾಡಲು ಸಹಾಯ ಮಾಡಿದ್ದಾರೆ ಎಂದು ಪ್ರಕಾಶಂ ಎಸ್‌ಪಿ ಎ.ಆರ್. ದಾಮೋದರ್ ತಿಳಿಸಿದರು.

ಅವಿವಾಹಿತನಾಗಿದ್ದ ಶ್ಯಾಮ್, ಬೆಂಗಳೂರು, ಖಮ್ಮಂ ಮತ್ತು ಹೈದರಾಬಾದ್‌ನಲ್ಲಿರುವ ತನ್ನ ಸಂಬಂಧಿಗಳು ಹಾಗೂ ಚಿಕ್ಕಮ್ಮನೊಂದಿಗೆ ಅಸಭ್ಯವಾಗಿ ವರ್ತಿಸುತ್ತಿದ್ದ. ಅವರ ಮೇಲೆ ಅತ್ಯಾಚಾರ ಎಸಗಲು ಯತ್ನಿಸಿದ್ದ. ಇದನ್ನು ಸಹಿಸಲಾರದೆ ಲಕ್ಷ್ಮೀ ಆತನನ್ನು ಹತ್ಯೆ ಮಾಡಿದ್ದಾರೆ ಎಂದರು.

ಶ್ಯಾಮ್‌ನನ್ನು ಹತ್ಯೆ ಮಾಡಿ, ಬಳಿಕ ಆತನ ದೇಹವನ್ನು ಐದು ತುಂಡುಗಳಾಗಿ ಕತ್ತರಿಸಿ, ಚೀಲಗಳಲ್ಲಿ ತುಂಬಲಾಗಿದೆ. ನಂತರ ಆ ಚೀಲಗಳನ್ನು ನಾಕಲಗಂಡಿಯ ಕುಂಬುಂ ಗ್ರಾಮದ ಕಾಲುವೆಯಲ್ಲಿ ಎಸೆಯಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಆಂಧ್ರಪ್ರದೇಶ: 'ಗಿಲಾನ್ ಬರ್ರೆ ಸಿಂಡ್ರೋಮ್'ಗೆ ಮೊದಲ ಸಾವು



ಹೈದರಾಬಾದ್: ಆಂಧ್ರಪ್ರದೇಶದಲ್ಲಿ 10 ವರ್ಷದ ಬಾಲಕನೊಬ್ಬ 'ಗಿಲಾನ್ ಬರ್ರೆ ಸಿಂಡ್ರೋಮ್'ನಿಂದ (ದೇಹದ ರೋಗನಿರೋಧಕ ವ್ಯವಸ್ಥೆಯ ಮೇಲಿನ ದಾಳಿ–ಜಿಬಿಸಿ) ಮೃತಪಟ್ಟಿದ್ದು, ಇದು ಜಿಬಿಸಿ ಕಾಯಿಲೆಯಿಂದ ಸಾವಿಗೀಡಾದ ರಾಜ್ಯದ ಮೊದಲ ಪ್ರಕರಣವಾಗಿದೆ.

ಶ್ರೀಕಾಕುಳಂ ಜಿಲ್ಲೆಯ ಸಂತಬೊಮ್ಮಾಳಿ ಗ್ರಾಮಕ್ಕೆ ಸೇರಿದ 10 ವರ್ಷದ ಬಾಲಕ ಜಿಬಿಸಿ ರೋಗ ಲಕ್ಷಣದಿಂದ ಜ. 31ರಂದು ಸ್ಥಳೀಯ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ. ಬಳಿಕ ಶ್ರೀಕಾಕುಳಂ ಮತ್ತು ವಿಶಾಖಪಟ್ಟಣದ ಸರ್ಕಾರಿ ಆಸ್ಪತ್ರೆ ಸ್ಥಳಾಂತರಿಸಲಾಯಿತು.

ವಿಶಾಖಪಟ್ಟಣದ ಕಿಂಗ್ ಜಾರ್ಜ್ ಆಸ್ಪತ್ರೆಯಲ್ಲಿ ಕೆಲವು ದಿನಗಳ ಹಿಂದೆ ಅವನು ಮೃತಪಟ್ಟಿದ್ದಾನೆ.

'ರಾಜ್ಯದಲ್ಲಿ ಪ್ರಸ್ತುತ 17 ಜನರಲ್ಲಿ ಜಿಬಿಸಿ ಕಾಯಿಲೆ ಪತ್ತೆಯಾಗಿದ್ದು, ಎಲ್ಲರಿಗೂ ವಿಶಾಖಪಟ್ಟಣ, ಕಾಕಿನಾಡ, ಗುಂಟೂರು ಮತ್ತು ಕರ್ನೂಲು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಸರ್ಕಾರ ತಿಳಿಸಿದೆ.

'ಎಫ್‌35 ಯುದ್ಧ ವಿಮಾನದ ಅಗತ್ಯವಿದೆಯೇ?'

ನವದೆಹಲಿ (ಪಿಟಿಐ): ಎಫ್‌35ನಂತಹ ದುಬಾರಿ ಯುದ್ಧ ವಿಮಾನ ಭಾರತಕ್ಕೆ ಅಗತ್ಯವಿದೆಯೇ ಹಾಗೂ ಈ ವಿಚಾರದಲ್ಲಿ ಭದ್ರತಾ ತಜ್ಞರ ಮತ್ತು ಸಶಸ್ತ್ರ ಪಡೆಗಳ ಸಲಹೆಯನ್ನು ಪಡೆಯಲಾಗಿದೆಯೇ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಅವರು ಪ್ರಶ್ನಿಸಿದ್ದಾರೆ.

ಎಫ್‌35 ಯುದ್ಧ ವಿಮಾನದಲ್ಲಿ ಹಲವು ದೋಷಗಳಿವೆ ಮತ್ತು ಅದರಿಂದ ಹಲವು ಅಪಘಾತಗಳು ಸಂಭವಿಸಿವೆ. ಅದನ್ನು ಕೆಲವರು ನಿಷ್ಪ್ರಯೋಜಕ ಎಂದು ಕರೆಯುತ್ತಾರೆ ಎಂದು ಸುರ್ಜೇವಾಲಾ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.



ರಣದೀಪ್ ಸುರ್ಜೇವಾಲಾ

'ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದಿಂದ ಎಫ್‌35 ಯುದ್ಧವಿಮಾನ ಖರೀದಿಸುವ ಬಗ್ಗೆ ತುಂಬಾ ಚರ್ಚೆ ನಡೆಯುತ್ತಿದೆ. ಆದರೆ, ಮೋದಿ ಸರ್ಕಾರವು ಈ ವಿಚಾರದಲ್ಲಿ ರಾಷ್ಟ್ರೀಯ ಹಿತಾಸಕ್ತಿಯನ್ನು ಪರಿಗಣಿಸಿದೆಯೇ' ಎಂದು ಪ್ರಶ್ನಿಸಿದ್ದಾರೆ.

'ಎಫ್‌35 ಯುದ್ಧ ವಿಮಾನದ ಹಾರಾಟ ವೆಚ್ಚವು ಗಂಟೆಗೆ ₹28 ಲಕ್ಷ. ಒಂದು ವಿಮಾನದ ದರ ₹968 ಕೋಟಿ. ಗಂಟೆಗೆ ₹28 ಲಕ್ಷ ಖರ್ಚು ಮಾಡುವುದು ಭಾರತದ ಪಾಲಿಗೆ ಸೂಕ್ತವೇ ಎಂಬುದನ್ನು ಮೋದಿ ಸರ್ಕಾರ ಯೋಚಿಸಿದೆಯೇ?' ಎಂದಿದ್ದಾರೆ.

ಇತ್ತೀಚೆಗೆ ಅಮೆರಿಕಕ್ಕೆ ಭೇಟಿ ನೀಡಿದ್ದ ವೇಳೆ ಪ್ರಧಾನಿ ಮೋದಿ ಅವರು ಅಮೆರಿಕದೊಂದಿಗಿನ ರಕ್ಷಣಾ ಒಪ್ಪಂದಕ್ಕೆ ಸಹಿ ಮಾಡಿದ್ದರು.

ಪುರಿ: ಖಜಾನೆ ದುರಸ್ತಿ ಬಳಿಕ ಆಭರಣಗಳ ಪಟ್ಟಿ ಪ್ರಕ್ರಿಯೆ–ಸರ್ಕಾರ

ಭುವನೇಶ್ವರ (ಪಿಟಿಐ): 'ಪುರಿ ಜಗನ್ನಾಥ ದೇವಸ್ಥಾನದ 'ರತ್ನ ಭಂಡಾರ'ದ ಬೆಲೆ ಬಾಳುವ ವಸ್ತುಗಳ ಯಾದಿ ಸಿದ್ಧಪಡಿಸುವ ಕಾರ್ಯವನ್ನು ಅಲ್ಲಿನ ದುರಸ್ತಿ ಕಾರ್ಯ ಪೂರ್ಣಗೊಂಡ ಬಳಿಕ ನಡೆಸಲಾಗುವುದು' ಎಂದು ಕಾನೂನು ಸಚಿವ ಪೃಥ್ವಿರಾಜ್ ಹರಿಚಂದನ್ ತಿಳಿಸಿದರು.

ವಿಧಾನಸಭೆಯಲ್ಲಿ ಈ ಕುರಿತು ಪ್ರಶ್ನೆಯೊಂದಕ್ಕೆ ಲಿಖಿತ ಹೇಳಿಕೆ ನೀಡಿದ್ದು, '2024ರ ಜುಲೈ 14ರಂದು ರತ್ನ ಭಂಡಾರ ತೆರೆಯಲಾಗಿತ್ತು. ಆಭರಣಗಳ ಸ್ಥಳಾಂತರದ ಬಳಿಕ ಪ್ರಾಚ್ಯವಸ್ತು ಸರ್ವೇಕ್ಷಣಾ ಇಲಾಖೆ ನೇತೃತ್ವದಲ್ಲಿ ದುರಸ್ತಿ ಕಾರ್ಯ ನಡೆದಿದೆ' ಎಂದರು.

ರತ್ನಭಂಡಾರದ ಬೆಲೆಬಾಳುವ ವಸ್ತುಗಳ ಪಟ್ಟಿಯನ್ನು ತಯಾರಿಸುವ ಕಾರ್ಯ ಈ ಹಿಂದೆ 1978ರ ಮೇ 13ರಿಂದ ಜುಲೈ 23ರವರೆಗೂ ನಡೆದಿತ್ತು ಎಂದರು.

'ದೇವಸ್ಥಾನದ ಸುಪರ್ದಿಯಲ್ಲಿ 60,426.943 ಎಕರೆ ಭೂಮಿ ಇದ್ದು, ಇದು 24 ಜಿಲ್ಲೆಗಳಲ್ಲಿ ವ್ಯಾಪಿಸಿದೆ. ಇವುಗಳ ಪೈಕಿ 38,061.892 ಎಕರೆ ಭೂಮಿಗೆ ಸಂಬಂಧಿಸಿದಂತೆ ಹಕ್ಕುಪತ್ರಗಳಿವೆ' ಎಂದು ಮಾಹಿತಿ ನೀಡಿದರು.

ಛತ್ತೀಸಗಢದಿಂದ 'ಮಹಾಕುಂಭ'ಕ್ಕೆ ತೆರಳುತ್ತಿದ್ದ ಯಾತ್ರಿಗಳು

ಅಪಘಾತ: 10 ಮಂದಿ ಸಾವು

ಪ್ರಯಾಗರಾಜ್ (ಪಿಟಿಐ): ಮಹಾ ಕುಂಭಕ್ಕೆ ತೆರಳುತ್ತಿದ್ದ ಕಾರೊಂದು ಬಸ್‌ಗೆ ಡಿಕ್ಕಿ ಹೊಡೆದು, 10 ಮಂದಿ ಮೃತಪಟ್ಟಿರುವ ಘಟನೆ ಉತ್ತರ ಪ್ರದೇಶದ ಪ್ರಯಾಗರಾಜ್ ಜಿಲ್ಲೆಯಲ್ಲಿ ಶುಕ್ರವಾರ ತಡರಾತ್ರಿ ನಡೆದಿದೆ.

ಮೃತರನ್ನು ಛತ್ತೀಸಗಢದ ಕೋರ್ಬಾ ಜಿಲ್ಲೆಯ ನಿವಾಸಿಗಳಾದ ಸೋಮನಾಥ್ (28), ಈಶ್ವರೀ ಪ್ರಸಾದ್ ಜೈಸ್ವಾಲ್ (56), ಭಾಗೀರಥಿ ಜೈಸ್ವಾಲ್ (43), ಶಿವ ರಜಪೂತ್ (60), ಸಂತೋಷ್ ಸೋನಿ (55), ಸೌರವ್ ಸೋನಿ, ಅಜಯ್ ಬಂಜಾರೆ, ಗಂಗಾ ದಾಸ್ ವರ್ಮಾ, ದೀಪಕ್ ವರ್ಮಾ ಹಾಗೂ ರಾಜು ಸಾಹು ಎಂದು ಗುರುತಿಸಲಾಗಿದೆ.

'ಬಸ್ ಹಾಗೂ ಬೊಲೆರೊ ಕಾರಿನ ನಡುವೆ ಮುಖಾಮುಖಿ ಡಿಕ್ಕಿಯಾಗಿದ್ದು, ಕಾರಿನಲ್ಲಿದ್ದ ಎಲ್ಲ 10 ಮಂದಿಯೂ ಮೃತಪಟ್ಟಿದ್ದಾರೆ. ಅವರು ಮಹಾ ಕುಂಭ ಮೇಳದಲ್ಲಿ ಪುಣ್ಯಸ್ನಾನ ಮಾಡಲೆಂದು ತೆರಳುತ್ತಿದ್ದರು' ಎಂದು ಪ್ರಯಾಗರಾಜ್ ಡಿಸಿಪಿ ವಿವೇಕ ಚಂದ್ರ ಯಾದವ್ ತಿಳಿಸಿದ್ದಾರೆ. ಬಸ್‌ನಲ್ಲಿದ್ದವರಿಗೆ ಸಣ್ಣ-ಪುಟ್ಟ ಗಾಯಗಳಾಗಿವೆ ಎಂದು ಮಾಹಿತಿ ನೀಡಿದ್ದಾರೆ.

ಗುಜರಾತ್‌ನ ನಾಲ್ವರು ಸಾವು

ದಾಹೊದ್ (ಗುಜರಾತ್) (ಪಿಟಿಐ): ಮಹಾಕುಂಭಮೇಳ ಯಾತ್ರೆ ಮುಗಿಸಿ ಹಿಂದಿರುಗುತ್ತಿದ್ದ ಪ್ರವಾಸಿ ವ್ಯಾನ್ ರಸ್ತೆ ಬದಿ ನಿಂತಿದ್ದ ಟ್ರಕ್‌ಗೆ ಡಿಕ್ಕಿಯಾಗಿ ಮಹಿಳೆ ಸೇರಿ ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದು, 6 ಮಂದಿ ಗಾಯಗೊಂಡಿದ್ದಾರೆ.

ಗುಜರಾತ್‌ನ ದಾಹೊದ್ ಜಿಲ್ಲೆಯ ಲಿಮ್‌ಖೇಡಾ ಬಳಿ, ಇಂದೋರ್–ಅಹಮದಾಬಾದ್ ಹೆದ್ದಾರಿಯಲ್ಲಿ ಶನಿವಾರ ತಡರಾತ್ರಿ ಈ ಅಪಘಾತ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರನ್ನು ಗುಜರಾತ್‌ನ ಅಂಕಲೇಶ್ವರ ಜಿಲ್ಲೆಯ ದೇವರಾಜ ನಾಕುಂ (49), ಅವರ ಪತ್ನಿ ಜಸುಬಾ (47), ಧೋಲ್ಕಾ ಜಿಲ್ಲೆಯ ಸಿದ್ಧರಾಜ್ ದಾಭಿ (32) ಹಾಗೂ ರಮೇಶ್ ಗೋಸ್ವಾಮಿ ಎಂದು ಗುರುತಿಸಲಾಗಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ತಿಳಿಸಿದ್ದಾರೆ.

'ಕುಂಭಮೇಳದ ಅವಧಿ ವಿಸ್ತರಿಸಿ'

ಲಖನೌ: 'ಮಹಾಕುಂಭ ಮೇಳಕ್ಕೆ ಭೇಟಿ ನೀಡಲು ಬಯಸಿರುವ ಜನರಿಗೆ ಅನುಕೂಲ ಆಗುವಂತೆ ಮೇಳದ ಅವಧಿಯನ್ನು ವಿಸ್ತರಿಸಬೇಕು ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಒತ್ತಾಯಿಸಿದ್ದಾರೆ.

ಸಂಚಾರ, ಜನ ದಟ್ಟಣೆ ನಿರ್ವಹಣೆಯಲ್ಲಿ ಲೋಪದಿಂದಾಗಿ ಪ್ರಯಾಗರಾಜ್ ಜಿಲ್ಲೆಯ ನಿವಾಸಿಗಳಿಗೆ ಪುಣ್ಯಸ್ನಾನ ಮಾಡಲು ಆಗಿಲ್ಲ ಎಂದು ದೂರಿದರು. ಮಹಾಕುಂಭ ಮೇಳದ ನಿರ್ವಹಣೆಯಲ್ಲಿ ಸರ್ಕಾರ ವಿಫಲವಾಗಿದ್ದು, ಇದರಿಂದ ರಾಜ್ಯದ ವರ್ಚಸ್ಸಿಗೆ ವಿಶ್ವಮಟ್ಟದಲ್ಲಿ ಧಕ್ಕೆಯಾಗಿದೆ ಎಂದು ಟೀಕಿಸಿದರು.

ಮೇಳವು ಜ.14ರಂದು ಆರಂಭವಾಗಿದ್ದು, ಮಹಾಶಿವರಾತ್ರಿ ದಿನವಾದ ಫೆಬ್ರುವರಿ 26ರಂದು ಮುಗಿಯಲಿದೆ.

ಉಗ್ರರ ನಂಟು ಮೂವರು ವಜಾ

ಜಮ್ಮು (ಪಿಟಿಐ): ಉಗ್ರ ಸಂಘಟನೆಗಳ ಜೊತೆ ನಂಟು ಹೊಂದಿರುವ ಆರೋಪದ ಮೇಲೆ ಪೊಲೀಸ್ ಕಾನ್‌ಸ್ಟೆಬಲ್ ಸೇರಿ ಮೂವರು ಸರ್ಕಾರಿ ಸಿಬ್ಬಂದಿಯನ್ನು ಜಮ್ಮು-ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಶನಿವಾರ ಸೇವೆಯಿಂದ ವಜಾ ಮಾಡಿದ್ದಾರೆ.

ಪೊಲೀಸ್ ಕಾನ್‌ಸ್ಟೆಬಲ್ ಫಿರ್ದೋಸ್ ಅಹ್ಮದ್ ಭಟ್, ಶಿಕ್ಷಣ ಇಲಾಖೆಯ ಶಿಕ್ಷಕ ಅಶ್ರಫ್ ಭಟ್ ಮತ್ತು ಅರಣ್ಯ ಇಲಾಖೆಯ ಪರಿಚಾರಕ ನಿಸಾರ್ ಅಹ್ಮದ್ ಖಾನ್ ಸೇವೆಯಿಂದ ವಜಾಗೊಂಡ ಸಿಬ್ಬಂದಿ. 2000ನೇ ಇಸವಿಯಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಸಚಿವರೊಬ್ಬರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಸಾರ್ ಬಂಧಿತನಾಗಿದ್ದ.

ಮಣಿಪುರ 9 ಉಗ್ರರ ಸೆರೆ

ಇಂಫಾಲ್ (ಪಿಟಿಐ): ಮಣಿಪುರದ ಇಂಫಾಲ್ ಪೂರ್ವ ಮತ್ತು ತೌಬಲ್ ಜಿಲ್ಲೆಯಲ್ಲಿ ನಡೆದ ವಿವಿಧ ಕಾರ್ಯಾಚರಣೆಗಳಲ್ಲಿ ಮೂರು ನಿಷೇಧಿತ ಸಂಘಟನೆಗೆ ಸೇರಿದ 9 ಉಗ್ರರನ್ನು ಭದ್ರತಾ ಪಡೆಯು ಬಂಧಿಸಿದೆ ಎಂದು ಪೊಲೀಸರು ಶನಿವಾರ ತಿಳಿಸಿದರು.

ಕಾಂಗ್ಲಿಪಾಕ್ ಕಮ್ಯುನಿಸ್ಟ್ ಪಕ್ಷದ (ನೋಯಾನ್) ನಾಲ್ವರು ಸಕ್ರಿಯ ಸದಸ್ಯರನ್ನು ತೌಬಲ್ ಜಿಲ್ಲೆಯಲ್ಲಿ, ನಾಲ್ವರನ್ನು ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಭದ್ರತಾ ಪಡೆ ಬಂಧಿಸಿದೆ. ಮತ್ತೊಬ್ಬ ಉಗ್ರನನ್ನು ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ಪೊಲೀಸರು ಬಂಧಿಸಿದ್ದಾರೆ.

ಸಂಗೀತ ವಿ.ವಿ ಪರೀಕ್ಷೆ ಅರ್ಜಿ ಆಹ್ವಾನ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಿಂದ ಏಪ್ರಿಲ್ – ಮೇನಲ್ಲಿ ನಡೆಸಲಾಗುವ ವಿಶೇಷ ಸಂಗೀತ ಪರೀಕ್ಷೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ವಿಶೇಷ ಸಂಗೀತ (ಕರ್ನಾಟಕ/ಹಿಂದೂಸ್ಥಾನಿ), ಭರತನಾಟ್ಯ, ಕೂಚುಪುಡಿ, ಕಥಕ್ ಮತ್ತು ತಾಳವಾದ್ಯ (ಕರ್ನಾಟಕ/ಹಿಂದೂಸ್ಥಾನಿ) ಜೂನಿಯರ್, ಸೀನಿಯರ್ ಹಾಗೂ ವಿದ್ವತ್ ಪರೀಕ್ಷೆಗಳು ನಡೆಯಲಿವೆ. ಫೆ. 17ರಿಂದ ಮಾರ್ಚ್ 15ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಪರೀಕ್ಷೆಗೆ ಹಾಜರಾಗಲು ಅಭ್ಯರ್ಥಿಗಳು ವಿಶ್ವವಿದ್ಯಾಲಯದ https://musicuniversity.ac.in/ ಜಾಲತಾಣದ ಮೂಲಕ ನೋಂದಣಿ ಮಾಡಿಕೊಳ್ಳಬೇಕು.

ಅಂತೆಯೇ, ಶಿಕ್ಷಕರು, ಪರೀಕ್ಷಕರು, ಸಾಥಿದಾರರ ಕೋರಿಕೆಯ ಮೇರೆಗೆ ಅವರು ನೋಂದಾಯಿಸಿಕೊಳ್ಳಲು ಫೆ.25ರವರೆಗೂ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಗೆಜೆಟೆಡ್ ಪ್ರೊಬೇಷನರಿ: ಕನ್ನಡ ಅಭ್ಯರ್ಥಿಗಳಿಗೆ ಅನ್ಯಾಯ ಆರೋಪ

ಅನ್ಯಾಯ ಆಗಿಲ್ಲ: ಕೆಪಿಎಸ್‌ಸಿ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ಆಯ್ಕೆಗೆ ಡಿ. 29ರಂದು ನಡೆದಿದ್ದ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ ಅರ್ಹತೆ ಹೊಂದಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ ಎಂದು ಕೆಲವು ಅಭ್ಯರ್ಥಿಗಳು, ಕನ್ನಡಪರ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದ ಬೆನ್ನಲ್ಲೆ, 'ಯಾವುದೇ ಅನ್ಯಾಯ ಆಗಿಲ್ಲ' ಎಂದು ಕೆಪಿಎಸ್‌ಸಿ ಸ್ಪಷ್ಟನೆ ನೀಡಿದೆ.

ಈ ಹಿಂದಿನ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಗಳ ಮಾಹಿತಿಯನ್ನು ನೀಡಿರುವ ಕೆಪಿಎಸ್‌ಸಿ, 2017–18ರಲ್ಲಿ ಒಟ್ಟು 106 ಹುದ್ದೆಗಳಿಗೆ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ 1:20 ಅನುಪಾತದಲ್ಲಿ ಅಭ್ಯರ್ಥಿಗಳು ಅರ್ಹತೆ ಪಡೆದಿದ್ದರು. ನಂತರ ನಿಯಮ ತಿದ್ದುಪಡಿ ಆಗಿರುವ ಕಾರಣ 2023–24ನೇ ಸಾಲಿಗೆ 1:15 ಅನುಪಾತದಂತೆ ಅಭ್ಯರ್ಥಿಗಳ ಅರ್ಹತಾ ಪಟ್ಟಿ ಪ್ರಕಟಿಸಲಾಗಿದೆ.

'ಈ ಎರಡೂ ಸಾಲಿನ ದತ್ತಾಂಶಗಳನ್ನು ತುಲನೆ ಮಾಡಿದಾಗ, 2023–24ರಲ್ಲಿ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ತೆಗೆದುಕೊಂಡು ಮುಖ್ಯ ಪರೀಕ್ಷೆಗೆ ಅರ್ಹರಾದ ಕನ್ನಡ ಮಾಧ್ಯಮ ಅಭ್ಯರ್ಥಿಗಳ ಸಂಖ್ಯೆಯು ಶೇ 6.50ರಷ್ಟು ಹೆಚ್ಚಳ ಆಗಿರುವುದು ಕಂಡುಬಂದಿದೆ. ಹೀಗಾಗಿ, ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಅನ್ಯಾಯ ಆಗಿದೆ ಎಂಬ ಆರೋಪ ಸರಿಯಲ್ಲ' ಎಂದೂ ಕೆಪಿಎಸ್‌ಸಿ ತಿಳಿಸಿದೆ.

ಕನ್ನಡ ಮಾಧ್ಯಮದವರು ಕಡಿಮೆ ಸಂಖ್ಯೆಯಲ್ಲಿ ಆಯ್ಕೆ: ಕೆಪಿಎಸ್‌ಸಿ ಸ್ಪಷ್ಟನೆ ನೀಡುತ್ತಿದ್ದಂತೆ, ಆರ್‌ಟಿಐ ಮೂಲಕ ಪಡೆದ 2015ನೇ ಸಾಲಿನ ಮತ್ತು 2017–18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಮುಖ್ಯಪರೀಕ್ಷೆ ಬರೆದು ಆಯ್ಕೆಯಾದ ಅಭ್ಯರ್ಥಿಗಳ ಮಾಹಿತಿಯನ್ನು ಕೆಲವು ಅಭ್ಯರ್ಥಿಗಳು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಅಲ್ಲದೆ, ಈ ಹುದ್ದೆಗಳಿಗೆ ಕನ್ನಡ ಮಾಧ್ಯಮದಲ್ಲಿ ಮುಖ್ಯ ಪರೀಕ್ಷೆ ಬರೆದವರು ಕಡಿಮೆ ಸಂಖ್ಯೆಯಲ್ಲಿ ಆಯ್ಕೆ ಆಗುತ್ತಿದ್ದಾರೆ ಎಂದೂ ಹೇಳಿದ್ದಾರೆ.

ಆರ್‌ಟಿಐ ಮಾಹಿತಿಯ ಪ್ರಕಾರ, 2015ನೇ ಸಾಲಿನಲ್ಲಿ 428 ಹುದ್ದೆಗಳ ಆಯ್ಕೆಗೆ ಕನ್ನಡ ಮಾಧ್ಯಮದಲ್ಲಿ 4,600 ಅಭ್ಯರ್ಥಿಗಳು ಮುಖ್ಯ ಪರೀಕ್ಷೆ ಬರೆದಿದ್ದು, ಅಂತಿಮ ಆಯ್ಕೆ ಪಟ್ಟಿಯಲ್ಲಿ 115 ಮಂದಿ ಸ್ಥಾನ ಪಡೆದಿದ್ದರು. ಇಂಗ್ಲಿಷ್ ಮಾಧ್ಯಮದಲ್ಲಿ 3,441 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದು, ಅಂತಿಮ ಆಯ್ಕೆ ಪಟ್ಟಿಯಲ್ಲಿ 313 ಮಂದಿ ಸ್ಥಾನ ಪಡೆದಿದ್ದರು. 2017–18ನೇ ಸಾಲಿನಲ್ಲಿ 106 ಹುದ್ದೆಗಳ ಆಯ್ಕೆಗೆ ಕನ್ನಡ ಮಾಧ್ಯಮದಲ್ಲಿ 530 ಅಭ್ಯರ್ಥಿಗಳು ಮುಖ್ಯ ಪರೀಕ್ಷೆ ಬರೆದಿದ್ದು, ಅಂತಿಮ ಆಯ್ಕೆ ಪಟ್ಟಿಯಲ್ಲಿ 10 ಮಂದಿ ಸ್ಥಾನ ಪಡೆದಿದ್ದರು. ಇಂಗ್ಲಿಷ್ ಮಾಧ್ಯಮದಲ್ಲಿ 1,168 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದು, ಅಂತಿಮ ಆಯ್ಕೆ ಪಟ್ಟಿಯಲ್ಲಿ 96 ಮಂದಿ ಸ್ಥಾನ ಪಡೆದಿದ್ದರು.

18ರಂದು ಪ್ರತಿಭಟನೆ– ಕರವೇ

'ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳಿಗೆ ನಡೆದ ಪೂರ್ವಭಾವಿ ಮರು ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ಆಗಿರುವ ಅನ್ಯಾಯದ ವಿರುದ್ಧ ಇದೇ 18ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ' ಎಂದು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣಗೌಡ ತಿಳಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಈ ಹಿಂದೆ ಪ್ರಶ್ನೆ ಪತ್ರಿಕೆಯಲ್ಲಿ ಕನ್ನಡ ಅನುವಾದದ ಸಮಸ್ಯೆ ಕಂಡುಬಂದಿದ್ದರಿಂದ ಆದ ಅನ್ಯಾಯದ ವಿರುದ್ಧದ ಚಳವಳಿಗೆ ಸ್ಪಂದಿಸಿ ಮರುಪರೀಕ್ಷೆಗೆ ಮುಖ್ಯಮಂತ್ರಿ ಆದೇಶಿಸಿದ್ದರು. ಮರು ಪರೀಕ್ಷೆಯಲ್ಲೂ ತಪ್ಪುಗಳು ಮರುಕಳಿಸಿವೆ. ಮುಖ್ಯಮಂತ್ರಿ ತಕ್ಷಣ ಮಧ್ಯಪ್ರವೇಶಿಸಿ ಫಲಿತಾಂಶ ತಡೆಹಿಡಿಯಬೇಕು' ಎಂದು ಆಗ್ರಹಿಸಿದ್ದಾರೆ.

ಸುದ್ದಿ 2 ನಿಮಿಷ

'ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರ ಮೈಸೂರಿನಲ್ಲೇ ಉಳಿಸಲು ಯತ್ನ'

ಮೈಸೂರು: 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಮೈಸೂರಿನಲ್ಲೇ ಉಳಿಸಿಕೊಳ್ಳುವಂತೆ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ ಕರ್ನಾಟಕವನ್ನು ಪ್ರತಿನಿಧಿಸುವ ಎಲ್ಲ ಸಂಸದರಿಗೆ ಪತ್ರ ಬರೆಯಲಾಗುವುದು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಇಲ್ಲಿ ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಕೇಂದ್ರವನ್ನು ಇಲ್ಲಿನ ಭಾರತೀಯ ಭಾಷಾ ಸಂಸ್ಥಾನದಿಂದ (ಸಿಐಐಎಲ್) ಬೇರ್ಪಡಿಸಿ ಸ್ವಾಯತ್ತ ಸ್ಥಾನಮಾನ ನೀಡಲು ಸಚಿವ ಧರ್ಮೇಂದ್ರ ಪ್ರಧಾನ್ ಒಪ್ಪಿಗೆ ನೀಡಿದ್ದಾರೆ. ಆದರೆ, ತಮಿಳಿಗೆ ಕೊಟ್ಟಂತೆ ಕನ್ನಡ ಶಾಸ್ತ್ರೀಯ ಕೇಂದ್ರಕ್ಕೆ ಸ್ವಾಯತ್ತ ಸ್ಥಾನಮಾನ ಕೊಟ್ಟು ರಾಜ್ಯ ಸರ್ಕಾರದ ಅಧೀನಕ್ಕೆ ನೀಡಬೇಕೆಂಬ ಮನವಿಗೆ ಅವರು ಒಪ್ಪಿಲ್ಲ' ಎಂದು ಹೇಳಿದರು.



'ಕೇಂದ್ರದ ಅನುದಾನದಲ್ಲೇ ನಿರ್ವಹಣೆ ಮಾಡುವುದಾಗಿ ಸಚಿವರು ತಿಳಿಸಿದರು. ಇದೊಂದು ಅಂತರರಾಷ್ಟ್ರೀಯ ಕೇಂದ್ರ ಆಗಬೇಕು. ಹೀಗಾಗಿ ಅಧ್ಯಯನ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸಬೇಕು. ಇಲ್ಲವೇ ಅದರ ಶಾಖೆಯನ್ನು ಬೆಂಗಳೂರಿನಲ್ಲಿ ತೆರೆಯಬೇಕು ಎಂಬುದು ಸಚಿವರ ಸಲಹೆ. ನಾವು ಮೈಸೂರಿನಲ್ಲೇ ಮುಂದುವರಿಸುವಂತೆ ಕೋರಿದ್ದೇವೆ. ಮತ್ತೊಮ್ಮೆ ಪತ್ರ ಬರೆಯುತ್ತೇವೆ' ಎಂದು ಪ್ರತಿಕ್ರಿಯಿಸಿದರು.

ಚಲನಚಿತ್ರ ಅಕಾಡೆಮಿ ಸಾಮಾನ್ಯ ಸಮಿತಿ ಸದಸ್ಯರ ನೇಮಕ

ಬೆಂಗಳೂರು: ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸಾಮಾನ್ಯ ಸಮಿತಿಗೆ ಪತ್ರಿಕೋದ್ಯಮ, ಸಿನಿಮಾ ಕ್ಷೇತ್ರದ ಏಳು ಮಂದಿಯನ್ನು ಸದಸ್ಯರನ್ನಾಗಿ ನೇಮಿಸಿ ರಾಜ್ಯ ಸರ್ಕಾರ ಶನಿವಾರ ಆದೇಶ ಹೊರಡಿಸಿದೆ.

ಪತ್ರಕರ್ತರಾದ ಕೊಪ್ಪಳದ ಸಾವಿತ್ರಿ ಮಜುಂದಾರ್, ಬೆಂಗಳೂರಿನ ಚಿದಾನಂದ ಪಟೇಲ್, ಶಿವಮೊಗ್ಗದ ದೇಶಾದ್ರಿ ಹೊಸ್ಮನೆ, ಸಿನಿಮಾ ಕಲಾವಿದರಾದ ಎಸ್. ನಿಖಿತಾಸ್ವಾಮಿ, ಸಿನಿಮಾ ಪ್ರಚಾರಕ ಡಿ.ಜಿ. ವೆಂಕಟೇಶ್, ಚಿತ್ರೋದ್ಯಮಿ ಮೈಸೂರಿನ ಎಸ್. ವಿಷ್ಣು ಕುಮಾರ್, ಸಿನಿಮಾ ತಂತ್ರಜ್ಞರಾದ ಐವಾನ್ ಡಿಸಿಲ್ವ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸದಸ್ಯರನ್ನಾಗಿ ನೇಮಿಸಲಾಗಿದೆ. ಸರ್ಕಾರದ ಮುಂದಿನ ಆದೇಶದವರೆಗೂ ನೂತನ ಸದಸ್ಯರು ಚಲನಚಿತ್ರ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶದಲ್ಲಿ ವಿವರಿಸಿದೆ.

ಅಕಾಡೆಮಿಗೆ ಅಧ್ಯಕ್ಷರನ್ನಾಗಿ ಸಾಧು ಕೋಕಿಲ ಅವರನ್ನು ಕಳೆದ ಫೆಬ್ರುವರಿಯಲ್ಲಿಯೇ ಸರ್ಕಾರ ನೇಮಿಸಿತ್ತು.



ಶಾರದಾಂಬೆ ಮಹಾರಥೋತ್ಸವದಲ್ಲಿ ಮಠದ ಕಿರಿಯ ಯತಿ ವಿಧುಶೇಖರ ಭಾರತಿ ಸ್ವಾಮೀಜಿ ಅವರು ಕಾಲ್ನಡಿಗೆಯಲ್ಲಿ ಸಾಗಿದರು

ಶೃಂಗೇರಿ: ಶಾರದಾಂಬೆಯ ಮಹಾರಥೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಇಲ್ಲಿನ ಶಾರದಾ ಪೀಠದ ಶಾರದಾಂಬಾ ಮಹಾರಥೋತ್ಸವ ಮಠದ ಕಿರಿಯ ಯತಿ ವಿಧುಶೇಖರ ಭಾರತಿ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಶನಿವಾರ ವಿಜೃಂಭಣೆಯಿಂದ ನಡೆಯಿತು.

ಬೆಳಿಗ್ಗೆ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಪೀಠಾಧೀಶ ಭಾರತೀತೀರ್ಥ ಸ್ವಾಮೀಜಿ ಈ ಸಂದರ್ಭದಲ್ಲಿ ಮಠದ ಹೊರ ಪ್ರಾಂಗಣ, ಒಳ ಪ್ರಾಂಗಣದ ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಶಾರದಾಂಬೆಯ ಉತ್ಸವ ಮೂರ್ತಿಯನ್ನು ವಾದ್ಯಮೇಳದೊಂದಿಗೆ ಪೀಠದಿಂದ ರಥದ ಬಳಿಗೆ ತರಲಾಯಿತು. ರಥಕ್ಕೆ ಮೂರು ಪ್ರದಕ್ಷಿಣೆ ಹಾಕಿದ ನಂತರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ವಿಶೇಷ ಪೂಜೆ ಸಲ್ಲಿಸಿ ರಥವನ್ನು ಎಳೆಯಲಾಯಿತು.


ಆನೆ, ಅಶ್ವ, ತಟ್ಟಿರಾಯ, ಸ್ತಬ್ಧಚಿತ್ರ, ಭಜನಾ ತಂಡಗಳು ಉತ್ಸವದ ಮೆರುಗು ಹೆಚ್ಚಿಸಿದವು. ರಂಗೋಲಿ ಚಿತ್ತಾರ ಬಿಡಿಸಿದ್ದ ಹಾದಿಯಲ್ಲಿ ರಥ ಸಾಗಿತು. ಸದ್ವಿದ್ಯಾ ಸಂಜೀವಿನಿ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳಿಂದ ವೇದಘೋಷ ಮೊಳಗಿತು. ಭಾರತಿ ಚೌಕದಲ್ಲಿರುವ ಕಟ್ಟೆಬಾಗಿಲಿನ ಗಣಪತಿಗೆ ಪೂಜೆ ಸಲ್ಲಿಸಲಾಯಿತು. ವಿಧುಶೇಖರ ಭಾರತಿ ಸ್ವಾಮೀಜಿ ಕಾಲ್ನಡಿಗೆಯಲ್ಲಿ ಸಾಗಿದರು. ಮಠದ ಆಡಳಿತಾಧಿಕಾರಿ ಪಿ.ಎ. ಮುರಳಿ ಭಾಗವಹಿಸಿದ್ದರು.

ದೌರ್ಜನ್ಯ ನಡೆದರೂ ಮೌನ: ಸುಳ್ಳು ಕ್ರಯಪತ್ರ ಸೃಷ್ಟಿಸಿದ ವ್ಯಕ್ತಿಗೆ ₹5 ಲಕ್ಷ ದಂಡ

ರಾಜ್ಯ ಸರ್ಕಾರಕ್ಕೆ ₹10 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗೆ ಸೇರಿದ ಮಾಲೀಕರಿಂದ ಖರೀದಿ ಮಾಡಿರುವುದಾಗಿ ಸುಳ್ಳು ಕ್ರಯಪತ್ರ ಸೃಷ್ಟಿಸಿಕೊಂಡು ಜಮೀನು ಸ್ವಾಧೀನಕ್ಕೆ ಪಡೆದಿದ್ದ ವ್ಯಕ್ತಿಯೊಬ್ಬರಿಗೆ ₹ 5 ಲಕ್ಷ ದಂಡ ವಿಧಿಸಿರುವ ಹೈಕೋರ್ಟ್, ಅಧಿಕಾರಿಗಳು ಸೂಕ್ತ ಕ್ರಮ ಜರುಗಿಸಿಲ್ಲ ಎಂಬ ಕಾರಣಕ್ಕೆ ರಾಜ್ಯ ಸರ್ಕಾರಕ್ಕೆ ₹10 ಲಕ್ಷ ದಂಡ ವಿಧಿಸಿದೆ.



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪದ ಬೆಲೆಬಾಳುವ ಎರಡು ಎಕರೆ ಜಮೀನಿನ ವ್ಯಾಜ್ಯ ಪ್ರಕರಣದಲ್ಲಿ ಈ ಆದೇಶ ನೀಡಿರುವ ನ್ಯಾಯಪೀಠ, 'ಅಕ್ರಮವಾಗಿ ಸ್ವಾಧೀನದಲ್ಲಿ ಇರಿಸಿಕೊಂಡಿರುವ ಜಮೀನನ್ನು ಕೂಡಲೇ ತೆರವುಗೊಳಿಸಬೇಕು' ಎಂದು ಸುಳ್ಳು ಕ್ರಯಪತ್ರ ಹೊಂದಿರುವ ಅರ್ಜಿದಾರ ಸುರೇಶ್ ಅವರಿಗೆ ಆದೇಶಿಸಿದೆ.

ವ್ಯಾಜ್ಯಕ್ಕೆ ಸಂಬಂಧಿಸಿದಂತೆ, 'ಬೆಂಗಳೂರು ನಗರ ಜಿಲ್ಲಾಧಿಕಾರಿ ಮತ್ತು ಬೆಂಗಳೂರು ಉತ್ತರ ವಿಭಾಗದ ಉಪ ವಿಭಾಗಾಧಿಕಾರಿ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಬೇಕು' ಎಂದು ಕೋರಿ ಸದ್ಯ ಜಮೀನಿನ ಸ್ವಾಧೀನ ಹೊಂದಿರುವ ಎಚ್.ಆರ್. ಸುರೇಶ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎನ್.ಎಸ್. ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಆ ಆದೇಶ ನೀಡಿದೆ.

ಇದೇ ವೇಳೆ, 'ವಿವಾದಿತ ಜಮೀನನಲ್ಲಿ ಕಾನೂನುಬದ್ಧ ವಾರಸುದಾರರಾದ ಎ.ಜೆ. ಜೇಮ್ಸ್ ಅವರು ನಿರ್ಮಿಸಿದ್ದ ಫಾರ್ಮ್ ಹೌಸ್‌ಗೆ ಧಕ್ಕೆ ಉಂಟು ಮಾಡಿದ ಘಟನೆಯನ್ನು ಸಂಬಂಧಿಸಿದ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸದೆ ಸೂಕ್ತ ಕ್ರಮ ಜರುಗಿಸುವಲ್ಲಿ ವಿಫಲವಾಗಿದ್ದಾರೆ' ಎಂಬ ಕಾರಣಕ್ಕಾಗಿ ನ್ಯಾಯಪೀಠ, ರಾಜ್ಯ ಸರ್ಕಾರಕ್ಕೂ ದಂಡ ವಿಧಿಸಿದೆ.

ಪ್ರಕರಣವೇನು?: ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿಯ ಬೆಟ್ಟಹಲಸೂರು ಗ್ರಾಮದಲ್ಲಿನ ಸರ್ವೆ ನಂಬರ್ 376ರಲ್ಲಿರುವ ಎರಡು ಎಕರೆ ಜಮೀನಲ್ಲಿ ಎ.ಜೆ.ಜೇಮ್ಸ್ ಮತ್ತು ಅವರ ಪತ್ನಿ ಆನ್ಸಿ ಜೇಮ್ಸ್ ಅವರ ಹೆಸರಿನಲ್ಲಿ ಒಂದು ಎಕರೆ ಹಾಗೂ ಬಿ.ಎಂ. ಗೋವಿಂದರಾಜು ಮತ್ತು ಬಿ.ಜಿ. ಮುನಿಯಪ್ಪ ಹೆಸರಿನಲ್ಲಿ ಇನ್ನೊಂದು ಎಕರೆ ಸ್ವಾಧೀನ ಹೊಂದಿದ್ದರು.

ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವ ಎಚ್.ಆರ್.ಸುರೇಶ್, 'ಈ ಎರಡು ಎಕರೆ ಜಮೀನನ್ನು ನಾನು ಪರಿಶಿಷ್ಟ ಜಾತಿಗೆ ಸೇರಿದ್ದ ಬೈಲಮ್ಮ ಮತ್ತು ಗೌರಮ್ಮ ಅವರಿಂದ ಖರೀದಿಸಿದ್ದೇನೆ. ಈ ಜಮೀನಿನ ಮಾರಾಟಕ್ಕೆ ಸರ್ಕಾರ ಅನುಮತಿ ನೀಡಿದೆ' ಎಂದು ಹೇಳಿ ಸುಳ್ಳು ಕ್ರಯಪತ್ರ ಸೃಷ್ಟಿಸಿಕೊಂಡಿದ್ದರು.

'ನಾನು ಕ್ರಯಪತ್ರ ಹೊಂದಿದ್ದೇನೆ' ಎಂಬ ಸುಳ್ಳು ದಾಖಲೆಗಳ ಆಧಾರದಲ್ಲಿ ಸುರೇಶ್ ಅವರು, ಈ ಮೊದಲೇ ಜಮೀನನ್ನು ಕಾನೂನುಬದ್ಧವಾಗಿ ಖರೀದಿ ಮಾಡಿ ಸ್ವಾಧೀನ ಹೊಂದಿದ್ದ ಎ.ಜೆ.ಜೇಮ್ಸ್, ಅವರ ಪತ್ನಿ ಆನ್ಸಿ ಜೇಮ್ಸ್ ಹಾಗೂ ಬಿ.ಎಂ.ಗೋವಿಂದರಾಜು ಮತ್ತು ಅವರ ಮಕ್ಕಳು ಕಟ್ಟಿಕೊಂಡಿದ್ದ ಫಾರ್ಮ್ ಹೌಸ್ ಅನ್ನು ಧ್ವಂಸಗೊಳಿಸಿದ್ದರು. ಅಲ್ಲಿದ್ದ ಜೇಮ್ಸ್ ಹಾಗೂ ಇತರರನ್ನು ಬಲವಂತದಿಂದ ಹೊರಹಾಕಿ ಜಮೀನನ್ನು ಸ್ವಾಧೀನಕ್ಕೆ ಪಡೆದಿದ್ದರು. ಈ ಕುರಿತಂತೆ ಜೇಮ್ಸ್ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಕ್ರಮ ಜರುಗಿಸಿರಲಿಲ್ಲ.

ಏತನ್ಮಧ್ಯೆ, ಜಮೀನಿನ ಕಾನೂನುಬದ್ಧ ವಾರಸುದಾರಿಕೆಗೆ ಸಂಬಂಧಿಸಿದಂತೆ ಎ.ಸಿ ಮತ್ತು ಡಿ.ಸಿ ಮುಂದಿದ್ದ ಪ್ರಕರಣದ ಅರೆನ್ಯಾಯಿಕ ವಿಚಾರಣೆಯಲ್ಲಿ ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ, 'ಈ ಜಮೀನು ಕಾನೂನುಬದ್ಧ ವಾರಸುದಾರರಿಗೇ ಸೇರತಕ್ಕದ್ದು' ಎಂದು ಆದೇಶಿಸಿದ್ದರು. ಈ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಸುರೇಶ್, 'ಎ.ಸಿ ಮತ್ತು ಡಿ.ಸಿ ಆದೇಶವನ್ನು ರದ್ದುಗೊಳಿಸಬೇಕು' ಎಂದು ಕೋರಿದ್ದರು.

ವಿಚಾರಣೆ ನಡೆಸಿದ ನ್ಯಾಯಪೀಠ, 'ಎಚ್.ಆರ್.ಸುರೇಶ್ ಜಮೀನನ್ನು ಕಾನೂನು ಬಾಹಿರವಾಗಿ ಸ್ವಾಧೀನಕ್ಕೆ ಪಡೆದಿರುವುದು ದಾಖಲೆಗಳಿಂದ ಸಾಬೀತಾಗಿದೆ. ಆದ್ದರಿಂದ, ಅವರನ್ನು ಅಲ್ಲಿಂದ ಕೂಡಲೇ ತೆರವುಗೊಳಿಸಿ, ಕಾನೂನುಬದ್ಧ ವಾರಸುದಾರರಾದ ಪ್ರತಿವಾದಿಗಳ ಸ್ವಾಧೀನಕ್ಕೆ ನೀಡಲು ತಕ್ಕ ಕ್ರಮ ಕೈಗೊಳ್ಳಬೇಕು' ಎಂದು ಜಿಲ್ಲಾಧಿಕಾರಿಗೆ ನಿರ್ದೇಶಿಸಿದೆ. 'ಸುರೇಶ್ ₹5 ಲಕ್ಷ ದಂಡವನ್ನು ನಾಲ್ಕು ವಾರಗಳ ಒಳಗಾಗಿ ಪಾವತಿ ಮಾಡಬೇಕು' ಎಂದೂ ತಾಕೀತು ಮಾಡಿದೆ.

'ಹೈಕೋರ್ಟ್ ನೀಡಿರುವ ಈ ಆದೇಶಕ್ಕೆ ಅನುಗುಣವಾಗಿ ಜಿಲ್ಲಾಧಿಕಾರಿ ಕೈಗೊಳ್ಳುವ ಮುಂದಿನ ಕ್ರಮಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಬೇಕು' ಎಂದು ಸೂಚಿಸಿರುವ ನ್ಯಾಯಪೀಠ, ಪ್ರಕರಣವನ್ನು ವಿಚಾರಣೆಗಾಗಿ ಇದೇ 24ಕ್ಕೆ ಮರು ನಿಗದಿಗೊಳಿಸಬೇಕು ಎಂದು ಆದೇಶಿಸಿದೆ.

'ನನ್ನ ವಿರುದ್ಧ ವಿರೋಧಿಗಳ ಷಡ್ಯಂತ್ರ'

ಶಿವಮೊಗ್ಗ: 'ಮರಳು ಅಕ್ರಮ ಗಣಿಗಾರಿಕೆ ಅಡ್ಡೆ ಮೇಲೆ ದಾಳಿ ನಡೆಸಿದ್ದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮಹಿಳಾ ಅಧಿಕಾರಿಗೆ ನಿಂದಿಸಿದ ಪ್ರಕರಣದಲ್ಲಿ ನನ್ನ ಹೆಸರು ತಳಕು ಹಾಕಲಾಗುತ್ತಿದೆ. ನನಗೂ ಈ ಪ್ರಕರಣಕ್ಕೂ ಯಾವ ಸಂಬಂಧವೂ ಇಲ್ಲ. ರಾಜಕೀಯ ಉದ್ದೇಶಕ್ಕಾಗಿ ವಿರೋಧಿಗಳು ನನ್ನ ವಿರುದ್ಧ ಷಡ್ಯಂತ್ರ ನಡೆಸಿದ್ದಾರೆ' ಎಂದು ಭದ್ರಾವತಿ ಶಾಸಕ ಬಿ.ಕೆ.ಸಂಗಮೇಶ್ವರ ಅವರ ಪುತ್ರ ಬಿ.ಎಸ್.ಬಸವೇಶ್ ಹೇಳಿದ್ದಾರೆ.

ಭದ್ರಾವತಿಯಲ್ಲಿ ಶನಿವಾರ ನಗರಸಭೆ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಒಮ್ಮೆಯೂ ಆ ಅಧಿಕಾರಿಯ ಮುಖ ನೋಡಿಲ್ಲ. ನನ್ನ ಮೇಲೆ ಸುಳ್ಳು ಆರೋಪ ಮಾಡಲಾಗುತ್ತಿದೆ. ಪೊಲೀಸರು ವಿಚಾರಣೆಗೆ ಕರೆದರೆ ಸಹಕಾರ ನೀಡುವೆ' ಎಂದರು.

'ವಿ.ವಿಗಳಿಗೆ ಮುಚ್ಚುವ ಭಾಗ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯಕ್ಕೆ ವಿಶ್ವವಿದ್ಯಾಲಯಗಳನ್ನು ಮುಚ್ಚುವ ಭಾಗ್ಯ ನೀಡಿದ್ದಾರೆ. 3 ಸಾವಿರ ಬಾರ್‌ಗಳನ್ನು ಮುಚ್ಚುವುದಿಲ್ಲ. ಆದರೆ, ವಿಶ್ವವಿದ್ಯಾಲಯಗಳನ್ನು ಮಾತ್ರ ಮುಚ್ಚಲಾಗುತ್ತಿದೆ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಕ್ರೋಶ ಹೊರಹಾಕಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯನವರ ಕಣ್ಣು ವಿಶ್ವವಿದ್ಯಾಲಯಗಳ ಮೇಲೆ ಬಿದ್ದಿದೆ. ಯಾರೂ ಪದವೀಧರರಾಗದಿದ್ದರೆ ಯುವನಿಧಿ ಯೋಜನೆ ನಿಲ್ಲಿಸಬಹುದು ಎಂಬುದು ಅವರ ಚಿಂತನೆ' ಎಂದು ಹೇಳಿದರು.

'ಮಂಡ್ಯದ ವಿಶ್ವವಿದ್ಯಾಲಯವನ್ನು ಮುಚ್ಚಿ, ಮನೋರಂಜನಾ ಪಾರ್ಕ್ ಹಾಗೂ ಜಲಕ್ರೀಡೆಗೆ ವ್ಯವಸ್ಥೆ ಮಾಡಲಾಗುತ್ತಿದೆ. ಉಪನ್ಯಾಸಕರ ನೇಮಕವಿಲ್ಲ, ಅತಿಥಿ ಉಪನ್ಯಾಸಕರಿಗೆ ವೇತನ ಇಲ್ಲ, ಹೊಸ ಶಿಕ್ಷಣ ನೀತಿ ಜಾರಿಯಾಗಿಲ್ಲ, ಶಾಲಾ ಕೊಠಡಿಗಳ ದುರಸ್ತಿಗೆ ಹಣವಿಲ್ಲ, ಪಠ್ಯ ಪುಸ್ತಕ-ಸಮವಸ್ತ್ರ ನೀಡಲು ಕಾಸಿಲ್ಲ. ₹ 4 ಲಕ್ಷ ಕೋಟಿ ಗಾತ್ರದ ಬಜೆಟ್ ಮಂಡಿಸುವಾಗ, ಅದರಲ್ಲಿ ವಿಶ್ವವಿದ್ಯಾಲಯಗಳಿಗೆ ₹ 342 ಕೋಟಿ ಕೊಡಲು ಆಗದೇ ಇದ್ದರೆ ಮತ್ತೇಕೆ ಬಜೆಟ್ ಮಂಡಿಸಬೇಕು' ಎಂದು ಅಶೋಕ ಅವರು ಪ್ರಶ್ನಿಸಿದರು.

'ಚಾಮರಾಜನಗರ, ಕೊಪ್ಪಳ, ಮಂಡ್ಯ ಸೇರಿದಂತೆ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳನ್ನು ಮುಂದೆ ತರಲು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಗಿದೆ. ಈ ಜಿಲ್ಲೆಗಳ ಬಡವರು ಮಕ್ಕಳನ್ನು ಎಲ್ಲಿಗೆ ಕಳುಹಿಸಬೇಕು' ಎಂದೂ ಕೇಳಿದರು.

> **ಬಿಜೆಪಿ ಸರ್ಕಾರ ಹತ್ತು ವಿವಿಗಳನ್ನು ರೂಪಿಸಿದ್ದು, ಬಿಜೆಪಿ ಕಟ್ಟಿದ ಮನೆ ಒಡೆದು ಹಾಕಲು ಕಾಂಗ್ರೆಸ್ ಮುಂದಾಗಿದೆ**
> **ಛಲವಾದಿನಾರಾಯಣಸ್ವಾಮಿ** ವಿಧಾನಪರಿಷತ್ ವಿಪಕ್ಷ ನಾಯಕ

> **ವಿ.ವಿಗಳಿಂದ ಆದಾಯ ಬರಲು ಅವು ಅಂಗಡಿಗಳಲ್ಲ. ಶಿಕ್ಷಣ ನೀಡುವುದು ಸರ್ಕಾರದ ಕರ್ತವ್ಯ**
> **ಡಾ.ಸಿ.ಎನ್. ಅಶ್ವತ್ಥನಾರಾಯಣ** ಬಿಜೆಪಿ ಶಾಸಕ

ಗಲಭೆ ಪೂರ್ವನಿಯೋಜಿತ

'ಮೈಸೂರಿನಲ್ಲಿ ನಡೆದ ಗಲಭೆ ಪೂರ್ವಯೋಜಿತ. ಮೈಸೂರು ಘಟನೆಗೂ ಆರೆಸ್ಸೆಸ್‌ಗೂ ಏನು ಸಂಬಂಧ? ಸಿಸಿಟಿವಿ ಕ್ಯಾಮೆರಾ ನೋಡಿ ಆರೆಸ್ಸೆಸ್‌ನ ಯಾವ ಸ್ವಯಂಸೇವಕರು ಬಂದಿದ್ದಾರೆ ಎಂದು ತಿಳಿಸಲಿ. ಕಾಂಗ್ರೆಸ್‌ನ ಪ್ರಚೋದನೆಯಿಂದ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆಯಲಿವೆ' ಎಂದು ಆರ್. ಅಶೋಕ ಹೇಳಿದರು.

6 ಸಾಧಕರಿಗೆ ಅರೆಭಾಷೆ ಅಕಾಡೆಮಿ ಗೌರವ ಪ್ರಶಸ್ತಿ


ಮಡಿಕೇರಿ: ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು 2022 ಮತ್ತು 2023ನೇ ಸಾಲಿನ ಗೌರವ ಪ್ರಶಸ್ತಿಯನ್ನು ಘೋಷಿಸಿದೆ.



ಡಾ.ಕೆ. ವಿ.ಚಿದಾನಂದ



ಡಾ.ಕಾವೇರಿ ಮನೆ ಬೋಜಪ್ಪ



ತುಂತಜೆ ವೆಂಕಟೇಶ



ಕುಯಿಂತೋಡು ದಾಮೋದರ



ಎ.ಕೆ.ಹಿಮಕರ

'2022ನೇ ಸಾಲಿಗೆ ಕೊಡಗು ಜಿಲ್ಲೆಯ ಡಾ.ಕಾವೇರಿಮನೆ ಬೋಜಪ್ಪ, ತುಂತಜೆ ವೆಂಕಟೇಶ (ಗಣೇಶ), ದಕ್ಷಿಣ ಕನ್ನಡ ಜಿಲ್ಲೆಯ ಡಾ.ಕೆ.ವಿ. ಚಿದಾನಂದ ಹಾಗೂ 2023ನೇ ಸಾಲಿಗೆ ಕೊಡಗು ಜಿಲ್ಲೆಯ ಕುಯಿಂತೋಡು ದಾಮೋದರ, ಕೂಡಕಂಡಿ ಕಾವೇರಮ್ಮ ಸೋಮಣ್ಣ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಎ.ಕೆ.ಹಿಮಕರ ಅವರನ್ನು ಆಯ್ಕೆ ಮಾಡಲಾಗಿದೆ' ಎಂದು ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಹಾಗೂ ಪ್ರಶಸ್ತಿಪತ್ರವನ್ನು ಒಳಗೊಂಡಿದ್ದು, ಫೆ. 28ರಂದು ಇಲ್ಲಿನ ಗೌಡ ಸಮಾಜದಲ್ಲಿ ಪ್ರದಾನ ಮಾಡಲಾಗುವುದು. ಬಿಜೆಪಿ ಮುಖಂಡ ಡಿ.ವಿ.ಸದಾನಂದಗೌಡ ಭಾಗವಹಿಸಲಿದ್ದಾರೆ. ವಿವಿಧ ಲೇಖಕರ 12 ಪುಸ್ತಕಗಳು ಹಾಗೂ 12 ಸಂಶೋಧನಾ ಪ್ರಬಂಧಗಳನ್ನೂ ಬಿಡುಗಡೆ ಮಾಡಲಾಗುವುದು' ಎಂದರು.

ರಾಜ್ಯಸಭಾ ಸದಸ್ಯ ಎಚ್‌.ಡಿ.ದೇವೇಗೌಡ ಅಸಮಾಧಾನ

'ಗೋದಾವರಿ–ಕಾವೇರಿ ನದಿ ಜೋಡಣೆಯಲ್ಲಿ ರಾಜ್ಯಕ್ಕೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋದಾವರಿ–ಕಾವೇರಿ ನದಿ ಜೋಡಣೆ ಯೋಜನೆಯಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಯೋಜನೆ ಅಡಿ ರಾಜ್ಯಕ್ಕೆ 25 ಟಿಎಂಸಿ ಅಡಿ ನೀರು ಹಂಚಿಕೆ ಮಾಡಬೇಕು ಎಂಬುದು ಕೇಂದ್ರಕ್ಕೆ ನನ್ನ ಒತ್ತಾಯ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಜತೆ ಸೇರಿ ಹೋರಾಡಲು ನನಗೆ ಹಿಂಜರಿಕೆ ಇಲ್ಲ' ಎಂದು ರಾಜ್ಯಸಭಾ ಸದಸ್ಯ ಎಚ್‌.ಡಿ.ದೇವೇಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಗೋದಾವರಿ–ಕಾವೇರಿ ನದಿ ಜೋಡಣೆ ಯೋಜನೆಗೆ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿದಾಗ, ಕರ್ನಾಟಕಕ್ಕೆ ನೀರು ಹಂಚಿಕೆ ಮಾಡಿರಲಿಲ್ಲ. 2020 ಮತ್ತು 2022ರಲ್ಲಿ ನಾನು ಅಂದಿನ ಕೇಂದ್ರ ನೀರಾವರಿ ಸಚಿವರಿಗೆ ಪತ್ರ ಬರೆದಿದ್ದೆ' ಎಂದರು.

'ಕರ್ನಾಟಕಕ್ಕೆ ಆಗಿರುವ ಅನ್ಯಾಯದ ಬಗ್ಗೆ ಸಚಿವರ ಗಮನ ಸೆಳೆದ ನಂತರ, ರಾಜ್ಯಕ್ಕೆ 15.91 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿದ್ದಾರೆ. ಆದರೆ ಅದನ್ನು ಘಟಪ್ರಭಾ ನದಿಗೆ ಹರಿಸುತ್ತೇವೆ ಎಂದಿದ್ದಾರೆ. ಇದು ಸಾಧ್ಯವೇ ಇಲ್ಲ. ಗೋದಾವರಿಯಿಂದ ಹರಿಸಿದ ನೀರು ರಾಜ್ಯದಲ್ಲಿ ಕಾವೇರಿಗೆ ಎಲ್ಲಿ ಜೋಡಿಸುತ್ತಾರೆ ಎಂಬುದನ್ನು ಡಿಪಿಆರ್‌ನಲ್ಲಿ ಸ್ಪಷ್ಟವಾಗಿ ತೋರಿಸಿಯೇ ಇಲ್ಲ. ಅದನ್ನು ಸ್ಪಷ್ಟಪಡಿಸಿ ಎಂದು ಕೋರಿದ್ದೇನೆ. ಈ ಸಂಬಂಧ ಪ್ರಧಾನಿಗೆ ಪತ್ರ ಬರೆಯುತ್ತೇನೆ' ಎಂದರು.

ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದಿಂದ ಅನುದಾನ ಮಂಜೂರು ಮಾಡಿಸುವಲ್ಲಿ ಜೆಡಿಎಸ್–ಬಿಜೆಪಿ ಸಂಸದರು ಏನೂ ಕೆಲಸ ಮಾಡುತ್ತಿಲ್ಲ ಎಂದು ಕಾಂಗ್ರೆಸ್ ಆರೋಪಿಸುತ್ತಿದೆಯಲ್ಲ ಎಂಬ ಪ್ರಶ್ನೆಗೆ, 'ಕಾಂಗ್ರೆಸ್ ಸರ್ಕಾರದವರು ಕೆಲವು ಯೋಜನೆಗಳನ್ನು ಮಾಡಿದ್ದಾರೆ. ಅವಕ್ಕೆ ಹಣ ಬೇಕಿದ್ದು, ನೀರಾವರಿಗೆ ಹಣ ಮೀಸಲಿಡಲು ಸಾಧ್ಯವಾಗಿಲ್ಲ. ಹೀಗಾಗಿ ಕೇಂದ್ರದ ಮೇಲೆ ಹೇಳುತ್ತಿದ್ದಾರೆ. ಆದರೆ ನಾನು ಅವನ್ನು ವಿರೋಧಿಸುವುದಿಲ್ಲ. ಅವರ ಯೋಜನೆಗಳನ್ನು ಅವರು ನಡೆಸಲಿ' ಎಂದರು.

'ಎಲ್ಲರೂ ಹೋರಾಡುತ್ತಿದ್ದಾರೆ'



ದೇವೇಗೌಡ

'ಗೋದಾವರಿ–ಕಾವೇರಿ ಜೋಡಣೆ, ಕಳಸಾ–ಬಂಡೂರಿ–ಮಹದಾಯಿ ಯೋಜನೆ ಅಡಿಯಲ್ಲಿ ರಾಜ್ಯಕ್ಕೆ ನಷ್ಟವಾಗಿದೆ. ಇದು ರಾಜ್ಯದ ಸಮಸ್ಯೆ. ಇದರಲ್ಲಿ ಜೆಡಿಎಸ್–ಬಿಜೆಪಿ ಸಂಸದರು ಮಾತ್ರವಲ್ಲ, ಕಾಂಗ್ರೆಸ್‌ನ ಸಂಸದರೂ ಹೋರಾಡುತ್ತಿದ್ದಾರೆ' ಎಂದು ದೇವೇಗೌಡ ಹೇಳಿದರು.

'ಮಹದಾಯಿಗೆ ಸಂಬಂಧಿಸಿದ ವ್ಯಾಜ್ಯ ಸುಪ್ರೀಂ ಕೋರ್ಟ್‌ನಲ್ಲಿದೆ. ಇದರಲ್ಲಿ ರಾಜ್ಯ ಸರ್ಕಾರದ ವಕೀಲರು ಸುಪ್ರೀಂಕೋರ್ಟ್‌ನಲ್ಲಿ ವಾದ ಮಂಡಿಸಬೇಕು. ಈ ಹೋರಾಟದಲ್ಲಿ ರಾಜ್ಯ ಸರ್ಕಾರಕ್ಕೆ ನಮ್ಮ ಸಹಕಾರವಿದೆ' ಎಂದರು.

ಜೆಡಿಎಸ್ ಸಮಾವೇಶ

'ಹಾಸನದಲ್ಲಿ ಕಾಂಗ್ರೆಸ್‌ನವರು ಸಮಾವೇಶ ನಡೆಸಿದರು. ಹೀಗಾಗಿ ಅಂಥದ್ದೇ ಸಮಾವೇಶವನ್ನು ದೊಡ್ಡ ಮಟ್ಟದಲ್ಲಿ ನಡೆಸಬೇಕು ಎಂಬುದು ಎಚ್‌.ಡಿ.ಕುಮಾರಸ್ವಾಮಿ ಅವರ ಇಂಗಿತ. ಇದಕ್ಕೆ ಸಿದ್ಧತೆ ನಡೆದಿದೆ' ಎಂದು ದೇವೇಗೌಡ ಹೇಳಿದರು.

'ಮೇ ತಿಂಗಳಿನಲ್ಲಿ ಸಮಾವೇಶ ನಡೆಸಬೇಕು ಎಂದುಕೊಂಡಿದ್ದೇವೆ. ಇದಕ್ಕಾಗಿ ಮಾರ್ಚ್ 6ರಂದು ಪಕ್ಷದ ಎಲ್ಲ ಚುನಾಯಿತ ಪ್ರತಿನಿಧಿಗಳು, ಪದಾಧಿಕಾರಿಗಳು, ಕಾರ್ಯಕರ್ತರನ್ನು ಸೇರಿಸಿ ಪೂರ್ವಸಿದ್ಧತಾ ಸಭೆ ನಡೆಸುತ್ತೇವೆ. ಸಮಾವೇಶವನ್ನು ತುಮಕೂರು ಅಥವಾ ಮಂಡ್ಯ ಅಥವಾ ಬೆಂಗಳೂರಿನಲ್ಲಿ ನಡೆಸಬೇಕೇ ಎಂಬುದನ್ನು ಅಲ್ಲಿ ಚರ್ಚಿಸುತ್ತೇವೆ' ಎಂದರು.

ಮೈಸೂರಿನಲ್ಲಿ ಪುರಭವನ ಆವರಣದ ಅಂಬೇಡ್ಕರ್ ಪ್ರತಿಮೆ ಬಳಿ ಸ್ಥಾಪನೆ

'ಶಿಲಾ ಫಲಕ'ದಲ್ಲಿ ಸಂವಿಧಾನದ ಪೀಠಿಕೆ

• ಎಂ. ಮಹೇಶ್

ಮೈಸೂರು: ಶಾಲೆ– ಕಾಲೇಜುಗಳಲ್ಲಿ ಪ್ರಾರ್ಥನೆ ವೇಳೆ ಸಂವಿಧಾನದ ಪೀಠಿಕೆ ಓದುವುದನ್ನು ಕಡ್ಡಾಯಗೊಳಿಸಿರುವ ರಾಜ್ಯ ಸರ್ಕಾರವು, ಈಗ ಎಲ್ಲ ಮಹಾ ನಗರಪಾಲಿಕೆಗಳ ವ್ಯಾಪ್ತಿಯಲ್ಲಿ 'ಸಂವಿಧಾನ ಪೀಠಿಕೆಯ ಶಿಲಾಫಲಕ' ಅನಾವರಣಕ್ಕೆ ಆದೇಶಿಸಿದ್ದು, ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅನುದಾನವನ್ನು ಒದಗಿಸಿದೆ.

ಪೀಠಿಕೆಯಲ್ಲಿರುವ ಅಂಶಗಳನ್ನು ಶಿಲಾಫಲಕದಲ್ಲಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಕೆತ್ತಿಸಿ ಸಾರ್ವಜನಿಕವಾಗಿ ಪ್ರದರ್ಶಿಸುವುದು ಪ್ರಮುಖ ಉದ್ದೇಶ. ಮೈಸೂರಿನ ಹೃದಯಭಾಗವಾದ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಯ ಸಮೀಪವೇ ಫಲಕ ಅನಾವರಣಗೊಳ್ಳಲಿದೆ. ಎಲ್ಲ ಮಹಾನಗರಪಾಲಿಕೆಗಳಲ್ಲೂ ಅಂಬೇಡ್ಕರ್ ಪ್ರತಿಮೆಯ ಪಕ್ಕದಲ್ಲೇ ಫಲಕಗಳು ತಲೆ ಎತ್ತಲಿವೆ.

ಅರುಣ್ ಯೋಗಿರಾಜ್ ಕೈಚಳಕ: ಅಯೋಧ್ಯೆಯ ಶ್ರೀರಾಮಮಂದಿರದ ಬಾಲರಾಮನ ಪ್ರತಿಮೆಗೆ ರೂಪ ನೀಡಿದ್ದ ಶಿಲ್ಪಿ ಅರುಣ್ ಯೋಗಿರಾಜ್, ಇಲ್ಲಿಗೆ ಸಂವಿಧಾನಪೀಠಿಕೆಯ ಶಿಲಾಫಲಕವನ್ನೂ ಕೆತ್ತಿಕೊಟ್ಟಿದ್ದಾರೆ. ರಾಜಸ್ಥಾನದ ಕೆಂಪುಮರಳಿನ ಕಲ್ಲಿನಲ್ಲಿ (ರೆಡ್ ಸ್ಯಾಂಡ್ ಸ್ಟೋನ್) ಅವರ ಕೈಚಳಕದಲ್ಲಿ ಫಲಕ ಸಿದ್ಧಗೊಂಡಿದೆ. 10 ಅಡಿ ಎತ್ತರ, 6 ಅಡಿ ಅಗಲ ಹಾಗೂ ಒಂದೂಕಾಲು ಅಡಿ ದಪ್ಪದ ಶಿಲೆಯನ್ನು ಬಳಸಲಾಗಿದೆ. ಮೇಲ್ಭಾಗದಲ್ಲಿ ಕನ್ನಡ ಮತ್ತು ಕೆಳಭಾಗದಲ್ಲಿ ಇಂಗ್ಲಿಷ್‌ನಲ್ಲಿ ಪೀಠಿಕೆಯನ್ನು ಕೆತ್ತಲಾಗಿದೆ. ಪುರಭವನದ ಎದುರಿನ ರಸ್ತೆಯಲ್ಲಿ ಸಂಚರಿಸುವವರ ಗಮನಸೆಳೆಯುವಂತೆ ಪೀಠವನ್ನು ನವೀಕರಿಸಲಾಗಿದೆ.

'ಬಿಬಿಎಂಪಿ ಹಾಗೂ ರಾಜ್ಯದ ಎಲ್ಲ ನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಪೀಠಿಕೆಯನ್ನು ಅನಾವರಣಗೊಳಿಸುವಂತೆ ಸರ್ಕಾರ ಆದೇಶಿಸಿದೆ. ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಅವರ ಸೂಚನೆಯಂತೆ ಪುರಭವನದ ಆವರಣದಲ್ಲಿ ಶಿಲಾಫಲಕ ಅನಾವರಣ ಮಾಡಲಾಗುವುದು. ಇದಕ್ಕಾಗಿ ತಯಾರಿ ಮಾಡಿಕೊಳ್ಳಲಾಗುತ್ತಿದೆ' ಎಂದು ಇಲಾಖೆಯ ಜಂಟಿ ನಿರ್ದೇಶಕ ಬಿ.ರಂಗೇಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

ಹಳೆಯ ಪೀಠದಲ್ಲೇ: 'ಪುರಭವನದ ಆವರಣದಲ್ಲಿ ಹಿಂದೆ ಇದ್ದ ಅಂಬೇಡ್ಕರ್ ಪ್ರತಿಮೆಯ ಪೀಠವನ್ನು ನವೀಕರಿಸಲಾಗಿದೆ. ಮೂಲ ಸಂವಿಧಾನದ ಪೀಠಿಕೆಯ ಶೈಲಿಯಲ್ಲೇ ಶಿಲೆಯ ಮೇಲೆ ಕೆತ್ತಿಸಿದ್ದು, ನಿರ್ಮಿತಿ ಕೇಂದ್ರ ನಿರ್ವಹಿಸಿದೆ. ಶೀಘ್ರವೇ ಕಾರ್ಯಕ್ರಮ ಆಯೋಜಿಸಿ ಅನಾವರಣ ಮಾಡಲಾಗುವುದು. ಇದೇ ಸ್ಥಳದಲ್ಲಿದ್ದ ಹಳೆಯ ಪ್ರತಿಮೆಯನ್ನು ತಿ.ನರಸೀಪುರ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಹಿಂದೆಯೇ ಪ್ರತಿಷ್ಠಾಪಿಸಲಾಗಿದೆ' ಎಂದರು.

'ನ.25ರಂದು ನಡೆದಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮಗಳಿಗೆ ಹಾಗೂ ಸಂವಿಧಾನ ಪೀಠಿಕೆ ಕೆತ್ತನೆ, ಪೀಠ ಸ್ಥಾಪನೆ, ಅನಾವರಣ ಸಮಾರಂಭದ ವೆಚ್ಚ ಒಳಗೊಂಡಂತೆ ₹ 25 ಲಕ್ಷವನ್ನು ಸರ್ಕಾರ ಒದಗಿಸಿದೆ. ಶಿಲ್ಪಿ ಅರುಣ್ ಅವರಿಗೆ ₹ 15 ಲಕ್ಷ ನೀಡಲಾಗುತ್ತಿದೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ಎಲ್ಲ ಪಾಲಿಕೆಗಳ ವ್ಯಾಪ್ತಿಯಲ್ಲೂ ಪ್ರತಿಷ್ಠಾಪನೆ
- ಸರ್ಕಾರದಿಂದ ಅನುದಾನ ಬಿಡುಗಡೆ
- ಅಂಬೇಡ್ಕರ್ ಪ್ರತಿಮೆ ಬಳಿ ಸ್ಥಾಪನೆ

> **ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವುದು ಶಿಲಾಫಲಕದಲ್ಲಿ ಸಂವಿಧಾನ ಪೀಠಿಕೆ ನಿರ್ಮಾಣ ಕಾರ್ಯಕ್ರಮದ ಉದ್ದೇಶವಾಗಿದೆ**
> **ಬಿ.ರಂಗೇಗೌಡ** ಜಂಟಿ ನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆ



ಮೈಸೂರಿನ ಪುರಭವನದ ಆವರಣದಲ್ಲಿ ಅಂಬೇಡ್ಕರ್ ಪ್ರತಿಮೆಯ ಬಳಿ ಸಂವಿಧಾನ ಪೀಠಿಕೆ ಒಳಗೊಂಡಿರುವ ಶಿಲಾಫಲಕ ಅನಾವರಣಗೊಳ್ಳಲಿದೆ —ಪ್ರಜಾವಾಣಿ ಚಿತ್ರ

ಪ್ರತಿಮೆಯನ್ನೂ ಅರುಣ್ ಮಾಡಿದ್ದರು

ನಗರದ ಪುರಭವನದ ಆವರಣದಲ್ಲಿ 2017ರಲ್ಲಿ ಪ್ರತಿಷ್ಠಾಪಿಸಿದ್ದ, 9 ಅಡಿ ಎತ್ತರದ ಅಮೃತಶಿಲೆಯ ಅಂಬೇಡ್ಕರ್ ಪ್ರತಿಮೆಯನ್ನೂ ಅರುಣ್ ಕೆತ್ತಿದ್ದರು. ಅಂಬೇಡ್ಕರ್ ಅವರು ಸಂವಿಧಾನವನ್ನು ಹಿಡಿದುಕೊಂಡಿರುವ ಪ್ರತಿಮೆಯದು. ಈಗ, ಸಂವಿಧಾನದ ಪೀಠಿಕೆಗೂ ಅರುಣ್ ಅವರೇ 'ರೂಪ' ನೀಡಿದ್ದಾರೆ.

ಜಲಜೀವನ್: ₹16,863 ಕೋಟಿ ನಷ್ಟ

ಒಂದನೇ ಪುಟದಿಂದ...

2019–20ನೇ ಸಾಲಿನಲ್ಲಿ ಯೋಜನೆಗೆ ಕೇಂದ್ರ ಸರ್ಕಾರವು ರಾಜ್ಯಕ್ಕೆ ₹546.06 ಕೋಟಿ ಅನುದಾನ ಘೋಷಿಸಿತ್ತು. ಆ ಸಾಲಿನಲ್ಲಿ ಪೂರ್ಣ ಪ್ರಮಾಣದ ಅನುದಾನ ಬಿಡುಗಡೆ ಮಾಡಿತ್ತು. ನಂತರದ ಐದು ಆರ್ಥಿಕ ವರ್ಷಗಳಲ್ಲಿ ರಾಜ್ಯಕ್ಕೆ ಸಾವಿರಾರು ಕೋಟಿ ಅನುದಾನ ಘೋಷಿಸಿದೆ. ಐದೂ ವರ್ಷದಲ್ಲಿ ಒಮ್ಮೆಯೂ ಪೂರ್ಣ ಅನುದಾನ ಬಿಡುಗಡೆ ಮಾಡಿಯೇ ಇಲ್ಲ ಎಂಬುದನ್ನು ಕೇಂದ್ರ ಸರ್ಕಾರದ ಅಂಕಿಅಂಶಗಳು ಹೇಳುತ್ತವೆ.

ಕೇಂದ್ರ ಮತ್ತು ರಾಜ್ಯ ಸರ್ಕಾರದ 50:50 ಅನುಪಾತದ ವೆಚ್ಚದಲ್ಲಿ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಕೇಂದ್ರ ಸರ್ಕಾರವು ಎಷ್ಟು ಅನುದಾನ ಘೋಷಿಸುತ್ತದೆಯೋ ಅಷ್ಟು ಅನುದಾನವನ್ನು ರಾಜ್ಯ ಸರ್ಕಾರವೂ ತೆಗೆದಿರಿಸಬೇಕು. 2019ರಿಂದ ಈವರೆಗೆ ಇದ್ದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ, ನಂತರದ ಬಿಜೆಪಿ ಸರ್ಕಾರ ಮತ್ತು ಈಗಿನ ಕಾಂಗ್ರೆಸ್ ಸರ್ಕಾರ ಅಗತ್ಯ ಅನುದಾನವನ್ನು ತೆಗೆದಿರಿಸಿವೆ.

2020–21ನೇ ಆರ್ಥಿಕ ವರ್ಷದಿಂದ 2024–25ನೇ ಆರ್ಥಿಕ ವರ್ಷದವರೆಗೆ ಪ್ರತಿ ಬಜೆಟ್‌ನಲ್ಲೂ ಕೇಂದ್ರ ಘೋಷಿಸಿದ್ದಷ್ಟೇ ಅನುದಾನವನ್ನು ರಾಜ್ಯ ಸರ್ಕಾರವು ಘೋಷಿಸುತ್ತಾ ಬಂದಿದೆ. ಅದರ ಬಹುಪಾಲನ್ನು ವೆಚ್ಚ ಮಾಡಿದೆ.

ಕೇಂದ್ರ ಸಚಿವಾಲಯ ಸಮಜಾಯಿಷಿ: 'ಜಲಜೀವನ್ ಮಿಷನ್ ಅನುಷ್ಠಾನಗೊಳಿಸುತ್ತಿರುವ ರಾಜ್ಯಗಳಲ್ಲಿ ಕರ್ನಾಟಕವು 22ನೇ ಸ್ಥಾನದಲ್ಲಿದೆ. 2024–25ರಲ್ಲಿ ರಾಜ್ಯದಲ್ಲಿ 15 ಲಕ್ಷ ನೀರಿನ ಸಂಪರ್ಕ ನೀಡಬೇಕಿತ್ತು. ಆದರೆ, ಈವರೆಗೆ ಕೇವಲ ಶೇ 52.16 ಸಾಧನೆ ಆಗಿದೆ. ಈ ಸಾಲಿನ ಗುರಿಯನ್ನು ಸಾಧಿಸಲು ರಾಜ್ಯವು ದಿನಕ್ಕೆ ಸುಮಾರು 9,744 ಸಂಪರ್ಕವನ್ನು ಒದಗಿಸಬೇಕು. ಆದರೆ, ದಿನಕ್ಕೆ 2,430 ಸಂಪರ್ಕಗಳನ್ನಷ್ಟೇ ರಾಜ್ಯ ಒದಗಿಸುತ್ತಿದೆ. ರಾಜ್ಯದಲ್ಲಿ ಯೋಜನೆ ಕುಂಟುತ್ತಾ ಸಾಗಿದೆ. ಎಂಟು ಬಹು ಗ್ರಾಮದ ಕುಡಿಯುವ ನೀರಿನ ಯೋಜನೆಗಳಿಗೆ ರಾಜ್ಯ ಅರಣ್ಯ ಇಲಾಖೆಯಿಂದ ಅನುಮತಿಯೇ ಸಿಕ್ಕಿಲ್ಲ. 2019ರಿಂದ 2024ರ ಅವಧಿಯಲ್ಲಿ ಅಗತ್ಯ ದಾಖಲೆಗಳನ್ನು ಸಕಾಲಿಕವಾಗಿ ಸಲ್ಲಿಸದ ಕಾರಣ ರಾಜ್ಯವು ಕೇಂದ್ರದ ನಿಧಿಯನ್ನು ಪಡೆಯಲು ಸಾಧ್ಯವಾಗಿಲ್ಲ' ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ಸಮಜಾಯಿಷಿ ನೀಡಿದೆ.

ಕಡಲೆಕಾಳು ಖರೀದಿ ದರ ಹೆಚ್ಚಿಸಲು ಸರ್ಕಾರ ನಿರ್ಲಕ್ಷ್ಯ: ರೈತರ ಆರೋಪ

ಬಲ ತುಂಬದ ಬೆಂಬಲ ಬೆಲೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯಲ್ಲಿ ಹಿಂಗಾರು ಅವಧಿಯಲ್ಲಿ 1.20 ಲಕ್ಷ ಹೆಕ್ಟೇರ್‌ನಲ್ಲಿ ಕಡಲೆ ಬಿತ್ತನೆಯಾಗಿದೆ. ಬಹುಪಾಲು ಬೆಳೆ ಇನ್ನೂ ಹೊಲದಲ್ಲಿಯೇ ಇದೆ. ಮಾರ್ಚ್ ಕೊನೆಯ ವಾರದಲ್ಲಿ ರೈತರು ರಾಶಿಗೆ ಮುಂದಾಗುತ್ತಾರೆ.

ಕೇಂದ್ರ ಸರ್ಕಾರವು ಈ ಬಾರಿ ಪ್ರತಿ ಕ್ವಿಂಟಲ್ ಕಡಲೆಕಾಳು ಖರೀದಿಗೆ ₹5,650 ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿದೆ. ಆದರೆ, ರೈತರ ಕೃಷಿ ವೆಚ್ಚಕ್ಕೆ ಅನುಗುಣವಾಗಿ ಎಂಎಸ್‌ಪಿ ನಿಗದಿಪಡಿಸುತ್ತಿಲ್ಲ. ಮತ್ತೊಂದೆಡೆ ರಾಜ್ಯ ಸರ್ಕಾರ ಕೂಡ ಪ್ರೋತ್ಸಾಹ ಧನ ನೀಡಿಲ್ಲ. ಬಿತ್ತನೆ, ಕೂಲಿಯಾಳು ವೆಚ್ಚ ಸೇರಿದರೆ ಹೆಚ್ಚಿನ ಲಾಭ ದಕ್ಕುವುದಿಲ್ಲ. ಹಾಗಾಗಿ, ಈಗಿರುವ ಬೆಂಬಲ ಬೆಲೆಯನ್ನು ಹೆಚ್ಚಿಸಬೇಕು ಎಂಬುದು ರೈತರ ಒತ್ತಾಯ.



'ಸರ್ಕಾರವು ಬೆಂಬಲ ಬೆಲೆಯನ್ನು ಹೆಚ್ಚಿಸುತ್ತಿಲ್ಲ. ಹಾಗಾಗಿ, ರೈತರು ಖಾಸಗಿ ವ್ಯಕ್ತಿಗಳಿಗೆ ಕಡಲೆಕಾಳು ಮಾರಾಟ ಮಾಡುತ್ತಿದ್ದಾರೆ. ಜಿಲ್ಲೆಯಲ್ಲಿ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಪೂರ್ಣ ಪ್ರಮಾಣದಲ್ಲಿ ಮಾರುಕಟ್ಟೆಗೆ ಫಸಲು ಪೂರೈಕೆಯಾಗಲಿದೆ. ಆಗ ದರ ಕುಸಿಯಲಿದೆ. ಪ್ರತಿ ವರ್ಷವೂ ರೈತರು ಇದೇ ಸ್ಥಿತಿ ಎದುರಿಸುತ್ತಾರೆ. ಸರ್ಕಾರ ಮಾತ್ರ ಇದಕ್ಕೆ ಪೂರಕವಾಗಿ ಖರೀದಿ ಪ್ರಕ್ರಿಯೆ ನಡೆಸುವುದಿಲ್ಲ' ಎಂಬುದು ಭಾರತೀಯ ಕೃಷಿಕ ಸಮಾಜದ ಅಧ್ಯಕ್ಷ ಸಿದಗೌಡ ಮೋದಗಿ ಅವರ ಆರೋಪ.

ಬೆಂಬಲ ಬೆಲೆ ಹೆಚ್ಚಿಸಿದರೆ ಮುಕ್ತ ಮಾರುಕಟ್ಟೆಯಲ್ಲೂ ದರ ಏರಿಕೆಯಾಗುತ್ತದೆ. ಸಹಜವಾಗಿ ರೈತರಿಗೆ ಲಾಭವಾಗುತ್ತದೆ ಎಂದು ಅವರು ಒತ್ತಾಯಿಸುತ್ತಾರೆ.

ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ 14 ಖರೀದಿ ಕೇಂದ್ರ ತೆರೆಯಲಾಗಿದೆ. ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹6,000ದಿಂದ ₹6,500 ದರ ಸಿಗುತ್ತಿದೆ. ಮುಂಚಿತವಾಗಿಯೇ ಕಡಲೆ ಬೆಳೆದವರು ಈಗಾಗಲೇ ರಾಶಿ ಮಾಡಿದ್ದು, ಖರೀದಿ ಕೇಂದ್ರಗಳತ್ತ ಸುಳಿದಿಲ್ಲ. ಖಾಸಗಿಯವರಿಗೆಯೇ ಮಾರಾಟ ಮಾಡುತ್ತಿದ್ದಾರೆ.



> ಮುಂಚಿತವಾಗಿ ಬಿತ್ತನೆ ಮಾಡಿದ್ದ ಶೇ 20ರಷ್ಟು ಕಡಲೆ ಮಾತ್ರ ರಾಶಿ ಆಗಿದೆ. ಖರೀದಿ ಕೇಂದ್ರ ತೆರೆದಿದ್ದರೂ ರೈತರು ಕಡಲೆ ತರದಿರುವುದಕ್ಕೆ ಇದು ಕೂಡ ಕಾರಣವಾಗಿದೆ
>
> **ಮಹಾದೇವಪ್ಪ ಚಬನೂರ**
> ಉಪ ನಿರ್ದೇಶಕ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ

> ಸರ್ಕಾರವು ಈಗ ನಿಗದಿಪಡಿಸಿರುವ ಬೆಂಬಲ ಬೆಲೆಯಿಂದ ರೈತರಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ. ಹಾಗಾಗಿ, ಎಂಎಸ್‌ಪಿ ಹೆಚ್ಚಿಸಿದರೆ ಅನುಕೂಲವಾಗಲಿದೆ
>
> **ಸಂಗಮೇಶ ಸಗರ,** ಜಿಲ್ಲಾ ರೈತ ಸಂಘದ ಅಧ್ಯಕ್ಷ, ವಿಜಯಪುರ

70 ರೈತರು ನೋಂದಣಿ

ಧಾರವಾಡ: ಜಿಲ್ಲೆಯಲ್ಲಿ ಕಡಲೆಕಾಳು ಖರೀದಿಗೆ 24 ಕೇಂದ್ರಗಳನ್ನು ತೆರೆಯಲಾಗಿದ್ದು, ಈವರೆಗೆ 70 ಬೆಳೆಗಾರರಷ್ಟೇ ಮಾರಾಟಕ್ಕೆ ಹೆಸರು ನೋಂದಾಯಿಸಿದ್ದಾರೆ.

ಜಿಲ್ಲೆಯ 1.39 ಲಕ್ಷ ಹೆಕ್ಟೇರ್‌ನಲ್ಲಿ ಕಡಲೆ ಬೆಳೆಯಲಾಗಿದೆ. ನವಲಗುಂದ, ಅಣ್ಣಿಗೇರಿ, ಕುಂದಗೋಳ, ಧಾರವಾಡ ಮತ್ತು ಹುಬ್ಬಳ್ಳಿ ತಾಲ್ಲೂಕಿನ ರೈತರು ಹೆಚ್ಚಾಗಿ ಬೆಳೆದಿದ್ದಾರೆ.

'ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹6,000ದಿಂದ ₹6,200 ದರ ಇದೆ' ಎಂದು ಕೃಷಿ ಉತ್ಪನ್ನ ಮಾರುಕಟ್ಟೆಯ ಉಪ ನಿರ್ದೇಶಕ ವಿರೂಪಾಕ್ಷ ಲಮಾಣಿ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಬಾರಿ ಕಡಲೆಕಾಳು ಇಳುವರಿ ಪ್ರತಿ ಎಕರೆಗೆ 4 ರಿಂದ 6 ಕ್ವಿಂಟಲ್ ಇದೆ. ಆದರೆ, ಬೆಂಬಲ ಬೆಲೆಗೆ ಮಾರಾಟ ಮಾಡಿದರೆ ಹೆಚ್ಚು ಅನುಕೂಲವಾಗುವುದಿಲ್ಲ. ಸರ್ಕಾರವು ಬೆಂಬಲ ಬೆಲೆಯನ್ನು ಹೆಚ್ಚಿಸಬೇಕು' ಎಂದು ಮಲಪ್ರಭಾ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ಬೆಳವಟಗಿಯ ಸದಾಶಿವಗೌಡ ಒತ್ತಾಯಿಸಿದರು.

ಕೇಂದ್ರದತ್ತ ಸುಳಿಯದ ರೈತರು

(ಬಳ್ಳಾರಿ ವರದಿ): ಕಡಲೆಕಾಳು ಖರೀದಿಗೆ ನೋಂದಣಿ ಆರಂಭವಾಗಿದ್ದರೂ, ಜಿಲ್ಲೆಯಲ್ಲಿ ಇಲ್ಲಿಯವರೆಗೆ ಒಬ್ಬ ರೈತ ಕೂಡ ಹೆಸರು ನೋಂದಾಯಿಸಿಲ್ಲ.

ಜಿಲ್ಲೆಯಲ್ಲಿ ಈ ಬಾರಿ ಅಂದಾಜು 56,513 ಕ್ವಿಂಟಲ್ ಇಳುವರಿ ನಿರೀಕ್ಷಿಸಲಾಗಿದೆ. ಬೆಂಬಲ ಬೆಲೆ ಕಡಿಮೆ ಇರುವುದರಿಂದ ಸರ್ಕಾರಕ್ಕೆ ಮಾರಾಟ ಮಾಡಲು ರೈತರು ನಿರಾಸಕ್ತಿ ತೋರಿದ್ದಾರೆ.

ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ₹6,130 ದರ ಇದೆ. ಹೀಗಾಗಿ, ರೈತರು ಖರೀದಿ ಕೇಂದ್ರಗಳತ್ತ ಸುಳಿಯುತ್ತಿಲ್ಲ. ಇದೇ ಕಾರಣಕ್ಕೆ ಕಳೆದ ಬಾರಿಯೂ ಬಳ್ಳಾರಿಯಲ್ಲಿ ಕಡಲೆಕಾಳು ಖರೀದಿ ಆಗಿರಲಿಲ್ಲ.

69 ಖರೀದಿ ಕೇಂದ್ರ ಸ್ಥಾಪನೆ

ಗದಗ: 'ಎಫ್‌ಎಕ್ಯು ಗುಣಮಟ್ಟದ ಕಡಲೆಕಾಳು ಖರೀದಿಸಲು ಜಿಲ್ಲೆಯ 69 ಕಡೆಗಳಲ್ಲಿ ಖರೀದಿ ಕೇಂದ್ರ ತೆರೆಯಲಾಗಿದೆ' ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದ್ದಾರೆ.

ಎಪಿಎಂಸಿಗಳಲ್ಲಿ ಕ್ವಿಂಟಲ್ ಕಡಲೆಯು ₹6 ಸಾವಿರಕ್ಕೆ ಮಾರಾಟವಾಗುತ್ತಿದೆ. ಹೀಗಾಗಿ, ರೈತರು ಖರೀದಿ ಕೇಂದ್ರಕ್ಕೆ ಬರುತ್ತಿಲ್ಲ.

'ಬೆಂಬಲ ಬೆಲೆಗಿಂತ ಎಪಿಎಂಸಿಯಲ್ಲಿ ಕಡಲೆ ಬೆಳೆಗೆ ಉತ್ತಮ ಬೆಲೆ ಸಿಗುತ್ತಿದೆ. ಇದಕ್ಕಿಂತ ಬೆಲೆ ಹೆಚ್ಚಾದರೆ ಮಾತ್ರ ರೈತರು ಖರೀದಿ ಕೇಂದ್ರಕ್ಕೆ ಬರುತ್ತಾರೆ. ಈ ನಿಟ್ಟಿನಲ್ಲಿ ಬೆಲೆ ಏರಿಕೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಕ್ರಮವಹಿಸಬೇಕು' ಎಂದು ಶಿಗ್ಲಿ ಗ್ರಾಮದ ರೈತ ಸೋಮಣ್ಣ ಡಾಣಗಲ್ಲ ಒತ್ತಾಯಿಸುತ್ತಾರೆ.

ಕ್ವಿಂಟಲ್‌ಗೆ ₹6,300 ದರ

(ವಿಜಯಪುರ ವರದಿ): ಈ ಬಾರಿ ಜಿಲ್ಲೆಯ 211 ಹೆಕ್ಟೇರ್‌ನಲ್ಲಿ ಕಡಲೆ ಬೆಳೆಯಲಾಗಿದೆ. ಬೆಂಬಲ ಬೆಲೆ ಯೋಜನೆಯಡಿ ಕಡಲೆಕಾಳು ಖರೀದಿಸಲು 9 ಕೇಂದ್ರ ತೆರೆಯಲಾಗಿದೆ.

'ಮುಕ್ತ ಮಾರುಕಟ್ಟೆಯಲ್ಲಿ ಕಡಲೆಗೆ ಪ್ರತಿ ಕ್ವಿಂಟಲ್‌ಗೆ ₹6,200 ರಿಂದ ₹6,300 ದರ ಸಿಗುತ್ತಿದೆ. ಇದರಿಂದ ರೈತರು ಖರೀದಿ ಕೇಂದ್ರದತ್ತ ಬರುತ್ತಿಲ್ಲ. ರಾಜ್ಯ ಸರ್ಕಾರವು ಪ್ರೋತ್ಸಾಹ ಧನ ಘೋಷಿಸುವ ಮೂಲಕ ರೈತರಿಗೆ ಇನ್ನೂ ಹೆಚ್ಚಿನ ನೆರವು ಕಲ್ಪಿಸಬೇಕು' ಎಂದು ವಿಜಯಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಉಪ ನಿರ್ದೇಶಕ ಶಿವಾನಂದ ಗೋಟೆ 'ಪ್ರಜಾವಾಣಿ'ಗೆ ತಿಳಿಸಿದರು.

ದೆಹಲಿ: ಜಾಗತಿಕ ಜವಳಿ ಮೇಳ 110 ದೇಶಗಳು ಭಾಗಿ

ನವದೆಹಲಿ (ಪಿಟಿಐ): ಇಲ್ಲಿನ ಭಾರತ ಮಂಟಪದಲ್ಲಿ ನಡೆಯುತ್ತಿರುವ ಜಾಗತಿಕ ಜವಳಿ ಮೇಳವಾದ 'ಭಾರತ್ ಟೆಕ್ಸ್ 2025'ರಲ್ಲಿ ಜಪಾನ್, ಯುಎಇ, ಇರಾನ್, ಅಮೆರಿಕ, ಸ್ಪೇನ್, ಬ್ರಿಟನ್ ಸೇರಿ 110ಕ್ಕೂ ಹೆಚ್ಚು ದೇಶಗಳು ಪಾಲ್ಗೊಂಡಿವೆ ಎಂದು ಸಿದ್ಧ ಉಡುಪು ರಫ್ತು ಉತ್ತೇಜನ ಮಂಡಳಿ (ಎಇಪಿಸಿ) ತಿಳಿಸಿದೆ.

ಫೆಬ್ರುವರಿ 17ರ ವರೆಗೆ ಮೇಳ ನಡೆಯಲಿದೆ. ಜಾಗತಿಕ ಮಟ್ಟದ ನೀತಿ ನಿರೂಪಕರಾದ ವಿವಿಧ ಕಂಪನಿಯ ಸಿಇಒಗಳು, 5 ಸಾವಿರ ಪ್ರದರ್ಶಕರು, 6 ಸಾವಿರಕ್ಕೂ ಹೆಚ್ಚು ಅಂತರ ರಾಷ್ಟ್ರೀಯ ಖರೀದಿದಾರರು, 120ಕ್ಕೂ ಹೆಚ್ಚು ರಾಷ್ಟ್ರಗಳ ಸಂದರ್ಶಕರು ಪಾಲ್ಗೊಂಡಿದ್ದಾರೆ ಎಂದು ಎಇಪಿಸಿ ಅಧ್ಯಕ್ಷ ಸುಧೀರ್ ಸೆಖ್ರಿ ಅವರು ಶನಿವಾರ ತಿಳಿಸಿದ್ದಾರೆ.

ಭಾನುವಾರ ಪ್ರಧಾನಿ ನರೇಂದ್ರ ಮೋದಿ ಅವರು ಮೇಳಕ್ಕೆ ಭೇಟಿ ನೀಡಲಿದ್ದು, ಭಾಷಣ ಮಾಡಲಿದ್ದಾರೆ ಎಂದು ಪಿಎಂ ಕಚೇರಿ ತಿಳಿಸಿದೆ.

₹122 ಕೋಟಿ ಬ್ಯಾಂಕ್ ಹಣ ದುರ್ಬಳಕೆ

ಮುಂಬೈ (ಪಿಟಿಐ): ನ್ಯೂ ಇಂಡಿಯಾ ಕೋ-ಆಪರೇಟಿವ್ ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ಹಿತೇಶ್ ಮೆಹ್ತಾ ಹಾಗೂ ಬ್ಯಾಂಕ್‌ನ ಇತರೆ ಅಧಿಕಾರಿಗಳ ವಿರುದ್ಧ ₹122 ಕೋಟಿ ದುರ್ಬಳಕೆ ಸಂಬಂಧ ಪ್ರಕರಣ ದಾಖಲಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ಕೋ-ಆಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಳಿಯನ್ನು ಒಂದು ವರ್ಷದವರೆಗೆ ಸಮಾಪನೆಗೊಳಿಸಿದ್ದು, ಆಡಳಿತಾಧಿಕಾರಿಯನ್ನು ನೇಮಿಸಿದೆ. ಠೇವಣಿ ಹಣ ಹಿಂಪಡೆಯುವುದು ಸೇರಿದಂತೆ ಬ್ಯಾಂಕ್‌ನ ಹಲವು ಕಾರ್ಯ ಚಟುವಟಿಕೆಗಳ ಮೇಲೆ ನಿರ್ಬಂಧ ಹೇರಿದೆ. ಇದರ ಬೆನ್ನಲ್ಲೇ ಮುಂಬೈ ಪೊಲೀಸರು, ಪ್ರಧಾನ ವ್ಯವಸ್ಥಾಪಕ ಮೆಹ್ತಾ ಅವರನ್ನು ಬಂಧಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರೆಪೊ ದರ ಆಧರಿತ ಸಾಲದ ಬಡ್ಡಿದರ ಇಳಿಸಿದ ಎಸ್‌ಬಿಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವಾರ ನಡೆದ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ರೆಪೊ ದರದಲ್ಲಿ ಶೇ 0.25ರಷ್ಟು ಕಡಿತಗೊಳಿಸಿದೆ. ಇದರ ಬೆನ್ನಲ್ಲೇ ಬ್ಯಾಂಕ್‌ಗಳು ಈ ಲಾಭವನ್ನು ಸಾಲಗಾರರಿಗೆ ವರ್ಗಾಯಿಸಲು ಮುಂದಾಗಿವೆ.

ದೇಶದ ಅತಿದೊಡ್ಡ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾವು (ಎಸ್‌ಬಿಐ) ಬಡ್ಡಿದರದಲ್ಲಿ ಇಳಿಕೆ ಮಾಡಿದೆ. ರೆಪೊ ದರ ಆಧರಿತ ಎಕ್ಸ್‌ಟರ್ನಲ್ ಬೆಂಚ್‌ಮಾರ್ಕ್ ಲೆಂಡಿಂಗ್ ರೇಟ್ (ಇಬಿಎಲ್‌ಆರ್) ಅನ್ನು ಶೇ 9.15ರಿಂದ ಶೇ 8.90ಕ್ಕೆ ಇಳಿಸಿದೆ.

ರೆಪೊ ಆಧರಿತ ಸಾಲದ ಬಡ್ಡಿ ದರವನ್ನು (ಆರ್‌ಎಲ್‌ಎಲ್‌ಆರ್) ಶೇ 8.75ರಿಂದ ಶೇ 8.50ಕ್ಕೆ ತಗ್ಗಿಸಿದೆ. ಶನಿವಾರದಿಂದಲೇ ಈ ಬಡ್ಡಿದರ ಕಡಿತದ ಆದೇಶವು ಜಾರಿಗೆ ಬರಲಿದೆ ಎಂದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

ಎಸ್‌ಬಿಐನಲ್ಲಿ ಗೃಹ ಸಾಲ ಸೇರಿದಂತೆ ರೆಪೊ ಆಧರಿತ ಇತರೆ ಸಾಲ ಪಡೆದವರಿಗೆ ಬಡ್ಡಿದರ ಕಡಿತದ ಈ ಪ್ರಯೋಜನ ಸಿಗಲಿದೆ.

ಆದರೆ, ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧರಿತ ಸಾಲ (ಎಂಸಿಎಲ್‌ಆರ್) ಹಾಗೂ ಬೆಂಚ್‌ಮಾರ್ಕ್ ಪ್ರೈಮ್ ಲೆಂಡಿಂಗ್ ರೇಟ್ (ಬಿಪಿಎಲ್‌ಆರ್) ಆಧರಿತ ಸಾಲದ ಮೇಲಿನ ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ದೇಶದಲ್ಲಿ ಗೃಹ ಸಾಲ ಪಡೆಯುವವರ ಸಂಖ್ಯೆ ಹೆಚ್ಚುತ್ತಿದೆ. ಬಹುತೇಕ ಸಾಲಗಾರರು ರೆಪೊ ದರ ಆಧರಿತ ಸಾಲ ಪಡೆಯಲು ಹೆಚ್ಚಿನ ಆದ್ಯತೆ ನೀಡುತ್ತಾರೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಬಡ್ಡಿದರದಲ್ಲಿ ಶೇ 0.25ರಷ್ಟು ಕಡಿತಕ್ಕೆ ಸಂಬಂಧಿಸಿದಂತೆ ಸಾಲಗಾರರಿಗೆ ಎರಡು ಆಯ್ಕೆಗಳಿವೆ. ಬಡ್ಡಿದರ ಇಳಿಕೆಗೆ ಅನುಗುಣವಾಗಿ ಸಾಲದ ಮಾಸಿಕ ಕಂತನ್ನು (ಇಎಂಐ) ಕಡಿಮೆ ಮಾಡಿಕೊಳ್ಳುವುದು ಇದರಲ್ಲಿ ಒಂದಾಗಿದೆ. ಎರಡನೆಯದ್ದು ಇಎಂಐ ಮೊತ್ತ ತಗ್ಗಿಸದೆ ಸಾಲದ ಅವಧಿಯನ್ನು ತಗ್ಗಿಸಿಕೊಳ್ಳುವ ಅವಕಾಶವಿದೆ ಎಂದು ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹495
12 ಕ್ಕೆ	₹66
ಮೈಸೂರು	
100ಕ್ಕೆ	₹497

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹186.50
ಆರ್‌ಎಸ್‌ಎಸ್-5	₹181.50
ಗುಡ್ ಲಾಟ್	₹176.50

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹315-692
ದ್ವಿತಳಿ (ಬಿ.ವಿ)	₹363-865



ಹತ್ತು ಸಾವಿರ ಉದ್ಯೋಗಿಗಳ ವಜಾ

ವಾಷಿಂಗ್ಟನ್ (ರಾಯಿಟರ್ಸ್): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದ ಸರ್ಕಾರ ವಿವಿಧ ಇಲಾಖೆಗಳ 9,500ಕ್ಕೂ ಅಧಿಕ ನೌಕರರನ್ನು ಶುಕ್ರವಾರ ವಜಾಗೊಳಿಸಿದೆ. ಚುನಾವಣಾ ಪ್ರಚಾರ ದಲ್ಲಿಯೂ ಟ್ರಂಪ್ ಈ ತೀರ್ಮಾನ ಪ್ರಕಟಿಸಿದ್ದರು.

ಆಂತರಿಕ ಸಚಿವಾಲಯ, ಇಂಧನ, ನಿವೃತ್ತಸೈನಿಕರ ಇಲಾಖೆ, ಕೃಷಿ, ಆರೋಗ್ಯ, ಮಾನವ ಸಂಪನ್ಮೂಲ ಇಲಾಖೆಗಳಲ್ಲಿಯೇ ದೊಡ್ಡ ಪ್ರಮಾಣದಲ್ಲಿ ನೌಕರರನ್ನು ತೆಗೆದು ಹಾಕಲಾಗಿದೆ.

ಇದಲ್ಲದೇ, ಹೆಚ್ಚುವರಿಯಾಗಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ 75 ಸಾವಿರ ಉದ್ಯೋಗಿಗಳು ಸ್ವಯಂಪ್ರೇರಿತರಾಗಿ ಕೆಲಸ ಬಿಡುವ ಇಚ್ಛೆ ವ್ಯಕ್ತಪಡಿಸಿದ್ದಾರೆ ಎಂದು ಪ್ರಮುಖ ಮಾಧ್ಯಮ ಸಂಸ್ಥೆಗಳು ವರದಿ ಮಾಡಿದೆ.

ದೇಶದ ಜಾಹೀರಾತು ವಲಯ ಶೇ 7ರಷ್ಟು ಬೆಳವಣಿಗೆ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ವರ್ಷದಲ್ಲಿ ದೇಶದ ಜಾಹೀರಾತು ವಲಯವು ಶೇ 7ರಷ್ಟು ಬೆಳವಣಿಗೆ ಕಾಣಲಿದೆ ಎಂದು ಮಾಧ್ಯಮ ಹೂಡಿಕೆ ಸಂಸ್ಥೆಯಾದ ಗ್ರೂಪ್‌ಎಂ ಇಂಡಿಯಾ ಅಂದಾಜಿಸಿದೆ.

ಈ ವಲಯದಲ್ಲಿ ಒಟ್ಟು ₹1.64 ಲಕ್ಷ ಕೋಟಿ ವರಮಾನ ಸಂಗ್ರಹವಾಗುವ ನಿರೀಕ್ಷೆಯಿದೆ ಎಂದು ಪ್ರಸಕ್ತ ಮತ್ತು ಮುಂದಿನ ವರ್ಷಕ್ಕೆ ಸಂಬಂಧಿಸಿದಂತೆ ಸಂಸ್ಥೆಯು ಸಿದ್ಧಪಡಿಸಿರುವ ವರದಿಯಲ್ಲಿ ವಿವರಿಸಲಾಗಿದೆ.

'ಜಾಗತಿಕಮಟ್ಟದಲ್ಲಿ ಜಾಹೀರಾತಿಗಾಗಿ ₹87 ಲಕ್ಷ ಕೋಟಿ (1 ಟ್ರಿಲಿಯನ್ ಡಾಲರ್) ಖರ್ಚು ಮಾಡಲಾಗುತ್ತಿದೆ. ಭಾರತವು 4ನೇ ಅತಿದೊಡ್ಡ ಜಾಹೀರಾತು ಮಾರುಕಟ್ಟೆಯಾಗಿದೆ. ಶೇ 60ರಷ್ಟು ಜಾಹೀರಾತು ಪಾಲನ್ನು ಡಿಜಿಟಲ್ ಮಾರುಕಟ್ಟೆ ಹೊಂದಿದೆ' ಎಂದು ಗ್ರೂಪ್ ಎಂನ ದಕ್ಷಿಣ ಏಷ್ಯಾ ವಿಭಾಗದ ಸಿಇಒ ಪ್ರಶಾಂತ್ ಕುಮಾರ್ ಹೇಳಿದ್ದಾರೆ.

'ಗ್ರಾಹಕರ ಬೇಡಿಕೆ ಮತ್ತು ಡಿಜಿಟಲ್ ಪ್ರಭಾವದಿಂದಾಗಿ ದೇಶದ ಜಾಹೀರಾತು ವಲಯವು ಬದಲಾವಣೆಗೊಂಡಿದೆ. ಡಿಜಿಟಲ್ ಮತ್ತು ಟಿ.ವಿ ಮಾಧ್ಯಮವು ಶೇ 86ರಷ್ಟು ಜಾಹೀರಾತು ಪಾಲನ್ನು ಹೊಂದಿವೆ' ಎಂದು ಕಂಪನಿಯ ಮುಖ್ಯ ಕಾರ್ಯಾಚರಣೆ ಅಧಿಕಾರಿ ಅಶ್ವಿನ್ ಪದ್ಮನಾಭನ್ ಅವರು ಹೇಳಿದ್ದಾರೆ.

ಎಂಎಸ್‌ಇ, ರಿಯಾಲ್ಟಿ, ಶಿಕ್ಷಣ, ಬಿಎಫ್‌ಎಸ್‌ಐ, ತಂತ್ರಜ್ಞಾನ, ಟೆಲಿಕಾಂ ವಲಯವು ಒಟ್ಟು ಜಾಹೀರಾತಿನಲ್ಲಿ ಶೇ 60ರಷ್ಟು ಕೊಡುಗೆ ನೀಡಲಿವೆ. ವಿದ್ಯುತ್‌ಚಾಲಿತ ವಾಹನ, ಫಿನ್‌ಟೆಕ್ ಮತ್ತು ಗೇಮಿಂಗ್ ಕ್ಷೇತ್ರ ಕೂಡ ಜಾಹೀರಾತು ವಲಯಕ್ಕೆ ಹೆಚ್ಚಿನ ಕೊಡುಗೆ ನೀಡಲಿವೆ ಎಂದು ಹೇಳಿದ್ದಾರೆ.

ದೇಶದ ಜಾಹೀರಾತು ಮಾರುಕಟ್ಟೆ ಸದೃಢವಾಗಿದೆ ಎಂದು ಕಂಪನಿಯ ವ್ಯಾಪಾರ ತಂತ್ರಗಾರಿಕೆ ವಿಭಾಗದ ಮುಖ್ಯಸ್ಥ ಪ್ರವೀಣ್ ಶೇಖ್ ಹೇಳಿದ್ದಾರೆ.

'ಭಾರತದಿಂದ 80 ಕೋಟಿ ಜನರಿಗೆ ಆಹಾರ ಭದ್ರತೆ'

ಮ್ಯೂನಿಚ್(ಪಿಟಿಐ): 'ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯೇ ಇದ್ದು, ಇದು 80 ಕೋಟಿ ಜನರಿಗೆ ಆಹಾರ ಭದ್ರತೆ ಒದಗಿಸುತ್ತಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಶನಿವಾರ ಹೇಳಿದ್ದಾರೆ. ಇಲ್ಲಿ ನಡೆಯುತ್ತಿರುವ 'ಮ್ಯೂನಿಚ್ ಭದ್ರತಾ ಸಮಾವೇಶ'ದಲ್ಲಿ ಸಂವಾದವೊಂದರಲ್ಲಿ ಅವರು ಈ ಮಾತು ಹೇಳಿದ್ದಾರೆ.

ಇದಕ್ಕೂ ಮುನ್ನ, 'ಪ್ರಜಾಪ್ರಭುತ್ವವು ಜನರ ಅಗತ್ಯಗಳನ್ನು ಪೂರೈಸುವುದಿಲ್ಲ' ಎಂದು ಹೇಳಿದ್ದ ಅಮೆರಿಕ ಸಂಸದೆ ಎಲಿಸಾ ಸ್ಲಾಟ್‌ಕಿನ್ ಅವರಿಗೆ ಜೈಶಂಕರ್ ತಿರುಗೇಟು ನೀಡಿದ್ದಾರೆ.

'ಸಂಸದರೇ, ಪ್ರಜಾಪ್ರಭುತ್ವವು ಜನರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದಿಲ್ಲ ಎಂದು ಹೇಳಿದ್ದೀರಿ. ಪ್ರಜಾಪ್ರಭುತ್ವ ದೇಶವಾಗಿರುವ ಭಾರತದಲ್ಲಿ 80 ಕೋಟಿ ಜನರಿಗೆ ಆಹಾರ ಒದಗಿಸಲಾಗುತ್ತಿದೆ' ಎಂದು ಜೈಶಂಕರ್ ಹೇಳಿದರು.

'ವಿಶ್ವದ ಬೇರೆ ಬೇರೆ ದೇಶಗಳಲ್ಲಿ ಭಿನ್ನವಾದ ಚರ್ಚೆ, ಸಂವಾದಗಳು ನಡೆಯುತ್ತಿರುತ್ತವೆ. ಬೇರೆ ಬೇರೆ ಅಭಿಪ್ರಾಯಗಳೂ ಇವೆ. ಹೀಗಾಗಿ, ನಿಮ್ಮ ಅಭಿಪ್ರಾಯವೇ ಸಾರ್ವತ್ರಿಕ ಎಂಬುದಾಗಿ ಭಾವಿಸಬೇಡಿ' ಎಂದೂ ಹೇಳಿದ್ದಾರೆ.

'ನುಡಿದಂತೆ ನಡೆಯಿರಿ': 'ಪ್ರಜಾತಾಂತ್ರಿಕ ಮೌಲ್ಯಗಳ ಕುರಿತು ಇತರ ದೇಶಗಳಿಗೆ ಉಪದೇಶ ಮಾಡುವ ಪಾಶ್ಚಿಮಾತ್ಯ ರಾಷ್ಟ್ರಗಳು ಅದರಂತೆ ಅವು ನಡೆದುಕೊಳ್ಳಬೇಕು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.

ರ‍್ಯಾಗಿಂಗ್ ಪ್ರಕರಣ: ಪ್ರಾಂಶುಪಾಲೆ, ಸಹಾಯಕ ಪ್ರಾಧ್ಯಾಪಕ ಅಮಾನತು

ಕೊಟ್ಟಯಂ, ಕೇರಳ (ಪಿಟಿಐ): ಕೇರಳದ ಕೊಟ್ಟಯಂ ಜಿಲ್ಲೆಯ ಸರ್ಕಾರಿ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಯೊಬ್ಬರಿಗೆ, ಮೂರನೇ ವರ್ಷದ ವಿದ್ಯಾರ್ಥಿಗಳು ರ‍್ಯಾಗಿಂಗ್ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಲೇಜಿನ ಪ್ರಾಂಶುಪಾಲೆ ಹಾಗೂ ಸಹಾಯಕ ಪ್ರಾಧ್ಯಾಪಕರನ್ನು ಅಮಾನತು ಮಾಡಲಾಗಿದೆ.

'ಪ್ರಕರಣ ಬೆಳಕಿಗೆ ಬರುತ್ತಿದ್ದಂತೆಯೇ ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲು ವಿಫಲವಾದ ಪ್ರಾಂಶುಪಾಲೆ ಸುಲೇಖಾ ಎ.ಟಿ ಹಾಗೂ ಸಹಾಯಕ ಪ್ರಾಧ್ಯಾಪಕ, ಸಹಾಯಕ ವಾರ್ಡನ್ ಆಗಿ ಕೆಲಸ ಮಾಡುತ್ತಿದ್ದ ಅಜೀಶ್ ಪಿ.ಮಣಿ ಅವರನ್ನು ಅಮಾನತುಗೊಳಿಸಲಾಗಿದೆ' ಎಂದು ಕೇರಳದ ಆರೋಗ್ಯ ಸಚಿವಾಲಯ ತಿಳಿಸಿದೆ. ಅದೇ ರೀತಿ, ಸ್ವಚ್ಛತಾ ಹಾಗೂ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯನ್ನು ಕೆಲಸದಿಂದ ಕಿತ್ತು ಹಾಕಲಾಗಿದೆ. ಆರೋಗ್ಯ ಸಚಿವೆ ವೀಣಾ ಜಾರ್ಜ್ ಅವರ ಸೂಚನೆಯಂತೆ, ವೈದ್ಯಕೀಯ ಶಿಕ್ಷಣ ಇಲಾಖೆ ನಡೆಸಿದ ಪ್ರಾಥಮಿಕ ತನಿಖೆ ಬಳಿಕ ಈ ಕ್ರಮ ಕೈಗೊಳ್ಳಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ.

ಆರೋಪಿಗಳು ಎಡಪಂಥೀಯ ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ ಜೊತೆಗೆ ನಿಕಟ ಸಂಪರ್ಕ ಹೊಂದಿದ್ದಾರೆ ಎಂದು ಕಾಂಗ್ರೆಸ್ ಕಿಡಿಕಾರಿದೆ.

ಆರೋಪಿಗಳಿಗೆ ಶಿಕ್ಷಣ ಮುಂದುವರಿಸಲು ಅವಕಾಶ ನೀಡದಿರಲು ಕೇರಳ ನರ್ಸ್- ಮಿಡ್‌ವೈವ್ಸ್ ಕೌನ್ಸಿಲ್ ತೀರ್ಮಾನ ಕೈಗೊಂಡಿದೆ.

ಕದನ ವಿರಾಮ: ಇಸ್ರೇಲ್‌ನಿಂದ 369 ಕೈದಿಗಳ ಬಿಡುಗಡೆಗೆ ಕ್ರಮ

ಮೂವರು ಒತ್ತೆಯಾಳು ಬಿಡುಗಡೆ

ಖಾನ್ ಯೂನಿಸ್ (ಗಾಜಾ ಪಟ್ಟಿ) (ಎಪಿ/ಎಎಫ್‌ಪಿ): ಕದನ ವಿರಾಮ ಒಪ್ಪಂದದ ಭಾಗವಾಗಿ ಹಮಾಸ್ ಬಂಡುಕೋರರು ಮೂವರು ಒತ್ತೆಯಾಳುಗಳನ್ನು ಶನಿವಾರ ಬಿಡುಗಡೆಗೊಳಿಸಿದ್ದಾರೆ. ಅದಕ್ಕೆ ಪ್ರತಿಯಾಗಿ ಇಸ್ರೇಲ್, ತನ್ನ ಜೈಲುಗಳಲ್ಲಿದ್ದವರ ಪೈಕಿ 369 ಪ್ಯಾಲೆಸ್ಟೀನ್ ಕೈದಿಗಳನ್ನು ಬಿಡುಗಡೆ ಮಾಡಿದೆ.

ಇಸ್ರೇಲ್ ಮತ್ತು ಅರ್ಜೆಂಟೀನಾ ಪ್ರಜೆ ಐಯರ್ ಹಾರ್ನ್ (46), ಅಮೆರಿಕನ್-ಇಸ್ರೇಲಿ ಪ್ರಜೆ ಸಾಗಿ ಡೆಕೆಲ್ ಚೆನ್ (36) ಮತ್ತು ರಷ್ಯನ್-ಇಸ್ರೇಲಿ ಅಲೆಕ್ಸಾಂಡರ್ ಟ್ರೌಫಾನೋವ್ (29) ಅವರನ್ನು ಹಮಾಸ್ ಹಸ್ತಾಂತರಿಸಿದೆ.

'2023ರ ಅಕ್ಟೋಬರ್ 7ರಂದು ಈ ಮೂವರನ್ನು ಕಿಬ್ಬುತ್ ನಿರ್ ಓಜ್‌ನಿಂದ ಹಮಾಸ್ ಬಂಡುಕೋರರು ಅಪಹರಿಸಿ, ಒತ್ತೆಯಾಳಾಗಿ ಇರಿಸಿಕೊಂಡಿದ್ದರು. 16 ತಿಂಗಳು ಸೆರೆಯಲ್ಲಿದ್ದ ಮೂವರ ಆರೋಗ್ಯ ಕ್ಷೀಣಿಸಿದಂತೆ ಕಂಡುಬಂದಿತು. ಆದರೆ, ಅವರು ಕಳೆದ ವಾರ ಬಿಡುಗಡೆಯಾಗಿದ್ದ ಮೂವರಿಗಿಂತ ಉತ್ತಮ ಸ್ಥಿತಿಯಲ್ಲಿದ್ದರು' ಎಂದು ಮೂಲಗಳು ತಿಳಿಸಿವೆ.



ಒತ್ತೆಯಾಳುಗಳಾದ ಐಯರ್ ಹಾರ್ನ್, ಸಾಗಿ ಡೆಕೆಲ್ ಚೆನ್ ಮತ್ತು ಅಲೆಕ್ಸಾಂಡರ್ ಟ್ರೌಫಾನೋವ್ ಅವರನ್ನು ಹಮಾಸ್ ಬಂಡುಕೋರರು ಶನಿವಾರ ಬಿಡುಗಡೆ ಮಾಡಿದರು —ಎಪಿ/ಪಿಟಿಐ ಚಿತ್ರ

ನಾಲ್ಕು ವಾರಗಳ (ಜ. 19) ಹಿಂದೆ ಕದನ ವಿರಾಮ ಜಾರಿಯಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಎರಡೂ ಕಡೆಯಿಂದ ಪ್ರಚೋದನೆಗಳು ನಡೆದು ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು. ಅದು ಪುನಃ ಯುದ್ಧದ ಛಾಯೆ ಆವರಿಸುವಂತೆ ಮಾಡಿತ್ತು.

ಗಾಜಾದಿಂದ 20 ಲಕ್ಷಕ್ಕೂ ಹೆಚ್ಚು ಪ್ಯಾಲೆಸ್ಟೀನಿಯನ್ನರನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದ ವಿವಾದಾತ್ಮಕ ಪ್ರಸ್ತಾವವು ಉದ್ವಿಗ್ನತೆಯನ್ನು ಇನ್ನಷ್ಟು ಹೆಚ್ಚಿಸಿತ್ತು. ಇದು ಕದನ ವಿರಾಮದ ಭವಿಷ್ಯದ ಮೇಲೆ ಅನುಮಾನ ಉಂಟಾಗುವಂತೆ ಮಾಡಿತ್ತು.

ಆದರೆ, ಈಜಿಪ್ಟ್ ಮತ್ತು ಕತಾರ್ ಅಧಿಕಾರಿಗಳು ಮಧ್ಯಸ್ಥಿಕೆ ನಡೆಸಿದ ಬಳಿಕ ಮತ್ತಷ್ಟು ಒತ್ತೆಯಾಳುಗಳನ್ನು ಬಿಡುಗಡೆಗೊಳಿಸುವುದಾಗಿ ಹಮಾಸ್ ಗುರುವಾರ ತಿಳಿಸಿತ್ತು.

369 ಪ್ಯಾಲೆಸ್ಟೀನಿಯನ್ ಕೈದಿಗಳು ಮತ್ತು ಬಂಧಿಗಳ ಬಿಡುಗಡೆಗೆ ಇಸ್ರೇಲ್ ಶನಿವಾರ ಕ್ರಮ ತೆಗೆದುಕೊಂಡಿದ್ದು, ಇದರಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ 36 ಕೈದಿಗಳೂ ಸೇರಿದ್ದಾರೆ. ಕದನ ವಿರಾಮ ಜಾರಿಯಾದಾಗಿನಿಂದ 21 ಒತ್ತೆಯಾಳುಗಳು ಮತ್ತು 730 ಪ್ಯಾಲೆಸ್ಟೀನಿಯನ್ ಕೈದಿಗಳ ಬಿಡುಗಡೆಯಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

ANJANAPURA 4TH Block Site No.111 facing/South 30x40 @ 10th Block Site No.410 facing/South 20x30 good location immediate construction. 9845132011, 9591211555

PLOT FOR Sale In Anjanapura_11th Block,50x80,On 80'Road Commercial Price 6.5cr 40x60,On 40'Road Price11000/-9845600007

Arkavathi Layout

ARKAVATHY 20X30 30x40 West 3 Block Anjanapura 30x40 BSK 6th Stage 30x40 Buyers: 7019770736/ 8951614989

Airport Road

***BOOPASANDRA* BEUTIFUL** Location EAST FACING 50x80 BDA SITE FOR SALE. Contact: 9945079777

Banashankari

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

AVAILABLE BDA site 50/80 Banashankari 6th Stage, 7th Block, North Facing, opposite park near toll plaza. Genuine Buyers Contact:- 9980831787

SITE FOR SALE Site no. 167/A, Banashankari 6th stage 4th T block, 40*60, West facing. Ct: 6305185101

BSK 6TH Stage 11th_Block BDA 20X30 North facing allottee site, excellent vastu_for sale -9986075122

"AVAILABLE BANASHANKARI 6th-Stage BDA-Site's 50x80 East-facing 7th`Black 60`feet`Road and`40x60 North`facing 1st`Black`30x40 East`facing. Contact: 9845146725/ 9741466369"

FOR SALE Banashankari 6th Stage, 1st Block, 20x30, N/F, 3BHK Triplex House 9448508410, Brokers Excuse

Bannerghatta Road

BANNERGHATTA ROAD Nandanavana Layout 30x40, 40x60, 50x80 Rs. 3500/- to 5000/- Psft BROKERS EXCUSE 9449655947

Basavanagudi

SALE 40X60 Vishwabharathi Society North Face 30 Feet Road Girinagar 2nd Phase Good Location 8880014616

Devanahalli

PLOT FOR SALE @ Jangammakote, 1200Sqft N/F in Gated Layout Near Sugaturu Village. Via Hoskote. Whatsapp/ Call: 9972528503

HSR Layout

BDA APPROVED A-Block Singasandra 40x60 Plot Sale 15400/ whatsapp owner 8978282072

ITPL

SITE FOR sale near ITPL 55*65 E/F 80 ft wide main road property with clear title Call:- 7899492581

Kengeri

BDA SITES For Sale 4412, 4413 40×30 40 feet road connected to PRRL Road 3rd block L-sector Nadaprabhu Kempegowda layout:- 9980339217, 9448709882

Koramangala

"COMMERCIAL CORNER BDA Site 900 Sqft ST Bed Rs.2 Crore only Genuine Buyers "Sri.Ganesh Estate"- 9845286505"

Kanakapura Road

SALE GUBLALA, Kanakapura Road (Jayanagar Cooperative Society) 40x55. Rs.13,500/sq.ft. Excellent Residential Plot Corner. -9880688499.

UM KAVAL-TALAGHATAPURA (Off Kanakapura Road) East Facing Residential Plot measuring about 2325 sqft. in 'Purva Tree Havan' Gated Community is for SALE. Contact: 9448282243.

KAGGALIPURA 'E' Khatha Site Sale 60x90 West Facing Gated Community 3,950/- Psqft. Negotioble 9740150364/ 8884707773

Kempegowda Layout

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact: Kumar 9945119449

NADA PRABHU Kempegowda Layout BDA 30x40 South Facing, 2nd Block, I Sector, Direct Owner: 9980860138

30X40 BDA Site Available at Kempegowda Layout & Sir.M. V. Layout Contact For More Information- 9972220339/ 9739383649

Lalbagh

COMMERCIAL BUILDING FOR SALE: 700 Sft x 3 Floors 2100 Sft, Off Lalbagh Road, Bangalore-27. Call: 98865-87648

Mahalakshmi Layout

MAHALAXMI LAYOUT 2 Minutes Walkable Metro, Near Anjaneya Temple, 30x55 Vacant Site Good Location: 9980501366

Multiple Locations

RAJARAJESHWARI NAGARA 15500 Sqft, Vishveshwaraiah 1st Block 40x60, Chandra Layout 30x40, Basaveshwaranagar 30x50: 9886112385/-

Mysore

SITES_@MYSORE DTCP Facing State Highway `A`Khatha,RERA, 100%Completed Layout, Rs.1700-2050 PerSft, 85%Loan Immediate Registration, Near HD Kote Road. 10Minutes to Airport,Ring Road, 15Minutes to Palace: 9845287802/ 8050001571.

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact:6361819741.

30X40 BDA Sites Nagarbhavi Vidhan Soudha Layout South Facing, 40X60 3rd Block VISHVESHWARAIAH LAYOUT: 9980409820

Vishweshwariah Layout

"VISHVESWARAIAH LAYOUT 30x40 West facing Allottee`Site for Sale Near Saibaba Temple. Contact Genuine Buyers:- 9845268611"

VISHWESWARAIH LAYOUT BDA Site 3rd Block 30x40 West Facing Near 100ft Road Good Location: 7975532914

VISHWESHWARAIA LAYOUT 40x60 BDA SITE Sale 3rd Block East Facing 40 Feet Road Contact: 9035470616

DIRECT OWNER 30x40 BDA Site Sale @ Vishveswaraiah Layout 2nd Block, near 100ft Road. 9886634578

"VISHVESHWARAIAH LAYOUT 4th Block 20x30 North facing Site 40`feet`Road, Immediate`Registration. 9448432633/ 7022218837"

30X40 NORTH BDA Site Sale Vishveshwaraiah Layout 7500 Sqft & 40x60 North 8000 Sqft Owner Meeting Contact: 8310003509

40X60 NORTH Facing site, SMV 5th block, DC converted, BBMP A & E Khata. Contact: 9900266984

Whitefield

PLOT FOR sale 4030 Sqft prime location on Channasandra Main Road near Hope Farm junction Whitefield, clear titles, approved layout plan. Call 6366384863

SPACIOUS 4,142 sqft plot available for sale in Whitefield next to MVJ college. Genuine buyers, please reach out for details. Call: 9980155241

Mysore

BUYING/ SELLING in MYSORE Sites, House, Residential/ Commercial/ Industrial Land, Genuine Sellers/ Buyers Contact: RAVISH 9845608259.

Udupi

KHB SITE 1725 SQFT HEBRI TOWN AMIDST NATURE WESTERN GHATS 26 LAKHS OWNER 9606866368

Agricultural Land

Doddabalapur

AGRICULTURE LAND for SALE @ Doddaballapura Taluk, Sasalu Hobli, 2&4 acres,General Property,Thar road access,Clear Title,Near Upcoming KWIN City. 9886835762

Out-Station

9-LAKH PER acre Challakere 33acre Land for Immediate Settlement (Agriculture, Solar, Poultry) 9886154355

Commercial Land

Nelamangala

COMMERCIAL 120X380 1ACRE land attached to SH 84 Near KunigalYadiyur Rs 3Lakhs per Gunta clear titles contact-8296944200

Commerical

Basavanagudi

SALE 50X90 Basavanagudi North Facing With House on 80feet Road Excellent Location ct: 9844134068 8073859758

Kanakapura Road

2 WAREHOUSES Available in Jakkasandra 3rd Phase Bangalore Tenant Occupied Genuine buyers Contact- 9606154546/ 9019851332

Vishweshwariah Layout

FOR SALE 50x80 BDA Commercial Site On 100 feet Road, East facing, at 6th BLOCK, Sir M.V. Layout. Direct owner Contact: 9880956229. BROKERS EXCUSE

Whitefield

"COMMERCIAL FLOOR 5000`Sqft`with Rental`income ₹2`Lakhs+GST, 1828`Sqft undivided`land share`30years Lease_given`to Reputed Hospital "Sri.Ganesh Estate"- 9845286505"

Flat

Basavanagudi

1300SFT_2_BHK 1st_Floor`Semi Furnished`with Modular`Kitchen & One`Covered Parking Rs.90 Lacs.`Behind Shankarpuram Telecom Exchange, Ramakrishna Mutt`Layout. Call-9341226696

Dollars Colony

SANJAYNAGAR, DOLLARS Colony, Prestige Fairfield, 3.5 & 4 BHK luxury apartments for sale, ready to occupy. Price starts @ Rs. 4.5 Cr onwards. Call:- 9148047452.

HSR Layout

3BHK 1340 sqft for sale @9k No agents ITI layout HSR7 for rent @26k 9441124742

Nagarabhavi

PLATS FOR-SALE Near Nagharbhavi Circle_2_& 3 BHK @ Prime-Location Ready to`Move in`Just`1.km from Metro-Station 9538828808 9845066608

Whitefield

BIRLA ALOKYA, 3 BHK Duplex, 1488 sq. ft., 2nd Floor Villament, North facing, East and West sunlight and ventilation, New construction, Price: Rs. 2.2 crores. Contact: 9972115156

Farm House/ Land/ Resorts

Out-Station

FARMHOUSE BEST_PRICE 3Acre_Channapatna, 4Acre Mysore, 2Acre_Kanakapura, 6Acre Tumkur Road 8951240669

SALE 5 ACRES 20 minutes from CHIKMAGLUR CITY road side about 200 meters with good scenic view of Giri mountain range with clear documents no encroachment, no encumbrance of the property 3 CRORE lum-sum, Contact genuine buyer's only- 97400 28280.

REAL ESTATE SELLING

House

Banashankari

RENT FOR sale apartments house 2/3 Banashankari 2nd 3rd stage 30*50 north facing Girinagar Basavanagudi Jayanagar padmanabh Nagar 9964079497 9480984441

4200 SQFT new House 3 floors on 30x45 BDA Site, BSK 3rd stage, Hosakerehalli Cross. 4.60 crores. Owner: 9740153286. No Brokers

Jayanagar

SALE HOUSES & Flats Jayanagar JPNagar Banashankari 30x40 30x50, 40x60, 60x90 Price 2.9cr To 10cr CLASSIC ESTATES 9845302589

J P Nagar

SALE 20X30 old Building West Facing J.P.Nagar 4th Phase Prsce 25000 Per sft Negotiable Call:9880425607

Kanakapura Road

4 BEDROOM Designed Stone Constructed Duplex House And Hallow Bricks Factory For Sale Contact: 9916817739

Mallathalli

ITI LAYOUT MALLATHAHALLI 30X50 SOUTH FACING DUPLEX 3 BEDROOM HOUSE 2,60,00,000/-NEGOTIABLE. ABHILASHA CONSULTANT: 9480565758

Vidyaranyapura

INDEPENDENT 4 BHK Duplex house ready to move 60'x40' BEL layout prime location 3.8cr: 9844264852

Industrial & Factory

Nelamangala



92500 sqft DC Converted Land (Warehouse) for Sale in Manchenahalli near Sondekoppa, Nelamangala at Rs. 500/- per sqft. Contact (Owner): + 917899028881

Residential/ Commercial

Rajajinagar

SALE 35X45, BDA Rajajinagar, west facing, 17TH G main, 28000/sqft, 9916800300

Rajarajeshwari Nagar

RAJARAJESHWARI NAGAR Ideal Homes 44 X 50 North facing Excellent Location. 9900522163

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage,Vishweshwaraiah layout & any BDA Katha & Mysore MUDA Sites, immediate settlement. genuine Sellers Contact:9902038118, 9449060605

Arkavathy Layout

WANTED 20X30, 30x40 BDA Site in Arkavathy Layout. Immediate Registration. Direct Buyer. Contact: 9739969994

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

Jayanagar

WANTED CORNER site 40 x 30; 40 x 50, 40 x 60 Jayanagar residential/ commercial 9446387993.

Kanakapura Road

WANTED SITE 30x40, 40x60 Jayanagar Housing Society, Anjanapura BDA, BCC Housing_Society Banashankari 6th_Stage Agent`Excuse. Call: 9663454878.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Nagarabhavi

WANTED BDA_SITE 30x40, 40x60, 50x80 Visweshwarayya Layout, Nagarabhavi RHCS Layout, NGF, Banashankari 6th Stage. 8105688602.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED VISHWESHWARAIAH Layout 30x40 & 40x60, 20x30, 50x80 BDA Property Contact: 7899570235

BUILDERS ESSENTIAL

Building Contractors

BUILDIA PROJECTS CONSTRUCTION COMPANY. With Over 30-Years of Experience We Build Your Dream Residence and Commercial Buildings As-Per Vaastu Using The Best Quality Material on-Time Within Your Budget. Call:9148691980 9845843667

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL BUILDING Ground Floor, North`West Corner 1350_Sqft For`RENT. Suitable for: Showroom Shop,Office #625_10th`Cross 18th_Main Padmanabhanagar Bangalore-70. Contact: 9845226316 9611844667 9986372614.

TO LET Office space 1st Floor, St.John's Road, Dasappa Colony, 250 Sqft. Brokers Excuse. 9448840967.

2300+2400.GROND,FIRST FLOOR Commercial Space For Rent.Car parking, On Nagarbhavi Main Road, Coconut Garden. Bengaluru. Call:9243403130

OFFICE SPACE For Rent 6000sqft, stilt + 5floors, Lift, Car parking, Borewell, Cauvery water,Cambridge Layout.Call:9449424735, 9845848032.

HENNUR NR Bharatiya city 4000 sqft building. Suits hostel, office, guest house etc. 9731116645

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

YELAHANKA INDUSTRIAL Area Ground Floor 1250 sq.feet, First Floor 1250 sq.feet, Second floor 500 sq.feet. Contact: 9448505538.

RENT, JALAHALLI West, each 1200 sqft, Ground/ first. 30 HP. Suitable for Bank/ Finance/ Garment. 8951598384

JOB OPPORTUNITIES

Teachers/ Professors

MOUNT CARMEL ENGLISH SCHOOL
No.3, 12th Cross, Ideal Homes, Rajarajeshwari Nagar, Bangalore-560 098.
Walk-in interview on 23-02-2025, Sunday
Timings: 10.00am to 1.00pm
Required experienced and qualified Teachers for Nursery, Primary, Middle and High School for all the Subjects.
Immediate requirement (Primary & High School Mathematics)
Eligible candidates mail your Curriculum vitae with updated resume to Email: mountcarmel.rrnagar@gmail.com
Venue: School Campus
Contact: 080-28602294/95, 7899070902

B. B. U. L. JAIN VIDYALAYA
(Affiliated to CBSE, Delhi) (Managed by : Shree Mahaveer Jain Shikshan Sangh)
84, K.R. Road, Shankarapuram, Bangalore-4
Phone : 080 41554379 / 41520744 / 7795482145
WE ARE HIRING
- Subject Co-ordinators for Middle & High School: Graduate with B.Ed., who has 5 years experience as Co-ordinator.
- Primary, Middle and High School: Graduates with B.Ed. to teach English, Hindi, Kannada, Maths, Science, Social Science.
- Nursery Teachers: Qualified, experienced, young Graduate teachers with Nursery or Montessori Training, Fluent in English.
- English Teacher for Primary (Phonic Trained)
- Qualified Teachers for P.T. , Library, Computer Science, Art & Music

Interested candidates may send their resume to principal.jv@gmail.com on or before 24th February 2025. The selected candidates will have to bring their original markscard, last drawn salary certificate when called for an Interview.
(Applicants aged below 50 years & only localites can apply)

THE AURO SCHOOL
Edamadu, Kanakapura Main Road
INVITES APPLICATIONS
The Auro School is an Integral Education School with CBSE Curriculum to be. Candidates with creative, innovative and holistic approach are preferred. Transportation available from JP Nagar 1st phase, Bangalore.
PRIMARY & MIDDLE TEACHERS:
Graduation / PG with relevant teacher training as per CBSE norms, 1-5 yrs. exp -
Posts: Science- B.Sc./M.Sc. (CBZ) with B.Ed,
Social Science & English B.A./M.A. (English) with B.Ed.,
Music- Relevant degree/diploma in Music .
Age: Below 35 years.
Candidates with good communication skill and computer knowledge send their resume with latest PP size photo to Email ID within 10 days.
Email: admin@theauroschool.org ;
Ph: 74112 03566 / 74112 03766
Website: www.theauroschool.org

MIRAMBIKA SCHOOL FOR NEW AGE (CBSE)
Sri Aurobindo Marg, I Phase, J P Nagar, Bengaluru-560 078.
Ph.: 080-26640562, 42015077 Email: msfna.info@gmail.com
INVITES APPLICATIONS FROM TEACHERS
1. English for Classes IX & X - (M.A. (English), B.Ed.)
2. English with EVS/Math for Primary Classes - (B.A./B.Sc. with B.Ed.)
3. Social Science & English for Middle School - (B.A. /M.A. (English), B.Ed.)
4. Art & Craft - (BFA/MFA)
5. Physical Education (Female) - (B.P.Ed./ M.P.Ed.)
6. Science Laboratory In-Charge - (B.Sc.-Physics)
7. Band Master - (Part Time)
8. Music - (MA-Music/ Vidwat in Carnatic/ Hindustani/ Western)
9. Dance - Indian Classical/ Western

Candidates with relevant experience of Min. 2yrs. are required to submit their resume with recent passport photograph to The Principal within 7 days from the date of Advertisement to the above email ID.

CAMLIN ENGLISH SCHOOL State Board. Nursery to X, 6th 'C' Main, 4th Cross, Near 7th Main Bus Stop Hampinagar Bangalore-560104. Phone: 080-23301363 email: camlinschool@ rediffmail.com REQUIRES for High School & Higher Primary, Experienced Trained Teacher to Teach English, Kannada, Maths, Hindi, Science, Social Science, Drawing, Physical Education, Computer Science. Part Time: Karate, Yoga. For Primary & Nursery TCH/ D.Ed./ NTT/ MTT & Others, School Bus Driver, Security Guard, Office Boy, Attender and Aya. Apply/ WALK-IN-INTERVIEW 10:00a.m. to 2:00p.m. with Resume and Latest Passport Size Photo OR send it to our e-mail.

HERITAGE PUBLIC SCHOOL Konanakunte requires PRINCIPAL/ HEAD MISTRESS Experienced female post graduates with BEd below 45`years HIGH_SCHOOL TEACHERS for`Maths Physics Chemistry Biology Social subjects PRIMARY TEACHERS for Maths EVS English subjects`and KINDERGARTEN COORDINATOR and teachers with exp.at KG_level Deserving candidates can_send resume through WhatsApp or/email Mob:9901733776 Ph:080-26322111 Email: heritagepublicschoolkk @gmail.com

REPUTED SCHOOL in BSK (State Syllabus) Seeks- ADMIN and VICE PRINCIPAL, HIGH SCHOOL TEACHERS (English,Science,Math) PRIMARY SCHOOL TEACHER (English) COMPUTER,MUSIC,DANCE and PE TEACHER. Contact-6362999642

HOLY ANGEL'S High School, Hampinagar, Vijayanagar, Bengaluru-560104 Phone:23404465/ 23202042 holyangels.highschoolrpclayout@gmail.com Requires Experienced Trained Teachers for the Academic year 2025-26 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc.,B.Ed. M.A./M.Sc.,M.Ed, N.T.T. CP.Ed. Only English Medium Candidates need to apply

M S PU and DEGREE COLLEGE
R.T. Nagar, Bangalore-560 032
REQUIRES
Faculty for PUC and Degree
Subjects: Maths Accounts, Kannada English, Computer.
Experience or freshers can also apply part-time / full time
Walk-in interview
Send your updated resume to:
manasa.edu.trust@gmail.com
99860 06003, 98444 56549

ST.PHILOMENA PUBLIC SCHOOL, Byalakere, Yelahanka, Bangalore required Trained & Experienced TEACHERS all subjects (Primary & High School) 9480091189/ 9845036582/ stphilomenas118@gmail.com

COLUMBIA COLLEGE Wanted: 1. Lecturers for Kannada, Business Studies, Accountancy, Economics, History 2. Ample Public School H M, Kannada, EVS, English, Science Details: JP Nagar 8th Phase, Bangalore-560083 PH:9845457012/ 7899093631

Accounts & Finance

WANTED EXPERIENCED Female Accounts Executive with knowledge of Tally, Excel & Word for The Standard Brick &'Tile Co'(Yelahanka) Pvt.Ltd., interested persons staying around Bangalore North in similar field may apply to standardbricksynk@ gmail.com.

ACCOUNTANT WITH KNOWLEDGE GST Sales,Purchase,Bank Reconciliation For a Medium size Hotel at white field Mail Resume to foxgloveinternational.hotel@ gmail,com or whatsup Deepak 8105826202

ACCOUNT ASSISTANT Required. Office in Malleshwaram, knowledge of Tally, Minimum 3 yrs Experience. Contact: 8088389384.

Hotel

UNCLE'S KITCHEN Restaurant, Bannerghatta Road wanted MANAGER, COOKS, WAITERS, CAPTAINS. Very Good Salary. Call: 99000-54462

Walk-in

WANTED
A fast growing & reputed construction company requires the following BE/Diploma (Civil Engineers) for the said post
1. Project Manager - 2 Nos. 10-15 Years Experience
2. Sr. Site Manager - 4 Nos. 5-10 Years Experience
3. Junior Engineers - 4 Nos. 2-5 Years Experience
4. Store Keepers - 2 Nos. 5-10 Years Experience
5. QA/QC - 2 Nos. 5-10 Years Experience
6. Safety Officers - 2 Nos. 5-10 Years Experience
7. Safety Stewards - 6 Nos. 1-3 Years Experience
8. Quality Surveyors - 2 Nos. 2-10 Years Experience
9. Accounts Executive 1-5 Nos. 1- 5 Years Experience

Please send the resume to srisriraminfrastructurs@gmail.com or Walk-in Interview on 17-02-2025 @ 10.00 AM onwards
SRI SRIRAM INFRASTRUCTURS
Banashankari, Bengaluru-560 070
Mob : 9844527126
Landline : 08026711556

Hospital & Medical Jobs

FPA INDIA requires LAB TECHNICIAN for clinic @ Peenya. Bengaluru candidates apply. Recruitment reflects our commitment to safety protection of children and young people. Email: bengaluru@fpaindia.org

Marketing & Sales

WANTED COLLECTION MARKETING, Precision Bright Steel Industries Address:Janatha Colony Renuka`Home Appliances, 1st`Floor Bommasandra Bangalore 9448225483 9952971790

General

REQUIRED EXPERIENCED TELECALLERS (Female) for a reputed College. Good Salary Offered. Walk-in Interview 9449835744/ 9535601743

BENGALURU FOODS & Beverages Bannergata Road wanted MARKETING EXECUTIVES, Lady RECEPTIONIST, TELECALLERS. Very Good Salary. Call: 99000-54461

TELECALLERS (FEMALE) Wanted with any Graduation and Good Speaking Skills For Banking Sector, Basaveswarnagar 9742277166

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331







ಒಂದು ಪಾದಯಾತ್ರೆ ಹತ್ತಾರು ಜೀವನ ಪಾಠ



ಮಲೆ ಮಹದೇಶ್ವರ ಬೆಟ್ಟದಲ್ಲಿ ಪಾದಯಾತ್ರೆ

ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್ ಪರ್ಯಾಯ ಶಿಕ್ಷಣದ ಆಶಯದಲ್ಲಿ ಹೊಸ ಜೀವನ ದಾರಿ ಎಂಬ ಪ್ರಾಯೋಗಿಕ ಶಾಲೆಯನ್ನು ಎರಡು ವರ್ಷದಿಂದ ನಡೆಸುತ್ತಿದೆ. ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯನ್ನು ಒಲ್ಲದ, 18 ವರ್ಷ ವಯಸ್ಸಿನವರಿಗೆ ಖಾದಿ, ಬಟ್ಟೆ ಡೈಯಿಂಗ್, ಸಹಜ ಕೃಷಿ ಮತ್ತು ಗಾಣದ ಎಣ್ಣೆ ತೆಗೆಯುವ ಕೆಲಸವನ್ನು ಹೇಳಿಕೊಡುವುದರೊಂದಿಗೆ ಪಾದಯಾತ್ರೆಯನ್ನೂ ಆಯೋಜಿಸುತ್ತಿದೆ.

ಕೆ.ನರಸಿಂಹಮೂರ್ತಿ

‘ಪಾದಯಾತ್ರೆ ಎಂದರೆ ಸುಮ್ಮನೆ ನಡೆದುಕೊಂಡು ಹೋಗುವುದು ಎಂದುಕೊಂಡಿದ್ದೆವು. ಆದರೆ ದಾರಿಯುದ್ದಕ್ಕೂ ಅಷ್ಟೊಂದು ಜನರನ್ನು ಭೇಟಿ ಮಾಡುತ್ತೇವೆ, ಕುಳಿತು ಮಾತಾಡುತ್ತೇವೆ. ಹೊಸ ವಿಷಯಗಳನ್ನು ಕಲಿಯುತ್ತೇವೆ ಎಂದುಕೊಂಡಿರಲಿಲ್ಲ. ಹಸಿವು, ದಣಿವು, ಜನರ ಕಷ್ಟನಷ್ಟಗಳೇನು, ಪರಿಸರ ಎಂದರೆ, ಅಭಿವೃದ್ಧಿ ಎಂದರೆ ಏನು ಎಂಬುದು ಆಗ ಗೊತ್ತಾಯಿತು. ಬೈಕಿನಲ್ಲೋ, ಬಸ್ಸಿನಲ್ಲೋ, ರೈಲಿನಲ್ಲೋ ಹೋಗಿದ್ದರೆ ಸುಮ್ಮನೆ ಹೋಗಿಬಂದಂತಾಗುತ್ತಿತ್ತಷ್ಟೇ...’

ಮಂಡ್ಯ ಜಿಲ್ಲೆಯ ಮೇಲುಕೋಟೆಗೆ ಮೂರ್ನಾಲ್ಕು ಕಿ.ಮೀ. ದೂರದಲ್ಲಿ, ಜನಪದ ಸೇವಾ ಟ್ರಸ್ಟ್‌ನ ‘ಹೊಸ ಜೀವನ ದಾರಿ’-ತರಬೇತಿ ಕೇಂದ್ರದ ಆವರಣದಲ್ಲಿದ್ದ ಮರಗಳ ನೆರಳಿನಲ್ಲಿ ಕುಳಿತು ನೆನಪುಗಳೊಳಗೆ ಜಾರಿದ ಹೇಮಂತ, ಪುಷ್ಕರ, ರಜೀಕ್ ಸಾಬ್, ಲೋಕೇಶ, ಅಜಿತ್, ಪ್ರೀತಂ ಅವರ ಕಣ್ಣುಗಳಲ್ಲಿ ಅಪೂರ್ವ ಎನ್ನಿಸುವ ಬೆಳಕಿತ್ತು. ಹೊಳಪಿತ್ತು.

ಮಾತಿಗೆ ಕುಳಿತುಕೊಳ್ಳುವ ಮುನ್ನ ಅವರು ಗಾಣದಿಂದ ಎಣ್ಣೆ ತೆಗೆಯುತ್ತಿದ್ದರು. ಖಾದಿ ಬಟ್ಟೆ ನೇಯುತ್ತಿದ್ದರು. ಬಟ್ಟೆಗಳಿಗೆ ಸಹಜ ಬಣ್ಣ ತುಂಬುತ್ತಿದ್ದರು. ಅದು ಅವರ ಕಲಿಕೆ-ಗಳಿಕೆಯ ಕಾಯಕ. ಅದೇ ಅವರ ಸದ್ಯದ ಜೀವನದ ದಾರಿ.

‘ಹುತಾತ್ಮರ ದಿನ’ದ ಆಸುಪಾಸಿನಲ್ಲಿ ಪಾದಯಾತ್ರೆ ಶುರುವಾದಾಗ ಕೆಲವರಿಗಷ್ಟೇ ಅದೇನೆಂದು ಗೊತ್ತಿತ್ತು. ಕೆಲವರಿಗೆ ಅದು ಪೂರ್ಣ ಹೊಸತು. ಆ ಆರೂ ಮಂದಿ, ಸಾಂಪ್ರದಾಯಿಕ ಬೋಧನೆ-ಕಲಿಕೆಯನ್ನು ಒಲ್ಲೆ ಎಂದು ಶಾಲೆಯನ್ನೇ ಬಿಟ್ಟು ಬಂದ ಹದಿಹರೆಯದ ಹುಡುಗರು. ಶಾಲೆಯ ಒಟ್ಟಾರೆ ವ್ಯವಸ್ಥೆಯನ್ನೇ ಧಿಕ್ಕರಿಸಿ ದೂರ ನಿಂತವರು. ಅಶಿಸ್ತಿಗೇ ಅಂಟಿಕೊಂಡಿದ್ದವರು. ಅದೇ ಕಾರಣಕ್ಕೆ ಪೋಷಕರೊಂದಿಗೂ ಭಿನ್ನಾಭಿಪ್ರಾಯ ಎದುರಿಸಿದವರು. ದಿಕ್ಕಾಪಾಲಾಗಿದ್ದವರು. ಈಗ ಒಟ್ಟಾದವರು.

ಅವರೊಂದಿಗೆ ಇದ್ದು ದಾರಿ ತೋರಿದವರು, ಮಹಾತ್ಮ ಗಾಂಧೀಜಿಯ ಗ್ರಾಮ ಸ್ವರಾಜ್ಯದ ಕನಸನ್ನು ಅವರ ಮೂಲಕವೇ ಈ ಕಾಲಘಟ್ಟದಲ್ಲಿ ಮತ್ತೆ ಕಟ್ಟಬಹುದೇ ಎಂಬ ಹೊಸ ಕನಸಿನೊಂದಿಗೆ ಸಾಗುತ್ತಿರುವ ಪ್ರಯೋಗಶೀಲರು. ಈ ಹಿರಿಯರಿಗೆ ಇದು ಎರಡನೇ ಪಾದಯಾತ್ರೆ. ಮೊದಲನೆಯದ್ದು ಹಿಂದಿನ ವರ್ಷ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ನಡೆದಿತ್ತು.

ಪುಸ್ತಕದ ಓದು ಬರಹಕ್ಕಿಂತಲೂ, ಪಾದಯಾತ್ರೆಯ ಮೂಲಕವೇ ಲೋಕವನ್ನು ಗ್ರಹಿಸುವ ಪಾಠಗಳನ್ನು ಹುಡುಗರಿಗೆ ಪರಿಚಯಿಸುವ ಪ್ರಯತ್ನ ಇದು. ದೇಹ-ಮನಸ್ಸು ಎರಡರ ಶ್ರಮವನ್ನು ಸಂಪೂರ್ಣವಾಗಿ ಬೇಡುವ ಯಾತ್ರೆ. ಬಿಸಿಲು-ನೆರಳೆನ್ನದೆ ನಡೆಯುತ್ತಲೇ ಊರು-ಕೇರಿ, ಜನರ ಕಷ್ಟಸುಖದೊಂದಿಗೆ ಬೆಸೆದುಕೊಳ್ಳುವ ಪರಿ. ತಮ್ಮ ಬದುಕಿಗೂ ಕನ್ನಡಿ ಹಿಡಿದುಕೊಳ್ಳುವ ಅಪೂರ್ವ ಅವಕಾಶ. ದೇವರು, ದಿಂಡಿರ ಮೇಲಿನ ಭಕ್ತಿಗೆ, ವಾರಾಂತ್ಯದ ಮನೋಲ್ಲಾಸಕ್ಕೆ, ದೇಹಸೌಖ್ಯಕ್ಕೆ ಬೆಟ್ಟಗುಡ್ಡಗಳಲ್ಲಿ ನಡೆಯುವುದು ಬೇರೆ. ಅದನ್ನು ಚಾರಣ, ಧಾರ್ಮಿಕ ಪಾದಯಾತ್ರೆ ಇತ್ಯಾದಿ ಎನ್ನೋಣ. ಜನಸೇವೆಯ ತೋರ್ಪಡಿಕೆಯ ರಾಜಕೀಯ ಪಾದಯಾತ್ರೆಗಳನ್ನೂ ಮರೆಯದಿರೋಣ. ಆದರೆ, ಈ ಹುಡುಗರದ್ದು ಜನರನ್ನು, ಜಗತ್ತನ್ನು ಸಣ್ಣ ವಯಸ್ಸಿಗೇ ಅರಿಯುವ ಯತ್ನ. ಆ ಮೂಲಕ ತಮ್ಮನ್ನೂ ಅರಿತುಕೊಳ್ಳುವ ಯತ್ನ.

ಒಂದು ಪಾದಯಾತ್ರೆಯಲ್ಲಿ ಹಲವು ನೋಟ, ಸಾಂಗತ್ಯ, ಹತ್ತಾರು ಕಥೆ, ಅಪರಿಮಿತ ಜೀವನದ್ರವ್ಯ. ಮೊಗೆದಷ್ಟೂ ಬೊಗಸೆ ತುಂಬುವ ಅಚ್ಚರಿದಾಯಕ ಪಾಠಗಳು. ನಡೆವ ನೆಲದೊಂದಿಗೆ ಒಂದಾದರಷ್ಟೇ ಸಿಗುವಂಥವು. ದಣಿವು, ವಿಶ್ರಾಂತಿಗಳ ಅರ್ಥಪೂರ್ಣ ಸಂಯೋಗ. ಜೀವನದ ಅರ್ಥದ ಹುಡುಕಾಟಕ್ಕೂ ದಾರಿ. ಇದು ಅವರು ಕೇಂದ್ರದಲ್ಲಿ ಕಲಿಯುತ್ತಿರುವ ಪಾಠಗಳಲ್ಲಿ ಪ್ರಮುಖವಾದದ್ದು.

ಮಲೆಮಹದೇಶ್ವರ ಬೆಟ್ಟ ಪ್ರದೇಶದ ತಪ್ಪಲಿನಲ್ಲಿರುವ ಮಾರ್ಟಳ್ಳಿಯಲ್ಲಿ ನಾಟಿ ಬೀಜಗಳು ಮತ್ತು ಸಾವಯವ ಕೃಷಿ ಜಾಗೃತಿಯಲ್ಲಿ ತೊಡಗಿರುವ ‘ಅನೀಶಾ’ ಸಂಸ್ಥೆಗೆ ಭೇಟಿ ನೀಡುವುದರಿಂದ ಆರಂಭವಾದ ಪಾದಯಾತ್ರೆಯು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಬದನವಾಳುವಿನಲ್ಲಿ ಮುಗಿಯುವ ಹೊತ್ತಿಗೆ ಈ ಹುಡುಗರು 200ಕ್ಕೂ ಹೆಚ್ಚು ಕಿ.ಮೀ. ನಡೆದಿದ್ದರು. ನಗರ, ಪಟ್ಟಣಗಳ ಜೊತೆಗೆ 20ಕ್ಕೂ ಹೆಚ್ಚು ಹಳ್ಳಿಗಳಿಗೆ ಭೇಟಿ ನೀಡಿದ್ದರು. ಪ್ರತಿ ಹಳ್ಳಿಯ ಹತ್ತಾರು ಮಂದಿ ಸೇರಿದಂತೆ ನೂರಾರು ಜನಸಾಮಾನ್ಯರೊಂದಿಗೆ, ಹತ್ತಾರು ಸಂಘಟಕರೊಂದಿಗೆ ಮಾತನಾಡಿದ್ದರು.



ನೇಯ್ಗೆ ನಿರತ ವಿದ್ಯಾರ್ಥಿ

ರಾಮಾಪುರ, ಹನೂರು, ಲೊಕ್ಕನಹಳ್ಳಿ, ಒಡೆಯರಪಾಳ್ಯದ ಟಿಬೆಟಿಯನ್ ಸೆಟ್ಲ್‌ಮೆಂಟ್, ಹಿರಿಯಂಬಲ, ಗೇರುಮಾಳ, ಪುಣಜನೂರು, ಕೋಳಿ ಪಾಳ್ಯ, ಬಸವಾಪುರ, ಚಾಮರಾಜನಗರ, ಹಂಗಳ, ಪಾರ್ವತಿಬೆಟ್ಟ, ಕೆಂದೇಗಾಲ, ಮಲೆಯೂರು ಹೀಗೆ... ಸುತ್ತಾಡಿದ ಊರುಗಳಲ್ಲಿ ಒಂದೊಂದೂ ಅನನ್ಯ. ಜನರ ವಲಸೆ, ಧರ್ಮದ ಮೇಲಿನ ನಂಬಿಕೆ, ಭೌಗೋಳಿಕ ರಾಜಕೀಯ, ಕೂಲಿ ಕೆಲಸ, ಜಾತಿ, ಲಿಂಗ ವ್ಯವಸ್ಥೆಯ ಮೇಲಾಟಗಳು, ದಲಿತರ ಮೇಲಿನ ದೌರ್ಜನ್ಯಗಳು, ಮಾನವ-ಪ್ರಾಣಿ ಸಂಘರ್ಷ, ಭೂಕಬಳಿಕೆ, ಖಾದಿ, ಗ್ರಾಮೋದ್ಯೋಗ ಹೀಗೆ... ಎದುರಾದ ವಿಚಾರಗಳು ಒಂದೆರಡಲ್ಲ.

ಮೇಲುಕೋಟೆಯಿಂದ ವಾಹನದಲ್ಲಿ ‘ಅನೀಶಾ’ ಸಂಸ್ಥೆಯವರೆಗೆ ಹೋಗಿ, ಅಲ್ಲಿ ಸಹಜ ಕೃಷಿ, ನಾಟಿ ಬೀಜಗಳ ಸಂರಕ್ಷಣೆಯ ಬಗ್ಗೆ ಅರಿತಿದ್ದು, ಮಾರ್ಟಳ್ಳಿಗೆ ನಡಿಗೆ, ಅಲ್ಲಿನ ಕ್ರಿಶ್ಚಿಯನ್ನರೊಂದಿಗೆ ಮಾತನಾಡುವಾಗ ಶವಪೆಟ್ಟಿಗೆಗಳನ್ನು ತಯಾರಿಸುತ್ತಿದ್ದವರೊಂದಿಗೆ ಅಚಾನಕ್ಕಾಗಿ ಮಾತನಾಡಿದ್ದು, ಚುರುಗುಟ್ಟುವ ಬಿಸಿಲಿನಲ್ಲಿ ಪಾರ್ವತಿ ಬೆಟ್ಟದ ಜೀವವೈವಿಧ್ಯತೆಗೆ ಮುಖಾಮುಖಿಯಾದ ಸನ್ನಿವೇಶ, ಪುಣಜನೂರಿನಲ್ಲಿ ಸಾಮಾಜಿಕ ಹೋರಾಟಗಾರ ದೊರೆಸ್ವಾಮಿ ಅವರೊಂದಿಗೆ, ಸೋಲಿಗ ಸಮುದಾಯದವರೊಂದಿಗೆ ಆದಿವಾಸಿಗಳ ಬಗೆಹರಿಯದ ಬದುಕಿನ ಸಮಸ್ಯೆಗಳ ಬಗ್ಗೆ ಚರ್ಚೆ, ನ್ಯಾಚುರಲಿಸ್ಟ್‌ಗಳಾದ ಕೆ.ಮನು ಮತ್ತು ಶ್ರೀಕಂಠ ಅವರು ಹೆಜ್ಜೆ ಹಾಕುತ್ತಲೇ ಹೇಳಿದ ಪರಿಸರದ ಪಾಠಗಳು, ಮಾತೃಭೂಮಿಯ ಮೇಲೆ ಟಿಬೆಟನ್ನರ ಅಪಾರ ಪ್ರೀತಿ... ಹೀಗೆ ಪಾದಯಾತ್ರೆ ಅನೇಕ ಅನೂಹ್ಯ ಅನುಭವಗಳಿಗೆ ಕರೆದೊಯ್ದಿತ್ತು.

‘ಬೆಳಿಗ್ಗೆ ಪ್ರಾರ್ಥನೆ, ಉಪಾಹಾರದ ನಂತರ ಶುರುವಾಗುತ್ತಿದ್ದ ಪಾದಯಾತ್ರೆ ಕನಿಷ್ಠ 15-20 ಕಿ.ಮೀ. ವರೆಗೂ ನಡೆಯುತ್ತಿತ್ತು. ಅಷ್ಟರಲ್ಲಿ ಸಿಗುತ್ತಿದ್ದ ಹಳ್ಳಿಯಲ್ಲೇ ಊಟ, ವಾಸ್ತವ್ಯ, ಊಟವೇನು? ತಿಳಿದಿಲ್ಲ. ರಾತ್ರಿ ವಾಸ್ತವ್ಯ ಹೇಗಿರುತ್ತದೆ? ಗೊತ್ತಿಲ್ಲ.

14ನೇ ಪುಟಕ್ಕೆ...

ಸ್ವರಾಜ್ಯ ಪರಿಕಲ್ಪನೆ, ಕುಮಾರಪ್ಪ ಚಿಂತನೆ

ಗಾಂಧೀಜಿಯ ಸ್ವರಾಜ್ಯ ಪರಿಕಲ್ಪನೆ ಹಾಗೂ ಅವರ ಅನುಯಾಯಿಯಾಗಿದ್ದ ಅರ್ಥಶಾಸ್ತ್ರಜ್ಞ ಜೆ.ಸಿ.ಕುಮಾರಪ್ಪ ಅವರ ಚಿಂತನೆಗಳಿಂದ ಪ್ರಭಾವಿತರಾಗಿ ಸುರೇಂದ್ರ ಕೌಲಗಿ-ಗಿರಿಜಾ ಕೌಲಗಿ ಅವರು ಸ್ನೇಹಿತರ ಬೆಂಬಲದೊಂದಿಗೆ ಸ್ಥಾಪಿಸಿದ್ದೇ ಜನಪದ ಸೇವಾ ಟ್ರಸ್ಟ್.

ಜನಪ್ರಿಯ ಮಾದರಿಗಳಿಗಿಂತ ಭಿನ್ನವಾಗಿ ಪರ್ಯಾಯ ಅಭಿವೃದ್ಧಿ-ಬದುಕಿನ ಮಾದರಿಗಳ ಹುಡುಕಾಟದಲ್ಲೇ ಆರು ದಶಕಕ್ಕೂ ಹೆಚ್ಚು ಕಾಲದಿಂದ ಸಕ್ರಿಯವಾಗಿರುವುದು ಅದರ ಹೆಗ್ಗಳಿಕೆ.

ಸದ್ಯ ಆರು ಹುಡುಗರೊಂದಿಗೆ ಸ್ಥಳೀಯ ಮಹಿಳೆಯರೂ ಇಲ್ಲಿ ಚರಕ ಬಳಸುತ್ತಾರೆ. ಖಾದಿ ಬಟ್ಟೆಗೆ ನೈಸರ್ಗಿಕ ಬಣ್ಣ ಹಾಕುತ್ತಾರೆ. ಕೈಮಗ್ಗದಲ್ಲಿ ಖಾದಿ ಬಟ್ಟೆಯನ್ನು ನೇಯುತ್ತಾರೆ. ಗಾಣದಲ್ಲಿ ಎಣ್ಣೆ ತೆಗೆಯುತ್ತಾರೆ. ಟ್ರಸ್ಟ್ ಹೂಡುವ ಬಂಡವಾಳ, ಉದ್ಯೋಗಿಗಳ ಪಾಲುದಾರಿಕೆ ಹಾಗೂ ಕೆಲವು ಸಂಸ್ಥೆಗಳ ನೆರವಿನೊಂದಿಗೆ ಇವೆಲ್ಲ ನಡೆಯುತ್ತವೆ. ಇದು ಉದ್ಯೋಗಿ ಮತ್ತು ಉದ್ಯೋಗದಾತರು ಸಮಾನವಾಗಿ ಒಳಗೊಳ್ಳುವ, ಬೇರೆಲ್ಲೂ ಕಾಣದ ವಿಕೇಂದ್ರೀಕರಣದ ಮಾದರಿ. ಮಾಲೀಕತ್ವ, ಪಾಲುದಾರಿಕೆ, ಶ್ರಮ ಎಲ್ಲವೂ ಇಲ್ಲಿ ವಿಕೇಂದ್ರೀಕರಣಗೊಳ್ಳುತ್ತವೆ. ವಿವಿಧೆಡೆಯಿಂದ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಂಘ-ಸಂಸ್ಥೆಗಳ ಯುವಜನ, ಪೋಷಕರು ಇಲ್ಲಿಗೆ ಭೇಟಿ ಕೊಡುತ್ತಾರೆ. ಆಗಾಗ ಏರ್ಪಡಿಸುವ ಜೀವನ ಕೌಶಲ ಶಿಬಿರಗಳಲ್ಲೂ ಪಾಲ್ಗೊಳ್ಳುತ್ತಾರೆ.

ಜೀತದಿಂದ ಮುಕ್ತಿ: ಸ್ವಾತಂತ್ರ್ಯದ ಮಂದಹಾಸ

ಸ್ವೀಕೃತಿ

ದಿನದ 16 ರಿಂದ 18 ತಾಸು ಆಯತಾಕಾರದ ಅಚ್ಚಿನ ಮೇಲೆ ಒದ್ದೆ ಜೇಡಿಮಣ್ಣನ್ನು ಸುರಿದು ಅದಕ್ಕೆ ಇಟ್ಟಿಗೆಯ ರೂಪ ಕೊಡುವುದು ಪೂರ್ಣಿಮಾ ಅವರಿಗೆ ವಿಪರೀತ ಕಷ್ಟವಾಗುತ್ತಿತ್ತು. ಎಂಟು ತಿಂಗಳ ಗರ್ಭಿಣಿ ದಿನಕ್ಕೆ ಸಾವಿರ ಇಟ್ಟಿಗೆಗಳನ್ನು ತಯಾರಿಸುವುದು ದೈಹಿಕ ಮತ್ತು ಮಾನಸಿಕವಾಗಿ ಅಸಾಧ್ಯ ಎನಿಸುತ್ತಿತ್ತು. ಆದರೆ ಪೂರ್ಣಿಮಾ ಮತ್ತು ಅವರ ಪತಿ ಮಾರಪ್ಪ ಅವರಿಗೆ ನೋವನ್ನು ನುಂಗಿ ಕೆಲಸ ಮಾಡುವುದು ಬಿಟ್ಟು ಬೇರೆ ದಾರಿಯೇ ಇರಲಿಲ್ಲ. ಇಟ್ಟಿಗೆಗೂಡು ಮಾಲೀಕರಿಂದ ದೈಹಿಕ ಹಲ್ಲೆ ಮತ್ತು ಕಿರುಕುಳ ಎದುರಿಸಬೇಕಾದೀತು ಎಂಬ ಭಯದಿಂದಾಗಿ ಅಲ್ಲಿಂದ ತಪ್ಪಿಸಿಕೊಳ್ಳುವುದನ್ನು ಯೋಚಿಸಿಯೂ ಇರಲಿಲ್ಲ.

ಆದರೆ ದಶಕದ ನಂತರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಡಸಿಕೊಪ್ಪದ ಪೂರ್ಣಿಮಾ ಮತ್ತು ಮಾರಪ್ಪ ಅವರ ಬದುಕಿನಲ್ಲಿ ಕಾಮನಬಿಲ್ಲೊಂದು ಮೂಡಿದೆ. ಹಚ್ಚ ಹಸಿರಿನ ಭತ್ತದ ಪೈರಿನ ಸಾಲುಗಳ ಮಧ್ಯೆ ದಂಪತಿ ಸಾಗುವಾಗ ಇಬ್ಬರ ಮೊಗದಲ್ಲೂ ಮಂದಹಾಸ ಕಾಣುತ್ತಿದೆ. ‘ಸುಗ್ಗಿಕಾಲದಲ್ಲಿ ನಾನು ಇಲ್ಲಿ ಕೆಲಸ ಮಾಡುತ್ತೇನೆ, ಪೂರ್ಣಿಮಾ ಟೈಲರಿಂಗ್ ಘಟಕದಲ್ಲಿ ಕೆಲಸ ಮಾಡುತ್ತಾಳೆ. ನಮ್ಮ ಕಾಲ ಮೇಲೆ ನಾವು ನಿಲ್ಲಲು ಸಾಧ್ಯವಾಗುತ್ತದೆ ಎಂದು ನಾನು ಅಂದುಕೊಂಡಿರಲಿಲ್ಲ’ ಎನ್ನುತ್ತಾರೆ ಮಾರಪ್ಪ.

ಇಟ್ಟಿಗೆಗೂಡು, ಹಂದಿ ಸಾಕಣೆ ಕೇಂದ್ರ, ಟೈಲ್ಸ್ ಕಾರ್ಖಾನೆ ಸೇರಿದಂತೆ ಮತ್ತಿತರ ಕಡೆಗಳಲ್ಲಿ ಶೋಷಣೆಗೆ ಒಳಗಾಗಿದ್ದ ಸಾವಿರಾರು ಜೀತದಾಳುಗಳಲ್ಲಿ ಈ ಜೋಡಿಯೂ ಒಂದು. 2014 ರಲ್ಲಿ ಮಾರಪ್ಪ ಅವರ ಸಹೋದರಿ ಸಹಾಯ ಅರಸಿ ಕಾರ್ಖಾನೆಯಿಂದ ತಪ್ಪಿಸಿಕೊಂಡಿದ್ದರು. ಸಹೋದರಿ ಸೇರಿ ಕುಟುಂಬದ ಎಂಟು ಮಂದಿ ಜೀತದಾಳುಗಳಾಗಿ ಅಲ್ಲಿ ಅತಂತ್ರರಾಗಿದ್ದರು.



ಪೂರ್ಣಿಮಾ ಮತ್ತು ಮಾರಪ್ಪ

ಜೀತದ ಸಂಕೋಲೆಯಲ್ಲಿ ಬಂಧಿಯಾಗಿದ್ದ ಪೂರ್ಣಿಮಾ ಮತ್ತು ಮಾರಪ್ಪ ದಂಪತಿ ಅದರಿಂದ ಮುಕ್ತರಾದರು. ತಾವಷ್ಟೇ ಬಿಡುಗಡೆಯ ಸ್ವಾತಂತ್ರ್ಯವನ್ನು ಅನುಭವಿಸಿದರೆ ಸಾಲದು, ತಮ್ಮಂಥವರೂ ಅನಿಷ್ಟ ಪದ್ಧತಿಯಿಂದ ಹೊರಬರಬೇಕು ಎನ್ನುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ.

ನಂತರದ ಬೆಳವಣಿಗೆಯಲ್ಲಿ ಪೊಲೀಸ್ ಅಧಿಕಾರಿ, ತಹಶೀಲ್ದಾರ್ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದರು. ಸ್ಥಳೀಯ ಠಾಣೆಯಲ್ಲಿ ಜೀತದಾಳುಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಯಿತು. ನಂತರ ಅವರನ್ನು ‘ಜೀತದಾಳು’ಗಳು ಎಂದು ಪರಿಗಣಿಸಿ ‘ಬಿಡುಗಡೆ ಪ್ರಮಾಣಪತ್ರ’ ನೀಡಲಾಯಿತು.



ಹೊಲಿಗೆ ತರಬೇತಿ ನೀಡುತ್ತಿರುವ ಪೂರ್ಣಿಮಾ

ಈಗ ಪೂರ್ಣಿಮಾ ಮತ್ತು ಮಾರಪ್ಪ ತಾವು ಅನುಭವಿಸುತ್ತಿರುವ ಸ್ವಾತಂತ್ರ್ಯವನ್ನು ಇತರರೂ ಪಡೆಯಲು ಸಹಾಯಹಸ್ತ ಚಾಚಬೇಕೆಂದು ದೃಢನಿರ್ಧಾರ ಮಾಡಿದ್ದಾರೆ. ಕೇವಲ ಕುಲುಮೆಯಲ್ಲಿ ಮಾತ್ರವಲ್ಲದೆ, ಅಲ್ಲಿಂದ ಹೊರಬಂದ ನಂತರವೂ ನಿರಂತರವಾಗಿ ಕಿರುಕುಳ ಎದುರಿಸಿದ ಮತ್ತು ಪುನರ್ವಸತಿ, ಜೀವನ ನಿರ್ವಹಣೆಯ ಹೋರಾಟಗಳಿಂದಾಗಿ ಕಠಿಣ ಸವಾಲುಗಳನ್ನು ಎದುರಿಸಿದ ಈ ಜೋಡಿ, ಇದೇ ರೀತಿ ಸಂಕಷ್ಟದಲ್ಲಿರುವ ಇತರರಿಗೆ ಸಹಾಯ ಮಾಡಲು ತಮ್ಮ ಸಮಯವನ್ನು ಮೀಸಲಿಟ್ಟಿದೆ.

‘ನಮ್ಮ ಬಳಿ ಯಾವುದೇ ದಾಖಲೆಗಳು ಇರಲಿಲ್ಲ. ಹೀಗಾಗಿ ಸರ್ಕಾರದ ಬೆಂಬಲ ಪಡೆಯಲು ಅಗತ್ಯವಿರುವ ಗುರುತಿನ ಚೀಟಿ ಪಡೆಯಲು ಕಷ್ಟವಾಯಿತು. ಹೇಗೆ, ಎಲ್ಲಿಂದ ಆರಂಭಿಸಬೇಕು ಎಂಬ ತಿಳಿವಳಿಕೆ ನಮಗಿರಲಿಲ್ಲ. ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು ಸಾಕಷ್ಟು ಸಮಯ ಹಿಡಿಯಿತು. ಹೀಗಾಗಿ ಗ್ರಾಮದ ಇತರರಿಗೆ ಅದರಲ್ಲೂ ಗರ್ಭಿಣಿಯರಿಗೆ ಮತ್ತು ಜೀತ ಪದ್ಧತಿಯಿಂದ ರಕ್ಷಿಸಲ್ಪಟ್ಟವರಿಗೆ ನಾವೀಗ ಸಹಾಯ ಮಾಡುತ್ತಿದ್ದೇವೆ’ ಎನ್ನುತ್ತಾರೆ ಪೂರ್ಣಿಮಾ.

120 ಸದಸ್ಯರನ್ನು ಒಳಗೊಂಡಿರುವ ಜೀತದಾಳುಗಳ ಸಂಘ ‘ಉದಯೋನ್ಮುಖ ಪ್ರತಿಷ್ಠಾನ’ದ ಪದಾಧಿಕಾರಿಗಳಾಗಿ ಈ ದಂಪತಿ ಸಂತ್ರಸ್ತರೊಂದಿಗೆ ಸಂವಹನ ನಡೆಸುತ್ತಾರೆ ಮತ್ತು ಸರ್ಕಾರಿ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುತ್ತಾರೆ. ಕೆಲ ತಿಂಗಳುಗಳ ಹಿಂದೆ, ಹಂದಿ ಸಾಕಣೆ ಕೇಂದ್ರದಲ್ಲಿ ಜೀತದಾಳುಗಳಾಗಿ ಸಿಲುಕಿದ್ದ ಕುಟುಂಬದ ಬಗ್ಗೆ ತನಿಖೆ ನಡೆಸಿ ಮಾಹಿತಿ ರವಾನಿಸಲು ಮಾರಪ್ಪ ಸಹಾಯ ಮಾಡಿದ್ದರು. ಸದ್ಯ ಆ ಕುಟುಂಬವನ್ನು ರಕ್ಷಿಸಿ ಅವರಿಗೆ ಪುನರ್ವಸತಿ ನೀಡಲಾಗಿದೆ.

ಸ್ವಾತಂತ್ರ್ಯವು ಪೂರ್ಣಿಮಾ ಅವರೊಳಗಿನ ಕನಸುಗಳಿಗೆ ರೆಕ್ಕೆ ನೀಡಿದೆ. ‘ನನಗೆ ಟೈಲರಿಂಗ್ ಕಲಿಯಲು ಆಸಕ್ತಿ ಇತ್ತು. ಜೀತ ಪದ್ಧತಿಯಿಂದ ಮುಕ್ತಳಾಗಿ ಟೈಲರಿಂಗ್ ತರಬೇತಿ ಪಡೆದೆ. ಬಳಿಕ ಲ್ಯಾಪ್‌ಟಾಪ್ ಬ್ಯಾಗ್, ಕೈ ಚೀಲ, ಅಲಂಕಾರಿಕ ಬ್ಯಾಗ್, ಮೊಬೈಲ್ ಪೌಚ್‌ಗಳನ್ನು ಹೊಲಿಯುವುದನ್ನು ಕಲಿತೆ’ ಎನ್ನುತ್ತಾರೆ.

ಪೂರ್ಣಿಮಾ ಟೈಲರ್ ಮಾತ್ರವಲ್ಲ, ತರಬೇತುದಾರೆ ಸಹ. ಗ್ರಾಮದ ನಾಲ್ಕು ಮಹಿಳೆಯರಿಗೆ ಹೊಲಿಗೆ ಕೌಶಲವನ್ನು ಕಲಿಸಿದ್ದಾರೆ. ‘ಹೊಲಿದ ಬಟ್ಟೆಯ ಲೆಕ್ಕದಲ್ಲಿ ನಮಗೆ ಸಂಬಳ ನೀಡುತ್ತಾರೆ. ಇದರಿಂದ ಕುಟುಂಬ ನಿರ್ವಹಣೆಗೆ ದಾರಿ ಸಿಕ್ಕಂತಾಗಿದೆ’ ಎನ್ನುತ್ತಾರೆ ಡಿಂಪಲ್.

‘ಉದಯೋನ್ಮುಖ ಪ್ರತಿಷ್ಠಾನ’ಕ್ಕೆ ಲಾಭರಹಿತ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರ ಬೆಂಬಲವಾಗಿವೆ. ಪೂರ್ಣಿಮಾ ಅವರ ಗ್ರಾಮದಲ್ಲಿ ಪ್ರತಿಷ್ಠಾನವು ಟೈಲರಿಂಗ್ ಘಟಕವನ್ನು ಸ್ಥಾಪಿಸಿದೆ. ಇಲ್ಲಿ ಪೂರ್ಣಿಮಾ ಮತ್ತು ಮಹಿಳೆಯರ ತಂಡ ಬಗೆಬಗೆಯ ಚೀಲಗಳನ್ನು ಹೊಲಿಯುತ್ತದೆ. ಹೆಚ್ಚು ಆರ್ಡರ್‌ಗಳು ಬಂದಾಗ ಜೀತ ಪದ್ಧತಿಯಿಂದ ಮುಕ್ತರಾದ ವಿವಿಧ ಜಿಲ್ಲೆಗಳ ಕಾರ್ಮಿಕರ ನೆರವನ್ನೂ ಪಡೆಯುತ್ತಾರೆ’ ಎಂದು ಎನ್‌ಜಿಒ ಕಾರ್ಯಕರ್ತರೊಬ್ಬರು ತಿಳಿಸಿದರು.

2019ರಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಅವರಿಗೆ ಮೊದಲ ಆರ್ಡರ್ ಲಭಿಸಿತ್ತು. ಈ ಸಂದರ್ಭದಲ್ಲಿ ತಂಡವು 250 ಲ್ಯಾಪ್‌ಟಾಪ್ ಬ್ಯಾಗ್‌ಗಳನ್ನು ಹೊಲಿದುಕೊಟ್ಟಿತ್ತು.

‘ಜೀತದಾಳುಗಳು ಬದಲಾವಣೆಗೆ ಹಾತೊರೆಯುತ್ತಿರುವುದರಿಂದ ಇಲಾಖೆಯು ಈ ಉಪಕ್ರಮವನ್ನು ಬೆಂಬಲಿಸುತ್ತಿದೆ. ಜೀತದಾಳುಗಳಿಗೆ ವಾಸ್ತವ ಸ್ಥಿತಿಯ ಅರಿವಿದೆ. ಅವರ ನೋವು ಮತ್ತು ಅನುಭವದ ಆಧಾರದ ಮೇಲೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಂವೇದನಾಶೀಲರನ್ನಾಗಿ ಮಾಡಬೇಕು.

14ನೇ ಪುಟಕ್ಕೆ...



ಅರಸಾಳು ಗ್ರಾಮದ ರೈಲು ನಿಲ್ದಾಣದಲ್ಲಿ ‘ಮಾಲ್ಗುಡಿ ಡೇಸ್’ ಮ್ಯೂಸಿಯಂ

ಮಾಲ್ಗುಡಿ ಡೇಸ್ ನೆನಪುಗಳೊಂದಿಗೆ ಹೆಜ್ಜೆ...

ಸುರೇಂದ್ರ ಪೈ

‘ತಾ ನಾ ನಾ ತಾನಾ ನಾನಾ ನಾ...’ ಈ ಥೀಮ್ ಮ್ಯೂಸಿಕ್ ಅನ್ನು ಕೇಳಿದೊಡನೆ ಥಟ್ಟನೇ ನೆನಪಾಗುವುದೇ 80-90ರ ದಶಕದ ದೂರದರ್ಶನದ ಪ್ರಸಿದ್ಧ ಧಾರಾವಾಹಿ ‘ಮಾಲ್ಗುಡಿ ಡೇಸ್’. ಈ ಧಾರಾವಾಹಿಯನ್ನು ನೋಡಿದಾಗಲೆಲ್ಲಾ ಮತ್ತೆ ಬಾಲ್ಯದ ದಿನಗಳು ನೆನಪಾಗುತ್ತವೆ. ಆರ್.ಕೆ.ನಾರಾಯಣ್ ಅವರಂತಹ ಹೆಸರಾಂತ ಕಾದಂಬರಿಕಾರರ ಸಣ್ಣ ಕಥಾ ಸಂಗ್ರಹವೇ ಇದರ ಆತ್ಮ. ಅವರ ಕಿರಿಯ ಸಹೋದರ ಮತ್ತು ಖ್ಯಾತ ವ್ಯಂಗ್ಯಚಿತ್ರಕಾರ ಆರ್.ಕೆ. ಲಕ್ಷ್ಮಣ್ ಅವರ ಸ್ಕೆಚ್ ವರ್ಕ್, ಕರ್ನಾಟಕ ಸಂಗೀತಗಾರ ಎಲ್. ವೈದ್ಯನಾಥನ್ ಅವರ ಸಂಗೀತ ಇರುವ ಈ ಕಥಾ ಸರಣಿಯನ್ನು ಕನ್ನಡದ ಜನಪ್ರಿಯ ನಟ ಮತ್ತು ನಿರ್ದೇಶಕ ಶಂಕರ್‌ನಾಗ್ ನಿರ್ದೇಶಿಸಿದ್ದರು. ಅನಂತ್‌ನಾಗ್ ಸೇರಿದಂತೆ ಅನೇಕ ರಂಗಭೂಮಿ ಕಲಾವಿದರು ನಟಿಸಿದ್ದರು.



ಗೆಳೆಯರೊಂದಿಗೆ ‘ಸ್ವಾಮಿ’...

ಮಾಲ್ಗುಡಿ ಎಂಬುದೊಂದು ಕಾಲ್ಪನಿಕ ಗ್ರಾಮ. ಆದರೂ ಇಂದಿಗೂ ಹಲವಾರು ವಿಷಯಗಳಿಗಾಗಿ ‘ಮಾಲ್ಗುಡಿ ಡೇಸ್’ ನಮ್ಮ ಮನಸ್ಸಿನಲ್ಲಿ ಬೇರೂರಿದೆ. ಆಗುಂಬೆಯ ಸುತ್ತಮುತ್ತಲಿನ ಪರಿಸರದಲ್ಲಿ ಚಿತ್ರೀಕರಣಗೊಂಡ ಈ ಧಾರಾವಾಹಿಯ ಪ್ರತಿಯೊಂದು ಸಂಚಿಕೆಯು ಸೊಗಸಾಗಿತ್ತು. ಇದರಲ್ಲಿ ಬರುವ ‘ಸ್ವಾಮಿ’ (ಮಾಸ್ಟರ್ ಮಂಜುನಾಥ್) ಪಾತ್ರವನ್ನು ಮರೆಯಲು ಹೇಗೆ ಸಾಧ್ಯ?

ಮಾಲ್ಗುಡಿ ಎಂದಾಕ್ಷಣ ಸಂಗೀತ ಹೇಗೆ ನೆನಪಾಗುವುದೋ, ಹಾಗೆಯೇ ಅದರಲ್ಲಿ ಮೂಡಿಬಂದ ರೈಲು ನಿಲ್ದಾಣ ಸಹ. ಇಷ್ಟೆಲ್ಲಾ ಓದಿದ ಬಳಿಕ ನಿಮಗೇನಾದರೂ ‘ಛೇ! ಆ ಮಾಲ್ಗುಡಿ ಡೇಸ್‌ನ ರೈಲು ನಿಲ್ದಾಣವನ್ನು ನೋಡಲು ಸಿಗುವಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು’ ಎಂದೆನಿಸಿದರೆ ಈಗಲೂ ಅದಕ್ಕೆ ಅವಕಾಶವಿದೆ.

ಶಿವಮೊಗ್ಗದಿಂದ 34 ಕಿಲೋಮೀಟರ್ ದೂರದಲ್ಲಿರುವ ಅರಸಾಳು ಗ್ರಾಮದ ರೈಲು ನಿಲ್ದಾಣದಲ್ಲಿ ಇಂಥ ಅಪರೂಪದ ಮಾಲ್ಗುಡಿ ಡೇಸ್ ಮ್ಯೂಸಿಯಂ ಇದೆ. ಮಂಗಳವಾರ ಹೊರತುಪಡಿಸಿ ಎಲ್ಲಾ ದಿನಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ತೆರೆದಿರುತ್ತದೆ. ₹5 ನೀಡಿ ಒಳಗೆ ಪ್ರವೇಶಿಸುತ್ತಿದ್ದಂತೆ ಮಾಲ್ಗುಡಿ ಡೇಸ್ ಹಿನ್ನೆಲೆ ಸಂಗೀತ ಕಿವಿ ತುಂಬಿಕೊಳ್ಳುತ್ತದೆ. ಅದು ನಮ್ಮನ್ನು ಮತ್ತೆ ಮಾಲ್ಗುಡಿ ದಿನಗಳಿಗೆ ಕರೆದೊಯ್ಯುತ್ತದೆ. ಇದನ್ನು 2019-20 ರಲ್ಲಿ ಮೈಸೂರು ರೈಲ್ವೆ ವಿಭಾಗವು ಸ್ಥಾಪಿಸಿತು. ಈಗಲೂ ಇದರ ನಿರ್ವಹಣೆಯನ್ನು ರೈಲ್ವೆ ಇಲಾಖೆಯೇ ಮಾಡುತ್ತಿದೆ.

13ನೇ ಪುಟಕ್ಕೆ...

ಅತಿ ಚಿಕ್ಕವಯಸ್ಸಿನಲ್ಲೇ ಹಲವು ರಾಗಗಳನ್ನು ಗುರುತಿಸುವ ಸಾಮರ್ಥ್ಯ ಹೊಂದಿದ್ದ ಶಶಾಂಕ್ 'ಚೈಲ್ಡ್ ಪ್ರಾಡಿಜಿ'. ಸುಷಿರ ವಾದ್ಯವನ್ನು ಚಮತ್ಕಾರಿಕವಾಗಿ ನುಡಿಸುವ ಈ ಕಲಾವಿದ, ತಮ್ಮದೇ ಆದ ಹೊಸ ಶೈಲಿ 'ಶಶಾಂಕ್ ಸ್ಟೈಲ್ ಆಫ್ ಫ್ಲೂಟ್' ಮೂಲಕ ದೇಶ ವಿದೇಶಗಳಲ್ಲಿ ಕೊಳಲಿನ ಘಮಲನ್ನು ಹರಡಿದ್ದಾರೆ.



'ಕೊಳಲಿನಲ್ಲಿ ನೈಪುಣ್ಯ ಸಾಧಿಸಲು ಅಡ್ಡದಾರಿಗಳಿಲ್ಲ'

ಮೂಲತಃ ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕಿನ ರುದ್ರಪಟ್ಟಣದವರಾದ ಶಶಾಂಕ್, ಬಿದಿರಿನಿಂದ ಮಾಡಿದ ಹಗುರ ವಾದ್ಯದಲ್ಲಿ ಸ್ವರ ಸಂಚಾರ ಆರಂಭಿಸಿದರೆಂದರೆ ಕೇಳುಗರು ನಾದ ಸಮ್ಮೋಹನಕ್ಕೊಳಗಾಗುತ್ತಾರೆ. ಸುಷಿರ ವಾದ್ಯದಲ್ಲಿ ಅವರು ಮೂಡಿಸುವ ಚಮತ್ಕಾರ ಅತ್ಯಂತ ಶ್ರವಣಾನಂದಕರ. ಮಧುರಾತಿಮಧುರ ನಾದ ಕೊಡುವ ಈ ವಾದ್ಯದಲ್ಲಿ ಶಶಾಂಕ್ ನುಡಿಸುವ ರಾಗ–ತಾನ–ಪಲ್ಲವಿ ಕೇಳುವುದು ಅದ್ಭುತ, ಅನನ್ಯ ಅನುಭವ ನೀಡುತ್ತದೆ. ಬೆಂಗಳೂರಿನ 'ಭಾರತೀಯ ಸಾಮಗಾನ ಸಂಗೀತ ಸಭಾ' ನೀಡುವ ಪ್ರತಿಷ್ಠಿತ 'ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ 2025', ಅವರಿಗೆ ಲಭಿಸಿದೆ. ಫೆ. 23 ರಂದು ಸಂಜೆ ಚೌಡಯ್ಯ ಹಾಲ್‌ನಲ್ಲಿ ನಡೆಯುವ ಸಾಮಗಾನ ಸಂಗೀತೋತ್ಸವದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಈ ಸಂದರ್ಭದಲ್ಲಿ ಅವರೊಂದಿಗಿನ ಮಾತುಕತೆ ಇಲ್ಲಿದೆ.

ಉಮಾ ಅನಂತ್

• **ಗಾಯನವಿರಲಿ, ವಾದನವಿರಲಿ ಕಲಿಕೆಯ ಜೊತೆಗೆ ಕೇಳ್ಮೆ ಕೂಡ ಬಹಳ ಮುಖ್ಯ. ಇದರಿಂದ ಸಂಗೀತದಲ್ಲಿ ಯಶ ಸಾಧಿಸಬಹುದು. ನಿಮ್ಮ ಅನಿಸಿಕೆಯೇನು?**

ಯಾವುದೇ ಕಲಾವಿದನ ಗಾಯನ ಅಥವಾ ವಾದನ ಶೈಲಿ ಅವರವರ ಗುರುಗಳ ಅನುಕರಣೆಯೇ ಆಗಿರುತ್ತದೆ. ಕಲಾವಿದ ಪ್ರಬುದ್ಧನಾದಂತೆ ತನ್ನದೇ ಆದ ಶೈಲಿ ರೂಢಿಸಿಕೊಳ್ಳಲಾರಂಭಿಸುತ್ತಾನೆ. ನಾನು ನನ್ನ ಗಾಯನ ಗುರು ಕೆ.ವಿ. ನಾರಾಯಣಸ್ವಾಮಿ ಅವರನ್ನು ಅನುಸರಿಸುತ್ತಿದ್ದೆ. ಮುಂದೆ ಪಂ. ಜಸರಾಜ್ ಅವರು ಹಾಡೋದನ್ನು ಕೇಳುತ್ತಾ ಹಾಗೇ ಕೊಳಲಿನಲ್ಲಿ ಅದನ್ನು ಕರ್ನಾಟಕ ಸಂಗೀತ ಶೈಲಿಗೆ ಅಳವಡಿಸಿಕೊಂಡು ನುಡಿಸಲಾರಂಭಿಸಿದೆ. ಗಾಯನವನ್ನು ಕಲಿತ ಕಾರಣ ನನಗೆ ವಾದನ ಕಷ್ಟವೇ ಅನಿಸಲಿಲ್ಲ. ನನ್ನ ಸಂಗೀತದ ಅಡಿಪಾಯ ಭದ್ರವಾಗಿದ್ದುದರಿಂದ ನಾನು ಬೇಗನೆ ಈ ಕಲೆಯನ್ನು ಕರಗತ ಮಾಡಿಕೊಂಡೆ. ಕೊಳಲು ನುಡಿಸುವವರೆಲ್ಲರೂ ಗಾಯನ ಕಲಿತರೆ ಬಹಳ ಬೇಗನೆ ವಾದನದಲ್ಲಿ ಸಿದ್ಧಿ ಸಾಧಿಸಲು ಸಾಧ್ಯ.

• **ಉಸಿರು ನಿಯಂತ್ರಣ ಸಾಮರ್ಥ್ಯವನ್ನು ಬಹುವಾಗಿ ಬೇಡುವ ಕೊಳಲು ವಾದನ, ವಾದಕನಿಂದ ಹೆಚ್ಚಿನ ಪರಿಶ್ರಮ, ಸಮಯ, ತಾಳ್ಮೆ ಹಾಗೂ ಸತತ ಅಭ್ಯಾಸವನ್ನು ಬೇಡುತ್ತದೆ. ಇಂದಿನ ಧಾವಂತದ ದಿನಗಳಲ್ಲಿ ಯುವ ಕಲಾವಿದರಿಂದ ಇದನ್ನು ನಿರೀಕ್ಷಿಸಲು ಸಾಧ್ಯವೇ?**

ಸಾಮಾನ್ಯವಾಗಿ ಎಲ್ಲ ಸಂಗೀತ ಪ್ರಕಾರಗಳಲ್ಲೂ ಯಶ ಸಾಧಿಸಬೇಕಾದರೆ ಕಠಿಣ ಪರಿಶ್ರಮ, ಸಾಧನೆ, ಸತತ ಅಭ್ಯಾಸ ಅತ್ಯಗತ್ಯ. ಕೊಳಲಿಗೂ ಇದು ಹೊರತಲ್ಲ. ಅಲ್ಲದೆ ಕೊಳಲು ವಿಶೇಷವಾಗಿ ಉಸಿರು ನಿಯಂತ್ರಣ ಸಾಮರ್ಥ್ಯ ಹಾಗೂ ತಂತ್ರಗಾರಿಕೆಯನ್ನು ಬಯಸುತ್ತದೆ. ಆದರೆ ಕೊಳಲಿನಲ್ಲಿ ನೈಪುಣ್ಯ ಸಾಧಿಸಲು ಯಾವುದೇ ಅಡ್ಡದಾರಿಗಳಿಲ್ಲ ಎಂಬುದನ್ನು ಎಲ್ಲ ಕಲಾವಿದರೂ ಗಮನದಲ್ಲಿಡಬೇಕು.

ನನ್ನ ಹಾಗೂ ಹಿಂದಿನ ಪೀಳಿಗೆಯ ಸಂಗೀತಗಾರರಿಗೆ ಗುರುಮುಖೇನ ಕಲಿಯುವ ಅವಕಾಶ ಇತ್ತು. ದಿಗ್ಗಜರ ಒಡನಾಟ ಇತ್ತು. ವಿದ್ವಾಂಸರ ಸಂಗೀತವನ್ನು ತಾಸುಗಟ್ಟಲೆ ಕುಳಿತು ಕೇಳುವ ವ್ಯವಧಾನವೂ ಇತ್ತು. ಅವರೊಂದಿಗೆ ಸಂಗೀತದ ಬಗ್ಗೆ ಚರ್ಚಿಸುವ, ಸಂವಾದ ನಡೆಸುವ, ಜ್ಞಾನ ಹೆಚ್ಚಿಸುವ ಅನುಕೂಲವೂ ಇತ್ತು. ರಿಯಾಲಿಟಿ ಶೋ, ಸೋಷಿಯಲ್ ಮೀಡಿಯಾ ಮುಖಾಂತರ ದಿಢೀರ್ ಖ್ಯಾತಿ ಗಳಿಸುವ ಹುಚ್ಚುತನ ಇರಲಿಲ್ಲ. ಆದರೆ ಈಗ ಸಂಗೀತ ಕಲಿಕೆಯ ವಿಧಾನವೇ ಬದಲಾಗಿದೆ. ಹೆಚ್ಚಿನ ಮಕ್ಕಳಲ್ಲಿ ವ್ಯವಧಾನ ಇಲ್ಲ, ದೀರ್ಘ ಅವಧಿಯ ಅಭ್ಯಾಸ ಮಾಡುವ ಪರಿಪಾಟವಿಲ್ಲ. ಸಾಧನೆಯ ಛಲ ಕಡಿಮೆಯಾಗಿದೆ. ಸತತ ಅಭ್ಯಾಸ, ಪರಿಶ್ರಮಕ್ಕೆ ಸಮಯವೇ ಇಲ್ಲ. ರಿಯಾಲಿಟಿ ಶೋಗಳಲ್ಲಿ ಭಾಗವಹಿಸುವ, ಸೋಷಿಯಲ್ ಮೀಡಿಯಾಗಳಲ್ಲಿ ಮಿಂಚುವ ಸಾಹಸವೇ ಹೆಚ್ಚಾಗಿದೆ. ಇದಕ್ಕೆ ಪೋಷಕರೂ ಪ್ರಮುಖ ಕಾರಣ. ಇದರಿಂದ ಸಂಗೀತದ ಗುಣಮಟ್ಟ ಕಳಪೆಯಾಗುತ್ತಿದೆ. ಗಾಯನವನ್ನೇ ಆಲಿಸಲು ತಾಳ್ಮೆ ಇಲ್ಲ. ಇನ್ನು ವಾದ್ಯ ಸಂಗೀತ ಕೇಳುವವರೂ ಕಡಿಮೆಯಾಗಿದ್ದಾರೆ. ಹೀಗಾದರೆ ಸಂಗೀತದ ಭವಿಷ್ಯತ್ ಎಲ್ಲಿಗೆ ತಲುಪಬಹುದು ಎಂಬ ಆತಂಕವಿದೆ.

• **ಜುಗಲಬಂದಿ ಕಛೇರಿಗೂ ಕೊಳಲು ಅತ್ಯಂತ ಸೂಕ್ತವಾಗಿ ಹೊಂದಿಕೊಳ್ಳುತ್ತದೆ. ನೀವು ದಿಗ್ಗಜರೊಂದಿಗೆ ಜುಗಲಬಂದಿ ನೀಡಿದ್ದೀರಿ...**

ಖಂಡಿತಾ, ಸುಷಿರ ವಾದ್ಯ ಕೊಳಲಿನ ಸಮ್ಮೋಹನ ಶಕ್ತಿಯೇ ಅಂಥದ್ದು. ಯಾವುದೇ ವಾದ್ಯವಿರಲಿ, ನಾದ ಬೇಗನೆ ಬೆರೆಯುತ್ತದೆ, ಸ್ವರಗಳೊಂದಿಗೆ ಸ್ಪಂದಿಸುತ್ತದೆ. ನಾನು ನೂರಾರು ಜುಗಲಬಂದಿ ಕಛೇರಿ ನಡೆಸಿಕೊಟ್ಟಿದ್ದೇನೆ. ಸಿತಾರ್‌ನ ಸುಜತ್‌ಹುಸೇನ್ ಖಾನ್, ತಬಲಾ ಮಾಂತ್ರಿಕ ಉಸ್ತಾದ್ ಜಾಕಿರ್ ಹುಸೇನ್, ಮೋಹನ ವೀಣೆಯ ಪಂ. ವಿಶ್ವಮೋಹನ ಭಟ್, ಹಿಂದೂಸ್ತಾನಿ ಗಾಯಕ ಅಜೇಯ ಚಕ್ರವರ್ತಿ... ಹೀಗೆ ಹಲವು ವಿದ್ವಾಂಸರ ಜೊತೆಗೆ ನುಡಿಸಿದ್ದು, ಹೊಂದಾಣಿಕೆಯಿಂದಲೇ ನುಡಿಸಿದ್ದೇವೆ, ಕೇಳುಗರನ್ನೂ ಇಂಥ ಕಛೇರಿಗಳು ಬೇಗನೆ ಸೆಳೆಯುತ್ತವೆ.

• **'ಸಾಮಗಾನ ಮಾತಂಗ' ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದೀರಿ...**

ಒಬ್ಬ ಕಲಾವಿದನ ಸಾಧನೆಯನ್ನು ಗಮನಿಸಿ ಪ್ರಶಸ್ತಿ ಪುರಸ್ಕೃತರಾಗುವುದು ನಿಜಕ್ಕೂ ಪುಳಕದ ವಿಚಾರವೇ. ಬೆಂಗಳೂರಿನ 'ಸಾಮಗಾನ ಸಂಗೀತ ಸಭಾ'ದಿಂದ ಈ ಪ್ರಶಸ್ತಿ ಪಡೆಯುವುದು ಸಂತಸ ತಂದಿದೆ. ನಾನು ಬೆಳೆದ ಊರಿನಲ್ಲಿ ಸಂಘ ಸಂಸ್ಥೆಗಳಿಂದ ಪಡೆಯುವ ಮೊದಲ ಗೌರವ ಇದು. ಹೀಗಾಗಿ ಇದು ಬಹಳ ವಿಶೇಷದ್ದು ಎಂಬುದು ನನ್ನ ಭಾವನೆ. ಈಗಾಗಲೇ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಫೆಲೊಶಿಪ್ (2017), ತಮಿಳುನಾಡು ಸರ್ಕಾರದ ಕಲೈಮಾಮಣಿ, (2001), ಗ್ರ್ಯಾಮಿ ನಾಮನಿರ್ದೇಶಕ 2009, ಫ್ರಾನ್ಸ್ ಸರ್ಕಾರದ ಚೆವಲಿಯರ್ ನೈಟ್‌ಹುಡ್ ಪ್ರಶಸ್ತಿ (2022), ಶೃಂಗೇರಿ ಮಠದ ಆಸ್ಥಾನ ವಿದ್ವಾನ್ ಬಿರುದು 2000... ಇವೆಲ್ಲವನ್ನೂ ಪಡೆದಿದ್ದರೂ ಸಂಗೀತಕ್ಕೇ ಮೀಸಲಾದ ಸಂಸ್ಥೆಯೊಂದರಿಂದ ತವರು ರಾಜ್ಯದಲ್ಲಿ ಸನ್ಮಾನಿತನಾಗುವುದು ಹೆಮ್ಮೆಯ ಸಂಗತಿ. ❖



ಕಲಾಗ್ರಾಮದಲ್ಲಿ ಕಾಡಿದ ಬೆಂಕಿ

ನಾಗೇಶ ಹೆಗಡೆ

ಹೊಗೆ ಎದ್ದಿರಲಿಲ್ಲ; ಕಿಡಿ ಚಿಮ್ಮುತ್ತಿರಲಿಲ್ಲ. ಸುಟ್ಟ-ಕೆಟ್ಟ ವಾಸನೆ ಇರಲೇ ಇಲ್ಲ. ಪ್ರಾಣಿ- ಪಕ್ಷಿಗಳು ದೂರಕ್ಕೆ ಧಾವಿಸಲು ಚಡಪಡಿಸುತ್ತಿರಲಿಲ್ಲ. ಬದಲಿಗೆ ದೂರದಲ್ಲಿ ಸಂಗೀತ ಇತ್ತು. ಜನಪದ ಹಾಡು, ನಾಟಕ, ನೃತ್ಯಗಳಿದ್ದವು.

ಅಲ್ಲಿನ ಕಾಳ್ಗಿಚ್ಚಿನ ದೃಶ್ಯವನ್ನು ರಂಗಕಲಾ ತಜ್ಞ ಶಶಿಧರ ಅಡಪ ಮತ್ತು ಅವರ ತಂಡದವರು ಸೃಷ್ಟಿಸಿದ್ದರು. ಕಲಾಗ್ರಾಮದ ಬಿದಿರು ಪೊದೆಗಳ ಬುಡದಲ್ಲಿ ಬೆಂಕಿಯ ಬಣ್ಣವನ್ನು ಹೊಮ್ಮಿಸುವ ನಿಯಾನ್ ಫಲಕಗಳನ್ನು ಇಟ್ಟಿದ್ದರು. ಪಕ್ಕದ ರಿಂಗ್‌ರೋಡ್‌ನಲ್ಲಿ ಕತ್ತಲನ್ನು ಸೀಳಿ ಸಾಗುವ ವಾಹನ ಸವಾರರಿಗೆ ದಿಗಿಲು ಹುಟ್ಟಿಸುವಷ್ಟು ನೈಜ ಎಂಬಂತೆ ಕಾಡಿನ ಬೆಂಕಿಯ ಚಿತ್ರಣವನ್ನು ಕೊಡುತ್ತಿದ್ದವು.

ಇಲ್ಲೇನೋ ಕಲಾವಿದರ ಕಲ್ಪನೆಯಿಂದಾಗಿ ಹಾಲಿವುಡ್ ಸಿನಿಮಾ ಸೆಟ್‌ನಂಥ ದೃಶ್ಯ ಇತ್ತು. ಆದರೆ ಕಳೆದ ತಿಂಗಳು ಅಮೆರಿಕದ ಹಾಲಿವುಡ್‌ನಲ್ಲಿ ಸಹಜ ನೈಸರ್ಗಿಕ ಕಾಳ್ಗಿಚ್ಚಿನಿಂದಾಗಿ ಅನೇಕ ಕಲಾವಿದರ ಮನೆಗಳು ಸುಟ್ಟು ಕರಕಲಾಗಿವೆ. ಅಮೆರಿಕದ ಆಗರ್ಭ ಶ್ರೀಮಂತರಲ್ಲಿ ಅತಿ ಶ್ರೀಮಂತರಾಗಿದ್ದ ಅನೇಕರ ಆಸ್ತಿಪಾಸ್ತಿ ಬೆಂಕಿಗೆ ಆಹುತಿಯಾಗಿವೆ.

ನಮ್ಮಲ್ಲಿ ಸಂಕ್ರಾಂತಿ, ಹೋಳಿ, ಯುಗಾದಿ ಎಂದೆಲ್ಲ ಹಬ್ಬಗಳನ್ನು ಹೆಸರಿಸಿದ ಹಾಗೆ ಅಮೆರಿಕದಲ್ಲಿ ಪಂಚಾಂಗದ ಪ್ರಕಾರ ಬಂದೆರಗುವ ಸುಂಟರಗಾಳಿ (ಸೈಕ್ಲೋನ್, ಟರ್ನಾಡೊ, ಹರಿಕೇನ್)ಗಳಿಗೆ ಹೆಸರುಗಳಿವೆ. ಕಾಳ್ಗಿಚ್ಚಿಗೂ ಹೆಸರುಗಳಿವೆ. ಕೆಲವು ವರ್ಷಗಳಲ್ಲಿ ಅವು ರುದ್ರ, ಇನ್ನು ಕೆಲವು ವರ್ಷಗಳಲ್ಲಿ ಅತಿರುದ್ರ ರೂಪ ತಾಳುತ್ತವೆ. ಈ ವರ್ಷ ದಾಳಿ ಮಾಡಿದ್ದು 'ಈಟನ್ ಫಾಯರ್' ಮತ್ತು 'ಪ್ಯಾಲಿಸೇಡ್ ಫಾಯರ್' ಹೆಸರಿನ ಕಾಳ್ಗಿಚ್ಚುಗಳು. ಯುರೋಪ್, ಆಸ್ಟ್ರೇಲಿಯಾದಲ್ಲೂ ವಾರ್ಷಿಕ ಬೆಂಕಿಗಳಿಗೆ ನಾಮಕರಣ ಮಾಡಲಾಗಿದೆ.

ಕಾಳ್ಗಿಚ್ಚು ಹೈಜಂಪ್ ಮಾಡುತ್ತವೆ ಗೊತ್ತೆ? ಬೆಂಕಿ ತಾನಿದ್ದ ಸ್ಥಳದಿಂದ 10-15 ಕಿ.ಮೀ. ದೂರಕ್ಕೂ ಕುಪ್ಪಳಿಸುತ್ತದೆ. ಬೆಂಕಿ ಬಂತೆಂದರೆ ಅದರ ಝಳ ತಾಳದೆ ಪ್ರಾಣಿ ಪಕ್ಷಿಗಳು ದೂರ ಧಾವಿಸಲು ಯತ್ನಿಸುತ್ತವೆ. ಅವನ್ನೆಲ್ಲ ಅಟ್ಟಿಸಿಕೊಂಡು ಹೋಗುವ ಹಾಗೆ ಬೆಂಕಿಯ ಕಿಡಿಗಳೂ ಕೆಂಡಗಳೂ ಆ ಭಾರೀ ಗಾಳಿಯೊಂದಿಗೆ ಹಾರುತ್ತ ಹೋಗಿ ದೂರದ ಕಾಡಿಗೂ ಕಿಚ್ಚಿಡುತ್ತವೆ.

ಮಹಾಭಾರತದಲ್ಲಿ ಖಾಂಡವ ವನವನ್ನು ದಹಿಸಲು ಅಗ್ನಿದೇವನಿಗೆ ಅರ್ಜುನ ನೆರವಾಗುತ್ತಿದ್ದ ಕತೆ ಗೊತ್ತಲ್ಲ? ಪ್ರಾಯಶಃ ಆತನೂ ಇದೇ ರೀತಿ ಆಗ್ನೇಯಾಸ್ತ್ರವನ್ನು ದೂರ-ದೂರಕ್ಕೆ ಚಿಮ್ಮಿಸುತ್ತ ಅಲ್ಲೆಲ್ಲ ಕಿಡಿ ಹೊತ್ತಿಸುತ್ತಿದ್ದನೋ ಏನೊ. ಉಕ್ರೇನ್ ಮೇಲೆ ರಷ್ಯಾ ದಾಳಿ ಮಾಡುವಾಗಲೂ ಅಂಥದ್ದೇ ಅಗುತ್ತಿತ್ತು. ಈ ಊರಿನಲ್ಲಿ ಶೆಲ್ ಸಿಡಿಸಿ ಬೆಂಕಿ ಹಚ್ಚಿದ ಬಾಂಬರ್‌ಗಳು ಐದೇ ನಿಮಿಷಗಳಲ್ಲಿ 20 ಕಿ.ಮೀ ಆಚೆ ಬಾಂಬ್ ಹಾಕಿ ಮತ್ತೊಂದು ಕಡೆ ಕಿಚ್ಚು ಹಚ್ಚುತ್ತಿದ್ದವು.

ನಿಸರ್ಗದಿಂದ ಮನುಷ್ಯ ಪಾಠ ಕಲಿತನೊ, ಮನುಷ್ಯನಿಂದಲೇ ನಿಸರ್ಗ ಹೊಸ ಹೊಸ ಪಾಠ ಕಲಿಯುತ್ತದೊ ಅಥವಾ ನಾವೆಲ್ಲ ಸೇರಿ ಈ ಪರಿಯ ವಿಧ್ವಂಸಕ ಕೃತ್ಯಗಳನ್ನು ಮಾಡುತ್ತೇವೊ- ಯಾರಿಗೆ ಗೊತ್ತು?

ಅಮರಿಕ ಸುಧಾರಿತ ರಾಷ್ಟ್ರ. ಹಾಗಾಗಿ ಕ್ಯಾಲಿಫೋರ್ನಿಯಾದಲ್ಲಿ ಕಾಳ್ಗಿಚ್ಚಿನ ದಾಳಿ ಆಗುವ ಮೊದಲೇ ಒಂದೂವರೆ ಲಕ್ಷ ಜನರನ್ನು ಸ್ಥಳಾಂತರ ಮಾಡಿಸಲಾಗಿತ್ತು. 20 ದಿನಗಳ ಅಗ್ನಿಪ್ರಳಯದಲ್ಲಿ ಬೆಂಕಿ ತುತ್ತಾದವರು ಬರೀ 29 ಮಂದಿ. ಆದರೆ ಜ್ವಾಲೆಗೆ ಬಲಿಯಾದ ಜಿಂಕೆಗಳು, ಬಾಬ್‌ಬೆಕ್ಕುಗಳು, ಬಾವಲಿಗಳು, ಕಾಂಗರೂ, ಹೆಗ್ಗಣಗಳು, ಕಾಂಡೊರ್ ಹದ್ದುಗಳು, ಹಾವು-ಜೇಡಗಳ ಲೆಕ್ಕ ಇಟ್ಟವರಿಲ್ಲ.

ಉತ್ತರ ಗೋಲಾರ್ಧದ ವಿಶೇಷತೆ ಏನೆಂದರೆ ಅಲ್ಲಿನ ಶುಷ್ಕ ಕಾಡುಗಳಲ್ಲಿ ಬೆಂಕಿ ತಾನಾಗಿ ಹೊತ್ತಿಕೊಳ್ಳುತ್ತದೆ. ಆದರೆ ನಮ್ಮ ದಕ್ಷಿಣ ಭಾರತದಲ್ಲಿ ಅಥವಾ ಏಷ್ಯದ ಬಹುಭಾಗದಲ್ಲಿ ತಾನೇತಾನಾಗಿ ಕಾಡಿನಲ್ಲಿ ಬೆಂಕಿ ಹೊತ್ತಿಕೊಳ್ಳುವುದಿಲ್ಲ. ತೀರಾ ಅಪರೂಪ. ಇವೆಲ್ಲ ಏನಿದ್ದರೂ ಮನುಷ್ಯನದೇ ಕೈವಾಡ.

ಇನ್ನೇನು ನಮ್ಮಲ್ಲೂ ಕಾಳ್ಗಿಚ್ಚಿನ ಋತು ಆರಂಭವಾಗಲಿದೆ. ಬೆಂಗಳೂರಿನ ಕಲಾಗ್ರಾಮದ ಕೃತಕ ಕಾಳ್ಗಿಚ್ಚಿನ ಫೋಟೊ ತೆಗೆಯುತ್ತಿದ್ದ ಸಂದರ್ಭದಲ್ಲೇ (9 ಫೆಬ್ರುವರಿ) ಚಿಕ್ಕಮಗಳೂರಿನ ಕಳಸದ ಆನೆಗುಡ್ಡದ ಶಿಖರದ ಮೇಲೆ ಅಸಲೀ ಕಾಳ್ಗಿಚ್ಚಿನ ಧಗಧಗ ಆರಂಭವಾಗಿದೆ. ಕ್ಯಾಲಿಫೋರ್ನಿಯಾದಲ್ಲಿ ಕಾಡಿನ ಬೆಂಕಿಯ ದಾಳಿ ಆಗುತ್ತಲೇ ಅಗ್ನಿಶಾಮಕ ಹೆಲಿಕಾಪ್ಟರ್‌ಗಳು ಧಾವಿಸಿದವು. ನಮ್ಮಲ್ಲೂ ಆಧುನಿಕ ಟೆಕ್ನಾಲಜಿ ಬಳಕೆಗೆ ಬರುತ್ತಿದೆ. ಹೆಲಿಕಾಪ್ಟರ್ ಅಲ್ಲದಿದ್ದರೂ ಡ್ರೋನ್ ಬಳಸಿ ಫೋಟೊ ತೆಗೆಯುವಷ್ಟು ನಾವು ಸುಧಾರಿಸಿದ್ದೇವೆ. ಆನೆಗುಡ್ಡದ ಆ ಕಾಳ್ಗಿಚ್ಚನ್ನು ನೋಡಿದರೆ ಗುಡ್ಡಕ್ಕೆ ಗುಡ್ಡವೇ ಕೆಂಪಂಚಿನ ಹೊಗೆಯ ಚಾದರವನ್ನು ಹೊದೆದಂತೆ ಕಾಣುತ್ತಿತ್ತು. ಇದೇ ವೇಳೆಗೆ ಶ್ರೀರಂಗಪಟ್ಟಣದ ಪಕ್ಕದ ಕರೀಘಟ್ಟದ ಬಾದೆ ಹುಲ್ಲಿಗೆ ಬೆಂಕಿ ಬಿದ್ದು ಇಡೀ ಗುಡ್ಡಕ್ಕೆ ಕರೀ ಚಾದರ ಹೊದೆಸಿದಂತೆ ಕಾಣುತ್ತದೆ. ಇಲ್ಲಿ ಜಾತ್ರೆಗೆ ಮೂರು ದಿನ ಮೊದಲು ಹರಕೆ ತೀರಿಸಲೆಂದೇ ಭಕ್ತರು ತಾವಾಗಿ ಬೆಂಕಿ ಹಚ್ಚುತ್ತಾರೆ ಎಂದು ಸ್ಥಳೀಯರು ಹೇಳುತ್ತಾರೆ.

ನಮ್ಮ ರೂಢ ನಂಬಿಕೆಗಳನ್ನೂ ಕಂಡಲ್ಲಿ ಕಡ್ಡಿ ಗೀರುವ ಚಪಲವನ್ನೂ ಮೀರಿಸುವಂತೆ ನಿಸರ್ಗ ನಮಗೆ ಪಾಠ ಹೇಳಲೆಂದು ಧಾವಿಸಿ ಬರುತ್ತಿದೆ. ಚಳಿಗಾಲ ಮುಗಿದೇ ಇಲ್ಲ- ನಗರಗಳಲ್ಲಿ ಧಗೆ ಎದ್ದಿದೆ. ಕಳೆದ ವರ್ಷ ಹಿಂದಿನ ಎಲ್ಲ ದಾಖಲೆಗಳನ್ನೂ ಮೀರಿಸಿ ಭೂಮಿಯ ಸರಾಸರಿ ತಾಪಮಾನ ಮೇಲಕ್ಕೆ ಏರಿದೆ. ಹವಾಮಾನಕ್ಕೆ ಸಂಬಂಧಿಸಿದ ಎಲ್ಲ ಬಗೆಯ ಸಂಕಟಗಳೂ ಹೆಚ್ಚುತ್ತಿವೆ. ನಾವು ಅದೃಷ್ಟವಂತರು. ಇಲ್ಲಿ ಹಿಮಕುಸಿತದ, ಚಳಿಪ್ರಳಯದ ಚಂಡಿಪ್ರಕೋಪ ಅಷ್ಟಾಗಿ ಇಲ್ಲ. ಆದರೆ ಇತರ ಎಲ್ಲ ಪ್ರಕೋಪಗಳ ರಂಗಸಮರ ಆರಂಭವಾಗಿದೆ.

ಈಗ ಮತ್ತೆ ಹೊರಟಲ್ಲಿಗೇ ಬರೋಣ. ಕಲಾಗ್ರಾಮದಲ್ಲಿ ಏಳು ದಿನ ರಾಷ್ಟ್ರಮಟ್ಟದ 'ರಂಗ ಪರಿಷೆ' ಇತ್ತು. ಕಡಲೆಕಾಯಿ ಪರಿಷೆ, ಚಿತ್ರಸಂತೆ, ಸಾಹಿತ್ಯ ಸಮ್ಮೇಳನ ಎಲ್ಲವನ್ನೂ ನೆನಪಿಸುವಂತೆ, ಎಲ್ಲವನ್ನೂ ಒಳಗೊಂಡ ಮಾದರಿಯಲ್ಲಿ ರಂಗುರಂಗಿನ ಜಾತ್ರೆ ನೆರೆದಿತ್ತು. ನಾಲ್ಕು ವೇದಿಕೆಗಳಲ್ಲಿ ಏಕಕಾಲಕ್ಕೆ ನಾಟಕ, ಡೊಳ್ಳು, ಕಂಸಾಳೆ, ಬೊಂಬೆಯಾಟ ಎಲ್ಲವೂ ಬೊಂಬಾಟಾಗಿದ್ದವು. ದಿನದ, ಜಗದ ಜಂಜಡಗಳನ್ನೆಲ್ಲ ಮರೆತು ಜನಜಾತ್ರೆ ನೆರೆದಿತ್ತು. ವೇದಿಕೆಯ ಎಲ್ಲ ಕಾರ್ಯಕ್ರಮಗಳೂ ನಿನ್ನೆಗಳನ್ನು ನೆನಪಿಸುತ್ತಿದ್ದವು. 'ಇದೇ ಮೊದಲ ಬಾರಿ ಇಂಥ ರಂಗವೈಭವ ನಡೆದಿದೆ.. ಇನ್ನು ಪ್ರತಿವರ್ಷ ನಡೆಯಲಿದೆ' ಎಂದು ರಂಗಪರಿಷೆಯ ರೂವಾರಿ, ನಾಟಕ ಅಕಾಡೆಮಿಯ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ ಹೇಳಿದರು.

ವೈಭವದ ನಿನ್ನೆಗಳಷ್ಟೇ ರಂಗಕ್ಕೆ ಬಂದರೆ ಸಾಕೆ? ನಮ್ಮ ಭವದ ಇಂದು-ನಾಳೆಗಳೂ ಬರಬೇಡವೆ? ನೋಡೋಣ, ಬರುವ ವರ್ಷಗಳಲ್ಲಿ ಅವೂ ರಂಗಕ್ಕೆ ಬರಬಹುದು, ಕಾಯೋಣ. ❖

ಮಾಲ್ಗುಡಿ ಡೇಸ್ ನೆನಪುಗಳೊಂದಿಗೆ...

12ನೇ ಪುಟದಿಂದ...



ಅರಸಾಳು ನಿಲ್ದಾಣದಿಂದ ಮಾಲ್ಗುಡಿ ಮ್ಯೂಸಿಯಂನತ್ತ ಹೆಜ್ಜೆ ಹಾಕುತ್ತಿದ್ದಂತೆ ಸುಂದರವಾದ ಪುಟ್ಟ ಉದ್ಯಾನವನ ಬರ ಮಾಡಿಕೊಳ್ಳುತ್ತದೆ. ಅಲ್ಲಿ 'ಸ್ವಾಮಿ ಹಾಗೂ ಆತನ ಗೆಳೆಯರ' ಪ್ರತಿಮೆಗಳು ಕಾಣಸಿಗುತ್ತದೆ. ಸ್ವಲ್ಪ ಮುಂದೆ ಸಾಗುತ್ತಿದ್ದಂತೆ ನೇರಳೆ ಬಣ್ಣದ 'ಮಾಲ್ಗುಡಿ ಚಾಯ್' ಎಂಬ ಕೆಫೆ ಸಿಗುತ್ತದೆ. ಇದನ್ನು ನಿಜವಾದ ರೈಲು ಕೋಚ್‌ನ ಒಳಗಡೆ ನಿರ್ಮಿಸಲಾಗಿದೆ. ಅದರ ಒಳಗಿನ ದೃಶ್ಯ ಹಳ್ಳಿಯ ಕೆಫೆಯ ಅನುಭವವನ್ನು ನೀಡುತ್ತದೆ.

ಮಾಲ್ಗುಡಿ ಮ್ಯೂಸಿಯಂ ಅನ್ನು ಚಿಕ್ಕ ಹೆಂಚಿನ ಮನೆಯೊಳಗೆ ನಿರ್ಮಿಸಲಾಗಿದ್ದು, ಗೋಡೆಗಳನ್ನು ಸುಂದರ ವರ್ಣಚಿತ್ರಗಳಿಂದ ಸಿಂಗರಿಸಲಾಗಿದೆ. ಮ್ಯೂಸಿಯಂ ಒಳಗಡೆ ಆರ್. ಕೆ. ನಾರಾಯಣ್ ಅವರ ಕಥೆಗಳಿಂದ ಪ್ರೇರಿತವಾದ ಕಲಾಕೃತಿಗಳು, ಛಾಯಾಚಿತ್ರಗಳು ಮತ್ತು ಹಸ್ತಪ್ರತಿಗಳಂತಹ ವಿವಿಧ ವಸ್ತುಗಳು ಹಾಗೂ ಮಾಲ್ಗುಡಿ ಡೇಸ್‌ನಲ್ಲಿ ಬಳಸಲಾದ ಹಲವು ವಸ್ತುಗಳನ್ನು ಜೋಡಿಸಿಡಲಾಗಿದೆ. ಇವೆಲ್ಲವನ್ನೂ ನೋಡುತ್ತಿದ್ದರೆ ಮಾಲ್ಗುಡಿ ಗ್ರಾಮದಲ್ಲೇ ಇದ್ದ ಅನುಭವವಾಗುತ್ತದೆ. ಮಲೆನಾಡಿನ ಪ್ರಶಾಂತವಾದ ಪರಿಸರದಲ್ಲಿ, ಪಕ್ಷಿಗಳ ಕಲರವದ ಮಧ್ಯೆ ಇರುವ ಈ ಮಾಲ್ಗುಡಿ ಡೇಸ್ ಮ್ಯೂಸಿಯಂ ಒಂದು ಅನನ್ಯ ತಾಣವೇ ಸರಿ.

ಮುನ್ನೋಟ 16-02-2025 ರಿಂದ 22-02-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ಚಟುವಟಿಕೆಗಳನ್ನು ಹೆಚ್ಚುಮಾಡಿಕೊಳ್ಳುವಿರಿ. ಉತ್ತಮವಾಗಿ ಮಾತನಾಡಿ ಜನರನ್ನು ಸೆಳೆಯುವ ಕೆಲಸಮಾಡುವಿರಿ. ಆಸ್ತಿ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವಿರುವುದಿಲ್ಲ. ವೃತ್ತಿಪರ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚಿನ ಅನುಕೂಲವಿದೆ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಅನುಕೂಲವಿದೆ. ಈಗ ಸಂಗಾತಿಯ ಪ್ರವಾಸಕ್ಕಾಗಿ ಹೆಚ್ಚು ಹಣ ಖರ್ಚಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ಆದಾಯ ಸಾಮಾನ್ಯ ಮಟ್ಟದಲ್ಲಿರುತ್ತದೆ. ಆದರೆ ಕೃಷಿಯಿಂದ ಆದಾಯ ಹೆಚ್ಚುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಅನುಕೂಲ ಹೆಚ್ಚುತ್ತದೆ. ಕಟ್ಟಡ ಕಾರ್ಮಿಕರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ವಿದೇಶದಲ್ಲಿರುವ ವೈದ್ಯರಿಗೆ ಆದಾಯ ಹೆಚ್ಚುತ್ತದೆ. ಸಂಗಾತಿಯ ಆದಾಯದಲ್ಲಿ ಸ್ವಲ್ಪ ಏರಿಕೆಯನ್ನು ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಉತ್ತಮ ಕೃಷಿಕರಾಗುವ ಯೋಗವಿದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಮಾತನಾಡುವಾಗ ಸ್ವಲ್ಪ ಎಚ್ಚರವಹಿಸಿರಿ. ನಿಮ್ಮ ಕೆಲಸ ಕಾರ್ಯಗಳಿಗೆ ನಿಮ್ಮ ಕಾರ್ಮಿಕರಿಂದ ತೊಂದರೆ ಬರುವ ಸಾಧ್ಯತೆಗಳಿವೆ. ವ್ಯವಹಾರಗಳಲ್ಲಿ ಹಿರಿಯರಿಂದ ಅಡ್ಡಿ ಬರಬಹುದು. ಕೃಷಿ ಭೂಮಿ ಅಭಿವೃದ್ಧಿಪಡಿಸುವವರಿಗೆ ಉತ್ತಮ ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಅನುಕೂಲಗಳು ದೊರೆಯುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವಾರದ ಆರಂಭದಲ್ಲಿ ಆಲಸ್ಯತನವಿದ್ದರೂ ನಂತರ ಸರಿಯಾಗುತ್ತದೆ. ಆದಾಯವು ಉತ್ತಮಗೊಳ್ಳುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ತಾಯಿಯ ಸಹಕಾರ ದೊರೆಯುತ್ತದೆ. ಹಿರಿಯರ ಸಹಾಯದಿಂದ ಆಸ್ತಿ ವ್ಯವಹಾರಗಳನ್ನು ಮಾಡಬಹುದು. ಕೃಷಿಗಾಗಿ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಕೆಲವು ಕ್ರೀಡಾಪಟುಗಳು ಅವರದೇ ತಪ್ಪಿನಿಂದ ಸ್ಪರ್ಧೆಯಿಂದ ಹೊರಗೆ ಉಳಿಯುವರು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಆದಾಯದಲ್ಲಿ ಸ್ವಲ್ಪಮಟ್ಟಿನ ಏರಿಕೆಯನ್ನು ಕಾಣಬಹುದು. ಸಂಗಾತಿಯಿಂದ ಮತ್ತು ಅವರ ಕಡೆಯವರಿಂದ ಸಾಕಷ್ಟು ಸಹಕಾರ ದೊರೆಯುತ್ತದೆ. ಭೂಮಿ ಅಭಿವೃದ್ಧಿಪಡಿಸುವವರಿಗೆ ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ದೊರೆಯುವ ಸಾಧ್ಯತೆಗಳಿವೆ. ನರರೋಗ ತಜ್ಞರಿಗೆ ಬೇಡಿಕೆ ಹೆಚ್ಚಾಗಿ ಆದಾಯವು ಹೆಚ್ಚುತ್ತದೆ. ಕೃಷಿಯಿಂದ ಆದಾಯ ಕಡಿಮೆಯಾಗಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಸನ್ಮಾರ್ಗ ಮತ್ತು ದೈವ ಮಾರ್ಗದ ಕಡೆಗೆ ಮನಸ್ಸು ಚಿಂತಿಸುತ್ತದೆ. ಸಂಗಾತಿಯ ಕಡೆಯಿಂದ ಆರ್ಥಿಕ ಸಹಾಯ ಸಿಗಬಹುದು. ವೃತ್ತಿಯಲ್ಲಿ ನಿಮ್ಮ ಸಾಮರ್ಥ್ಯದಿಂದ ಮೇಲೇರುವ ಸಾಧ್ಯತೆಗಳಿವೆ. ಹಿರಿಯರ ಆಸ್ತಿಯಲ್ಲಿ ನಿಮಗೆ ಸ್ವಲ್ಪ ದೊರೆಯಬಹುದು. ವಿದ್ಯಾರ್ಥಿಗಳಿಗೆ ಈಗ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಕೃಷಿಯಿಂದ ಹೆಚ್ಚು ಆದಾಯವನ್ನು ಕಾಣಬಹುದು. ಕೃಷಿಯಿಂದ ಲಾಭವಿದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಸರಿಯಾದ ಆಲೋಚನೆಗಳಿಲ್ಲದೆ ನಿಮ್ಮ ಕೆಲವೊಂದು ಕೆಲಸಗಳು ನಿಲ್ಲಬಹುದು. ಹಿರಿಯರ ಕೃಷಿಭೂಮಿಯಿಂದ ಆದಾಯವನ್ನು ಗಳಿಸಬಹುದು. ಆಸ್ತಿ ವ್ಯವಹಾರ ಮಾಡುವವರಿಗೆ ನಿರೀಕ್ಷಿತ ಲಾಭವಿಲ್ಲದಿದ್ದರೂ ನಷ್ಟವಿರುವುದಿಲ್ಲ. ಮಕ್ಕಳಿಂದ ಸಹಕಾರ ಕಡಿಮೆಯಾಗುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ಸಿಗುವುದಿಲ್ಲ. ವಿದೇಶದಲ್ಲಿರುವ ಪ್ರಸೂತಿ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಕೆಲವೊಮ್ಮೆ ನಿಮ್ಮ ಅಭಿಪ್ರಾಯವನ್ನು ನೇರವಾಗಿ ಹೇಳಲೇಬೇಕು. ಆದಾಯವು ನಿಮ್ಮ ವೆಚ್ಚವನ್ನು ತೂಗಿಸುತ್ತದೆ. ಹಿರಿಯರು ನಿಮ್ಮ ವ್ಯವಹಾರಗಳಿಗೆ ಸಾಕಷ್ಟು ಸಹಾಯ ಮಾಡುವರು. ವಿದೇಶದಲ್ಲಿ ಈಗ ಓದಬೇಕೆನ್ನುವವರಿಗೆ ಧನಸಹಾಯ ಒದಗಿ ಬರುತ್ತದೆ. ಕ್ರೀಡಾಪಟುಗಳಿಗೆ ನಿರೀಕ್ಷೆಯಂತೆ ಕ್ರೀಡಾ ಸ್ಪರ್ಧೆಗಳಿಗೆ ಅವಕಾಶ ದೊರೆಯುತ್ತದೆ. ಸಂಗಾತಿಯ ಸಂಪಾದನೆ ಹೆಚ್ಚಾಗುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಆದಾಯವು ನಿಮ್ಮ ವೆಚ್ಚವನ್ನು ತೂಗಿಸುತ್ತದೆ. ಸರಿಯಾದ ಹಂತದಲ್ಲಿ ನಿಮ್ಮ ಶತ್ರುಗಳನ್ನು ನಿಗ್ರಹ ಮಾಡುವಿರಿ. ವಿದೇಶದಲ್ಲಿ ಆಸ್ತಿ ವ್ಯವಹಾರ ಮಾಡುವವರ ಲಾಭ ಹೆಚ್ಚುತ್ತದೆ. ವಿದೇಶದಲ್ಲಿರುವವರು ಈಗ ಸ್ಥಿರಾಸ್ತಿಯನ್ನು ಮಾಡಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಲೇವಾದೇವಿ ವ್ಯವಹಾರಗಳು ಅಷ್ಟು ಒಳಿತಲ್ಲ. ವೃತ್ತಿಯಲ್ಲಿ ಅಭಿವೃದ್ಧಿಯು ನಿಧಾನ ಗತಿಯಲ್ಲಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಉತ್ತಮ ಆತ್ಮವಿಶ್ವಾಸದಿಂದ ಕೆಲಸ ಮಾಡುವಿರಿ. ಆದಾಯ ಕಡಿಮೆ ಇದ್ದರೂ ಕೂಡ ತೊಂದರೆ ಏನಿಲ್ಲ. ಬಂಧುಗಳ ನಡುವೆ ವೈಶಮ್ಯವಿದ್ದರೂ ಅವರಿಗೆ ತಿಳಿ ಹೇಳಿ ನೀವು ಮುಂದುವರೆಯುರಿ. ಆಸ್ತಿ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವಿರುವುದಿಲ್ಲ. ಕೃಷಿಯಿಂದ ಸ್ವಲ್ಪ ಆದಾಯ ಕಡಿಮೆಯಾಗಬಹುದು. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ದೊರೆಯುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ವೃತ್ತಿಯಲ್ಲಿ ಹೆಚ್ಚು ಶ್ರಮ ಹಾಕಲೇಬೇಕಾದ ಅನಿವಾರ್ಯತೆ ಇರುತ್ತದೆ. ರಾಜಕೀಯದವರು ಮಾತನಾಡುವಾಗ ಎಚ್ಚರವಿರಲಿ. ಸಂಗೀತಗಾರರಿಗೆ ವಿದೇಶದಲ್ಲಿ ಹೆಚ್ಚು ಮನ್ನಣೆ ದೊರೆಯುವ ಸಾಧ್ಯತೆಗಳಿವೆ. ಕ್ರೀಡಾಪಟುಗಳು ಹೆಚ್ಚಿನ ತರಬೇತಿಗಾಗಿ ಆಯ್ಕೆಯಾಗಬಹುದು. ಕಣ್ಣಿನ ಸೋಂಕು ಇರುವವರು ಎಚ್ಚರವಹಿಸಿರಿ. ಸಂಗಾತಿಯಿಂದ ಸರ್ಕಾರಿ ಕಚೇರಿಗಳಿಗೆ ದಂಡ ಕಟ್ಟುವ ಸಾಧ್ಯತೆ ಇದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ನಡವಳಿಕೆಗಳಲ್ಲಿ ಸಾಕಷ್ಟು ಬದಲಾವಣೆಯನ್ನು ಕಾಣಬಹುದು. ನಿಮ್ಮ ಕೆಲವು ಕಾರ್ಯಗಳಿಗೆ ಹಿರಿಯರ ಬೆಂಬಲ ಸಿಗುವುದು. ಆಸ್ತಿ ವ್ಯವಹಾರ ಮಾಡುವವರಿಗೆ ಅಭಿವೃದ್ಧಿ ಇರುತ್ತದೆ. ಕೃಷಿಕರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶ ಇರುತ್ತದೆ. ನಿಂತಿದ್ದ ಸರ್ಕಾರಿ ಕೆಲಸಗಳು ಈಗ ಮುಂದುವರೆಯಬಹುದು. ಸಂಗಾತಿಯು ಈಗ ನಿಮ್ಮ ಬಗ್ಗೆ ಹೆಚ್ಚು ಗಮನ ಕೊಡುವರು.

ಪದಬಂಧ 2879



ಮೇಲಿನಿಂದ ಕೆಳಕ್ಕೆ

1. ವಿರಸ ಮರಣವಾದರೆ ಜನನದ ಮೂಲ? 3
2. ಅಂಟಿಕೊಂಡ ಚಟ ಆಗುವ ವ್ಯಥೆ 3
3. ಹಿಂದೆ ಮುಂದೆ ತೂಗುವ ಮಣೆ 3
5. ಶ್ರೇಷ್ಠವಾದ ನಾರದ ವೀಣೆ 3
7. ಕಾಯುವಿಕೆ ಹುಟ್ಟಿಸುವ ಆತುರ 3
9. ನಡೆನುಡಿಯಲ್ಲಿ ಗಾಂಭೀರ್ಯ ಬಿಂಕ ಬಿಗುಮಾನ ಮೋಜು 5
10. ತನ್ನ ವರ್ಚಸ್ಸಿನಿಂದ ವಶೀಲಿಮಾಡುವ ಅಕ್ಕನ ಗಂಡ 5
11. ಒಳ್ಳೆಯವನೆನಿಸಿಕೊಂಡ ಬ್ರಾಹ್ಮಣ 3
12. ಕೂಸು ಹುಟ್ಟುವ ಭರವಸೆಯಲ್ಲಿ ನೇಯ್ದ ಟೋಪಿ 3
16. ಪುಣ್ಯ ಸಂತತಿ ಭಾರವನ್ನು ಹೊತ್ತ ನಮ್ಮ ರಾಷ್ಟ್ರ ಜನನಿ 3
17. ವಿಪರೀತ ಬುದ್ಧಿ ಬರುವ ಸಮಯದಲ್ಲಿ ಉಂಟಾಗುವ ಕೇಡು 3
19. ತನ್ನಲ್ಲಿ ತಾನು ಬೆರೆತು ಲೀನವಾಗು 3
20. ಈ ಹುಡುಗಿ ಪುತ್ಥಳಿಯ ನಕಲು 3
21. ರಸದಲ್ಲಿ ಸಿಕ್ಕಿಹಾಕಿಕೊಂಡವ 3

ಎಡದಿಂದ ಬಲಕ್ಕೆ

1. ಆದಿಯಿಂದ ಎಲ್ಲವೂ ಸೇರಿದಂತೆ ಕವಿ ಅಡಿಗರ ಸೃಷ್ಟಿ 5
3. ಸೊಂಟಕ್ಕೆ ಕಟ್ಟಿರುವ ಸೂತ್ರ 4
4. ನಿಜವಾದ ಬಯಕೆಯ ಲೇಖಕನ ಕಾವ್ಯನಾಮ 4
6. ಒಂದೇ ಕಾಲದಲ್ಲಿ ಜೊತೆ ಜೊತೆಯಾಗಿ ಬಾಳಿ ಬದುಕಿದವ 5
8. ದಿನದ ಆಯವ್ಯಯಗಳನ್ನು ದಾಖಲಿಸುವವ 3
10. ಹೆರಿಗೆಗೆ ಸಂಸ್ಕೃತ 3
11. ಸಾಗಾಣಿಕೆಗೆ ಸಿದ್ಧವಾಗಿರುವ ಸಾಮಾನು 3
13. ವಿರಳವಾಗಿ ಬಂದ ಅಹಂಕಾರಿ 3
14. ಹಗುರವಾಗಿ ಕೈ ಕುಲುಕುವಿಕೆ 3
15. ಒಂದು ವಲಯದಲ್ಲಿ ತನ್ನ ವರ್ಚಸ್ಸನ್ನು ಬೆಳೆಸಿರುವವ 3
17. ಅಕಸ್ಮಾತ್ ಒದಗಿ ಬರುವ ಅಪಾಯ 3
18. ಅಚ್ಚ ಬರಹದಲ್ಲಿರುವುದು 3
20. ಮುನ್ನಡೆಯುವ ದೃಷ್ಟಿ ಪರವಾಗಿರುವ ಗುಂಪು 5
22. ಅಂಬಿನಿಂದ ಉಗಮಿಸಿರುವ ನದಿ 4
23. ಚಲನಚಿತ್ರದ ಕಲ್ಪನಾಗುಣ ವಾಸ್ತವಕ್ಕೆ ಹೊರತಾಗಿರಬಹುದು 4
24. ಗುರುವಿನಂತೆ ದಾರಿ ತೋರುವವ 5

ಪದಬಂಧ ಉತ್ತರ -2878

ಮೇಲಿಂದ ಕೆಳಕ್ಕೆ

1.ಸಂಗಮಸ್ನಾನ 2.ಕಬೀರ 3.ಮೋಹ 4.ನಯವಂಚಕ 6.ತಿರುಕ 7.ಸರಯು 8.ಪಲ್ಲವ 10.ಲಿಪಿಕಾರ 11.ಗಜ 13.ಗುಲಾಮ 14.ದಯಾವಂತ 16.ನವಮ 17.ವೇದಸಂದೇಶ 18.ನಮ 20.ಕರಗು 21.ಲಘುಕವಿತೆ 23.ಹಂದರ 24. ರುಸುಮ 25.ರಂಜಕ 26.ಮನಿ

ಎಡದಿಂದ ಬಲಕ್ಕೆ

1.ಸಂಚಾಲಕ 3.ಮೋಹನ 5.ಬೀಗತಿ 7.ಸಹ 8.ಪರ 9.ಕಲಿಯುಗ 12.ನಗುವಕಂದ 15.ಜನಕ 17.ವೇಮನ 19.ರತ್ನಕಮಲ 22.ಮಹಂತರು 25.ರಂಗು 26.ಮರ 27.ಮನೋಜ 28.ಶಕುನಿ 29.ಕಟ್ಟುಕತೆ

ಮೇರು ಸಾಧಕರಿಗೆ ನೂರರ ನಮನ

ಎನ್.ಎಸ್.ಶ್ರೀಧರ ಮೂರ್ತಿ

1995ನೆಯ ಇಸವಿ. ರವೀಂದ್ರ ಕಲಾಕ್ಷೇತ್ರದಲ್ಲೊಂದು ಕಾರ್ಯಕ್ರಮ. ಪ್ರೊ. ಎಲ್.ಎಸ್.ಶೇಷಗಿರಿ ರಾಯರದೇ ಅಧ್ಯಕ್ಷತೆ. ಕಾರ್ಯಕ್ರಮ ಮುಗಿದ ಮೇಲೆ 'ನೀವು ಶ್ರೀಧರ ಮೂರ್ತಿಯವರಲ್ಲವೆ?' ಎಂದು ಅವರೇ ಮಾತನಾಡಿಸಿದರು. ನಾನು ಅಚ್ಚರಿಯಿಂದ 'ಹೌದು' ಎಂದಾಗ 'ನಮ್ಮ ಮನೆಗೆ ಬರಬೇಕಲ್ಲ' ಎಂದು ಆಹ್ವಾನ ಕೊಟ್ಟರು. 'ಯಾವಾಗ' ಎಂದರೆ 'ನೀವು ವೃತ್ತಿಯಲ್ಲಿರುವವರು ಹೇಳಬೇಕು, ನಾನಾದರೂ ನಿವೃತ್ತ' ಎಂದರು. ಅದರಂತೆ ಅವರ ಮನೆಗೆ ಹೋದಾಗ ಅವರ ಎಲ್ಲಾ ಪುಸ್ತಕಗಳ ಕಟ್ಟನ್ನು ಕೊಟ್ಟು 'ಇದೆಲ್ಲವನ್ನೂ ಓದಿದ ಮೇಲೆ ನಿಮ್ಮ ಅಭಿಪ್ರಾಯ ಹಾಗೇ ಇದ್ದರೆ, ನನ್ನ ಆಕ್ಷೇಪವಿಲ್ಲ' ಎಂದು ಗಂಭೀರ ಸ್ವರದಲ್ಲಿ ಹೇಳಿದರು. ಆಗ ನನಗೆ ಹೊಳೆಯಿತು ಅವರನ್ನು ಒಂದು ಲೇಖನದಲ್ಲಿ 'ತಿಳಿ ಮಜ್ಜಿಗೆಯ ವಿಮರ್ಶಕರು' ಎಂದು ಕರೆದಿದ್ದೆ. ಆದರೆ ಮುಂದೆ ಅವರ ನಿಕಟ ಒಡನಾಟ ಬೆಳೆಯಲು ಇದು ಕಾರಣವಾಯಿತು. ಭಾರತೀಯ ವಿದ್ಯಾ ಭವನವು ಆಳಸಿಂಗಾಚಾರ್ಯರ ಮಹಾಭಾರತದ ಹದಿನೆಂಟು ಸಂಪುಟಗಳನ್ನು ಪ್ರಕಟಿಸಿತು. ಇದೇ ಸಂದರ್ಭದಲ್ಲಿ ಇಂಗ್ಲಿಷ್‌ನಲ್ಲಿ ಕೂಡ ಮಹಾಭಾರತ ಬಂದರೆ ಚೆನ್ನಾಗಿರುತ್ತದೆ ಎನ್ನುವ ಅಭಿಪ್ರಾಯ ಬಂದಿತು. ಅದನ್ನು ಬರೆಯುವ ಹೊಣೆಗಾರಿಕೆ ಶೇಷಗಿರಿ ರಾಯರಿಗೇ ಬಂದಿತು. ಅದರ ಸಹಯೋಗವನ್ನು ನಾನೇ ಮಾಡಿದ್ದರಿಂದ ಇನ್ನಷ್ಟು ನಿಕಟ ಒಡನಾಟ ಸಿಕ್ಕಿತು.

2005ನೆಯ ಇಸವಿ ಫೆಬ್ರುವರಿ 8ನೆಯ ತಾರೀಖು ಆಗ ಭಾರತೀಯ ವಿದ್ಯಾ ಭವನದ ನಿರ್ದೇಶಕರಾಗಿದ್ದ ಮತ್ತೂರು ಕೃಷ್ಣಮೂರ್ತಿಯವರು ಪೋನ್ ಮಾಡಿ 'ನಿಮ್ಮ ಹಸ್ತಪ್ರತಿ ಯಾವಾಗ ಸಿಗುತ್ತದೆ' ಎಂದರು. ನನಗೆ ಅಚ್ಚರಿ ಮತ್ತು ಆತಂಕ



ಎಲ್.ಎಸ್.ಶೇಷಗಿರಿ ರಾಯರು

'ಯಾವ ಹಸ್ತಪ್ರತಿ' ಎಂದರೆ 'ಅದೇ ಶೇಷಗಿರಿ ರಾಯರ ಪುಸ್ತಕ, ಫೆಬ್ರುವರಿ 16ಕ್ಕೆ ಬಿಡುಗಡೆ' ಎಂದರು. ನಾನೂ ಕೂಡಲೇ ಶೇಷಗಿರಿ ರಾಯರಿಗೆ ಪೋನ್ ಮಾಡಿದೆ. ಅದಕ್ಕೆ ಅವರು ಬಹು ತಾಳ್ಮೆಯಿಂದಲೇ 'ನೋಡು ಫೆಬ್ರುವರಿ 16ಕ್ಕೆ ಭಾರತೀಯ ವಿದ್ಯಾಭವನದವರು ನನ್ನ ಎಂಬತ್ತನೆಯ ಹುಟ್ಟುಹಬ್ಬ ಆಚರಿಸುತ್ತಿದ್ದಾರೆ. ರಾಜ್ಯಪಾಲರಾದ ಟಿ.ಎನ್.ಚತುರ್ವೇದಿ ಬರುತ್ತಿದ್ದಾರೆ. ಹೀಗಿರುವಾಗ ಬರೀ ಕಾರ್ಯಕ್ರಮ ಎಂದರೆ ಹೇಗೆ? ನೀನು ನನ್ನ ಎಲ್ಲಾ ಪುಸ್ತಕ ಓದಿದ್ದಿ, ಒಂದು ಪುಸ್ತಕ ಬರೆ' ಎಂದರು. ಆದರೆ ಇನ್ನು ಬರೆಯುವುದು ಯಾವಾಗ, ಮುದ್ರಣ ಆಗುವುದು ಯಾವಾಗ ಎಂಟೇ ದಿನ ಉಳಿದಿದೆ. ಅವರ ಪ್ರೀತಿಗೆ ಇಲ್ಲ ಎನ್ನಲಾಗಲಿಲ್ಲ. ಒಂದು ದಿನ ಬರವಣಿಗೆ ಮತ್ತೊಂದು ದಿನ ಪ್ರೂಫ್ ಇನ್ನೊಂದು ದಿನ ಮುದ್ರಣ ಹೀಗೆ ಪುಸ್ತಕ ಸಿದ್ದವಾಗಿ ಬಿಡುಗಡೆಯೂ ಆಯಿತು. ನನಗೆ ಸಮಾಧಾನವೇ ಇಲ್ಲ. 'ಹೀಗೆಲ್ಲಾ ಪುಸ್ತಕ ಬರೆಯ ಬಾರದು' ಎಂದು ಅವರ ಬಳಿ ಹೇಳುತ್ತಲೇ ಇದ್ದೆ.

ಇದಾದ ಎರಡು ವರ್ಷಕ್ಕೆ ಅವರು ಉಡುಪಿಯಲ್ಲಿ ನಡೆದ 74ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದರು. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚಂದ್ರಶೇಖರ ಪಾಟೀಲರು ಪೋನ್ ಮಾಡಿ 'ನೀವು ಎಲ್.ಎಸ್.ಎಸ್ ಬಗ್ಗೆ ಒಂದು ಪುಸ್ತಕ ಬರೆಯುತ್ತೀರಂತೆ, ಅದನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತದೆ, ಆದಷ್ಟು ಬೇಗ ಹಸ್ತಪ್ರತಿ ಕೊಡಿ' ಎಂದರು. ಕೆಲವೇ ನಿಮಿಷದಲ್ಲಿ ಶೇಷಗಿರಿ ರಾಯರೇ ಪೋನ್ ಮಾಡಿ 'ನಿನಗೆ ಪುಸ್ತಕ ಸಮಾಧಾನವಾಗಿರಲಿಲ್ಲವಲ್ಲ. ಈ ಸಲ ತೃಪ್ತಿಯಿಂದ ಬರೆ' ಎಂದು ನಕ್ಕರು. ಈ ಸಲ ಅಧ್ಯಯನಕ್ಕೆ ಸಾಕಷ್ಟು ಅವಕಾಶ ಸಿಕ್ಕಿತು. ಪುಸ್ತಕ ಚೆನ್ನಾಗಿಯೂ ಬಂದಿತು. ಸಮ್ಮೇಳನದಲ್ಲಿ ಎಂ.ಎಚ್.ಕೃಷ್ಣಯ್ಯ ಅದನ್ನು ಬಿಡುಗಡೆ ಮಾಡಿದರು. ಅವರು ಮತ್ತು ಶೇಷಗಿರಿ ರಾಯರು ಮುಜುಗರವಾಗುವಂತೆ ನನ್ನನ್ನು ಹೊಗಳಿ ಸಂಕೋಚ ತಂದರು.

> ಕನ್ನಡ ಸಾಹಿತ್ಯಲೋಕದ ಹೆಸರಾಂತ ವಿಮರ್ಶಕ, ವಿದ್ವಾಂಸ ಎಲ್.ಎಸ್. ಶೇಷಗಿರಿ ರಾಯರ ಜನ್ಮಶತಮಾನೋತ್ಸವ ವರ್ಷವಿದು. ತೊಂಬತ್ತು ವರ್ಷಕ್ಕೂ ಮೀರಿದ ಘನತೆಯ ಜೀವನ ನಡೆಸಿದ ಇವರು 150ಕ್ಕೂ ಹೆಚ್ಚು ಕೃತಿಗಳೊಂದಿಗೆ ಏನಿಲ್ಲವೆಂದರೂ ಮೂವತ್ತು ಸಾವಿರ ಪುಟಗಳಿಗೂ ಮೀರಿದ ಬರವಣಿಗೆ ಕೃಷಿ ಮಾಡಿದ್ದಾರೆ...

ತೊಂಬತ್ತು ವರ್ಷಕ್ಕೂ ಮೀರಿದ ಘನತೆಯ ಜೀವನ ನಡೆಸಿದ ಶೇಷಗಿರಿ ರಾಯರು ಏನಿಲ್ಲವೆಂದರೂ ಮೂವತ್ತು ಸಾವಿರ ಪುಟಗಳಿಗೂ ಮೀರಿದ ಬರವಣಿಗೆಯನ್ನು ಮಾಡಿದ್ದಾರೆ. ಅವರ ಬರವಣಿಗೆ ಆರಂಭಿಸಿದ್ದು ಆಧುನಿಕ ಕನ್ನಡ ರೂಪುಗೊಂಡ ದಿನಗಳಲ್ಲಿ. ಆಗ ಇನ್ನೂ ವಿಮರ್ಶೆಯ ಸ್ವರೂಪ ನಿಖರವಾಗಿರಲಿಲ್ಲ. ಸಾಹಿತ್ಯದ ಪರಿಚಯ ಆಗಿನ ತುರ್ತು ಅಗತ್ಯವಾಗಿತ್ತು. ಅದನ್ನು ಶೇಷಗಿರಿ ರಾಯರು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಹೀಗಿದ್ದರೂ ನವೋದಯದ ದಿಗ್ಗಜರ ಕುರಿತು ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಗಟ್ಟಿತನ ಅವರಿಗೆ ಇತ್ತು ಎನ್ನುವುದನ್ನು ಗಮನಿಸಬೇಕು. ಪ್ರಗತಿಶೀಲರಲ್ಲಿ ಅನೇಕರು ಅವರಿಗೆ ವೈಯಕ್ತಿಕವಾಗಿ ಆಪ್ತರು. ಹೀಗಿದ್ದರೂ ಅವರು ಈ ಚಳವಳಿಯ ಮಿತಿಗಳನ್ನು ತೋರಿಸುವಲ್ಲಿ ಹಿಂದೆ ಬೀಳಲಿಲ್ಲ. ಶೇಷಗಿರಿ ರಾಯರು ನವ್ಯ ಬರಹಗಾರರ ಮಹತ್ವವನ್ನೂ ಗುರುತಿಸಿದರು. ಅದರ ಮಿತಿಗಳನ್ನು ಗುರುತಿಸಿದರು. ನವ್ಯ ಚಳವಳಿ ಏಕೆ ಕನ್ನಡದಲ್ಲಿ ವಿಫಲವಾಯಿತು ಎಂದು ಚರ್ಚಿಸಲು ಪ್ರಯತ್ನಿಸಿದವರಲ್ಲಿ ಶೇಷಗಿರಿ ರಾಯರೇ ಮೊದಲಿಗರು. ದಲಿತ, ಬಂಡಾಯ, ಮುಸ್ಲಿಂ ಸಾಹಿತ್ಯ, ಮಹಿಳಾ ಸಾಹಿತ್ಯ ಎಲ್ಲವನ್ನೂ ಅವರು ಮುಕ್ತ ಮನಸ್ಸಿನ ಸ್ವಾಗತಿಸಿ ಅದರ ಶಕ್ತಿಗಳನ್ನು ಗುರುತಿಸಿದಂತೆ ಮಿತಿಗಳ ಕುರಿತೂ ಬರೆದರು. ಶೇಷಗಿರಿ ರಾಯರು ವ್ಯಾಪಕವಾಗಿ ಪತ್ರಿಕೆಗಳಿಗೆ ಅಂಕಣಗಳನ್ನು ಬರೆದರು. ಹೀಗೆ ಬರೆಯುವಾಗ ಸಮಾಜದ ಎಲ್ಲಾ ವರ್ಗದವರಿಗೂ ತಮ್ಮ ಚಿಂತನೆಗಳು ತಲುಪುವಂತೆ ಬರೆದರು. ಸರಳತೆ ಬರಹದಲ್ಲಿದ್ದರೂ ಕೂಡ ಅವರು ಒಳನೋಟಗಳಲ್ಲಿ ಗಹನತೆಯನ್ನು ಬಿಟ್ಟು ಕೊಡಲಿಲ್ಲ.

2020ರ ಸುಮಾರಿಗೆ ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಾದೇಶಿಕ ಕಾರ್ಯದರ್ಶಿಗಳಾದ ಮಹಾಲಿಂಗೇಶ್ವರ ಭಟ್ ಅವರು ಕೇಂದ್ರ ಸಾಹಿತ್ಯ ಅಕಾಡಮಿ 'ಭಾರತೀಯ ಸಾಹಿತ್ಯ ನಿರ್ಮಾಪಕರು ಮಾಲಿಕೆ'ಗೆ ಶೇಷಗಿರಿರಾಯರ ಬಗ್ಗೆ ಪುಸ್ತಕ ಬರೆದು ಕೊಡುತ್ತೀರ' ಎಂದು ಕೇಳಿದರು. ನಾನು ಈಗಾಗಲೇ ಎರಡು ಪುಸ್ತಕ ಬರೆದಿದ್ದೇ, ಬೇಡ ಎಂದರೆ ಇದರ ಸ್ವರೂಪ ಬೇರೆ ಎಂದು ಅವರು ಒತ್ತಾಯಿಸಿದರು. ಆಗ ಶೇಷಗಿರಿ ರಾಯರು ಇರಲಿಲ್ಲ. ಅವರ ಮಡದಿ ಭಾರತಿ ಮೇಡಂ ಅದೇ ಪ್ರೀತಿಯಿಂದ ಪುಸ್ತಕಗಳನ್ನು ಕೊಟ್ಟು ಮಾರ್ಗದರ್ಶನ ನೀಡಿದರು. ಹೀಗೆ ನಾನು ಶೇಷಗಿರಿ ರಾಯರ ಬಗ್ಗೆ ಮೂರು ಪುಸ್ತಕಗಳನ್ನು ಬರೆದೆ. ಮೂರೂ ಭಿನ್ನವಾಗಿದ್ದಿರ ಜೊತೆಗೆ ಈ ಕುರಿತ ಅಧ್ಯಯನ ನನ್ನನ್ನು ಬೆಳೆಸಿತು. ಇದೂ ಕೂಡ ಒಂದು ರೀತಿಯಲ್ಲಿ ಶೇಷಗಿರಿ ರಾಯರು ನನ್ನ ಮೇಲಿಟ್ಟಿದ್ದ ಪ್ರೀತಿಯ ಕುರುಹು ಎನ್ನಬಹುದೇನೋ! ❖

ಒಂದು ಪಾದಯಾತ್ರೆ..

12ನೇ ಪುಟದಿಂದ..

ಇಂಥ ಅನಿಶ್ಚಿತತೆಯ ನಡುವೆಯೇ ಶಿಸ್ತು, ಕಲಿಕೆ ಮತ್ತು ಬದುಕು ಸಾಗುತ್ತದೆ ಎಂಬ ಸತ್ಯವನ್ನು ಈ ಹುಡುಗರಿಗೆ ತಿಳಿಸಬೇಕಿತ್ತು. ಹಾಗೇ ಮಾಡಿದೆವು. ಜೊತೆಗೇ ಕೊಂಡೊಯ್ದಿದ್ದ ಚರಕದಲ್ಲಿ ನೂಲನ್ನು ತೆಗೆಯುವ ಕೆಲಸವೂ ನಡೆಯಿತು' ಎಂದು ಟ್ರಸ್ಟ್‌ನ ಕಾರ್ಯದರ್ಶಿ ಸಂತೋಷ ಕೌಲಗಿ ಹೇಳಿದರು.

32ರ ಸುಮನಸ ಕೌಲಗಿಯವರನ್ನು ಈ ಹುಡುಗರು ಅಣ್ಣನೆಂದೇ ಭಾವಿಸಿದ್ದಾರೆ. ಇಂಗ್ಲೆಂಡ್‌ನ ಯೂನಿವರ್ಸಿಟಿ ಆಫ್ ಸಸ್ಸೆಕ್ಸ್‌ನ ಅಂತರರಾಷ್ಟ್ರೀಯ ಅಭಿವೃದ್ಧಿ ವಿಭಾಗದಲ್ಲಿ ಸ್ವರಾಜ್ಯ ಪರಿಕಲ್ಪನೆಯ ಬಗ್ಗೆಯೇ ಸಂಶೋಧನೆ ಮಾಡಿ ಪಿಎಚ್.ಡಿ ಪದವಿ ಪಡೆದಿದ್ದಾರೆ. ಅವರೂ ಪಾದಯಾತ್ರೆಯ ಭಾಗವಾಗಿದ್ದರು.

ಗಾಂಧೀಜಿಯ ವಿಚಾರಗಳಿಂದ ಪ್ರೇರಣೆ ಪಡೆದು, 60ರ ದಶಕದಲ್ಲಿ ಸಮಾಜಸೇವೆಯ ಆಶಯದೊಂದಿಗೆ ಟ್ರಸ್ಟ್ ಆರಂಭಿಸಿದ ಅವರ ತಾತ, 'ದಾದಾ' ಎಂದೇ ಪ್ರಖ್ಯಾತರಾದ ಸುರೇಂದ್ರ ಕೌಲಗಿ ಹಾಕಿಕೊಟ್ಟ ದಾರಿಯನ್ನೇ ಸುಮನಸ ಆಯ್ಕೆ ಮಾಡಿಕೊಂಡಿದ್ದಾರೆ. ಹೀಗೆ ಮೂರು ತಲೆಮಾರು ಕಾಲದ ಅಗತ್ಯಗಳಿಗೆ ತಕ್ಕಂತೆ ಸೇವೆಯ ವ್ಯಾಖ್ಯೆಯನ್ನು ಬದಲಾಯಿಸಿಕೊಳ್ಳುತ್ತಾ, ಟ್ರಸ್ಟ್‌ನ ಹೊಸ ರೂಪಗಳಿಗೆ ದಾಟಿಸುತ್ತಾ ಹಾಗೇ ಬದುಕುತ್ತಾ ಬರುತ್ತಿದ್ದಾರೆ. ಕುವೆಂಪು ಅವರ 'ಅನಿಕೇತನ' ಪದ್ಯ ನಿಮಗೆ ನೆನಪಾಗಲೇಬೇಕು.

ಪಾದಯಾತ್ರೆಯಿಂದ ವಿಷಯ ಬೇರೆಡೆಗೆ ಹೊರಳಿತು ಎನ್ನಿಸುತ್ತಿರಬಹುದು. ಹಾಗೇನಿಲ್ಲ. 'ಹೊಸ ಜೀವನ ದಾರಿ' ಎಂಬುದು ಕೌಲಗಿಯವರ ಮನೆ ಹೇಗೋ, ಈ ಆರು ಹುಡುಗರ ಮನೆಯೂ ಆಗಿಬಿಟ್ಟಿದೆ. ಮನೆಯ ಕುರಿತ ಭಾವ ಬಂಧಗಳು ಕಳಚಿ ಬೀಳುತ್ತಿರುವ ಹೊತ್ತಿನಲ್ಲಿ ಅದನ್ನು ಪುನರುಜ್ಜೀವಿಸುವ ನಿದರ್ಶನ ಇಲ್ಲಿ ಇದೆ ಎಂಬುದೇ ವಿಶೇಷ.

ಈ ಹುಡುಗರು ಆಗ ಮನೆ, ಶಾಲೆ ಬಿಟ್ಟು ಬಂದವರು. ಈಗ ಹೊಸ ಮನೆ, ಹೊಸ ಶಾಲೆಯಲ್ಲಿ ನೆಲೆ ನಿಂತಿದ್ದಾರೆ. ಇದು ಸಾಂಪ್ರದಾಯಿಕ ತರಗತಿ,



ಗಾಣದಿಂದ ಎಣ್ಣೆ ತೆಗೆಯುತ್ತಿರುವ ವಿದ್ಯಾರ್ಥಿಗಳು

ಬೆಲ್ಲು, ಸಮವಸ್ತ್ರ, ಬೋಧನೆ–ತರಗತಿಯುಳ್ಳ ಶಾಲೆಯಲ್ಲ. ಸ್ವಾವಲಂಬನೆ, ಅಹಿಂಸೆ, ಬೇಡಿಕೆ–ಪೂರೈಕೆಗಳ ನಡುವಿನ ವ್ಯತ್ಯಾಸವನ್ನು ಕಡಿಮೆ ಮಾಡುವಂಥ ಬದುಕು, ಯಂತ್ರಗಳನ್ನು ಕಳಚಿ ಕೈಗಳನ್ನೇ, ಗುಡಿ ಕೈಗಾರಿಕೆಯನ್ನೇ ನೆಚ್ಚಿಕೊಂಡು ಸಾಗಬೇಕೆಂಬ ಸಾತ್ವಿಕ ಹಟದ ನಿಲುವು. ಅಂಥ ನಿಲುವನ್ನು ಗಟ್ಟಿಗೊಳಿಸಿಕೊಳ್ಳುವತ್ತ ನಡೆದ ನಡಿಗೆ. ಈ ನಡಿಗೆಗೆ ಮೂನ್‌ಫ್ರಾಗ್ ಸಂಸ್ಥೆಯ ಕಾರ್ಪೊರೆಟ್ ಸಾಮಾಜಿಕ ಜವಾಬ್ದಾರಿಯ ನಿಧಿಯ ನೆರವೂ ಇದೆ.

'ಜನಪದ ಸೇವಾ ಟ್ರಸ್ಟ್' ನೆರಳಿನಲ್ಲಿರುವ 'ಜೀವನಶಾಲೆ'ಯ ವಿಸ್ತೃತ ರೂಪವೆಂಬಂತೆ, ಎರಡು ವರ್ಷದ ಹಿಂದೆ ಅರಳಿ ನಿಂತಿರುವ 'ಹೊಸ ಜೀವನ ದಾರಿ'ಯ ಪ್ರಯೋಗಪಾಠಗಳಲ್ಲಿ ಪಾದಯಾತ್ರೆಯೂ ಒಂದು. ಮಾನವ ಅಭಿವೃದ್ಧಿ, ಪರಿಸರ ಮತ್ತು ಜೀವನಶೈಲಿಗೆ ಇರುವ ಸಂಬಂಧಾಂತರಗಳನ್ನು ಸುಸ್ಥಿರ ನೆಲೆಯಲ್ಲಿ ವಿವರಿಸಿಕೊಳ್ಳಲು ಕೈದೀವಿಗೆಯಂಥ ಶಾಲೆ.

'ಇದನ್ನು ಮೊದಲ ಬಾರಿಗೆ ನೋಡಿದವರಿಗೆ ಇದರಿಂದ ಏನು ಪ್ರಯೋಜನ ಎಂಬ ನಕಾರಾತ್ಮಕ ಭಾವನೆ ಬರಬಹುದು. ಆದರೆ, ಇದು ದೀರ್ಘಕಾಲದ ನಡಿಗೆಯನ್ನೇ ನೆಚ್ಚಿಕೊಂಡ ಕಲಿಕೆಯ ದಾರಿ. ಈ ಹುಡುಗರಿಗೆ ಕೊಂಚ ಸ್ಟೈಫಂಡ್, ಕೊಂಚ ಉಳಿತಾಯ. ಉಳಿಸಿದ್ದನ್ನೇ ಮತ್ತೆ ಬಂಡವಾಳವಾಗಿಸಿಕೊಳ್ಳುವ ಪಾಠಗಳೂ ಇವೆ.

'ಪರಿಚಯ ಪತ್ರ, ಯಾರ ಕಣ್ಗಾವಲೂ ಇಲ್ಲದೆ, ಜಗವನ್ನು ಸುತ್ತಿ ಬರಬಲ್ಲ, ವ್ಯವಹರಿಸಬಲ್ಲ ಆತ್ಮವಿಶ್ವಾಸ ಈ ಎರಡು ವರ್ಷಗಳಲ್ಲಿ ಮೂಡಿದೆ. ನಾಲ್ಕು ವರ್ಷಕ್ಕೆಂದು ರೂಪಿಸಿದ್ದ ಕೋರ್ಸ್ ಎರಡೇ ವರ್ಷಕ್ಕೆ ಮುಗಿಯುವಂತಾಗಿದೆ' ಎಂದು ಸಂತೋಷ ಕೌಲಗಿ ಅಚ್ಚರಿ ಪಡುವಷ್ಟರ ಮಟ್ಟಿಗೆ ಕೇಂದ್ರ ಮುನ್ನಡೆದಿದೆ.

ಬೇಡಿಕೆ, ಉತ್ಪಾದನೆ, ಮಾನವ–ಪರಿಸರ ಸಂಪನ್ಮೂಲಗಳ ಬಳಕೆ, ಯಾಂತ್ರೀಕರಣ, ಅಭಿವೃದ್ಧಿ ಎಲ್ಲವೂ ಅತಿಯಾಗಿರುವ ಕಾಲಘಟ್ಟದಲ್ಲಿ, 'ಈ ಸ್ವರಾಜ್ಯದ ಪರಿಕಲ್ಪನೆಯ ಕಲಿಕೆ–ಪಾದಯಾತ್ರೆಯು ನಿಧಾನಗತಿಯಲ್ಲಿದೆ. ಪರಿಣಾಮಗಳು ಎದ್ದು ಕಾಣುವುದೇ ಇಲ್ಲವಲ್ಲ' ಎಂದು ಅನ್ನಿಸಿದರೆ ಟ್ರಸ್ಟ್‌ನ ಎಲ್ಲರೂ, 'ಸ್ವಲ್ಪ ಕಾಯಿರಿ. ನಾವೂ ಕಾಯುತ್ತಿದ್ದೇವೆ' ಎಂದು ತಣ್ಣಗೆ ನಗುತ್ತಾರೆ. ಹಾಗೆ ಕಾಯುತ್ತಲೇ ಹಲವರ ಬದುಕುಗಳು ಬದಲಾದ ನಿದರ್ಶನಗಳು ಅವರೊಂದಿಗೆ ಇವೆ. ಈಗ ಎಲ್ಲರೂ ದಿಢೀರ್ ಫಲಿತಾಂಶ ಬಯಸುತ್ತಿದ್ದಾರೆ. ಆದರೆ, ಜನಪದ ಸೇವಾ ಟ್ರಸ್ಟ್‌ನ ಎಲ್ಲರೂ 'ಹೊಸ ಜೀವನ ದಾರಿಯಲ್ಲಿ ಫಲಿತಾಂಶ ಬರುವ ವೇಳೆಯಲ್ಲೇ ತಾನಾಗೇ ಬರಲಿ' ಎಂದು ತಮ್ಮ ಕಾಯಕದಲ್ಲಿ ತೊಡಗಿದ್ದಾರೆ. ಈ ಹುಡುಗರೂ ಹೊಸ ಕಾಲದ ಎಲ್ಲ ಭ್ರಮೆಗಳನ್ನು ಕಳಚಿಕೊಳ್ಳುತ್ತಿದ್ದಾರೆ. ಹೊಸ ಜೀವನ ದಾರಿಯ ಆಶಾವಾದ ಅವರ ಕಣ್ಣು, ಪಾದಗಳಲ್ಲಿದೆ.

ಸಂ:9663406366



'ಹೊಸ ಜೀವನ ದಾರಿ'ಯ ವಿದ್ಯಾರ್ಥಿಗಳು

ಜೀತದಿಂದ ಮುಕ್ತಿ...

12ನೇ ಪುಟದಿಂದ...

ಜೀತ ಪದ್ಧತಿಯಿಂದ ಅವರನ್ನು ಹೊರತರಲು ಎಲ್ಲರೂ ಸಮನ್ವಯದಿಂದ ಕೆಲಸ ಮಾಡಬೇಕು' ಎಂದು ಆರ್‌ಡಿಪಿಆರ್ ಇಲಾಖೆ ಮಾಜಿ ಆಯುಕ್ತೆ ಪ್ರಿಯಾಂಕಾ ಮೇರಿ ಫ್ರಾನ್ಸಿಸ್ ಹೇಳುತ್ತಾರೆ.

ಟ್ರಸ್ಟ್‌ನ ಅಧ್ಯಕ್ಷರಾಗಿ ಆಯ್ಕೆಯಾದ ಮಾರಪ್ಪ ಶಿಕ್ಷಣ ತೀರಾ ಅಗತ್ಯ ಎಂದು ಭಾವಿಸುತ್ತಾರೆ. 'ಜೀತ ಪದ್ಧತಿ ಮತ್ತು ಈ ಜಾಲದಲ್ಲಿ ಹೇಗೆ ಸುಲಭವಾಗಿ ಸಿಕ್ಕಿಹಾಕಿಕೊಳ್ಳಬಹುದು ಎಂಬ ಬಗ್ಗೆ ಅರಿವು ಮೂಡಿಸಲು ಬಯಸುತ್ತೇನೆ' ಎನ್ನುತ್ತಾರೆ ಮಾರಪ್ಪ.



'ನಾವು ಮದುವೆಯಾಗಲು ಬಯಸಿದಾಗ ಇಟ್ಟಿಗೆಗೂಡಿನ ಮಾಲೀಕರು ವಿವಾಹಕ್ಕೆ ತಗಲುವ ವೆಚ್ಚವೆಲ್ಲವನ್ನೂ ತಾವೇ ಭರಿಸುವುದಾಗಿ ಹೇಳಿದರು. ಮದುವೆಗೆ ₹20,000 ಖರ್ಚಾಗಿತ್ತು. ಕೊನೆಗೆ 'ಸಾಲದ ಮೊತ್ತ ₹80,000ಕ್ಕೆ ಏರಿಕೆಯಾಗಿದೆ. ಈ ಸಾಲವನ್ನು ತೀರಿಸಲು ಹತ್ತು ವರ್ಷಗಳು ಬೇಕಾಗುತ್ತವೆ' ಎಂದು ಹೇಳುತ್ತಿದ್ದರು' ಎಂದು ಮಾರಪ್ಪ ಮತ್ತು ಪೂರ್ಣಿಮಾ ಆ ದಿನಗಳನ್ನು ನೆನಪು ಮಾಡಿಕೊಂಡರು.

ಪೂರ್ಣಿಮಾ ಮತ್ತು ಮಾರಪ್ಪ ಅವರ ಪ್ರಕರಣದಲ್ಲಿ ಮಾಲೀಕರಿಗೆ ಶಿಕ್ಷೆ ವಿಧಿಸಲಾಯಿತು. ಆದಾಗ್ಯೂ, ಇದು ಅತ್ಯಂತ ಅಪರೂಪ. ಹೆಚ್ಚಿನ ಸಂದರ್ಭಗಳಲ್ಲಿ, ಸಂತ್ರಸ್ತರು ಮಾಲೀಕರ ಸಮೀಪದಲ್ಲೇ ವಾಸಿಸುತ್ತಾ ಮತ್ತೆ ಮತ್ತೆ ಶೋಷಣೆಗೆ ಗುರಿಯಾಗುತ್ತಾರೆ. ಹೀಗಾಗಿ ಸಂಪೂರ್ಣ ಮತ್ತು ಸುಸ್ಥಿರ ಪುನರ್ವಸತಿ ಅತ್ಯಗತ್ಯ.

ಜೀತ ಪದ್ಧತಿ ನಿರ್ಮೂಲನೆ ವಿಚಾರದಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸಂವೇದನಾಶೀಲರನ್ನಾಗಿ ಮಾಡುವುದು ಮುಖ್ಯ. ಈ ಪ್ರಕ್ರಿಯೆ ನಿರಂತರವಾಗಿ ನಡೆಯುವಂತೆ ನೋಡಿಕೊಳ್ಳುವುದು ಆದ್ಯತೆಯಾಗಬೇಕು. ಇದರ ಜೊತೆಗೆ, ವಿವಿಧ ಜಿಲ್ಲೆಗಳಲ್ಲಿ ಜೀತದಿಂದ ಮುಕ್ತರಾದವರು ಸಂಘಟಿತರಾಗುವಂತೆ ಮಾಡಬೇಕು ಹಾಗೂ ಅವರ ಸಂಘಟನೆಯನ್ನು ಬಲಪಡಿಸಬೇಕು. ಇನ್ನೊಂದೆಡೆ, ಮತ್ತಷ್ಟು ಜೀತದಾಳುಗಳನ್ನು ಸಂಪರ್ಕಿಸುವ ಕೆಲಸವಾಗಬೇಕು.


'ಜೀತ ಪದ್ಧತಿಯು ನನ್ನ ಜೀವಿತಾವಧಿಯಲ್ಲಿಯೇ ಸಂಪೂರ್ಣವಾಗಿ ನಿರ್ಮೂಲನೆಯಾಗುವುದನ್ನು ನಾನು ನೋಡಬೇಕು. ಇದಕ್ಕಾಗಿ ನಾನು ನನ್ನ ಅನುಭವವನ್ನು ಹಂಚಿಕೊಳ್ಳಲು ಬಯಸುತ್ತೇನೆ' ಎಂದು ಮಾರಪ್ಪ ಹೇಳುತ್ತಾರೆ.

ಅನುವಾದ:ಕೀರ್ತಿಕುಮಾರಿ ಎಂ.

ಮೊದಲ ಓದು

ರಾಜಮಾತೆಯ ಸಾಹಸ ಕಥನ

'ಪುನರ್ವಸು' ಕಾದಂಬರಿಯಿಂದ ಜನಪ್ರಿಯರಾಗಿ, 'ಚೆನ್ನಾಭೈರಾದೇವಿ' ಕೃತಿಯೊಂದಿಗೆ ಕನ್ನಡ ಸಾಹಿತ್ಯಲೋಕದಲ್ಲಿ ತಮ್ಮದೇ ಛಾಪು ಮೂಡಿಸಿದ ಗಜಾನನ ಶರ್ಮರ ನೂತನ ಕಾದಂಬರಿ 'ರಾಜಮಾತೆ ಕೆಂಪನಂಜಮ್ಮಣ್ಣಿ'. ವಿದ್ಯುತ್ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿರುವ ಲೇಖಕ ತಾವು ಕೆಲಸ ಮಾಡಿದ ಇಲಾಖೆಯ ವಿಷಯವನ್ನೇ ಕಾದಂಬರಿಯ ಕಥಾವಸ್ತುವನ್ನಾಗಿ ಆಯ್ದುಕೊಂಡಿದ್ದಾರೆ. 1900 ದಶಕದಲ್ಲಿಯೇ ಕರ್ನಾಟಕದಲ್ಲಿ ಬೃಹತ್ ವಿದ್ಯುತ್ ಸ್ಥಾವರ ಕಟ್ಟಿನಿಲ್ಲಿಸಿದ್ದ ಮೈಸೂರಿನ ಸಂಸ್ಥಾನದ ರೀಜೆಂಟ್ ಆಗಿದ್ದ ರಾಜಮಾತೆ ಕೆಂಪನಂಜಮ್ಮಣ್ಣಿ ಅವರ ಬದುಕೇ ಈ ಕೃತಿಯ ಹೂರಣ. ಅವರು ಆ ಕಾಲಘಟ್ಟದಲ್ಲಿಯೇ ಹೇಗೆ ವಿದ್ಯುತ್ ಸ್ಥಾವರ ನಿರ್ಮಿಸಿದರು, ದೇಶದಲ್ಲಿಯೇ ಮೊದಲ ವಿದ್ಯುತ್ ಇಲಾಖೆ ಹುಟ್ಟುಹಾಕಿದರು ಎಂಬ ಸಂಶೋಧನಾತ್ಮಕ ವಿಚಾರಗಳ ಜೊತೆಗೆ ಕಥನ ಸಾಗುತ್ತದೆ.



ಪು: 416 ₹495


ರಾಜಮಾತೆ ಕೆಂಪನಂಜಮ್ಮಣ್ಣಿ
ಲೇ: ಗಜಾನನ ಶರ್ಮ
ಪ್ರ: ಅಂಕಿತ ಪುಸ್ತಕ
ಸಂ:90919190502

'ಬಂಗಾಳದ ಚತುರೆಯೊಬ್ಬಳು ಮೈಸೂರಿನ ಅರಮನೆಯ ಆಶ್ರಯ ಪಡೆದ ಪರಿಣಾಮದಿಂದಾಗಿಯೇ ನಮ್ಮ ರಾಷ್ಟ್ರಗೀತೆ ಆ ರಾಗರೂಪ ಪಡೆದದ್ದು! ತಿರುವಾಂಕೂರಿನ ಆಡಳಿತ ನೆಲೆ ನೀಡದ ದಲಿತವೈದ್ಯನಿಗೆ ಮೈಸೂರು ಆಶ್ರಯ ಕೊಟ್ಟ ಪರಿಣಾಮವೇ ಸ್ವಾಮಿ ವಿವೇಕಾನಂದರು ಸಿಡುಬುರೋಗದಿಂದ ಬಿಡುಗಡೆ ಪಡೆದು ಶಿಕಾಗೋಗೆ ಹೋಗಲು ಸಾಧ್ಯವಾದದ್ದು. ಇಂಥ ಅದೆಷ್ಟೋ ಅಪರೂಪದ ಘಟನೆಗಳ ಹಿಂದೆ ನಿಂತಿದ್ದ ರಾಣಿ ಕೆಂಪನಂಜಮ್ಮಣ್ಣಿಯವರ ಹೃದಯಸ್ಪರ್ಶಿ ಜೀವನಗಾಥೆ ಈ ಕೃತಿ' ಎಂದು ಕೆ.ಎನ್.ಗಣೇಶಯ್ಯ ಕೃತಿಯ ಬೆನ್ನುಡಿಯಲ್ಲಿ ಬರೆದಿದ್ದಾರೆ.

ಮೈಸೂರು ಮಹಾರಾಜರ ಕಲ್ಕತಾ ಭೇಟಿಯೊಂದಿಗೆ ಕಾದಂಬರಿ ಪ್ರಾರಂಭವಾಗುತ್ತದೆ. ಕೃತಿಯ ಸ್ವರೂಪ ಜೀವನ ಚರಿತ್ರೆಯಂತಿಲ್ಲ. ರಾಣಿಯ ಬದುಕನ್ನು ನೆಪವಾಗಿಟ್ಟುಕೊಂಡು ಲೇಖಕ ಸಾಕಷ್ಟು ಐತಿಹಾಸಿಕ ವಿಷಯಗಳನ್ನು ಹೇಳುತ್ತ ಹೋಗುತ್ತಾರೆ. ಬ್ರಿಟಿಷರ ಆಳ್ವಿಕೆಯಲ್ಲಿ ರಾಜಮನೆತನಗಳು ಅನುಭವಿಸಿದ್ದ ನೋವು, ಹಿಂಸೆಯ ಕಥನಗಳು ಕೃತಿಯಲ್ಲಿದೆ. ನಾವು ಕೇಳಿರದ ಸಾಕಷ್ಟು ವಿಷಯಗಳನ್ನು ವಿಸ್ಮಯಕಾರಿಯಾಗಿ ನಿರೂಪಿಸಿದ್ದಾರೆ. ಅಂದಿನ ಕಾಲಘಟ್ಟದ ಅನೇಕ ಆಗುಹೋಗುಗಳ ನಡುವೆ ಮೈಸೂರು ಸಾಮ್ರಾಜ್ಯದಲ್ಲಿ ನಡೆದ ವಿದ್ಯುತ್ ಕ್ರಾಂತಿಯ ಕಥೆ ತೆರೆದುಕೊಳ್ಳುತ್ತ ಹೋಗುತ್ತದೆ.

ಈ ಕೃತಿಯ ವಿಷಯ ಗಂಭೀರವಾಗಿದ್ದು, ಐತಿಹಾಸಿಕ ಕಾದಂಬರಿಯ ರೂಪದಲ್ಲಿದೆ. ಆದರೆ ಕಥನ ನಿರೂಪಣೆಯಿಂದಾಗಿ ಗಹನವಾದ ಇತಿಹಾಸವನ್ನು ಓದುತ್ತಿದ್ದೇವೆ ಎಂಬ ಭಾವನೆ ಬರುವುದಿಲ್ಲ. ಅಷ್ಟರ ಮಟ್ಟಿಗೆ ಬರವಣಿಗೆ ಸರಳವಾಗಿದೆ.

ಆಡಳಿತದಲ್ಲಿನ ಅನುಭವಗಳು



ಪು: 300 ₹400

ಆಡಳಿತದ ಅಂಗಳದಲ್ಲಿ
ಲೇ: ಟಿ. ತಿಮ್ಮೇಗೌಡ
ಪ್ರ: ಜೀವನ್ಮುಖಿ ಪ್ರಕಾಶನ
ಸಂ: 98868 33055

ಇದೊಂದು ಅರ್ಧ ಶತಮಾನದ ಹಿಂದೆ ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದ ಘಟನೆ. ಚುನಾವಣಾ ಸಂದರ್ಭದಲ್ಲಿ ಮತಗಟ್ಟೆ ಅಧಿಕಾರಿಯೊಬ್ಬರು ಬಹಿರ್ದೆಸೆಗೆ ಹೋದ ಸಂದರ್ಭದಲ್ಲಿ ಜೋಪಾನವಾಗಿಟ್ಟುಕೊಳ್ಳುವ ಉದ್ದೇಶದಿಂದ ತಮ್ಮೊಂದಿಗೆ ಮತಪತ್ರಗಳನ್ನೂ ಕೊಂಡೊಯ್ದಿದ್ದರು. ಆದರೆ ಮರಳುವಾಗ ಮಾತ್ರ, ಅದನ್ನು ಹೊಲದಲ್ಲೇ ಮರೆತು ಬಂದಿದ್ದರು. ನಂತರ ಏನಾಯಿತು ಎಂಬ ಸ್ವಾರಸ್ಯಕರ ಸಂಗತಿಗೆ ಉತ್ತರ ನಿವೃತ್ತ ಐಎಎಸ್ ಅಧಿಕಾರಿ ಟಿ. ತಿಮ್ಮೇಗೌಡ ಅವರ ತಮ್ಮ ಆಡಳಿತದ ಅನುಭವದ ಮೂಸೆಯಿಂದ ರಚಿಸಿರುವ 'ಆಡಳಿತದ ಅಂಗಳದಲ್ಲಿ' ಕೃತಿಯಲ್ಲಿದೆ.

ಮಂಡ್ಯ ತಾಲ್ಲೂಕಿನ ಮಂಗಲ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದ ಟಿ. ತಿಮ್ಮೇಗೌಡ ಅವರು ಸರ್ಕಾರಿ ವೃತ್ತಿಯಲ್ಲಿ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳನ್ನೂ ಒಳಗೊಂಡು ರಾಜ್ಯದ ಉದ್ದಗಲದಲ್ಲಿ ಕೆಲಸ ಮಾಡಿದವರು. ಉಪ ವಿಭಾಗಾಧಿಕಾರಿಯಾಗಿ ನೌಕರಿ ಆರಂಭಿಸಿದ ಇವರು, ನಂತರ ಸರ್ಕಾರದ ವಿವಿಧ ಹಂತಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿದವರು. ಹೀಗೆ ತಮ್ಮ ಅನುಭವದ ಹಾದಿಯಲ್ಲಿ ಎದುರಾದ ಸವಾಲು, ಅನುಭವಗಳನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಕೃತಿಯಲ್ಲಿ ತಿಮ್ಮೇಗೌಡರ ಬಾಲ್ಯದ ನೆನಪುಗಳೊಂದಿಗೆ ಆರಂಭವಾಗಿ, ವಿದ್ಯಾರ್ಥಿ ದಿಸೆ, ಉಪನ್ಯಾಸಕ ಹುದ್ದೆ ಹಾಗೂ ನಂತರ ಕಂದಾಯ ಇಲಾಖೆಯ ವಿವಿಧ ಹುದ್ದೆಗಳ ಪರಿಚಯ ಮತ್ತು ಅಲ್ಲಿನ ಅನುಭವಗಳು ದಾಖಲಾಗಿವೆ. ಕರ್ನಾಟಕ ಸರ್ಕಾರದ ಆಡಳಿತ ಸೇವೆ, ಭಾರತೀಯ ಆಡಳಿತ ಸೇವೆ, ರಾಜ್ಯಮಟ್ಟದ ಆಡಳಿತ ಅಧಿಕಾರಿಯಾಗಿನ ಅನುಭವಗಳೂ ಇದರಲ್ಲಿವೆ.

ಇಷ್ಟು ಮಾತ್ರವಲ್ಲ, ಕಾವೇರಿ ಜಲ ವಿವಾದವನ್ನೂ ಸವಿವರವಾಗಿ ಈ ಕೃತಿಯಲ್ಲಿ ದಾಖಲಿಸಿದ್ದಾರೆ. ಕೇವಲ ವೃತ್ತಿಯ ಅನುಭವವಷ್ಟೇ ಅಲ್ಲದೆ, ಭ್ರಷ್ಟಾಚಾರದ ಸ್ವರೂಪವನ್ನೂ ಸೂಕ್ಷ್ಮವಾಗಿ ದಾಖಲಿಸಿದ್ದಾರೆ. ಈ ಕೃತಿಗೆ ಡಾ. ವೈ.ಕೆ. ಪುಟ್ಟಸೋಮೇಗೌಡ ಮುನ್ನುಡಿಯನ್ನು ದಾಖಲಿಸಿದ್ದಾರೆ, ಗೊ.ರು. ಚನ್ನಬಸಪ್ಪ ಅವರ ಶುಭ ಹಾರೈಕೆ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಅವರ ಬೆನ್ನುಡಿಯು ಕೃತಿಗೆ ಸುಂದರ ಚೌಕಟ್ಟಾಗಿದೆ.

ಆರ್ದ್ರಭಾವ ಹುಟ್ಟಿಸುವ ಕಥೆಗಳು

ಪ್ರಕೃತಿಯ ಸಣ್ಣ ಸಣ್ಣ ಸಂಗತಿಗಳು ಇಲ್ಲಿ ರೂಪಕಗಳಾಗಿವೆ. ಈ ರೂಪಕಗಳು ಕಥೆ ಹೇಳುತ್ತಾ ಸಾಗುತ್ತವೆ. ಕಥೆಗಾರ್ತಿಯ ಧ್ವನಿ ಹಾಗೂ ಈ ರೂಪಕಗಳೂ ಸೇರಿ ಓದುಗರ ಎದೆಯಲ್ಲಿ ಆರ್ದ್ರಭಾವವನ್ನು ಹುಟ್ಟಿಸುತ್ತವೆ. ಪ್ರಮುಖವಾಗಿ ಗುಡ್ಡ, ನದಿ ಹಾಗೂ ತೊರೆಗಳೆಲ್ಲ ಹೆಣ್ಣು ಹಾಗೂ ಶೋಷಿತರ ಕಥನಗಳಿಗೆ ದನಿಗೂಡಿಸಿರುವುದು ಸ್ಮಿತಾ ಅಮೃತರಾಜ್ ಅವರ ಕಥಾಸಂಕಲನ 'ಹಾಯ್ ಮೆಟಾಯ್' ಹೆಗ್ಗಳಿಕೆ.

ಭೂತ, ನೇಮ, ಕೋಲದ ಕಥೆಯನ್ನು ಅನಾವರಣ ಮಾಡುತ್ತಲೇ ಸಾಮಾಜಿಕ ಕಾರಣಗಳಿಗಾಗಿ ಸೊಸೆಯಾಗಿ ಮನೆಯೊಳಗೆ ಸೇರದೇ ಹೊರಗೆ ಉಳಿದ ಹೆಣ್ಣೊಬ್ಬಳ ಆಕ್ರಂದನವೂ ಕಾಲಾನಂತರದಲ್ಲಿ ದೈವವಾಗಿ ನಿಂತ ಉಪಕಥೆಯೊಂದಿದೆ. ಉಪಪತ್ನಿಯ ಸ್ಥಾನ ಎಲ್ಲ ಕಾಲಕ್ಕೂ ಹೇಗಿರುತ್ತದೆ?, ಸಂದರ್ಭ ಅವಳನ್ನು ಬಳಸಿಕೊಂಡರೂ, ಸಾಮಾಜಿಕವಾಗಿ ಹೇಗೆಲ್ಲ 'ಹೊರಗಿನವಳು' ಎಂಬ ಭಾವನೆಯನ್ನು ತರಿಸುತ್ತದೆ ಎಂಬುದನ್ನು ಸವಿಸ್ತಾರವಾಗಿ ಹೇಳುತ್ತ 'ಬಿರೆತಿ ಭೂತ'ದ ಕತೆ ಓದುಗರ ಎದೆಯೊಳಗೆ ವಿಷಾದ ಭಾವವನ್ನು ಮೂಡಿಸುತ್ತದೆ.



ಪು: 174 ₹225

ಹಾಯ್ ಮೆಟಾಯ್
ಲೇ: ಸ್ಮಿತಾ ಅಮೃತರಾಜ್ ಸಂಪಾಜೆ
ಪ್ರ: ನಿವೇದಿತ ಪ್ರಕಾಶನ
ಸಂ: 9448733323

ಬಹುತೇಕ ಕಥೆಗಳಲ್ಲಿ ಸಂಸಾರದ ಚೌಕಟ್ಟಿನಲ್ಲಿದ್ದುಕೊಂಡು ಸುಖ ಕಾಣದ ಹೆಣ್ಣುಮಕ್ಕಳ ನೋವಿದೆ. ಅವಿವಾಹಿತೆ ಹಾಗೂ ವಿಧವೆಯೊಬ್ಬಳು ಬದುಕಿನ ಹಲವು ಮಜಲುಗಳಲ್ಲಿ ಎದುರಿಸುವ ಸವಾಲುಗಳನ್ನು ಬಹಳ ಮಾರ್ಮಿಕವಾಗಿ ಕಟ್ಟಿಕೊಟ್ಟಿದ್ದಾರೆ. ನಿಸರ್ಗದ ಹಲವು ಸಂಗತಿಗಳು ಹಾಗೂ ಅರೆ ಭಾಷೆಯೂ ಇಲ್ಲಿ ಕಥೆಗಾರನ ಧ್ವನಿಯಷ್ಟೆ ಸಶಕ್ತವಾಗಿ ಮೂಡಿ ಬಂದಿದೆ. ಅಷ್ಟೆ ಅಲ್ಲದೇ ನಿಸರ್ಗದ ವಿಕೋಪಗಳೇ ಕಥೆಗೆ ಅಂತ್ಯವನ್ನು ಒದಗಿಸಿದೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ವರ್ಣಶಿಲ್ಪರ್ಷಿ

ವರ್ಣಶಿಲ್ಪಿ ಎಂದರೆ ವರ್ಣಚಿತ್ರಕಾರ. ಕುವೆಂಪು ಅವರು ಮೈಸೂರಿನ ದಸರಾ ಪ್ರದರ್ಶನದಲ್ಲಿ ನಡೆದ ರೋರಿಕ್ ಚಿತ್ರಕಲಾ ಪ್ರದರ್ಶನಕ್ಕೆ ಹೋಗಿದ್ದರು. ಆ ಅದ್ಭುತ ವರ್ಣಚಿತ್ರಗಳನ್ನು ನೋಡಲು ಪ್ರತಿದಿನ ಹೋಗಿ ಆ ರಸ ಸೃಷ್ಟಿಗಳಲ್ಲಿ ಲೀನವಾಗಿ ಹೋಗುತ್ತಿದ್ದರು. ಆ ಆನಂದವನ್ನು 'ನಿನ್ನ ಹೃದಯ ಸಂದರ್ಶನಕ್ಕೆ. ರಸಕಲಾ ಸಂಕೇತದ ಆ ದಿವ್ಯ ದರ್ಶನಕ್ಕೆ ಸಮಹೃದಯನಾದ ನಾನು ಬರುತ್ತಿದ್ದೆ' ಎಂದು ಒಂದು ವರ್ಷದ ನಂತರ ನೆನೆದುಕೊಳ್ಳುತ್ತ ಕವನ ರಚಿಸಿದರು.

ರಷ್ಯಾದ ನಿಕೋಲಾಸ್ ರೋರಿಕ್ ಹಿಮಾಲಯ ವಾಸಿಯಾಗಿದ್ದು, ಅವರು ಕಂಡ ಆ ಪರ್ವತದ ಭೂಮಾನುಭೂತಿಯನ್ನು ವರ್ಣಗಳಲ್ಲಿ ಕಡೆದಿಟ್ಟಿದ್ದರು. ಅದನ್ನು ನೋಡಿದ ಕುವೆಂಪು 'ಆಹ, ಏನು ಕಲೆ ನಿನ್ನದಯ್: ವಿಶ್ವತಾ ಸಂಸ್ಪರ್ಶಿ, ಮೇಣ್ ಬ್ರಹ್ಮದರ್ಶಿ!' ಎಂದು ಕಾವ್ಯ ರಚಿಸಿದರು. ಅವರಿಗೆ ರೋರಿಕ್ ಖುಷಿಯಾಗಿ ಕಂಡರು. ಆ ಭಾವದಲ್ಲಿ 'ವರ್ಣಶಿಲ್ಪರ್ಷಿ' ಪದ ರಚಿಸಿ ಹೀಗೆ ಬಣ್ಣಿಸಿದರು :

'ಬಗೆಗೆ ಪೊತ್ತಿತೊ ನಿನ್ನ
ಅಂದಿನ ಚಿತ್ರಪ್ರದರ್ಶನದ ದರ್ಶನಂ,
ರೋರಿಕ್, ವಿದೇಶೀಯ ಹೇ ವರ್ಣಶಿಲ್ಪರ್ಷಿ!'

ಮಮತಾಫಣಿ

ಕುವೆಂಪು ಅವರು 'ಮಮತಾಫಣಿ' ಪದ ರಚಿಸಿ ನನ್ನದು ಎಂಬ ಅಹಂ, ಸ್ವಾರ್ಥಪರತೆಯನ್ನು ಸರ್ಪಕ್ಕೆ ಹೋಲಿಸಿದ್ದಾರೆ. ಅವರು ಅಹಂಕಾರ ಅಳಿಯುವ ತನಕ ತುಳಿ ಎಂದು ಶ್ರೀಗುರು ಚರಣವನ್ನು ಧ್ಯಾನಿಸಿದ್ದಾರೆ.

ಗೋವಿಂದನು ಕಾಳಿಯ ಸರ್ಪವನ್ನು ತುಳಿತುಳಿದು ನಾಶಮಾಡಿದ. ಹಾಗೆ ಶ್ರೀಗುರುವೆ ನನ್ನನ್ನು ತುಳಿ, ನನ್ನಲ್ಲಿರುವಷ್ಟು ವಿಷ ವಾಂತಿಯಾಗಲಿ, ನನ್ನ ಅಂತಃಕರಣದಲ್ಲಿಯ ನನ್ನದು ಎಂಬ ಅಭಿಮಾನದ ಸ್ವಾರ್ಥಪರವಾದ ಮಮತೆಯ ಸರ್ಪ ನಾಶವಾಗಿ, ಅಮೃತದ ಮರಣ ಬರಲಿ ಎಂದು ಪ್ರಾರ್ಥಿಸಿದ್ದಾರೆ. ಆ ಅಮೃತ ಮರಣವೆಂದರೆ 'ನನ್ನ ಸತ್ತದೆಲ್ಲ ಸತ್ತು/ನಿನ್ನ ಸೊತ್ತು ಉಳಿಯಲಿ' ಎಂಬ ಅಹಂಭಾವ ರಹಿತ ಸ್ಥಿತಿ. ಆಧ್ಯಾತ್ಮದ ಉನ್ನತ ನೆಲೆ.

'ಹೆಡೆಹೆಡೆಗಳನೆಡೆಬಿಡದೆಯೆ
ಕಾಳೀಯನ ತುಳಿದಂದದಿ
ಗೋವಿಂದನ ಚರಣ
ತನ್ನನಿತೂ ವಿಷ ವಮನದಿ
ನನ್ನಂತಃಕರಣ
ಮಮತಾಫಣಿ ಲಯಹೊಂದುತೆ
ಬರಲಮೃತದ ಮರಣ!'
(ಶ್ರೀ ಗುರು ಚರಣಕೆ – ಅಗ್ನಿಹಂಸ)

ನಿಚ್ಚಂ ಪೊಸತು ಇಂಗ್ಲೆಂಡ್‌ನ ಲೇಕ್ ಡಿಸ್ಟ್ರಿಕ್ಟ್

ಇಂಗ್ಲೆಂಡ್ ದೇಶದ ಮನಮೋಹಕ ಪ್ರದೇಶ ಲೇಕ್ ಡಿಸ್ಟ್ರಿಕ್ಟ್. ಅದು ಹಲವು ಸರೋವರಗಳನ್ನು ತನ್ನ ಒಡಲಲ್ಲಿ ಇರಿಸಿಕೊಂಡಿದೆ. ಅಲ್ಲಿನ ಸುಂದರ ಪರಿಸರಕ್ಕೆ ಮನಸೋತ ಮಹಾಕವಿ ವರ್ಡ್ಸ್‌ವರ್ತ್ ಇಲ್ಲಿನ ಗ್ರಾಸ್‌ಮಿಯರ್ ಎನ್ನುವಲ್ಲಿ ಬಾಳಿ, ಬದುಕಿ ಕಾವ್ಯವನ್ನು ರಚಿಸಿದರು.



ಲೇಕ್ ಡಿಸ್ಟ್ರಿಕ್ಟ್ ರಾಷ್ಟ್ರೀಯ ಉದ್ಯಾನದೊಳಗಿರುವ ಗ್ರಾಸ್‌ಮಿಯರ್ ಸರೋವರದ ಮನಮೋಹಕ ದೃಶ್ಯ



ಕವಿ ವಿಲಿಯಂ ವರ್ಡ್ಸ್‌ವರ್ತ್ ವಾಸಿಸಿದ್ದ ಡೌ ಕಾಟೇಜ್



ಲೇಕ್ ಡಿಸ್ಟ್ರಿಕ್ಟ್‌ನಲ್ಲಿರುವ ವಿಂಡರ್‌ಮಿಯರ್ ಸರೋವರದ ನೋಟ

ಎಂ.ಎಸ್. ರಘುನಾಥ್

ಪ್ರವಾಸ

ಸರೋವರಗಳ ಸೀಮೆ ಎಂದೇ ಪ್ರಖ್ಯಾತವಾದ ಲೇಕ್ ಡಿಸ್ಟ್ರಿಕ್ಟ್ ವಾಯವ್ಯ ಇಂಗ್ಲೆಂಡಿನ ಒಂದು ಅಚ್ಚುಕಟ್ಟಾದ ಭಾಗ. ಲೇಕ್ ಡಿಸ್ಟ್ರಿಕ್ಟ್ ರಾಷ್ಟ್ರೀಯ ಉದ್ಯಾನವು ಆ ದೇಶದ ಅತೀ ದೊಡ್ಡ ರಾಷ್ಟ್ರೀಯ ಉದ್ಯಾನವಾಗಿದೆ. ತುಂಬಾ ಎತ್ತರದ ಬೆಟ್ಟ ಗುಡ್ಡಗಳನ್ನೂ, ಕಣಿವೆ ಮಾರ್ಗಗಳನ್ನೂ, ಕಡಿದಾದ ರಸ್ತೆಗಳು ಹಾಗೂ ಅತ್ಯಂತ ದೊಡ್ಡ ಮತ್ತು ಆಳವಾದ ಸರೋವರಗಳನ್ನೂ ಈ ಪ್ರದೇಶ ಹೊಂದಿದೆ.

ಲೇಕ್ ಡಿಸ್ಟ್ರಿಕ್ಟ್ ಹೆಗ್ಗುರುತು ಎಂದರೆ ವಾಯವ್ಯ ಇಂಗ್ಲೆಂಡಿನಲ್ಲಿ ದಕ್ಷಿಣಕ್ಕೆ ಮ್ಯಾಂಚೆಸ್ಟರ್, ಉತ್ತರಕ್ಕೆ ಕಾರ್ನಿಸ್. ಇಲ್ಲಿಗೆ ಲಂಡನ್ ನಗರದಿಂದ ಕೇವಲ ಐದು ಗಂಟೆಗಳ ಪ್ರಯಾಣ. ಇಂಗ್ಲೆಂಡಿನ ವಿಶಿಷ್ಟ ಪ್ರದೇಶವಾದ ಇದು ಲೇಕ್ ಡಿಸ್ಟ್ರಿಕ್ಟ್ ರಾಷ್ಟ್ರೀಯ ಉದ್ಯಾನ ಪ್ರಾಧಿಕಾರದ ಆಡಳಿತಕ್ಕೆ ಒಳಪಟ್ಟಿದೆ. ಜನರು ಬಂದು ನೋಡಿ ಆನಂದಿಸಲು ಅನುವಾಗುವಂತೆ ಪ್ರಾಧಿಕಾರವು ಉತ್ತೇಜನ ನೀಡುತ್ತಿದೆ. ಈ ಉದ್ಯಾನವು ಯುನೆಸ್ಕೊ ವಿಶ್ವ ಪಾರಂಪರಿಕ ತಾಣವಾಗಿದೆ. ಇದರ ಒಟ್ಟು ವಿಸ್ತೀರ್ಣ 2,362 ಕಿಲೋಮೀಟರ್ ಹಾಗೂ ಎತ್ತರ 3,200 ಅಡಿ.

ನಿಚ್ಚಂ ಪೊಸತು

ಲೇಕ್ ಡಿಸ್ಟ್ರಿಕ್ಟ್ ಎನ್ನುವುದು ಇಂಗ್ಲೆಂಡಿನಲ್ಲಿ ಅತ್ಯಂತ ಹೆಚ್ಚು ಮಳೆ ಬೀಳುವ ಪ್ರದೇಶ. ಸರಾಸರಿ ವಾರ್ಷಿಕ ಮಳೆಯ ಪ್ರಮಾಣ 2,000 ಮಿಲಿಮೀಟರ್ ಅಥವಾ 80 ಅಂಗುಲಗಳು. ವರ್ಷದಲ್ಲಿ ಅಕ್ಟೋಬರ್‌ನಿಂದ ಜನವರಿಯವರೆಗೆ ಹೆಚ್ಚು ಮಳೆ ಬೀಳುತ್ತದೆ. ಇಲ್ಲಿ ಚಳಿಗಾಲದಲ್ಲಿ ಚಳಿ ಸಾಧಾರಣ. ಬೇಸಿಗೆಯಲ್ಲೂ ತಂಪಾದ ಹವೆ. ಒಣ ಹವೆಯುಳ್ಳ ಹವಾಮಾನ. ಪ್ರವಾಸಕ್ಕೆ ಹೇಳಿ ಮಾಡಿಸಿರುವಂತಹ ತಾಣ. ಆದರೂ ಲೇಕ್ ಡಿಸ್ಟ್ರಿಕ್ಟ್‌ಗೆ ಭೇಟಿ ನೀಡಬಹುದಾದ ಸೂಕ್ತಕಾಲ ಏಪ್ರಿಲ್, ಮೇ ತಿಂಗಳ ವಸಂತ ಋತು ಹಾಗೂ ಸೆಪ್ಟೆಂಬರ್, ಅಕ್ಟೋಬರ್‌ನ ಶರತ್ಕಾಲ. ನಾವು ತಂಗಿದ್ದ ಲ್ಯಾಂಕಾಸ್ಟರ್ ಪ್ರದೇಶವೇ ಒಂದು ಆಕರ್ಷಕ ಪ್ರಕೃತಿಧಾಮ. ಇನ್ನು ನಾವು ಭೇಟಿ ನೀಡಲಿರುವ ಲೇಕ್ ಡಿಸ್ಟ್ರಿಕ್ಟ್ ಹೇಗಿರಬಹುದು ಎಂಬ ಬಹುನಿರೀಕ್ಷೆ ಹಾಗೂ ತವಕದಲ್ಲಿ ಮೊದಲಿಗೆ ಸರೋವರವನ್ನು ತಲುಪಿದಾಗ, ನಮ್ಮ ನಿರೀಕ್ಷೆಗಳು ಹೆಚ್ಚಿನ ಪ್ರಮಾಣದಲ್ಲಿ ಗರಿಗೆದರಿದವು.

ನಮ್ಮಲ್ಲಿ ಮಲೆನಾಡು ಇದೆಯಲ್ಲಾ, ಅದರಂತೆಯೇ ಇರುವ ಈ ಲೇಕ್ ಡಿಸ್ಟ್ರಿಕ್ಟ್ ಪ್ರಕೃತಿಯ ರಮಣೀಯತೆಗೆ ಮತ್ತೊಂದು ಹೆಸರು. ಮಲೆನಾಡು ಮೂರು-ನಾಲ್ಕು ಜಿಲ್ಲೆಗಳಿಗೆ ಮಾತ್ರ ವ್ಯಾಪಿಸಿದೆ. ಇಲ್ಲಿಯ ಲೇಕ್ ಡಿಸ್ಟ್ರಿಕ್ಟ್‌ನ ವಿಸ್ತೀರ್ಣ ಅದಕ್ಕಿಂತಲೂ ಹೆಚ್ಚಿನ ಪ್ರದೇಶವನ್ನು ಆವರಿಸಿದೆ. ಹಾಗಾಗಿ, ಇಲ್ಲಿ ನಿತ್ಯ ಚಿರಂತನವಾದ, ಹರಿದ್ವರ್ಣದಿಂದ ಕೂಡಿದ ಬೇರೊಂದು ಹಸಿರು ಲೋಕವೇ ಸೃಷ್ಟಿಯಾಗಿದೆ.

ಇಲ್ಲಿ ಸರೋವರಗಳೇ ಪ್ರಮುಖವಾಗಿದ್ದು, ನಮ್ಮಲ್ಲಿರುವಂತೆ ಹೆಚ್ಚು ಜಲಪಾತಗಳಿಲ್ಲ. ಆದರೆ ನೀರು ಸ್ವಯಂ ಶೇಖರಣೆಯಾಗಿದೆ. ಬೆಟ್ಟಗುಡ್ಡಗಳ ಸಾಲು ಅದಕ್ಕೆ ಇಂಬುಕೊಟ್ಟಿರುವುದರಿಂದ ಇಡೀ ದೃಶ್ಯ ಚೇತೋಹಾರಿಯಾಗಿದೆ. ಇದರ ಸೌಂದರ್ಯವೋ 'ನಿಚ್ಚಂ ಪೊಸತು'.

ಗ್ರಾಸ್‌ಮಿಯರ್ ಮತ್ತು ವರ್ಡ್ಸ್‌ವರ್ತ್

ಲೇಕ್ ಡಿಸ್ಟ್ರಿಕ್ಟ್‌ನ ಗ್ರಾಸ್‌ಮಿಯರ್ ಎಂಬ ಪ್ರದೇಶವು ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ಕಾರಣ, ಇಲ್ಲಿಯೇ ಮಹಾಕವಿ ವರ್ಡ್ಸ್‌ವರ್ತ್ ಐವತ್ತು ವರ್ಷಗಳಿಗೂ ಹೆಚ್ಚು ಕಾಲ ಬಾಳಿ, ತಮ್ಮ ಕಾವ್ಯವನ್ನು ರಚಿಸಿದ್ದು. ಇಲ್ಲಿಯ ಅದ್ಭುತ ಸೌಂದರ್ಯವೇ ಅವರಿಗೆ ಸ್ಫೂರ್ತಿ ನೀಡಿ, ಅವರ ರೊಮ್ಯಾಂಟಿಕ್ ಕಾವ್ಯ ರಚನೆಗೆ ಪ್ರಭಾವವನ್ನುಂಟು ಮಾಡಿತು.

1799ರಲ್ಲಿ ವರ್ಡ್ಸ್‌ವರ್ತ್ ಮತ್ತು ಅವರ ಸಹೋದರಿ ಲೇಕ್ ಡಿಸ್ಟ್ರಿಕ್ಟ್ ಪ್ರವಾಸವನ್ನು ಕೈಗೊಂಡರು. ಆಗ ಅವರು ಪಾಳುಬಿದ್ದಿದ್ದ 17ನೇ ಶತಮಾನದ ಕಟ್ಟಡವೊಂದನ್ನು ಗಮನಿಸಿದರು. ಪ್ರಕೃತಿ ರಮ್ಯತೆಯ ಮಡಿಲಲ್ಲಿ ಹೂತುಹೋಗಿದ್ದ ಆ ಕಟ್ಟಡದ ಬಗ್ಗೆ ಪ್ರೀತಿ ಮೂಡಿ, ಅದನ್ನೇ ತಮ್ಮ ವಾಸಗೃಹವನ್ನಾಗಿ ಮಾಡಿಕೊಂಡರು. 'ಡೌ ಕಾಟೇಜ್' ಎಂದು ಹೆಸರಿಟ್ಟರು. ಆ ನಂತರ ಸ್ಯಾಮುಯೆಲ್ ಟೇಲರ್ ಕೋಲ್ರಿಜ್ ಕೂಡ ಹತ್ತಿರದಲ್ಲಿಯೇ ಮನೆ ಮಾಡಿಕೊಂಡು ಮತ್ತೊಬ್ಬ ಕವಿ ರಾಬರ್ಟ್ ಸೌದೀ ಎಂಬುವವರೊಂದಿಗೆ ವಾಸ್ತವ್ಯ ಹೂಡಿದರು. 'ಲೇಕ್ ಕವಿಗಳು' ಎಂದು ಮುಂದೆ ಖ್ಯಾತಿಗಳಿಸಿದ ಮೂವರೂ ಸನಿಹದಲ್ಲೇ ಇದ್ದರು.

'ಡೌ ಕಾಟೇಜ್' ಎಂಬುದು ವರ್ಡ್ಸ್‌ವರ್ತ್‌ನಂತಹ ಕವಿ ಶ್ರೇಷ್ಠನಿಗೆ ತುಂಬಾ ಸರಳ ವಾಸಸ್ಥಾನವಾದರೂ, ಅದರ ಪ್ರಕೃತಿ ಸಾಮೀಪ್ಯದ ಬಗ್ಗೆಯೇ ಮಮತೆಯನ್ನು ಬೆಳೆಸಿಕೊಂಡು ಅಲ್ಲಿಯೇ ವಾಸ ಮಾಡಿ, ತನ್ನ ಅತೀ ಶ್ರೇಷ್ಠವಾದ 'ಪ್ರೆಲ್ಯೂಡ್', 'ಓಡ್ ಟೂ ಬ್ಯೂಟಿ' ಹಾಗೂ 'ಇಂಟಿಮೇಷನ್ಸ್ ಆಫ್ ಇಮ್‌ಮಾರ್ಟಾಲಿಟಿ'-ಇವುಗಳನ್ನು ಬರೆದರು. 'ಡೌ ಕಾಟೇಜ್' ಎಂಬುದು ಸದಾ ಕವಿಗಳ, ಕಲಾವಿದರ ಓಡಾಟದಿಂದಾಗಿ ಸಾಂಸ್ಕೃತಿಕ ತಾಣವಾಗಿ ಪರಿವರ್ತನೆಗೊಂಡಿತು.

ಈಗಲೂ ನಾವು ಮಹಾಕವಿ ವರ್ಡ್ಸ್‌ವರ್ತ್ ಕಾವ್ಯ ರಚನೆ ಮಾಡಿದ ಹಸಿರುತೋಟದ ತುಂಬಾ ಓಡಾಡಬಹುದು. ಅವರ ಹಿರಿಮೆಯ ಕುರುಹಾಗಿ, 1890 ರಲ್ಲಿ ವರ್ಡ್ಸ್‌ವರ್ತ್ ಟ್ರಸ್ಟ್‌ನವರು ಆ ಕಟ್ಟಡ ಮತ್ತು ತಾಣವನ್ನು ಖರೀದಿಸಿ ಅಭಿವೃದ್ಧಿಪಡಿಸಿದರು. ಮಾರನೆಯ ವರ್ಷ ಅವರ ನೆನಪಿಗಾಗಿ ಮ್ಯೂಸಿಯಂ ಆಗಿ ಮಾರ್ಪಡಿಸಿದರು. ಅವರಿದ್ದ ಮನೆಯ ಪಕ್ಕದಲ್ಲಿಯೇ ಈ ಮ್ಯೂಸಿಯಂ ಕೂಡಾ ಇದೆ. ಮ್ಯೂಸಿಯಂ ಅನ್ನು ನೋಡುವುದೇ ಒಂದು ರೀತಿಯ ಆಹ್ಲಾದಕರ ಅನುಭವ. ವರ್ಡ್ಸ್‌ವರ್ತ್ ಸ್ಮರಣಾರ್ಥ ಅವರಿದ್ದ ಮನೆಯನ್ನೇ 'ಡೌ ಕಾಟೇಜ್' ಎಂಬ ಹೆಸರಿನಲ್ಲಿಯೇ ಸ್ಮಾರಕ ಮಾಡಲಾಗಿದೆ. ಅದರ ಸುತ್ತಲಿನ ನೈಸರ್ಗಿಕ ಸೌಂದರ್ಯವನ್ನು ಹೆಚ್ಚು ಕಡಿಮೆ ಉಳಿಸಿಕೊಳ್ಳಲಾಗಿದೆ. ಆ ಸ್ಮಾರಕಕ್ಕೆ 'ಡೆಫೋಡಿಲ್ಸ್' ಎಂದೇ ಹೆಸರು. ಅವರ ಸಮಾಧಿಯ ಮೇಲೆ ಡೆಫೋಡಿಲ್ಸ್ ಪದ್ಯದ ಕೊನೆಯ ಸಾಲುಗಳನ್ನು ಕೆತ್ತಲಾಗಿದೆ.


ಗ್ರಾಸ್‌ಮಿಯರ್ ವರ್ಡ್ಸ್‌ವರ್ತ್‌ನ ಅಪೂರ್ವ ವರ್ಣನೆಗಳಲ್ಲಿ ಒಂದಾದ, ಎಲ್ಲರೂ ನೋಡಬೇಕಾದ ಅತ್ಯಾಕರ್ಷಕ ಸ್ಥಳ. ಈ ಗ್ರಾಸ್‌ಮಿಯರ್ ಸರೋವರ, ಸುಮಾರು ಒಂದು ಕಿಲೋಮೀಟರ್ ಉದ್ದ ಅರ್ಧ ಕಿಲೋಮೀಟರ್ ಅಗಲ ಹಾಗೂ 75 ಅಡಿ ಆಳವಿದ್ದು, ವರ್ಡ್ಸ್‌ವರ್ತ್‌ನ ಸೌಂದರ್ಯ ಪರಿಭಾಷೆಗೆ ತಕ್ಕದಾಗಿದೆ. ವರ್ಡ್ಸ್‌ವರ್ತ್‌ನ ಸಮಾಧಿ ಇರುವ ಕಾರಣದಿಂದ ಗ್ರಾಸ್‌ಮಿಯರ್ ಹಳ್ಳಿ, ಲೇಕ್ ಡಿಸ್ಟ್ರಿಕ್ಟ್‌ನಲ್ಲಿ ಬಹಳ ಖ್ಯಾತಿ ಹೊಂದಿದೆ.

ವಿಂಡರ್‌ಮಿಯರ್ ಸರೋವರವು ಹನ್ನೊಂದು ಮೈಲಿ ಉದ್ದವಿದ್ದು, 5.7 ಚದರ ಮೈಲಿಗಳ ಸುತ್ತಳತೆಯನ್ನು ಹೊಂದಿದೆ. ಇದು 79 ಮೀಟರ್ ಆಳವಿದ್ದು ಇಂಗ್ಲೆಂಡಿನಲ್ಲಿಯೇ ಅತೀ ಆಳದ ಸರೋವರವೆಂದು ಪರಿಗಣಿತವಾಗಿದೆ. ಇವುಗಳಲ್ಲದೇ ಆಂಬಲ್‌ಸೈಡ್, ರೈಡಾಲ್, ಕೆಂಡಾಲ್, ಪಾಟರ್‌ಡೇಲ್, ಬಟರ್‌ಮಿಯರ್, ಬ್ರಸ್ ವಾಟರ್, ಬರೋಡೇಲ್, ಡರ್ವೆಂಟ್ ವಾಟರ್ ಮುಂತಾದ ಸರೋವರಗಳು ಸೌಂದರ್ಯಯುಕ್ತವಾಗಿ ಆಕರ್ಷಕವಾಗಿವೆ. ಒಂದೊಂದೂ ನೀರಿನ ತವನಿಧಿಯೇ!

ಈ ಲೇಕ್ ಡಿಸ್ಟ್ರಿಕ್ಟ್ ಪ್ರದೇಶವನ್ನು ನೋಡಲೆಂದೇ ಪ್ರವಾಸ ಕೈಗೊಂಡಿದ್ದೆ. ಜಲಮೂಲಗಳನ್ನು ಕಾಪಾಡುತ್ತಾ ಅದು ಸ್ವಲ್ಪವೂ ಮಲಿನವಾಗದಂತೆ ಕೈಗೊಂಡಿರುವ ಅಲ್ಲಿಯ ಪ್ರಾಧಿಕಾರದ ಕಾಳಜಿ, ಜತನವನ್ನು ಎಷ್ಟು ಕೊಂಡಾಡಿದರೂ ಸಾಲದು. ನೊಂದ ಮನಸ್ಸಿಗಂತೂ ಇದು ನೀಡುವ ಸಾಂತ್ವನ ಅಷ್ಟಿಷ್ಟಲ್ಲ. ಅದೇ ತಾನೇ ಒಟ್ಟು ಪ್ರಕೃತಿಯ ಅದಮ್ಯ ಶಕ್ತಿ?

ಮಜ ಮಜ ಮಜಕೂರ


• ಎಂ.ಎಸ್.ಪೂಜಾರ



ಹೂಜಿಯಂತಾದ ಮೀನು!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಮನೆಯಲ್ಲೊಂದು ಮೀನು ಸಾಕಿದ್ದ. 2022ರಲ್ಲಿ ಆ ಮೀನನ್ನು ಒಂದು ಸಣ್ಣ ಗಾಜಿನ ಹೂಜಿಯಲ್ಲಿ ಹಾಕಿದ್ದ. ಪ್ರತಿ ದಿನವೂ ಅದಕ್ಕೆ ಆಹಾರ ನೀಡುತ್ತಿದ್ದ. ವರ್ಷ ಉರುಳಿದಂತೆ ಮೀನು ಬೆಳೆಯುತ್ತಿತ್ತು. ಎರಡು ವರ್ಷದಲ್ಲಿ ಮೀನು ದೊಡ್ಡದಾಗಿ ಹೂಜಿಯಲ್ಲಿ ಜಾಗ ಸ್ವಲ್ಪವೇ ಉಳಿದಿತ್ತು. ಗುಂಡ ಆಹಾರ ಹಾಕುವುದನ್ನು ನಿಲ್ಲಿಸಿರಲಿಲ್ಲ. ದಿನ ಉರುಳಿದಂತೆ ಮೀನು ಹೂಜಿಯ ಆಕಾರಕ್ಕೇ ತಿರುಗಿತು. ಗುಂಡ ಇದನ್ನು ಕಂಡು ಅವಾಕ್ಕಾದ.



ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಹಸ	+	ಮಗ	+	ನ	=	
2	ಮರ	+	ಗಡಿ	+	ನೆ	=	
3	ಸರಿ	+	ಬಗೆ	+	ಕ	=	
4	ಸುಮ	+	ರಣ	+	ಗೆ	=	
5	ಹಾರ	+	ಗತಿ	+	ಹಾ	=	


ಜಾಣಪದ ಆಟ

ಇಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ಎರಡಕ್ಷರ ಪದ ಕಂಡುಹಿಡಿಯಬೇಕು. ಪ್ರತಿ ಪದದ ಎರಡೂ ಅಕ್ಷರಗಳು ಒಂದೇ ಬಳ್ಳಿಯದ್ದಾಗಿರಬೇಕು ಮತ್ತು ಎರಡನೇ ಅಕ್ಷರ ಅದೇ ಬಳ್ಳಿಯ ಒತ್ತಕ್ಷರ ಇರಬೇಕು.

1	ಕೊ	ಕ್ಕೆ	'ಕ'ಕಾರ ಬಳ್ಳಿಯ ಎರಡಕ್ಷರ
2			'ಗ'ಕಾರ ಬಳ್ಳಿಯ ಎರಡಕ್ಷರ
3			'ಚ'ಕಾರ ಬಳ್ಳಿಯ ಎರಡಕ್ಷರ
4			'ಜ'ಕಾರ ಬಳ್ಳಿಯ ಎರಡಕ್ಷರ
5			'ತ'ಕಾರ ಬಳ್ಳಿಯ ಎರಡಕ್ಷರ
6			'ದ'ಕಾರ ಬಳ್ಳಿಯ ಎರಡಕ್ಷರ
7			'ನ'ಕಾರ ಬಳ್ಳಿಯ ಎರಡಕ್ಷರ
8			'ಬ'ಕಾರ ಬಳ್ಳಿಯ ಎರಡಕ್ಷರ
9			'ಮ'ಕಾರ ಬಳ್ಳಿಯ ಎರಡಕ್ಷರ
10			'ಲ'ಕಾರ ಬಳ್ಳಿಯ ಎರಡಕ್ಷರ

ಜಿಜ್ಞಾಸೆ

1.ಅಯಸ್ಕಾಂತ ದಂಡ ಉತ್ತರ-ದಕ್ಷಿಣವಾಗಿ ಏಕೆ ನಿಲ್ಲುತ್ತದೆ ಗೊತ್ತೇ?



ನಮ್ಮ ಭೂಮಿಯ ಅಕ್ಷವೇ ಒಂದು ಮ್ಯಾಗ್ನೆಟ್. ಅದು ಉತ್ತರ ದಕ್ಷಿಣ ತೋರಿಸುವ ಅಯಸ್ಕಾಂತ. ಕೆಲವು ಲೋಹಗಳು ಕರಗಿ ತಣಿಯುವಾಗ ಅವುಗಳ ಅಣುಗಳು ಒಂದನ್ನೊಂದು ಕೂಡಿಕೊಳ್ಳುವ ರೀತಿಯಿಂದಾಗಿ ಆ ಲೋಹ ಮುಂದೆ ಉತ್ತರ-ದಕ್ಷಿಣ ತೋರಿಸುವ ಗುಣ ಪಡೆಯುತ್ತದೆ.

2.ಕುಂಕುಮವೆಂದರೆ...



ಅರಸಿನದ ಪುಡಿಗೆ ಸುಣ್ಣ ಸೇರಿಸಿ ತಯಾರಿಸಿದ ಒಂದು ಬಣ್ಣದ ವಸ್ತು. ಆದರೆ ಇಂದು ನಿಜ ಕುಂಕುಮ ಮಾಯವಾಗಿ ಕೃತಕ ಬೊಟ್ಟುಗಳು ಆ ಸ್ಥಾನವನ್ನು ಅಲಂಕರಿಸಿವೆ.

ಇಂಗ್ಲಿಷ್‌ನಲ್ಲಿ ವಿನೋದ

ENGLISH / ಮೋ G ನ

1. How do worms keep fit?
Ans: They do worm-ups
2. What do you call a foreign ant?
Ans: Import-ant!
3. Where do ants go when they want a snack?
Ans: To a restaur-ant!







ಗಣಿತದಲ್ಲಿ ಗರ್ದಿಗಮ್ಮತ್ತು ಸಂಖ್ಯಾ ವಿನೋದ

1. 584795321637426 9X19 = 111111111111111111
2. 5847953216374269X38 = 222222222222222222
3. 5847953216374269X57 = 333333333333333333
4. 5847953216374269X76 = 444444444444444444
5. 5847953216374269X95 = 555555555555555555
6. 5847953216374269X114 = 666666666666666666



ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ:
1.ಗುಲಾಮಗಿರಿ
2.ಮರುಕಲ್ಪನೆ
3.ನಕಲಿಸಹಿ 4.ಕರಡಿಮದ
5.ಹುರಿಗೊಳಿಸು

ಪದಶೋಧ: ಗಿರೀಶ ಕಾರ್ನಾಡ

ಒತ್ತಕ್ಷರ ಆಟ:
1.ಅಚ್ಚರಿ 2.ಎಚ್ಚರ
3.ಕೆಚ್ಚಲು 4.ಬೆಚ್ಚಗೆ
5.ಮುಚ್ಚಳ 6.ಬಚ್ಚಲು
7.ಹೆಚ್ಚಳ 8.ಹಚ್ಚಡ
9.ಚೊಚ್ಚಲ 10.ಹಚ್ಚನೆ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಮಂಜುಷಾ ಕೆ.ಎಸ್.
ದಾವಣಗೆರೆ



ನುಡಿ ಭೀಮೇಶ ಯರಡೋಣಿ
ಕೊಪ್ಪಳ




ಸಿಂಚನ ಎ.
ಹಿರಿಯೂರು



ಸಮೃದ್ಧಿ ಡಿ.
ಹಾಸನ



ಸುಜಲ ಸಂಜೀವ ಕೊಣ್ಣೂರ
ಬಾಗಲಕೋಟ



ಆಹಿರಿ ವಿನಯ್
ಬೆಂಗಳೂರು

ಶಫಾಲಿ ವರ್ಮಾ ಅಬ್ಬರ • ಪದಾರ್ಪಣೆ ಪಂದ್ಯದಲ್ಲಿ ಮಿಂಚಿದ ನಿಕಿ ಪ್ರಸಾದ್

ಕ್ಯಾಪಿಟಲ್ಸ್‌ಗೆ ರೋಚಕ ಜಯ

ವಡೋದರ (ಪಿಟಿಐ): ಕೊನೆಯ ಎಸೆತದವರೆಗೆ ಕೌತುಕ ಮೂಡಿಸಿದ ಪಂದ್ಯದಲ್ಲಿ ಕಳೆದ ಬಾರಿಯ ರನ್ನರ್ ಅಪ್ ಡೆಲ್ಲಿ ಕ್ಯಾಪಿಟಲ್ಸ್ ತಂಡ ಎರಡು ವಿಕೆಟ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಸೋಲಿಸಿ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ಶನಿವಾರ ಶುಭಾರಂಭ ಮಾಡಿತು.

ಕೋತಂಬಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕೊನೆಯ ಓವರಿನಲ್ಲಿ ಡೆಲ್ಲಿ ತಂಡಕ್ಕೆ ಗೆಲ್ಲಲು ಹತ್ತು ರನ್‌ಗಳು ಬೇಕಿದ್ದವು. ಮೂರು ವಿಕೆಟ್‌ಗಳು ಉಳಿದಿದ್ದವು. ಪದಾರ್ಪಣೆ ಪಂದ್ಯದಲ್ಲೇ ಗಮನ ಸೆಳೆದ ನಿಕಿ ಪ್ರಸಾದ್ (35, 33 ಎ) ಅವರು ಐದನೇ ಎಸೆತದಲ್ಲಿ ಡೀಪ್ ಮಿಡ್‌ವಿಕೆಟ್‌ನಲ್ಲಿ ಕ್ಯಾಚಿತ್ತ ಕಾರಣ ಪಂದ್ಯ ರೋಚಕವಾಯಿತು. ಕೊನೆಯ ಎಸೆತದಲ್ಲಿ ಎರಡು ರನ್ ಬೇಕಿತ್ತು. ಅನುಭವಿ ಅರುಂಧತಿ ರೆಡ್ಡಿ ಆ ಎರಡು ರನ್‌ಗಳನ್ನು ಗಳಿಸಿದರು.

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಮುಂಬೈ ಇಂಡಿಯನ್ಸ್ ತಂಡ ನಾಟ್ ಶಿವರ್ ಬ್ರಂಟ್ ಅವರ ಬಿರುಸಿನ 80 ರನ್‌ಗಳ (59ಎ, 4x14) ನೆರವಿನಿಂದ 164 ರನ್‌ಗಳ ಹೋರಾಟದ ಮೊತ್ತ ಗಳಿಸಿತು. ಉತ್ತರವಾಗಿ ಕ್ಯಾಪಿಟಲ್ಸ್ ತಂಡ 20 ಓವರುಗಳಲ್ಲಿ 8 ವಿಕೆಟ್‌ಗೆ 165 ರನ್ ಗಳಿಸಿ ಸಂಭ್ರಮ ಆಚರಿಸಿತು.

ಅನುಭವಿ ಆಟಗಾರ್ತಿಯರಾದ ಶಫಾಲಿ ವರ್ಮಾ (43, 18ಎ) ಮತ್ತು ಮೆಗ್ ಲ್ಯಾನಿಂಗ್ (15) ಅವರು ಪವರ್ ಪ್ಲೇ ಅವಧಿಯಲ್ಲಿ 60 ರನ್ ಸೇರಿಸಿ ಡೆಲ್ಲಿ ತಂಡಕ್ಕೆ ಉತ್ತಮ ಆರಂಭ ಒದಗಿಸಿದ್ದರು. ಸತತವಾಗಿ ವಿಫಲರಾಗಿ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಕಳೆದುಕೊಂಡಿದ್ದ ಶಫಾಲಿ ಆಕ್ರಮಣಕಾರಿ ಆಡಿ ಎಡಗೈ ಸ್ಪಿನ್ನರ್ ಸೈಕಾ ಇಶಾಕ್ ಮಾಡಿದ ಎರಡನೇ ಓವರಿನಲ್ಲಿ 22 ರನ್ ಬಾರಿಸಿದ್ದರು.



ಡೆಲ್ಲಿ ಕ್ಯಾಪಿಟಲ್ಸ್‌ನ ಶಫಾಲಿ ಶರ್ಮಾ ಬ್ಯಾಟಿಂಗ್ ವೈಖರಿ

ಆದರೆ, ನಂತರ ಮುಂಬೈ ಬೌಲರ್‌ಗಳು ನಿಯಮಿತವಾಗಿ ವಿಕೆಟ್‌ಗಳನ್ನು ಪಡೆದರು. ಇತ್ತೀಚೆಗೆ 19 ವರ್ಷದೊಳಗಿನವರ ಟಿ20 ವಿಶ್ವಕಪ್ ಗೆದ್ದ ಭಾರತ ತಂಡದ ನಾಯಕಿ, ಕನ್ನಡತಿ ನಿಕಿ ಪ್ರಸಾದ್ ಈ ಹಂತದಲ್ಲಿ ತಂಡ ಕುಸಿಯದಂತೆ ನೋಡಿಕೊಂಡರು.

ಇದಕ್ಕೆ ಮೊದಲು, ಇಂಗ್ಲೆಂಡ್‌ನ ಆಲ್‌ರೌಂಡರ್ ನಾಟ್ ಶಿವರ್ ಬ್ರಂಟ್ ಅಧಿಕಾರಯುತ ಅರ್ಧಶತಕ (ಔಟಾಗದೇ 80) ಹೊಡೆದರು. ನಾಯಕಿ ಹರ್ಮನ್‌ಪ್ರೀತ್ ಕೌರ್ ಕೂಡ 22 ಎಸೆತಗಳಲ್ಲಿ 42 ರನ್ ಬಾರಿಸಿ ಮುಂಬೈ ತಂಡಕ್ಕೆ ಆರಂಭಿಕ ಕುಸಿತದಿಂದ ಚೇತರಿಕೆ ನೀಡಿದರು. ಟಿ20 ಪಂದ್ಯಗಳಲ್ಲಿ ಭಾರತದ ಅನುಭವಿ ಆಟಗಾರ್ತಿ ಎಂಟು ಸಹಸ್ರ ರನ್ ಪೂರೈಸಿದರು.



ಶಿವರ್ ಬ್ರಂಟ್ ಮತ್ತು ಹರ್ಮನ್‌ಪ್ರೀತ್ ಮೂರನೇ ವಿಕೆಟ್‌ಗೆ ಕೇವಲ 37 ಎಸೆತಗಳಲ್ಲಿ 73 ರನ್ ಸೇರಿಸಿ ತಂಡದ ರಕ್ಷಣೆಗೆ ನಿಂತರು. ಹರ್ಮನ್ ಡೀಪ್ ಥರ್ಡ್‌ನಲ್ಲಿ ನಿಕಿ ಪ್ರಸಾದ್‌ಗೆ ಕ್ಯಾಚಿತ್ತರು. ಆಗ ಮುಂಬೈ ಮೊತ್ತ 10.5 ಓವರುಗಳಲ್ಲಿ 3 ವಿಕೆಟ್‌ಗೆ 105.

ಈ ಹಂತದಲ್ಲಿ ಡೆಲ್ಲಿ ತಂಡದ ಬೌಲರ್‌ಗಳು ತಿರುಗೇಟು ನೀಡಿದರು. ಕೊನೆಯ ಏಳು ವಿಕೆಟ್‌ಗಳು 59 ರನ್‌ಗಳಿಗೆ ಉರುಳಿ ತಂಡ 19.1 ಓವರುಗಳಲ್ಲಿ ಆಲೌಟ್ ಆಯಿತು.

ವೇಗಿ ಶಿಖಾ ಪಾಂಡೆ ನಾಲ್ಕು ಓವರುಗಳಲ್ಲಿ 14 ರನ್ನಿತ್ತು 2 ವಿಕೆಟ್ ಪಡೆದು ಪರಿಣಾಮಕಾರಿ ಎನಿಸಿದರು. ಅನ್ನಾಬೆಲ್ ಸದರ್‌ಲ್ಯಾಂಡ್ 34 ರನ್ನಿಗೆ 3 ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 19.1 ಓವರುಗಳಲ್ಲಿ 164 (ನಾಟ್ ಶಿವರ್ ಬ್ರಂಟ್ ಔಟಾಗದೇ 80, ಹರ್ಮನ್‌ಪ್ರೀತ್ ಕೌರ್ 42, ಶಿಖಾ ಪಾಂಡೆ 14ಕ್ಕೆ2, ಅನ್ನಾಬೆಲ್ ಸದರ್‌ಲ್ಯಾಂಡ್ 34ಕ್ಕೆ3). ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 165 (ಶಫಾಲಿ ಶರ್ಮಾ 43, ನಿಕಿ ಪ್ರಸಾದ್ 35, ಸಾರಾ ಬ್ರೈಸ್ 21; ಹೇಲಿ ಮ್ಯಾಥ್ಯೂಸ್ 31ಕ್ಕೆ 2, ಅಮೆಲಿಯಾ ಕೆರ್ 22ಕ್ಕೆ 2). **ಫಲಿತಾಂಶ:** ಡೆಲ್ಲಿ ಕ್ಯಾಪಿಟಲ್ಸ್‌ಗೆ 2 ವಿಕೆಟ್ ಜಯ. **ಪಂದ್ಯದ ಆಟಗಾರ್ತಿ:** ನಿಕಿ ಪ್ರಸಾದ್

ಇಂದಿನ ಪಂದ್ಯ

ಗುಜರಾತ್ ಜೈಂಟ್ಸ್ Vs ಯು.ಪಿ ವಾರಿಯರ್ಸ್

ರಾತ್ರಿ:7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಭಾರತ ವನಿತೆಯರ ಶುಭಾರಂಭ

ಪ್ರೊ ಲೀಗ್ ಹಾಕಿ: ಮಿಂಚಿದ ನವನೀತ್ ಕೌರ್ • ಇಂಗ್ಲೆಂಡ್ ತಂಡಕ್ಕೆ ನಿರಾಸೆ

ಭುವನೇಶ್ವರ (ಪಿಟಿಐ): ಉಪನಾಯಕಿ ನವನೀತ್ ಕೌರ್ ಕೊನೆಯ ಕ್ಷಣದಲ್ಲಿ ಗಳಿಸಿದ ಗೋಲಿನ ನೆರವಿನಿಂದ ಭಾರತ ಮಹಿಳಾ ತಂಡವು ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಶನಿವಾರ ಶುಭಾರಂಭ ಮಾಡಿತು.

ಕಳಿಂಗ ಹಾಕಿ ಕ್ರೀಡಾಂಗಣದಲ್ಲಿ ನಡೆದ ರೋಚಕ ಹಣಾಹಣಿಯಲ್ಲಿ ಭಾರತದ ವನಿತೆಯರು 3–2 ಗೋಲುಗಳಿಂದ ಎಫ್‌ಐಎಚ್ ರ‍್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಲ್ಲಿರುವ ಇಂಗ್ಲೆಂಡ್ ತಂಡವನ್ನು ಮಣಿಸಿದರು. ಒಂಬತ್ತನೇ ರ‍್ಯಾಂಕ್‌ನ ಸಲಿಮಾ ಟೆಟೆ ಬಳಗವು ಭಾನುವಾರ ಮತ್ತೆ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಅತಿಥೇಯ ತಂಡ ಗಳಿಸಿದ ಮೂರು ಗೋಲುಗಳ ಪೈಕಿ ಎರಡು ಗೋಲುಗಳು ಪೆನಾಲ್ಟಿ ಕಾರ್ನರ್‌ನಿಂದ ಬಂದವು. ಪಂದ್ಯದ ಆರನೇ ನಿಮಿಷದಲ್ಲಿ ವೈಷ್ಣವಿ ಪಾಲ್ಕೆ ಚೆಂಡನ್ನು ಗುರಿ ಸೇರಿಸುವ ಮೂಲಕ ಭಾರತಕ್ಕೆ ಆರಂಭದಲ್ಲೇ ಮುನ್ನಡೆ ಒದಗಿಸಿದರು. 12ನೇ ನಿಮಿಷದಲ್ಲಿ ಇಂಗ್ಲೆಂಡ್‌ನ ಡಾರ್ಸಿ ಬೌರ್ನ್ ಗೋಲು ಗಳಿಸಿದ್ದರಿಂದ ತಂಡಗಳ ಸ್ಕೋರ್ ಸಮನಾಯಿತು.

ಉದಯೋನ್ಮುಖ ಆಟಗಾರ್ತಿ ದೀಪಿಕಾ ಅವರು 25ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿದರು. ಹೀಗಾಗಿ, ಭಾರತಕ್ಕೆ (2–1) ಮತ್ತೆ ಮುನ್ನಡೆ ದೊರೆಯಿತು. ಮೂರನೇ ಕ್ವಾರ್ಟರ್‌ನಲ್ಲಿ ಉಭಯ ತಂಡಗಳು ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿದವು.

58ನೇ ನಿಮಿಷದಲ್ಲಿ ಇಂಗ್ಲೆಂಡ್‌ನ ಯೋನಾ ಕ್ರಾಕಲ್ಸ್ ಅವರು ಗೋಲು ತಂದಿತ್ತರಿಂದ ಪಂದ್ಯವು ಡ್ರಾನತ್ತ ತಿರುಗಿತು. ಆದರೆ, ಆಟ ಮುಕ್ತಾಯಕ್ಕೆ ಒಂದು ನಿಮಿಷ ಬಾಕಿ ಇರುವಾಗ ನವನೀತ್ (59ನೇ) ಅಮೋಘ ರೀತಿಯಲ್ಲಿ ಭಾರತದ ಪರ ಗೆಲುವಿನ ಗೋಲು ದಾಖಲಿಸಿದರು.

ಈ ಗೆಲುವಿನೊಂದಿಗೆ ಭಾರತ (1 ಪಂದ್ಯದಿಂದ 3 ಅಂಕ) ಪಾಯಿಂಟ್ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿದೆ. ಇಂಗ್ಲೆಂಡ್ (5 ಪಂದ್ಯಗಳಿಂದ 3 ಅಂಕ) ಎಂಟನೇ ಸ್ಥಾನದಲ್ಲಿದೆ. ಚೀನಾ (8 ಪಂದ್ಯಗಳಿಂದ 16) ಮತ್ತು ನೆದರ್ಲೆಂಡ್ಸ್ (4 ಪಂದ್ಯಗಳಿಂದ 9) ತಂಡಗಳು ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ.



ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತದ ವನಿತೆಯರು –ಹಾಕಿ ಇಂಡಿಯಾ ಎಕ್ಸ್ ಚಿತ್ರ

ಸ್ಪೇನ್‌ಗೆ ಮಣಿದ ಹರ್ಮನ್‌ಪ್ರೀತ್ ಸಿಂಗ್ ಬಳಗ

ಶುಭಾರಂಭದ ನಿರೀಕ್ಷೆಯಲ್ಲಿದ್ದ ಭಾರತದ ಪುರುಷರ ತಂಡಕ್ಕೆ ನಿರಾಸೆಯಾಯಿತು. ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಹರ್ಮನ್‌ಪ್ರೀತ್ ಸಿಂಗ್ ಬಳಗವು 1–3 ಗೋಲುಗಳಿಂದ ಸ್ಪೇನ್ ತಂಡಕ್ಕೆ ಮಣಿಯಿತು.

25ನೇ ನಿಮಿಷದಲ್ಲಿ ಸುಖ್‌ಜೀತ್ ಸಿಂಗ್ ಚೆಂಡನ್ನು ಗುರಿ ಸೇರಿಸಿ ಭಾರತಕ್ಕೆ ಆರಂಭದಲ್ಲಿ ಮೇಲುಗೈ ಒದಗಿಸಿದ್ದರು. ಆದರೆ, ನಂತರದಲ್ಲಿ ಸ್ಪೇನ್ ಆಟಗಾರರು ಪಾರಮ್ಯ ಸಾಧಿಸಿದರು. 28ನೇ ನಿಮಿಷದಲ್ಲಿ ಲಕಾಲ್ಲೆ ಬೊರ್ಜಾ, 38ನೇ ನಿಮಿಷದಲ್ಲಿ ಇಗ್ನಾಸಿಯೋ ಕೋಬೋಸ್ ಮತ್ತು 56ನೇ ನಿಮಿಷದಲ್ಲಿ ಬ್ರೂನೋ ಅವಿಲಾ ಅವರು ಸ್ಪೇನ್ ಪರ ಗೋಲು ತಂದಿತ್ತರು. ಭಾರತ ತಂಡ ಭಾನುವಾರ ಮತ್ತೆ ಸ್ಪೇನ್ ವಿರುದ್ಧ ಸೆಣಸಲಿದೆ.

ಇಂದಿನ ಪಂದ್ಯಗಳು

ಮಹಿಳೆಯರ ವಿಭಾಗ

ಭಾರತ Vs ಇಂಗ್ಲೆಂಡ್ — ಪಂದ್ಯ ಆರಂಭ ಸಂಜೆ 5.15

ಪುರುಷರ ವಿಭಾಗ

ಭಾರತ Vs ಸ್ಪೇನ್ — ಪಂದ್ಯ ಆರಂಭ ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಶ್ರೇಯಾಂಕಾ ಪಾಟೀಲ ಬದಲು ಆರ್‌ಸಿಬಿ ತಂಡಕ್ಕೆ ಸ್ನೇಹ ರಾಣಾ

ಬೆಂಗಳೂರು: ಗಾಯಾಳಾಗಿರುವ ಶ್ರೇಯಾಂಕಾ ಪಾಟೀಲ ಸ್ಥಾನದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಡಬ್ಲ್ಯುಪಿಎಲ್‌ನ ಉಳಿದ ಪಂದ್ಯಗಳಿಗೆ ಸ್ನೇಹ ರಾಣಾ ಅವರನ್ನು ಶನಿವಾರ ಸೇರ್ಪಡೆ ಮಾಡಿಕೊಂಡಿದೆ.

ಹಾಲಿ ಚಾಂಪಿಯನ್ ಆರ್‌ಸಿಬಿ ಪರ 15 ಪಂದ್ಯಗಳನ್ನಾಡಿರುವ ಆಫ್ ಸ್ಪಿನ್ನರ್ ಶ್ರೇಯಾಂಕಾ ಪಾಟೀಲ 19 ವಿಕೆಟ್‌ಗಳನ್ನು ಪಡೆದಿದ್ದಾರೆ. ಕಳೆದ ವರ್ಷ ವೆಸ್ಟ್ ಇಂಡೀಸ್ ಮತ್ತು ಐರ್ಲೆಂಡ್ ವಿರುದ್ಧ ತವರಿನಲ್ಲಿ ನಡೆದ ಸೀಮಿತ ಓವರುಗಳ ಸರಣಿಯಲ್ಲೂ ಶ್ರೇಯಾಂಕ ಆಡಿರಲಿಲ್ಲ. 30 ವರ್ಷ ವಯಸ್ಸಿನ ಸ್ನೇಹ ಅವರು ಆಫ್ ಸ್ಪಿನ್ ಆಲ್‌ರೌಂಡರ್ ಆಗಿದ್ದು ಈ ಹಿಂದೆ ಡಬ್ಲ್ಯುಪಿಎಲ್‌ನಲ್ಲಿ ಗುಜರಾತ್ ಜೈಂಟ್ಸ್ ಪರ ಆಡಿದ್ದರು. ಅವರು ₹30 ಲಕ್ಷಕ್ಕೆ ಆರ್‌ಸಿಬಿಗೆ ಸೇರ್ಪಡೆಯಾಗಿದ್ದಾರೆ.



ಸ್ನೇಹ ರಾಣಾ ಶ್ರೇಯಾಂಕಾ

ಸಿನ್ನರ್‌ಗೆ 3 ತಿಂಗಳ ನಿಷೇಧ

ಲಂಡನ್ (ಎಪಿ): ಉದ್ದೀಪನ ಮದ್ದು ಸೇವನೆ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವದ ಅಗ್ರಮಾನ್ಯ ಟೆನಿಸ್ ಆಟಗಾರ ಯಾನಿಕ್ ಸಿನ್ನರ್ ಅವರು ಮೂರು ತಿಂಗಳ ನಿಷೇಧಕ್ಕೆ ಒಪ್ಪಿಕೊಂಡು ವಿಶ್ವ ಉದ್ದೀಪನ ಮದ್ದು ಸೇವನೆ ತಡೆ ಏಜನ್ಸಿ (ವಾಡಾ) ಜೊತೆ ಪ್ರಕರಣ ಬಗೆಹರಿಸಿಕೊಂಡಿದ್ದಾರೆ.

ಈ ವಿಷಯವನ್ನು ವಾಡಾ ಶನಿವಾರ ತಿಳಿಸಿದೆ. ಪ್ರಕರಣದಲ್ಲಿ ಭಾಗಶಃ ಹೊಣೆ ತಮ್ಮದೂ ಇದೆ ಎಂದು ಸಿನ್ನರ್ ಒಪ್ಪಿಕೊಂಡಿದ್ದಾರೆ. ವಾಡಾ ಜೊತೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಫೆ. 9 ರಿಂದ ಮೇ 4ರವರೆಗೆ ಯಾವುದೇ ಟೂರ್ನಿಯಲ್ಲಿ ಸಿನ್ನರ್ ಆಡುವಂತಿಲ್ಲ.

2024ರ ಮಾರ್ಚ್‌ನಲ್ಲಿ ಎರಡು ಬಾರಿ ಪಡೆದ ಮಾದರಿಗಳಲ್ಲಿ ಇಟಲಿಯ ಆಟಗಾರ ಉದ್ದೀಪನ ಮದ್ದುಸೇವನೆ ಮಾಡಿದ್ದು ದೃಢಪಟ್ಟಿತ್ತು. ಅನಾಬಾಲಿಕ್ ಸ್ಟಿರಾಯಿಡ್ ‘ಕ್ಲೊಸ್ಟೆಬಾಲ್’ ಆಕಸ್ಮಿಕವಾಗಿ ಸಿನ್ನರ್ ಅವರ ದೇಹದೊಳಗೆ ಸೇರಿಕೊಂಡಿದೆ ಎಂದು ಇಂಟರ್‌ನ್ಯಾಷನಲ್ ಟೆನಿಸ್ ಇಂಟೆಗ್ರಿಟಿ ಏಜನ್ಸಿ (ಐಟಿಐಎ) ಹೇಳಿದ್ದು ಅವರನ್ನು ಅಮಾನತು ಮಾಡಬೇಕಿಲ್ಲ ಎಂದೂ ಹೇಳಿತ್ತು.

ಆದರೆ ಇದನ್ನು ವಾಡಾ ಪ್ರಶ್ನಿಸಿದ್ದು ಲುಸಾನ್‌ನಲ್ಲಿ ಅಂತರರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿಯಲ್ಲಿ ಪ್ರಶ್ನಿಸುವುದಾಗಿಯೂ ಕಳೆದ ವರ್ಷದ ಕೊನೆಯಲ್ಲಿ ತಿಳಿಸಿತ್ತು. ಆಟಗಾರನಿಗೆ ಕನಿಷ್ಠ ಒಂದು ವರ್ಷ ನಿಷೇಧ ಶಿಕ್ಷೆ ಆಗಬೇಕು ಎಂದಿತ್ತು.

ಕೈಬೆರಳಿಗೆ ಗಾಯವಾಗಿದ್ದ ಟ್ರೇನರ್ ಒಬ್ಬರು ಈ ಮದ್ದುಸೇವಿಸಿದ್ದು, ಅವರಿಂದ ಮಸಾಜ್ ಸಮಯದಲ್ಲಿ ಆಕಸ್ಮಿಕವಾಗಿ ಮದ್ದು ತಮ್ಮ ದೇಹ ಪ್ರವೇಶಿಸಿದೆ ಎಂಬ ಸಿನ್ನರ್ ವಿವರಣೆಯನ್ನು ಇಂಟೆಗ್ರಿಟಿ ಏಜನ್ಸಿ ಒಪ್ಪಿಕೊಂಡಿತ್ತು. ಪ್ರಕರಣದ ನಂತರ ಸಿನ್ನರ್ ಅವರು ಫಿಸಿಯೊ ಮತ್ತು ಟ್ರೇನರ್ ಅವರನ್ನು ತಮ್ಮ ತಂಡದಿಂದ ಕಿತ್ತುಹಾಕಿದ್ದರು.



ಯಾನಿಕ್ ಸಿನ್ನರ್

ಸಿನ್ನರ್ ಅವರಿಗೆ ಮೋಸ ಮಾಡುವ ಉದ್ದೇಶವಿರಲಿಲ್ಲ ಎಂಬುದನ್ನು ಈಗಲೂ ನಂಬಿರುವುದಾಗಿ ಹೇಳಿಕೆಯಲ್ಲಿ ವಾಡಾ ತಿಳಿಸಿದೆ. ಆದರೆ ನೆರವು ತಂಡದ ನಿರ್ಲಕ್ಷ್ಯಕ್ಕೆ ಅವರೂ (ಸಿನ್ನರ್) ಹೊಣೆಯಾಗುತ್ತಾರೆ ಎಂದೂ ವಿವರಿಸಿದೆ.

ನಿಷೇಧ ಮೂರು ತಿಂಗಳ ಅವಧಿಯದ್ದು ಆಗಿರುವ ಕಾರಣ ಮುಂದಿನ ಗ್ರ್ಯಾನ್‌ಸ್ಲಾಮ್, ಮೇ 25ರಂದು ಆರಂಭವಾಗುವ ಫ್ರೆಂಚ್ ಓಪನ್ ಆಡುವುದಕ್ಕೆ ಸಿನ್ನರ್ ಅವರಿಗೆ ಅಡ್ಡಿಯಾಗುವುದಿಲ್ಲ. ಆಸ್ಟ್ರೇಲಿಯನ್ ಓಪನ್ ಹಾಲಿ ಚಾಂಪಿಯನ್ ಸಿನ್ನರ್ ಅವರು ತವರಿನ ರೋಮ್‌ನಲ್ಲಿ ಮೇ 7ರಂದು ಆರಂಭವಾಗುವ ಇಟಾಲಿಯನ್ ಓಪನ್‌ನಲ್ಲಿ ಆಡಬಹುದಾಗಿದೆ.

ಟೆನಿಸ್: ನಿಹಾಲ್, ಭೃತಿಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ನಿಹಾಲ್ ಎಸ್. ರೆಡ್ಡಿ ಮತ್ತು ಭೃತಿ ವೆಲ್ಲದಂಡಿ, ಮುಂಬೈನಲ್ಲಿ ಶನಿವಾರ ನಡೆದ ರಮೇಶ್ ದೇಸಾಯಿ ಸ್ಮಾರಕ ರಾಷ್ಟ್ರೀಯ 12 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದಾರೆ.

ಬಾಲಕರ ಡಬಲ್ಸ್‌ನ ಫೈನಲ್‌ನಲ್ಲಿ ನಿಹಾಲ್ ಮತ್ತು ದೆಹಲಿಯ ತೋಶಿನೌಸುಕೆ ಉನಾಮಿ ಜೋಡಿ 6–2, 3–6, 10–7 ಸೆಟ್‌ಗಳಿಂದ ಎರಡನೇ ಶ್ರೇಯಾಂಕದ ಕಬೀರ್ ದಹಿಯಾ (ಹರಿಯಾಣ) ಮತ್ತು ಅರ್ಜುನ್ ದುಹಾ (ದೆಹಲಿ) ಅವರನ್ನು ಮಣಿಸಿತು.

ಭೃತಿ ಅವರು ಹರಿಯಾಣದ ಆರಾಧನಾ ತೆಹಲಾನ್ ಅವರ ಜೊತೆಗೂಡಿ ಬಾಲಕಿಯರ ಡಬಲ್ಸ್‌ನ ಫೈನಲ್‌ನಲ್ಲಿ 6–1, 1–6, 10–3ರಿಂದ ಮಹಾರಾಷ್ಟ್ರದ ಸಾರಾ ಫೆಂಗ್ಸೆ ಮತ್ತು ಮೈರಾ ಶೇಖ್ ಅವರನ್ನು ಸೋಲಿಸಿದರು.

ನಿಕಿ– ಜಾನ್ ಜೋಡಿ ರನ್ನರ್ ಅಪ್

ನವದೆಹಲಿ (ಪಿಟಿಐ): ಶ್ರೇಯಾಂಕರಹಿತ ಜೋಡಿಯಾದ ಮಸಾಮಿಚಿ ಇಮಾಮುರಾ ಮತ್ತು ರಿಯೊ ನೊಗುಚಿ ಅವರು ಡೆಲ್ಲಿ ಓಪನ್ ಎಟಿಪಿ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ನಿಕಿ ಪೂಣಚ್ಚ ಮತ್ತು ಕೋರ್ಟ್ನಿ ಜಾನ್ ಲಾಕ್ ಅವರನ್ನು ಫೈನಲ್‌ನಲ್ಲಿ ನೇರ ಸೆಟ್‌ಗಳಿಂದ ಸೋಲಿಸಿ ಪ್ರಶಸ್ತಿ ಗೆದ್ದುಕೊಂಡರು.

ಎಟಿಪಿ ಚಾಲೆಂಜರ್ ಶನಿವಾರ ನಡೆದ ಫೈನಲ್‌ನಲ್ಲಿ ಜಪಾನ್‌ನ ಜೋಡಿ 6–4, 6–3 ರಿಂದ ನಿಕಿ ಪೂಣಚ್ಚ– ಜಾನ್ ಲಾಕ್ ಜೋಡಿಯನ್ನು ಸೋಲಿಸಿತು. ಜಪಾನ್ ಆಟಗಾರರು ಚೇತರಿಕೆಯ ಮತ್ತು ಕರಾರುವಾಕ್ ಹೊಡೆತಗಳ ಆಟದ ಪ್ರದರ್ಶನ ನೀಡಿದರು.

ಕೈರಿಯನ್ ಜಾಕ್ವೆಟ್ ಅವರು ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ವಿಟ್ ಕೊಪ್ರಿವಾ ಅವರನ್ನು ಸೋಲಿಸಿ ತಮ್ಮ ‘ಕನಸಿನ ಓಟ’ ಮುಂದುವರಿಸಿದರು. ಅವರು ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಬಿಲಿ ಹ್ಯಾರಿಸ್ ಅವರನ್ನು ಎದುರಿಸಲಿದ್ದಾರೆ. ಹ್ಯಾರಿಸ್ ಇನ್ನೊಂದು ಸೆಮಿಫೈನಲ್‌ನಲ್ಲಿ 4–6, 7–6 (4), 6–2 ರಿಂದ ಮೂರನೇ ಶ್ರೇಯಾಂಕದ ಟ್ರಿಸ್ಟಾನ್ ಸ್ಕೂಲ್ಕೇಟ್ ಅವರನ್ನು ಮಣಿಸಿದರು.



ರನ್ನರ್ ಅಪ್ ಟ್ರೋಫಿಯೊಂದಿಗೆ ನಿಕಿ ಪೂಣಚ್ಚ– ಜಾನ್ ಲಾಕ್

ಚಾಂಪಿಯನ್ಸ್ ಟ್ರೋಫಿ: ದುಬೈಗೆ ತೆರಳಿದ ಭಾರತ ತಂಡ

ರೋಹಿತ್, ಕೊಹ್ಲಿ ಆಟದ ಮೇಲೆ ಗಮನ

ಮುಂಬೈ (ಪಿಟಿಐ): ಹಾಲಿ ತಂಡದಲ್ಲಿರುವ ಪ್ರಮುಖ ಸ್ಟಾರ್ ಆಟಗಾರರ ಪಾಲಿಗೆ ಬಹುತೇಕ ಕೊನೆಯ ಪ್ರಮುಖ ಟೂರ್ನಿಯಾಗಿರುವ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡಲು ಭಾರತ ತಂಡ ಶನಿವಾರ ಇಲ್ಲಿಂದ ದುಬೈಗೆ ತೆರಳಿತು.

ಮುಖ್ಯ ಕೋಚ್ ಗೌತಮ್ ಗಂಭೀರ್, ಉಪ ನಾಯಕ ಶುಭಮನ್ ಗಿಲ್, ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಸೇರಿದಂತೆ ಹೆಚ್ಚಿನ ಆಟಗಾರರು ಟೀಮ್ ಬಸ್‌ನಲ್ಲಿ ವಿಮಾನ ನಿಲ್ದಾಣಕ್ಕೆ ಬಂದಿಳಿದರು. ಅಲ್ಲಿ ಕಾಯುತ್ತಿದ್ದ ಅಭಿಮಾನಿಗಳಿಗೆ ಆಟಗಾರರು ಹಸ್ತಾಕ್ಷರ ನೀಡಿದರು ಕೂಡ. ಕೆಲವರು ಕೈಬೀಸಿದರು. ನಾಯಕ ರೋಹಿತ್ ಶರ್ಮಾ ಕಾರಿನಲ್ಲಿ ಬಂದಾಗ, ಅಭಿಮಾನಿಗಳು ‘ರೋಹಿತ್ ಭಾಯ್’ ಎಂದು ಕೂಗಿದರು.

ಇದೇ ತಿಂಗಳ 19ರಂದು ಪಾಕಿಸ್ತಾನದ ಆತಿಥ್ಯದಲ್ಲಿ ಚಾಂಪಿಯನ್ಸ್ ಟ್ರೋಫಿ ಆರಂಭವಾಗಲಿದೆ. ಭಾರತ ತನ್ನ ಎಲ್ಲ ಪಂದ್ಯಗಳನ್ನು ದುಬೈನಲ್ಲಿ ಆಡಲಿದೆ. ಫೈನಲ್ ತಲುಪಿದರೆ ಆ ಪಂದ್ಯವೂ ದುಬೈನಲ್ಲೇ ನಡೆಯಲಿದೆ.

ಭಾರತ ಇದೇ 20ರಂದು ಬಾಂಗ್ಲಾದೇಶ ವಿರುದ್ಧ ಆಡುವ ಮೂಲಕ ಅಭಿಯಾನ ಆರಂಭಿಸಲಿದೆ. ಬಹುನಿರೀಕ್ಷಿತ ಪಾಕಿಸ್ತಾನ ವಿರುದ್ಧದ ಪಂದ್ಯ ಫೆ. 23ರಂದು (ಭಾನುವಾರ) ನಡೆಯಲಿದೆ. ರೋಹಿತ್ ಪಡೆ ಮಾರ್ಚ್ 2ರಂದು ನ್ಯೂಜಿಲೆಂಡ್ ವಿರುದ್ಧ ಆಡುವ ಮೂಲಕ ಲೀಗ್ ವ್ಯವಹಾರ ಪೂರೈಸಲಿದೆ.

ತವರಿನಲ್ಲಿ ಇಂಗ್ಲೆಂಡ್ ವಿರುದ್ಧ ಏಕದಿನ ಸರಣಿಯನ್ನು 3–0 ಕ್ಲೀನ್‌ಸ್ವೀಪ್ ಮಾಡಿದ ಉತ್ಸಾಹದಲ್ಲಿರುವ ಭಾರತ ತಂಡ ಆ ವಿಶ್ವಾಸದೊಡನೆ ಕಣಕ್ಕಿಳಿಯಲಿದೆ. ಆದರೆ ತಂಡದ ಪ್ರಮುಖ ಬೌಲರ್ ಜಸ್‌ಪ್ರೀತ್ ಬೂಮ್ರಾ ಇಲ್ಲದೇ ಭಾರತ ತಂಡ ಕಣಕ್ಕಿಳಿಯಬೇಕಾಗಿದೆ.



ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ

ದಿಗ್ಗಜರ ಮೇಲೆ ಒತ್ತಡ: ಕಳೆದ ವರ್ಷದ ಮಧ್ಯದಲ್ಲಿ ಭಾರತ ತಂಡ ಟಿ20 ವಿಶ್ವಕಪ್ ಗೆದ್ದಾಗ ಮುಂಬೈನ ವಾಂಖೆಡೆ ಕ್ರೀಡಾಂಗಣದ ಬಳಿ ಭರ್ಜರಿ ವಿಜಯೋತ್ಸವ ನಡೆದಿತ್ತು. ಈಗ ಭಾರತ ಅಂತಹದೇ ರೀತಿಯ ಮತ್ತೊಂದು ಯಶಸ್ಸು ಗಳಿಸಬೇಕಾದರೆ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ಬ್ಯಾಟಿನಿಂದ ರನ್ನುಗಳು ಹರಿಯಬೇಕಾಗಿದೆ.

ಈ ಇಬ್ಬರೂ ಟೆಸ್ಟ್ ಸರಣಿಗಳಲ್ಲಿ, ನಂತರ ರಣಜಿ ಪಂದ್ಯದಲ್ಲಿ ವಿಫಲರಾಗಿ ಟೀಕೆಗಳಿಗೆ ಒಳಗಾಗಿದ್ದರು. ಕಟಕ್‌ನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧ ಏಕದಿನ ಸರಣಿಯ ಎರಡನೇ ಪಂದ್ಯದಲ್ಲಿ ರೋಹಿತ್ ಶರ್ಮಾ ಶತಕ (90 ಎಸೆತಗಳಲ್ಲಿ 119) ಹೊಡೆದು ತಮ್ಮಲ್ಲಿ ಆಟ ಇನ್ನೂ ಇದೆ ಎಂದು ಸಾರಿದ್ದಾರೆ. ಅಹಮದಾಬಾದಿನಲ್ಲಿ ನಡೆದ ಕೊನೆಯ ಪಂದ್ಯದಲ್ಲಿ ಕೊಹ್ಲಿ ಅವರೂ ಅರ್ಧ ಶತಕ ಗಳಿಸಿ ಚಾಂಪಿಯನ್ಸ್ ಟ್ರೋಫಿ ಮುನ್ನ ಲಯಕ್ಕೆ ಮರಳುವ ಸೂಚನೆ ನೀಡಿದ್ದಾರೆ. ಇದು ಕ್ರಿಕೆಟ್ ಪ್ರೇಮಿಗಳು ನಿಟ್ಟುಸಿರುವ ಬಿಡುವಂತೆ ಮಾಡಿದೆ.

ಜೂನ್‌ನಿಂದ ಆರಂಭವಾಗುವ ಮುಂದಿನ ಟೆಸ್ಟ್ ಚಾಂಪಿಯನ್‌ಷಿಪ್ ಆವೃತ್ತಿಗೆ (ಸೈಕಲ್‌ಗೆ) ಮತ್ತು 2027ರ ಏಕದಿನ ವಿಶ್ವಕಪ್ ಟೂರ್ನಿಗೆ ತಂಡವನ್ನು ಕಟ್ಟಲು ಸಿದ್ಧತೆ ನಡೆಯುತ್ತಿರುವಾಗ ದುಬೈನಲ್ಲಿ ಈ ಇಬ್ಬರು ಹಿರಿಯ ಆಟಗಾರರ ನಿರ್ವಹಣೆಯ ಮೇಲೆ ಹೆಚ್ಚಿನ ಗಮನ ಇಡಲಾಗಿದೆ.

ಏಕದಿನ ಕ್ರಿಕೆಟ್‌ನಲ್ಲಿ 14 ಸಾವಿರ ರನ್ ಮೈಲಿಗಲ್ಲು ದಾಟಿದ ಮೂರನೇ ಆಟಗಾರ ಎನಿಸಲು ವಿರಾಟ್ ಕೊಹ್ಲಿ ಅವರಿಗೆ 37 ರನ್‌ಗಳು ಬೇಕಿವೆ. ಈ ಮಾದರಿಯಲ್ಲಿ 11000 ರನ್ ದಾಟಲು ರೋಹಿತ್ ಅವರಿಗೆ 12 ರನ್ ಮಾತ್ರ ಬೇಕಿದೆ. ಇದುವರೆಗೆ 9 ಬ್ಯಾಟರ್‌ಗಳು ಈ ಮೈಲಿಗಲ್ಲು ದಾಟಿದ್ದಾರೆ.

ಯುವಕರಿಗೆ ಸವಾಲು: ತಂಡದಲ್ಲಿ ಉಪನಾಯಕ ಸ್ಥಾನಕ್ಕೆ ಬಡ್ತಿ ಪಡೆದಿರುವ ಶುಭಮನ್ ಗಿಲ್ ಉತ್ತಮ ಲಯದಲ್ಲಿದ್ದಾರೆ. ಅವರು ಈ ಮಾದರಿಯಲ್ಲಿ 61ರ ಸರಾಸರಿ ದಾಖಲಿಸಿದ್ದು, ಚಾಂಪಿಯನ್ಸ್ ಟ್ರೋಫಿಯಲ್ಲೂ ಯಶಸ್ಸಿನ ಓಟ ಮುಂದುವರಿಸುವ ತವಕದಲ್ಲಿದ್ದಾರೆ.

ಬೂಮ್ರಾ ಅವರು ಗಾಯಾಳಾಗಿರುವ ಕಾರಣ ಅರ್ಷದೀಪ್ ಸಿಂಗ್ ಮತ್ತು ಹರ್ಷಿತ್ ರಾಣಾ ಅವರಂಥ ಯುವ ವೇಗಿಗಳಿಗೆ ತಮ್ಮ ಸಾಮರ್ಥ್ಯ ತೋರಲು ಈ ಟೂರ್ನಿ ಉತ್ತಮ ವೇದಿಕೆಯಾಗಿದೆ. ವರುಣ್ ಚಕ್ರವರ್ತಿ ಅವರಿಗೂ ತಂಡದ ಬೌಲಿಂಗ್ ಬತ್ತಳಿಕೆಯಲ್ಲಿರುವ ಪ್ರಮುಖ ಅಸ್ತ್ರ ತಾವೆಂಬುದನ್ನು ತೋರಿಸಲು ಅವಕಾಶ ಇದಾಗಿದೆ.

ಡಕೆಟ್ ಫಿಟ್

ಲಂಡನ್ (ಪಿಟಿಐ): ಇಂಗ್ಲೆಂಡ್ ತಂಡದ ಆರಂಭ ಆಟಗಾರ ಬೆನ್ ಡಕೆಟ್ ಅವರು ಆಡಲು ಫಿಟ್ ಆಗಿರುವುದು, ಆ ತಂಡ ಚಾಂಪಿಯನ್ಸ್ ಟ್ರೋಫಿಗೆ ಕ್ಷಣಗಣನೆ ಆರಂಭವಾಗಿರುವ ಹೊತ್ತಿನಲ್ಲಿ ನಿಟ್ಟುಸಿರು ಬಿಡುವಂತೆ ಮಾಡಿದೆ.

ಭಾರತ ವಿರುದ್ಧ ಬುಧವಾರ ಮೂರನೇ ಏಕದಿನ ಪಂದ್ಯದಲ್ಲಿ ಫೀಲ್ಡ್ ಮಾಡುವಾಗ ಡಕೆಟ್ ತೊಡೆಸಂದು ನೋವಿಗೆ ಒಳಗಾಗಿದ್ದರು. ಸ್ಕ್ಯಾನಿಂಗ್‌ಗೆ ಒಳಗಾದ ನಂತರ ಅವರಿಗೆ ಗಂಭೀರ ಗಾಯವಾಗಿಲ್ಲ ಎಂದು ದೃಢಪಟ್ಟಿತು. ಹೀಗಾಗಿ ಅವರಿಗೆ ಚಾಂಪಿಯನ್ಸ್ ಟ್ರೋಫಿಯಲ್ಲಿ ಆಡಲು ಇಂಗ್ಲೆಂಡ್ ಕ್ರಿಕೆಟ್ ಮಂಡಳಿ ಹಸಿರುನಿಶಾನೆ ತೋರಿದೆ.

18ರಂದು ಪಾಕ್‌ಗೆ ಬಂದಿಳಿಯಲಿರುವ ಇಂಗ್ಲೆಂಡ್ ತಂಡ 22ರಂದು ಆಸ್ಟ್ರೇಲಿಯಾ ವಿರುದ್ಧ ತನ್ನ ಮೊದಲ ಪಂದ್ಯ ಆಡಲಿದೆ.

ಮಾರ್ಚ್ 22ರಿಂದ ಐಪಿಎಲ್

ನವದೆಹಲಿ (ಪಿಟಿಐ): ಬಹುನಿರೀಕ್ಷಿತ 2025ರ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಮಾರ್ಚ್ 22ರಂದು ಆರಂಭವಾಗಲಿದೆ. ಈಡನ್ ಗಾರ್ಡನ್‌ನಲ್ಲಿ ನಡೆಯುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಲಿವೆ.

ಮೇ 25ರಂದು ಕೋಲ್ಕತ್ತದಲ್ಲೇ ಫೈನಲ್ ಪಂದ್ಯ ನಡೆಯುವ ಸಾಧ್ಯತೆಯಿದೆ.

ಧರ್ಮಶಾಲಾ ಮತ್ತು ಗುವಾಹಟಿ ಕ್ರೀಡಾಂಗಣಗಳು ಈ ಬಾರಿಯೂ ಕೆಲವು ಪಂದ್ಯಗಳಿಗೆ ಆತಿಥ್ಯ ವಹಿಸಲಿದೆ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ. ಪಂಜಾಬ್ ಕಿಂಗ್ಸ್ ತಂಡಕ್ಕೆ ಮುಲ್ಲನಪುರ (ಮೊಹಾಲಿ) ನಂತರ ಧರ್ಮಶಾಲಾ ಎರಡನೇ ತವರು ಆಗಿದೆ. ರಾಜಸ್ಥಾನ ರಾಯಲ್ಸ್ ತಂಡಕ್ಕೆ ಜೈಪುರ ತವರು ಅಂಗಳವಾಗಿದ್ದು, ಅಸ್ಸಾಂನ ಗುವಾಹಟಿಯಲ್ಲೂ ಕೆಲವು ಪಂದ್ಯಗಳನ್ನು ಆಡಲಿದೆ.

ಟೂರ್ನಿಯ ವೇಳಾಪಟ್ಟಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಇನ್ನೂ ಬಿಡುಗಡೆ ಮಾಡಿಲ್ಲ. ಆದರೆ ಐಪಿಎಲ್ ಆಡಳಿತ ಮಂಡಳಿ ಮುಂದಿನ ವಾರದ ಆರಂಭದಲ್ಲಿ ಸಂಪೂರ್ಣ ವೇಳಾಪಟ್ಟಿಯನ್ನು ಬಿಡುಗಡೆ ಮಾಡುವ ನಿರೀಕ್ಷೆಯಿದೆ.

ಪಂಜಾಬ್ ತಂಡ 2024ರ ಐಪಿಎಲ್‌ನಲ್ಲಿ ಪಂಜಾಬ್ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಆರ್‌ಸಿಬಿ ತಂಡಗಳಿಗೆ ಧರ್ಮಶಾಲಾದಲ್ಲಿ ಆತಿಥ್ಯ ವಹಿಸಿತ್ತು. ಆದರೆ ಎರಡೂ ಪಂದ್ಯಗಳನ್ನು ಸೋತಿತ್ತು. ಈ ಬಾರಿ ಈ ಕ್ರೀಡಾಂಗಣದಲ್ಲಿ ಹೆಚ್ಚುವರಿಯಾಗಿ ಇನ್ನೊಂದು ಪಂದ್ಯ ನಡೆಯುವ ಸಾಧ್ಯತೆಯಿದೆ.

ಐದು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಮಾರ್ಚ್ 23ರಂದು ತವರು ಅಂಗಳ ಚಿದಂಬರಂ ಕ್ರೀಡಾಂಗಣದಲ್ಲಿ ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ವಿರುದ್ಧ ಸೆಣಸಲಿದೆ.

ಮೆಗಾ ಹರಾಜಿನ ನಂತರ ಚೆನ್ನೈ ಮತ್ತು ಮುಂಬೈ ತಂಡಗಳು ನಾಯಕತ್ವದಲ್ಲಿ ಯಾವುದೇ ಬದಲಾವಣೆಯನ್ನು ಮಾಡಿಲ್ಲ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ರಜತ್ ಪಾಟೀದಾರ್ ಅವರನ್ನು ನಾಯಕನಾಗಿ ಘೋಷಿಸಿದೆ.

ಕೆಲವು ತಂಡಗಳು ನಾಯಕರ ಹೆಸರು ಪ್ರಕಟಿಸಿವೆ. ಕಳೆದ ಬಾರಿ ಕೋಲ್ಕತ್ತ ತಂಡವನ್ನು ಮುನ್ನಡೆಸಿದ್ದ ಶ್ರೇಯಸ್ ಅಯ್ಯರ್ ಈ ಬಾರಿ ಪಂಜಾಬ್ ಕಿಂಗ್ಸ್‌ಗೆ ಹೋಗಿದ್ದು, ಕೆಕೆಆರ್ ತಂಡ ನಾಯಕನ ಹೆಸರು ಘೋಷಿಸಿಲ್ಲ.



ಗುಲ್ವೀರ್ ಸಿಂಗ್ ರಾಷ್ಟ್ರೀಯ ದಾಖಲೆ

ನವದೆಹಲಿ (ಪಿಟಿಐ): ಹಾಂಗ್‌ಝೌ ಏಷ್ಯನ್ ಕ್ರೀಡೆಗಳ ಕಂಚಿನ ಪದಕ ವಿಜೇತ ಗುಲ್ವೀರ್ ಸಿಂಗ್ ಅವರು ಬೋಸ್ಟನ್‌ನಲ್ಲಿ ನಡೆದ ಬಿಯು ಡೇವಿಡ್ ಹೆಮೆರಿ ವೆಲೆಂಟೈನ್ ಇನ್ವಿಟೇಷನಲ್ ಕೂಟದಲ್ಲಿ 3000 ಮೀ. ಒಳಾಂಗಣ ರೇಸ್‌ನಲ್ಲಿ 16 ವರ್ಷ ಹಳೆಯ ರಾಷ್ಟ್ರೀಯ ದಾಖಲೆ ಮುರಿದಿದ್ದಾರೆ. ಆ ಮೂಲಕ ಹಾಲಿ ಋತುವನ್ನು ಉತ್ತಮವಾಗಿ ಆರಂಭಿಸಿದ್ದಾರೆ.

ಸೇನಾಪಡೆಯಲ್ಲಿರುವ 26 ವರ್ಷ ವಯಸ್ಸಿನ ಗುಲ್ವೀರ್ ಅವರು ಈ ದೂರವನ್ನು 7ನಿ.38.26 ಸೆಕೆಂಡುಗಳಲ್ಲಿ ಪೂರೈಸಿದರು. ಈ ಹಿಂದಿನ ದಾಖಲೆಯನ್ನು (7:49.47) ಸುರೇಂದರ್ ಸಿಂಗ್ ಅವರು 2008ರಲ್ಲಿ ಸ್ಥಾಪಿಸಿದ್ದರು. ಸುರೇಂದರ್ ಪ್ರಸ್ತುತ ಕೋಚ್ ಆಗಿದ್ದಾರೆ.

ಈ ದಾಖಲೆಯಿದ ಉತ್ತೇಜಿತರಾಗಿರುವ ಗುಲ್ವೀರ್ ಅವರು ಈತ 2025ರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಪುರುಷರ 10,000 ಮೀ. ಓಟದಲ್ಲಿ ಅರ್ಹತೆ ಪಡೆಯುವ ಕಡೆ ಚಿತ್ತ ಹರಿಸಿದ್ದಾರೆ. ಇದಕ್ಕೆ ಅರ್ಹತಾ ಕಾಲ 27ನಿ.





‘ಲಯನ್ಸ್ ವೆಲೆನ್ಸಿಯಾ ಕಪ್’ ರಾಜ್ಯಮಟ್ಟದ ಅಂಧರ ಕ್ರಿಕೆಟ್ ಟೂರ್ನಿಯಲ್ಲಿ ರನ್ನರ್ ಅಪ್ ಆದ ಬೆಂಗಳೂರು ತಂಡ. ನಿಂತವರು (ಎಡದಿಂದ ಬಲಕ್ಕೆ): ವ್ಯವಸ್ಥಾಪಕ ರವಿ ಎಲ್, ಆರ್ಯ, ರಜತ್, ಪೃಥ್ವಿ, ಹರ್ಷ ಬಿ.ಆರ್, ಯಶಸ್, ಪ್ರಶಾಂತ್, ವಿಕಾಸ್, ಕೋಚ್ ಸ್ಪಂದನ್ ಮತ್ತು ಪೋಷಕ ತಾಯಪ್ಪ ಎಚ್. ಕುಳಿತವರು: ಸುಶಾಂತ್, ಗುರುರಾಜ್, ರಾಮಕೃಷ್ಣ, ಕಾರ್ತಿಕ್ ಮತ್ತು ಅಭಿಲಾಷ್

ಬೆಂಗಳೂರು ತಂಡ ರನ್ನರ್ ಅಪ್

ಪ್ರಜಾವಾಣಿ ವಾರ್ತೆ

ಮಂಗಳೂರು: ಸವಾಲಿನ ಗುರಿಯನ್ನು ಸುಲಭವಾಗಿ ದಾಟಿದ ಶಿವಮೊಗ್ಗ ತಂಡ ‘ಲಯನ್ಸ್ ವೆಲೆನ್ಸಿಯಾ ಕಪ್’ ಅಂಧರ ಕ್ರಿಕೆಟ್ ಟೂರ್ನಿಯ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಟ್ರೋಫಿ ಮತ್ತು ₹ 25 ಸಾವಿರ ಬಹುಮಾನ ಮೊತ್ತ ತಂಡದ ಪಾಲಾಯಿತು.

ನಗರದ ಕರಾವಳಿ ಉತ್ಸವ ಮೈದಾನದಲ್ಲಿ ಲಯನ್ಸ್ ಕ್ಲಬ್ ವೆಲೆನ್ಸಿಯಾ ಆಯೋಜಿಸಿದ್ದ ಟೂರ್ನಿಯ ಫೈನಲ್‌ನಲ್ಲಿ ಬೆಂಗಳೂರು ತಂಡ ಮುಂದಿಟ್ಟ 69 ರನ್‌ಗಳ ಜಯದ ಗುರಿ ತಲುಪಲು ಶಿವಮೊಗ್ಗ ತಂಡ ಕಳೆದುಕೊಂಡದ್ದು ಒಂದು ವಿಕೆಟ್ ಮಾತ್ರ. ಬೆಂಗಳೂರು ತಂಡಕ್ಕೆ ಟ್ರೋಫಿ ಮತ್ತು ₹ 20 ಸಾವಿರ ಮೊತ್ತ ನೀಡಲಾಯಿತು.

ಎಂಟು ಓವರ್‌ಗಳ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಬೆಂಗಳೂರು ಒಂದು ವಿಕೆಟ್ ಕಳೆದುಕೊಂಡು 68 ರನ್ ಗಳಿಸಿತು. ಹರ್ಷ 41 ರನ್ ಗಳಿಸಿದರು. ಗುರಿ ಬೆನ್ನತ್ತಿದ ಶಿವಮೊಗ್ಗ ತಂಡದ ಪರವಾಗಿ ವಿನಯ್ ಭರ್ಜರಿ ಬ್ಯಾಟಿಂಗ್ ಮಾಡಿ 31 ರನ್‌ಗಳೊಂದಿಗೆ ಔಟಾಗದೇ ಉಳಿದರು. ಟೂರ್ನಿಯ ಉತ್ತಮ ಆಲ್‌ರೌಂಡರ್ ಆಟಗಾರ ಪ್ರಶಸ್ತಿ ಅವರ ಪಾಲಾಯಿತು.

ಬೆಂಗಳೂರು ತಂಡದ ಹರ್ಷ ಉತ್ತಮ ಬ್ಯಾಟರ್, ಶಿವಮೊಗ್ಗ ತಂಡದ ಸಂಗಮೇಶ್ ಉತ್ತಮ ಬೌಲರ್ ಪ್ರಶಸ್ತಿ ತಮ್ಮದಾಗಿಸಿಕೊಂಡರು.